ಮಂಗಳೂರು
ಮಂಗಳವಾರ, 7 ಏಪ್ರಿಲ್ 2026
ಸಂಪುಟ 48, ಸಂಚಿಕೆ 19, ಪುಟಗಳು 12+8
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ ₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಬುಡಕಟ್ಟು ಜನರಿಗೆ ಕೈ ವಂಚನೆ |09 ಐಎಸ್ಐ ನಂಟು: ಮೂವರ ಸೆರೆ |09 ಸೈಕಲ್‌ನಲ್ಲೇ ಎವರೆಸ್ಟ್ ಬೇಸ್ ತಲುಪಿದ ಮಹಿಳೆ |09

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಕೃಷ್ಣ ಪಕ್ಷ, ತಿಥಿ: ಪಂಚಮಿ, ನಕ್ಷತ್ರ: ಜ್ಯೇಷ್ಠೆ

ದಿನದ ಮಾತು

ಪುಣ್ಯದ ಕಾರ್ಯ ಮಾಡಲು ನಿಧಾನಿಸಿದರೆ ಮನಸ್ಸು ಪಾಪದ ಕಡೆ ಓಡುತ್ತದೆ.
▲ ದಮ್ಮಪದ

ನಮ್ಮದಲ್ಲದಿದ್ದರೂ ನಮ್ಮದೇ ಆದ ಹೊರ್ಮುಜ್ ಜಲಸಂಧಿ

ರಾಘವಾಂಕಣ
• ರಾಘವೇಂದ್ರ ಸುಬ್ರಹ್ಮಣ್ಯ
• ಪುಟ ೬

ಕಿರುಸುದ್ದಿ

ಶೃಂಗೇರಿ ವಿಧಾನಸಭಾ ಕ್ಷೇತ್ರ: ಅಂಚೆ ಮತ ಮರು ಎಣಿಕೆಗೆ ಹೈಕೋರ್ಟ್ ಆದೇಶ

• **ಬೆಂಗಳೂರು:** ಶೃಂಗೇರಿ ವಿಧಾನಸಭಾ ಕ್ಷೇತ್ರದಲ್ಲಿ ಚಲಾವಣೆಯಾಗಿರುವ 1,811 ಅಂಚೆ ಮತಗಳ ಪೈಕಿ ತಿರಸ್ಕೃತಗೊಂಡಿರುವ 279 ಅಂಚೆ ಮತಗಳನ್ನು ಮರು ಪರಿಶೀಲಿಸಿ, ನಂತರ ಎಲ್ಲಾ ಅಂಚೆ ಮತಗಳನ್ನು



ಮರು ಎಣಿಕೆ ಮಾಡಿ ಚುನಾವಣಾಧಿಕಾರಿ ಫಲಿತಾಂಶ ಪ್ರಕಟಿಸಬೇಕು ಎಂದು ಹೈಕೋರ್ಟ್ ಸೋಮವಾರ ಮಹತ್ವದ ಆದೇಶ ಮಾಡಿದ್ದು, ಅಂತಿಮವಾಗಿ ಮಧ್ಯಂತರ ತಡೆಯಾಜ್ಞೆ ನೀಡಿದೆ. ಶೃಂಗೇರಿ ಶಾಸಕ ಕಾಂಗ್ರೆಸ್‌ನ ಟಿ.ಡಿ.ರಾಜೇಗೌಡ ಆಯ್ಕೆ ಪ್ರಶ್ನಿಸಿ ಬಿಜೆಪಿ ಪರಾಜಿತ ಅಭ್ಯರ್ಥಿ ಡಿ.ಎನ್. ಜೀವರಾಜ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾ.ಆರ್.ನಟರಾಜ್ ಅವರ ಏಕಸದಸ್ಯ ಪೀಠವು ಭಾಗಶಃ ಪುರಸ್ಕರಿಸಿದೆ. ➡ಪುಟ ೪

ಉಪಚುನಾವಣೆ ಬಹಿರಂಗ ಪ್ರಚಾರಕ್ಕೆ ಇಂದು ತೆರೆ

• **ಬೆಂಗಳೂರು:** ಅಬ್ಬರದ ಪ್ರಚಾರ ನಡೆಯುತ್ತಿರುವ ಉಪಚುನಾವಣೆಯ ಬಹಿರಂಗ ಪ್ರಚಾರಕ್ಕೆ ಮಂಗಳವಾರ ಸಂಜೆ ತೆರೆ ಬೀಳಲಿದ್ದು, ಚುನಾವಣಾ ಕಣದಲ್ಲಿ ಆರೋಪ –ಪ್ರತ್ಯಾರೋಪ ಮಾಡುತ್ತಿರುವ ನಾಯಕರು ಕ್ಷೇತ್ರಗಳನ್ನು ತೊರೆಯಲಿದ್ದಾರೆ. ದಾವಣಗೆರೆ ಮತ್ತು ಬಾಗಲಕೋಟೆಯಲ್ಲಿ ಬಿರುಸಿನ ಪ್ರಚಾರ ಕೈಗೊಂಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಾದಾಮಿಯಲ್ಲಿ ಇದ್ದು, ಮಂಗಳವಾರ ಮಧ್ಯಾಹ್ನದ ಹೊತ್ತಿಗೆ ಬೆಂಗಳೂರು ತಲುಪಲಿದ್ದಾರೆ. ಅಸ್ಸಾಂ ಚುನಾವಣೆಯ ಉಸ್ತುವಾರಿ ಜತೆಗೆ ದಾವಣಗೆರೆ ದಕ್ಷಿಣ ಕ್ಷೇತ್ರದ ಪ್ರಚಾರದಲ್ಲಿ ಭಾಗಿಯಾಗಿರುವ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮಂಗಳವಾರ ಕ್ಷೇತ್ರದ ಪ್ರಚಾರದಲ್ಲಿ ಭಾಗಿಯಾಗಲಿದ್ದಾರೆ. ➡ಪುಟ ೪

ಸಿಇಸಿ ಪದಚ್ಯುತಿ ಕೋರಿದ್ದ ನೋಟಿಸ್ ತಿರಸ್ಕರಿಸಿದ ವಿಪಿ

• ಪುಟ ೨

ಹೈವೆಗಳಲ್ಲಿ ಜಾನುವಾರು: ರಾಜ್ಯ, ಕೇಂದ್ರಕ್ಕೆ ಸೂಚನೆ

• ಪುಟ ೨

ಜಾಗತಿಕ ಇಂಧನಕ್ಕಾಗಿ ಚಂದ್ರನ ಸುತ್ತ 6,800 ಮೈಲಿ ಉದ್ದ ಸೌರಫಲಕ ಪಟ್ಟಿ

• ಪುಟ ೨

ಅಸ್ತಿತ್ವಕ್ಕಾಗಿ ಬಿಜೆಪಿ ಯತ್ನ: ಸಿಎಂ

• ಪುಟ ೫

ಒಂದು ರಾಷ್ಟ್ರ, ಒಂದು ಚುನಾವಣೆ ಬಿಜೆಪಿ ಕಾರ್ಯಸೂಚಿ: ಮೋದಿ

ಏನಾಸಂ ಸಾಕಾರಕ್ಕೆ ಬದ್ಧ

• **ಹೊಸದಿಲ್ಲಿ:** ಬಿಜೆಪಿ ಕಾರ್ಯಸೂಚಿಗಳ ಪೈಕಿ ಏಕರೂಪ ನಾಗರಿಕ ಸಂಹಿತೆ(ಏನಾಸಂ) ಮತ್ತು ಒಂದು ರಾಷ್ಟ್ರ, ಒಂದು ಚುನಾವಣೆ ಇನ್ನಷ್ಟೇ ಸಾಕಾರಗೊಳ್ಳಬೇಕಿದೆ. ಈ ಬಗ್ಗೆ ದೇಶದಲ್ಲಿ ಗಂಭೀರ ಚರ್ಚೆಗಳಾಗುತ್ತಿವೆ. ಈ ನಿಟ್ಟಿನಲ್ಲಿ ನಾವು ಸಕಾರಾತ್ಮಕ ಹೆಜ್ಜೆಗಳನ್ನೂ ಇರಿಸಿದ್ದೇವೆ ಎಂದು ಪ್ರಧಾನಿ ನರೇಂದ್ರ ಮೋದಿ ಸೋಮವಾರ ಹೇಳಿದ್ದಾರೆ.

1994ರಲ್ಲಿ ಮೊತ್ತ ಮೊದಲು ಮಹಿಳಾ ಮೀಸಲಾತಿ ಪರ ಧ್ವನಿ ಎತ್ತಿದ್ದೇ ಬಿಜೆಪಿ. ಮಹಿಳೆಯರಿಗೆ ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಲ್ಲಿ ಶೇ.33 ಮೀಸಲಾತಿ ಕಲ್ಪಿಸುವ ಮಹಿಳಾ ಮೀಸಲಾತಿ ಕಾಯಿದೆಯನ್ನು 2029ರ ಮಹಾ ಚುನಾವಣೆಗಳ ಸಂದರ್ಭ ಅನುಷ್ಠಾನಿಸಲು ಬಿಜೆಪಿ ನೇತೃತ್ವದ ಕೇಂದ್ರ ಸರಕಾರ ಕಟಿಬದ್ಧವಿದೆ ಎಂದು ಪ್ರಧಾನಿ ಮೋದಿ, ಬಿಜೆಪಿಯ 47ನೇ ಸಂಸ್ಥಾಪನಾ ದಿನಾಚರಣೆ ಅಂಗವಾಗಿ ನಡೆದ ಕಾರ್ಯಕ್ರಮವನ್ನು ವರ್ಚ್ಯುಅಲ್ ನೆಲೆಯಲ್ಲಿ ಉದ್ದೇಶಿಸಿ ಭರವಸೆ ನೀಡಿದರು.

ಬಿಜೆಪಿ 47ನೇ ಸಂಸ್ಥಾಪನಾ ದಿನಾಚರಣೆ

ಕಾಂಗ್ರೆಸ್‌ನ್ನು ಕಟುವಾಗಿ ತರಾಟೆಗೆತ್ತಿಕೊಂಡ ಪ್ರಧಾನಿ ಮೋದಿ, ಕಾಂಗ್ರೆಸ್ ಆಳ್ವಿಕೆಯಲ್ಲಿ ಬಿಜೆಪಿ ಕಾರ್ಯಕರ್ತರು ತುರ್ತು ಪರಿಸ್ಥಿತಿ, ಅನಗತ್ಯ ದೌರ್ಜನ್ಯಗಳಂತಹ ಹಲವು ಕ್ರೂರ ಬವಣೆಗಳನ್ನು ಅನುಭವಿಸಿದ್ದಾರೆ. ಹಿಂಸಾಕಾಂಡವೇ ರಾಜಕೀಯ ಸಂಸ್ಕೃತಿಯಾಗಿರುವ ಕೇರಳ, ಪ.ಬಂಗಾಳದಲ್ಲಿನ ಹತ್ಯಾಕಾಂಡದಂತೆ ಹಲವು ಬಿಜೆಪಿ ಕಾರ್ಯಕರ್ತರ ಪ್ರಾಣಗಳೇ ಕಾಂಗ್ರೆಸ್ ಆಳ್ವಿಕೆ ಸಂದರ್ಭದ ದೌರ್ಜನ್ಯಗಳಿಗೆ ಬಲಿಯಾಗಿವೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ➡ಪುಟ ೪



ಮಿತ್ರಕೂಟ ರಾಜನೀತಿಗೆ ಎನ್‌ಡಿಎ ಮಾದರಿ

ಪ್ರತಿ ದೇಶದಿಂದ ಸಮಾನ ಅಂತರ ಕಾಯ್ದುಕೊಳ್ಳುವುದರಲ್ಲೇ ಭಾರತ ಹೆಮ್ಮೆಪಡುವ ಕಾಲವೊಂದಿತ್ತು. ಆದರೆ ಇಂದು ಪ್ರತಿ ರಾಷ್ಟ್ರದೊಂದಿಗೆ ನಿಕಟ ಬಾಂಧವ್ಯ ಕಾಯ್ದುಕೊಳ್ಳುತ್ತಲೇ ಭಾರತ ಮುನ್ನಡೆ ಸಾಧಿಸುತ್ತಿದೆ. ಎನ್‌ಡಿಎ ಅಸ್ತಿತ್ವಕ್ಕೆ ಬಂದು 25 ವರ್ಷಗಳಾದವು. ರಾಷ್ಟ್ರದ ಹಿತಾಸಕ್ತಿ ಕಾಪಾಡಲು ಮತ್ತು ಜನರ ಕಲ್ಯಾಣಕ್ಕಾಗಿ ಶ್ರಮಿಸುವ ಏಕೈಕ ಮಿತ್ರಕೂಟವಾಗಿದೆ ಎನ್‌ಡಿಎ. ಮಿತ್ರಕೂಟ ರಾಜನೀತಿಗೆ ಎನ್‌ಡಿಎ ಮಾದರಿಯಾಗಿದೆ. ➡ಪುಟ ೪

ಪಾಕ್ ತಾಳಕ್ಕೆ ಕುಣಿಯುವ ಕಾಂಗ್ರೆಸ್: ಮೋದಿ

• **ಭವಾನಿಪುರ-ಸೊರ್ಭೋಗ್(ಅಸ್ಸಾಂ):** ಪಾಕಿಸ್ತಾನದಲ್ಲಿನ ಭಯೋತ್ಪಾದಕ ನೆಲೆಗಳ ವಿರುದ್ಧ ತನ್ನ ನೇತೃತ್ವದ ಸರ್ಕಾರ ಆಪರೇಷನ್ ಸಿಂದೂರ್ ನಡೆಸಿತು. ಆದರೆ, ಕಾಂಗ್ರೆಸ್ ನೆರೆರಾಷ್ಟ್ರದ ತಾಳಕ್ಕನುಗುಣವಾಗಿ ಹಾಡಿ ಕುಣಿಯುತ್ತಿರುವುದು ತೀರಾ ಹೇಯವೆಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ಅಭಿವೃದ್ಧಿಗೆ ಸಂಬಂಧಿಸಿ ವಿಪಕ್ಷದ ದೃಷ್ಟಿಕೋನ ತೀರಾ ಅಲ್ಪತನದ್ದೆಂದು ಆರೋಪಿಸಿದ ಪ್ರಧಾನಿ ಮೋದಿ, ಬಿಜೆಪಿ ದೀರ್ಘಕಾಲೀನ ಬೆಳವಣಿಗೆಗೆ ಆದ್ಯತೆ ನೀಡಿದೆ. ಭ್ರಷ್ಟಾಚಾರ ತಾಂಡವಿಸಲೆಂದೇ ವಿಪಕ್ಷ ಕಾಂಗ್ರೆಸ್ ಯಾವಾಗಲೂ ಅಲ್ಪಾವಧಿ ಉಪಕ್ರಮಗಳನ್ನೇ ಕೈಗೊಳ್ಳುತ್ತಿತ್ತು. ಆದರೆ ಬಿಜೆಪಿ ಸಮಾಜದ ಎಲ್ಲಾ ವರ್ಗಗಳ ಸಮಗ್ರ ಅಭಿವೃದ್ಧಿಗೆ ಪೂರಕವಾಗಬಲ್ಲ ಯೋಜನೆಗಳ ಬಗ್ಗೆ ದೂರಗಾಮಿ ಚಿಂತನೆ ನಡೆಸಿಕೊಂಡೇ ನಿರ್ಧಾರ ಕೈಗೊಳ್ಳುತ್ತಿದೆ ಎಂದು ಮೋದಿ, ಅಸ್ಸಾಂನ ಬರ್ಪೇಟಾದಲ್ಲಿ ಸೋಮವಾರ ಚುನಾವಣಾ ರ‍್ಯಾಲಿ ಉದ್ದೇಶಿಸಿ ನುಡಿದರು. ➡ಪುಟ ೪

ಬಿಜೆಪಿ ಆಡಳಿತಶೈಲಿ ವಿಶಿಷ್ಟ

ವಂಶ ಪಾರಂಪರ್ಯ ರಾಜನೀತಿಯನ್ನು ನೀವು ಕಂಡಿರುವಿರಿ. ದೇಶದ ಹಲವು ಭಾಗಗಳಲ್ಲಿ ಈ ರಾಜನೀತಿ ಈಗಲೂ ಜ್ವಲಂತವಿದೆ. ಇನ್ನು ವಾಮಪಂಥೀಯ ಆಡಳಿತ ನೀತಿಗೂ ಸಾಕ್ಷಿಯಾಗಿರುವಿರಿ. ಆದರೆ ಬಿಜೆಪಿ ಆಡಳಿತ ಶೈಲಿ ಮಾತ್ರ ವಿಶಿಷ್ಟವಾದುದು. ಬಿಜೆಪಿಗೆ ತನ್ನದೇ ಆದ ಅಜೆಂಡಾ ಮತ್ತು ಗುರಿಗಳಿವೆ . ಪ್ರಸ್ತುತ ಬಿಕ್ಕಟ್ಟನ್ನು ನಿಭಾಯಿಸುವ ಜತೆ ಜತೆಗೆ ರಾಷ್ಟ್ರವನ್ನು ಭವಿಷ್ಯಕ್ಕಾಗಿ ಅಣಿಗೊಳಿಸುವ ಕಾರ್ಯವನ್ನೂ ಬಿಜೆಪಿ ನೇತೃತ್ವದ ಸರಕಾರ ಮಾಡುತ್ತಿದೆ. ➡ಪುಟ ೪

2029ರ ಮಹಾಚುನಾವಣೆ ಬಳಿಕ ಮಹಿಳಾ ಮೀಸಲು

ಅಸ್ಸಾಂನಲ್ಲಿ ಸಾಕಷ್ಟು ತ್ಯಾಗಗಳು ಮತ್ತು ಕಳೆದ ಹತ್ತು ವರ್ಷಗಳಲ್ಲಿ ಸಹಿ ಹಾಕಲಾಗಿರುವ ಶಾಂತಿ ಒಪ್ಪಂದಗಳ ಅನುಷ್ಠಾನಕ್ಕಾಗಿ ಸರಕಾರ ಮಾಡಿದ ಪ್ರಾಮಾಣಿಕ ಪ್ರಯತ್ನಗಳಿಂದ ರಾಜ್ಯದಲ್ಲಿಂದು ಶಾಂತಿ ನೆಲೆಯೂರಿದೆ. ಶಾಂತಿ ಮತ್ತು ಸ್ಥಿರತೆಯಿಂದಾಗಿ ಬಿಜೆಪಿ ಆಳ್ವಿಕೆಯಲ್ಲಿ ರಾಜ್ಯದಲ್ಲಿ ಅಭಿವೃದ್ಧಿ ಚಟುವಟಿಕೆಗಳ ಸಾಕಾರವಾಗಿದೆ. ಈ ಅಭಿವೃದ್ಧಿ ಯಾನ ನಿರಂತರವಾಗಬೇಕಾದರೆ ಕಾಂಗ್ರೆಸ್‌ನ್ನು ಅಧಿಕಾರದಿಂದ ದೂರವಿಡುವುದು ಅಗತ್ಯ. 2029ರ ಮಹಾ ಚುನಾವಣೆ ನಂತರ ಸಂಸತ್ತಿನಲ್ಲಿ ಮಹಿಳೆಯರಿಗೆ ಶೇ. 33 ಮೀಸಲಾತಿ ಕೋಟಾವನ್ನು ಅನುಷ್ಠಾನಕ್ಕೆ ತರಲಾಗುವುದು ಎಂದು ಪ್ರಧಾನ ಮೋದಿ ಭರವಸೆ ನೀಡಿದರು.

ಯುಎಸ್ ಕದನ ವಿರಾಮ ಪ್ರಸ್ತಾವನೆ ತಿರಸ್ಕೃತ

ಯುದ್ಧ ಅಂತ್ಯಕ್ಕೆ ಇರಾನ್ ಆಗ್ರಹ

• **ಟೆಹ್ರಾನ್:** ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನೀಡಿರುವ ಗಡುವು ಹತ್ತಿರವಾಗುತ್ತಿರುವ ಸಂದರ್ಭದಲ್ಲೇ ಇರಾನ್ ಸೋಮವಾರ ಇತ್ತೀಚಿನ ಕದನ ವಿರಾಮ ಪ್ರಸ್ತಾವನೆ ತಿರಸ್ಕರಿಸಿ, ಸಂಪೂರ್ಣ ಯುದ್ಧ ಅಂತ್ಯವೇ ಬೇಕೆಂದು ಆಗ್ರಹಿಸಿದೆ.

ಈ ಕುರಿತು ಕೈರೋದಲ್ಲಿರುವ ಇರಾನ್ ರಾಜತಾಂತ್ರಿಕ ನಿಯೋಗದ ಮುಖ್ಯಸ್ಥ ಮೊಜ್ತಬಾ ಫೆರ್ದೌಸಿ ಪೌರ್ ಅವರು ನಾವು ಕೇವಲ ಕದನ ವಿರಾಮವನ್ನು ಒಪ್ಪುವುದಿಲ್ಲ. ಮತ್ತೆ ನಮ್ಮ ಮೇಲೆ ದಾಳಿ ನಡೆಯುವುದಿಲ್ಲ ಎಂಬ ಖಚಿತತೆಗಳೊಂದಿಗೆ ಯುದ್ಧದ ಸಂಪೂರ್ಣ ಅಂತ್ಯವೇ ಬೇಕು ಎಂದು ಹೇಳಿದ್ದಾರೆ. ಇರಾನ್ ಸರ್ಕಾರ ತನ್ನ ಉತ್ತರವನ್ನು ಪಾಕಿಸ್ತಾನದ ಮೂಲಕ ಕಳುಹಿಸಿದೆ ಎಂದು ವರದಿಯಾಗಿದೆ.



ಇದಕ್ಕೆ ಪ್ರತಿಯಾಗಿ ಟ್ರಂಪ್, ಒಪ್ಪಂದವಾಗದಿದ್ದರೆ ಇರಾನ್‌ನ್ನು ಶಿಲಾಯುಗಕ್ಕೆ ತಳ್ಳುತ್ತೇವೆ ಎಂದು ಎಚ್ಚರಿಕೆ ನೀಡಿದ್ದಾರೆ. ಗಡುವು ಮಂಗಳವಾರ ರಾತ್ರಿ ಅಂತ್ಯಗೊಳ್ಳುತ್ತದೆ ಎಂದು ಸೂಚಿಸಿದ್ದಾರೆ.

ಇಸ್ರೇಲ್ ದಾಳಿ, ಉದ್ವಿಗ್ನತೆ ಹೆಚ್ಚಳ: ಮಾತುಕತೆಯ ನಡುವೆಯೇ ಇರಾನ್‌ನ ದಕ್ಷಿಣ ಪಾರ್ಸ್ ಅನಿಲ ವಲಯದ ಮೇಲೆ ಇಸ್ರೇಲ್ ದಾಳಿ ನಡೆಸಿದ್ದು, ಇದರಿಂದ ರೆವಲ್ಯೂಷನರಿ ಗಾರ್ಡ್‌ನ ಇಬ್ಬರು ಮುಖ್ಯ ಅಧಿಕಾರಿಗಳು ಮೃತಪಟ್ಟಿದ್ದಾರೆ. ಈ ಅನಿಲ ವಲಯವು ಇರಾನ್ ಆರ್ಥಿಕತೆಗೆ ಪ್ರಮುಖ ಆದಾಯ ಮೂಲವಾಗಿದ್ದು, ವಿದ್ಯುತ್ ಉತ್ಪಾದನೆಯಲ್ಲಿ ಸಹ ಪ್ರಮುಖ ಪಾತ್ರ ವಹಿಸುತ್ತದೆ.

ಟೆಹ್ರಾನ್‌ನಲ್ಲಿ ಸ್ಫೋಟ: ಇರಾನ್ ರಾಜಧಾನಿ ಟೆಹ್ರಾನ್ ನಗರದಲ್ಲಿ ಸ್ಫೋಟಗಳ ಸದ್ದು ಕೇಳಿಬಂದಿದ್ದು, ಯುದ್ಧದ ತೀವ್ರತೆ ಹೆಚ್ಚುತ್ತಿದೆ. ಇಸ್ರೇಲ್ ಸೇನೆ ಟೆಹ್ರಾನ್‌ನ ಮೂರು ವಿಮಾನ ನಿಲ್ದಾಣಗಳ ಮೇಲೆ ದಾಳಿ ನಡೆಸಿದ್ದೂ ಹಲವು ವಿಮಾನ, ಹೆಲಿಕಾಪ್ಟರ್‌ಗಳು ಮತ್ತು ವಿಮಾನ ನಿಲ್ದಾಣಗಳಿಗೆ ಹಾನಿಯಾಗಿದೆ. ಸ್ಥಳೀಯ ಮಹಿಳೆ ಯೊಬ್ಬರು ನಿರಂತರವಾಗಿ ಬಾಂಬ್ ಸದ್ದು, ಡ್ರೋನ್ ಧ್ವನಿ ಕೇಳಿಸುತ್ತಿದೆ ಎಂದು ಹೇಳಿದ್ದಾರೆ. ➡ಪುಟ ೪



ಉದ್ವಿಗ್ನತೆ ಹೆಚ್ಚಳ ಸಾಧ್ಯತೆ

ಕದನ ವಿರಾಮ ಪ್ರಸ್ತಾಪವನ್ನು ಇರಾನ್ ತಿರಸ್ಕರಿಸಿದ್ದು, ಯುದ್ಧ ಇನ್ನಷ್ಟು ತೀವ್ರಗೊಳ್ಳುವ ಸಾಧ್ಯತೆ ಇದೆ. ಮಧ್ಯವರ್ತಿಗಳ ಪ್ರಯತ್ನಗಳು ಮುಂದುವರಿದರೂ, ಅಮೆರಿಕ ಮತ್ತು ಇಸ್ರೇಲ್‌ನ ಒತ್ತಡ ಹಾಗೂ ಇರಾನ್‌ನ ದೃಢ ನಿಲುವು ಪರಿಸ್ಥಿತಿಯನ್ನು ಮತ್ತಷ್ಟು ಸಂಕೀರ್ಣಗೊಳಿಸಿದೆ. ಜಾಗತಿಕ ಆರ್ಥಿಕತೆ ಮತ್ತು ಪ್ರಾದೇಶಿಕ ಭದ್ರತೆ ಮೇಲೆ ಇದರ ಪರಿಣಾಮ ಗಂಭೀರವಾಗುವ ಸಾಧ್ಯತೆ ಇದೆ.

ಐಆರ್‌ಜಿಸಿ ಗುಪ್ತಚರ ಮುಖ್ಯಸ್ಥನ ಹತ್ಯೆ

• ಪುಟ ೨

ಜಾತಿ ಆಧಾರಿತ ಪ್ರಚಾರದ ಆರೋಪ ತಳ್ಳಿಹಾಕಿದ ಸಿದ್ದರಾಮಯ್ಯ

ಬಿಎಸ್‌ವೈ ಪ್ರಚಾರ ಯಾರ ಪರ?: ಸಿಎಂ

• **ಬಾಗಲಕೋಟೆ:** ಬಾಗಲಕೋಟೆ ಉಪಚುನಾವಣೆ ಹಿನ್ನೆಲೆಯಲ್ಲಿ ರಾಜಕೀಯ ವಾಗ್ವಾದಗಳು ತಾರಕಕ್ಕೇರಿವೆ.



ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ವಿರುದ್ಧ ಮುಖ್ಯಮಂತ್ರಿ ಸಿದ್ದರಾಮಯ್ಯ ತೀಕ್ಷ್ಣ ಪ್ರತಿಕ್ರಿಯೆ ನೀಡಿದ್ದು, ಯಡಿಯೂರಪ್ಪ ಅವರು ಯಾರ ಪರ ಪ್ರಚಾರಕ್ಕೆ ಬಂದಿದ್ದಾರೆ ಎಂದು ಪ್ರಶ್ನಿಸಿದರು.

ನಗರದಲ್ಲಿ ಮಾತನಾಡಿದ ಸಿಎಂ, ಜಾತಿ ಆಧಾರಿತ ಪ್ರಚಾರದ ಆರೋಪ ತಳ್ಳಿ ಹಾಕಿದರು. ನಮ್ಮ ಅಭ್ಯರ್ಥಿ ಉಮೇಶ ಮೇಟಿ ಪರ ಪ್ರಚಾರಕ್ಕೆ ಬಂದಿದ್ದೇನೆ. ಯಡಿಯೂರಪ್ಪ ಕೂಡ ಲಿಂಗಾಯತ ಅಭ್ಯರ್ಥಿ ಪರವೇ ಪ್ರಚಾರ ಮಾಡುತ್ತಿದ್ದಾರೆ. ಹಾಗಿದ್ದಾಗ ನನ್ನ ಮೇಲೆ ಜಾತಿ ರಾಜಕಾರಣದ ಆರೋಪ ಹೇಗೆ ಸರಿ ಎಂದರು. ➡ಪುಟ ೨



ಬಿಜೆಪಿಗೆ ಬೆಂಬಲ: ಜೋಶಿ ವಿಶ್ವಾಸ

• **ದಾವಣಗೆರೆ:** ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಕುಟುಂಬ ರಾಜಕಾರಣವೇ ಮುಖ್ಯವಾಗಿದ್ದು, ಇದರಿಂದ ಪ್ರಜಾಪ್ರಭುತ್ವ ನಿರ್ನಾಮವಾಗಲಿದೆ. ಒಂದೇ ಕುಟುಂಬಕ್ಕೆ ಮನ್ನಣೆ ಕೊಡಬಾರದೆಂದು ಯೋಚಿಸಿರುವ ಮತದಾರರು ಈ ಬಾರಿ ಬಿಜೆಪಿಗೆ ಬೆಂಬಲಿಸಲಿದ್ದಾರೆ ಎಂದು ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ವಿಶ್ವಾಸ ವ್ಯಕ್ತಪಡಿಸಿದರು. ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮನೆಯಲ್ಲಿ ತಾತ ಇದ್ದಾಗ ಶಾಸಕರು ಹಾಗೂ ಮಂತ್ರಿಯಾಗಿದ್ದರು. ಈಗ ಅಪ್ಪ ಶಾಸಕರು ಹಾಗೂ ಮಂತ್ರಿಯಾಗಿದ್ದಾರೆ. ➡ಪುಟ ೪



ಬಾಲಗೋಕುಲಂ ಸಮಾವೇಶ ಉದ್ಘಾಟಿಸಿ ಭಾಗ್ವತ್ ಹೇಳಿಕೆ

ರಾಷ್ಟ್ರ ಸಂಪನ್ನವಾದರೆ ಜನರ ಪ್ರಗತಿ

• **ಕೊಚ್ಚಿ:** ಸಂಪನ್ನತೆ ಮತ್ತು ಸುರಕ್ಷೆಯನ್ನು ಏಕಾಂಗಿಯಾಗಿ ಸಾಧಿಸಲಾಗದು. ರಾಷ್ಟ್ರವು ಸಂಪನ್ನ ಮತ್ತು ಸುರಕ್ಷಿತವಾದಾಗ ಜನರೂ ಸಂಪನ್ನರಾಗಲು ಮತ್ತು ಸುರಕ್ಷಿತರಾಗಲು ಸಾಧ್ಯ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘ(ಆರ್‌ಎಸ್‌ಎಸ್) ಸರಸಂಘಚಾಲಕ ಡಾ.ಮೋಹನ್ ಭಾಗ್ವತ್ ಹೇಳಿದ್ದಾರೆ.

ಯಾವಾಗ ದೇಶ ಸಂಪನ್ನವಾಗಿರುವುದೋ ಮತ್ತು ಸುರಕ್ಷಿತವಾಗಿರುವುದೋ ಆಗ ದೇಶದಲ್ಲಿನ ಕುಟುಂಬಗಳು ಕೂಡ ಸಂಪನ್ನವಾಗಲು, ಸುರಕ್ಷಿತವಾಗಲು ಸಾಧ್ಯ. ಜನರು ದೇಶದ ಸಂಪನ್ನತೆ, ಸುರಕ್ಷೆಗಾಗಿ ಪರಿಶ್ರಮಿಸಿದಲ್ಲಿ ಸ್ವಯಂ ಸಂಪನ್ನರಾಗಲು ಸಾಧ್ಯ ಎಂದು ಹೇಳಿದರು.

ಆರೆಸ್ಸೆಸ್‌ನ ಸಾಂಸ್ಕೃತಿಕ ಸಂಘಟನೆ ಬಾಲಗೋಕುಲಂನ ಎರಡು ದಿನಗಳ ಸಮಾವೇಶ ಉದ್ಘಾಟಿಸಿದ ಬಳಿಕ ನೆರೆದ ಜನಸ್ತೋಮವನ್ನು ಉದ್ದೇಶಿಸಿ ಡಾ.ಮೋಹನ್ ಭಾಗ್ವತ್ ಮಾತನಾಡಿದರು. ರಾಷ್ಟ್ರ ನಿರ್ಮಾಣಕ್ಕೆ ಕೊಡುಗೆಯಾಗುವಂತೆ, ಕೊಡುಗೆ ನೀಡುವಂತೆ ಜನರನ್ನು ಆಗಾಗ ಉತ್ತೇಜಿಸಲಾಗುತ್ತದೆ.



ಈ ವಿಚಾರದಲ್ಲಿ, ವೈಯಕ್ತಿಕ ಭವಿಷ್ಯ ನಿರ್ಮಾಣ-ಪ್ರಗತಿಗೆ ಗಮನ ನೀಡುವುದೋ ಅಥವಾ ರಾಷ್ಟ್ರದ ಅಭಿವೃದ್ಧಿಗಾಗಿ ದುಡಿಯುವುದೋ ಎಂಬ ದ್ವಂದ್ವ ದೇಶದ ಯುವಶಕ್ತಿಯನ್ನು ಕಾಡುತ್ತಿದೆ. ಭವಿಷ್ಯ ನಿರ್ಮಾಣ ಮತ್ತು ರಾಷ್ಟ್ರಕ್ಕಾಗಿ ದುಡಿಯುವುದು ಪರಸ್ಪರ ವಿರೋಧಾಭಾಸದ ವಿಚಾರಗಳಲ್ಲ. ➡ಪುಟ ೪

ದಿಲ್ಲಿ ವಿಧಾನಸಭೆಯಲ್ಲಿ ಭಾರೀ ಭದ್ರತಾ ಲೋಪ

ಗೇಟ್ ಮುರಿದು ಒಳನುಗ್ಗಿದ ಕಾರು

• **ಹೊಸದಿಲ್ಲಿ:** ದಿಲ್ಲಿ ವಿಧಾನಸಭೆ ಆವರಣದಲ್ಲಿ ಭಾರೀ ಭದ್ರತಾ ಲೋಪವಾಗಿದ್ದು, ಮಾಸ್ಕ್ ಧರಿಸಿ ವ್ಯಕ್ತಿಯೋರ್ವ ಮುಖ್ಯ ದ್ವಾರದ ಮೂಲಕ ಕಾರನ್ನು ಸ್ಪೀಕರ್ ಕಚೇರಿ ಕಡೆಗೆ ಚಲಾಯಿಸಿದ್ದರಿಂದ ಕೆಲಕಾಲ ಆತಂಕದ ವಾತಾವರಣ ಸೃಷ್ಟಿಸಿತ್ತು. ಉತ್ತರಪ್ರದೇಶದ ನೋಂದಣಿ ಸಂಖ್ಯೆ ಹೊಂದಿರುವ ಕಾರು, ಮಧ್ಯಾಹ್ನ 2 ಗಂಟೆಯ ಸುಮಾರಿಗೆ ಗೇಟ್ ಸಂಖ್ಯೆ 2ನ್ನು ಮುರಿದು ವಿಧಾನಸಭಾ ಆವರಣ ಪ್ರವೇಶಿಸಿದೆ.



ಘಟನೆಗೆ ಸಂಬಂಧಿಸಿದಂತೆ ಸರಬ್ಜಿತ್ ಸಿಂಗ್ ಎಂಬಾತನನ್ನು ಬಂಧಿಸಲಾಗಿದೆ. ಆತ ಓಡಿಸುತ್ತಿದ್ದ ಟಾಟಾ ಸಿಯಾರಾ ಕಾರನ್ನು ಉತ್ತರ ದಿಲ್ಲಿ ಜನವಸತಿ ಪ್ರದೇಶವಾದ ರೂಪ್ ನಗರದಿಂದ ವಶಪಡಿಸಿಕೊಳ್ಳಲಾಗಿದೆ. ➡ಪುಟ ೪

ಮಾಲ್ಡಾ ಘಟನೆಗೆ ಸುಪ್ರೀಂ ಗಂಭೀರ ತಾಕೀತು

ಎನ್‌ಐಎಗೆ ಮಾಲ್ಡಾ ಘಟನೆ

• **ಹೊಸದಿಲ್ಲಿ:** ಮಾಲ್ಡಾ ಜಿಲ್ಲೆಯಲ್ಲಿ ವಿಶೇಷ ತೀವ್ರ ಪರಿಶೀಲನೆ (ಎಸ್‌ಐಆರ್) ಕಾರ್ಯದಲ್ಲಿ ತೊಡಗಿದ್ದ ನ್ಯಾಯಾಧಿಕಾರಿಗಳ ಮೇಲೆ ನಡೆದ ಘೇರಾವ್ ಮತ್ತು ದಾಳಿ ಪ್ರಕರಣವನ್ನು ಸುಪ್ರೀಂ ಕೋರ್ಟ್ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ)ಗೆ ವರ್ಗಾಯಿಸಿದ್ದು, ಘಟನೆಯ ದಿನ ಕೋಲ್ಕತ್ತಾ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗಳ ಕರೆ ಸ್ವೀಕರಿಸದ ಪಶ್ಚಿಮ ಬಂಗಾಳ ಮುಖ್ಯ ಕಾರ್ಯದರ್ಶಿಯನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡಿದೆ.

ಸೋಮವಾರ ವಿಚಾರಣೆ ನಡೆಸಿದ ಮುಖ್ಯ ನ್ಯಾಯಾಧೀಶರಾದ ನ್ಯಾ.ಸೂರ್ಯಕಾಂತ್ ಹಾಗೂ ನ್ಯಾ. ಜೋಯ್ಮಲ್ಯ ಬಾಗ್ಚಿ ಮತ್ತು ವಿಪುಲ್ ಎಂ. ಪಂಚೋಲಿ ಅವರ ಪೀಠ, ಮಾಲ್ಡಾ ಘಟನೆಯ ಕುರಿತು ಕಠಿಣ ನಿಲುವು ತಾಳಿತು. ಪಶ್ಚಿಮ ಬಂಗಾಳದ ಆಡಳಿತ ಯಂತ್ರದ ವಿಶ್ವಾಸಾರ್ಹತೆ ಕುಸಿಯುತ್ತಿದೆ ಮತ್ತು ಕಾರ್ಯಾಲಯ ಹಾಗೂ ಸರ್ಕಾರಿ ಕಚೇರಿಗಳಲ್ಲಿ ರಾಜಕೀಯ ಪ್ರಭಾವ ಹೆಚ್ಚುತ್ತಿದೆ ಎಂದು ಪೀಠ ಅಭಿಪ್ರಾಯಪಟ್ಟಿತು.

ಮಾಲ್ಡಾ ಘಟನೆಯ ಸಂಬಂಧ ರಾಜ್ಯ ಪೊಲೀಸರು ಬಂಧಿಸಿರುವ 26 ಮಂದಿಯನ್ನು, ಅವರು ನ್ಯಾಯಾಂಗ ಬಂಧನದಲ್ಲಿದ್ದರೂ ಸಹ, ಎನ್‌ಐಎ ವಿಚಾರಣೆಗೊಳಪಡಿಸಬೇಕು ಎಂದು ಸುಪ್ರೀಂ ಕೋರ್ಟ್ ಆದೇಶಿಸಿದೆ. ➡ಪುಟ ೪

ಮುಖ್ಯ ಕಾರ್ಯದರ್ಶಿಗೆ ತರಾಟೆ



ಏನು ಮಾಡಬೇಕೆಂಬುದು ನಮಗೆ ಗೊತ್ತು!

ಎಸ್‌ಐಆರ್‌ಗೆ ಅಡ್ಡಿ ಮಾಡುತ್ತಿರುವ ಬಗ್ಗೆ ತೀವ್ರ ಆಕ್ರೋಶ ವ್ಯಕ್ತಪಡಿಸಿದ ಕೋರ್ಟ್, ರಾಜ್ಯದ ವ್ಯವಸ್ಥೆ ಕುಸಿದರೆ ಏನು ಮಾಡಬೇಕು ಎಂಬುದು ನಮಗೆ ಗೊತ್ತು ಎಂದು ಗಂಭೀರವಾಗಿಯೇ ಹೇಳಿದೆ. ನ್ಯಾಯಾಂಗ ಅಧಿಕಾರಿಗಳಿಗೆ ಒಂಬತ್ತು ಗಂಟೆಗಳ ಕಾಲ ಘೇರಾವ್ ಹಾಕಿದ ಸಂಬಂಧ ಹೇಳಿದ ಅದು, ಇಡೀ ಪ್ರಕ್ರಿಯೆ ಸುಸೂತ್ರವಾಗಿ ನಡೆಯುವಂತೆ ನೋಡಿಕೊಳ್ಳಬೇಕು ಎಂದಿದೆ.

ತಮಿಳುನಾಡಿನ 9 ಪೊಲೀಸರಿಗೆ ಮರಣದಂಡನೆ

• **ಚೆನ್ನೈ :** ದೇಶವನ್ನೇ ನಡುಗಿಸಿದ್ದ ತಮಿಳುನಾಡಿನ ಸಾಥಾಂಕುಳಂ ಕಸ್ಟೋಡಿಯಲ್ ಸಾವು ಪ್ರಕರಣದಲ್ಲಿ ಮಹತ್ವದ ತೀರ್ಪು ಹೊರಬಿದ್ದಿದ್ದು, ಒಂಬತ್ತು ಪೊಲೀಸ್ ಸಿಬ್ಬಂದಿಗೆ ಮರಣದಂಡನೆ ವಿಧಿಸಲಾಗಿದೆ. ಮದುರೈ ಪ್ರಥಮ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯವು 2020ರಲ್ಲಿ ನಡೆದ ತಂದೆ–ಮಗ



ಪಿ. ಜಯರಾಜ್ ಮತ್ತು ಜೆ.ಬೆನಿಕ್ಸ್ ಅವರ ಸಾವಿಗೆ ಸಂಬಂಧಿಸಿದ ಪ್ರಕರಣದಲ್ಲಿ ಈ ಕಠಿಣ ತೀರ್ಪು ಪ್ರಕಟಿಸಿದೆ. 2020ರ ಜೂನ್‌ನಲ್ಲಿ ಕೋವಿಡ್ ಲಾಕ್‌ಡೌನ್ ನಿಯಮ ಉಲ್ಲಂಘನೆ ಆರೋಪದ ಮೇಲೆ ಜಯರಾಜ್, ಅವರ ಪುತ್ರ ಬೆನಿಕ್ಸ್‌ರನ್ನು ಸಾಥಾಂಕುಳಂ ಪೊಲೀಸರು ಬಂಧಿಸಿದ್ದರು. • ವಿವರ ಪುಟ ೨

ಇರಾನ್ ಮೇಲೆ ಅಮೆರಿಕ-ಇಸ್ರೇಲ್ ವಾಯುದಾಳಿ: 25ಕ್ಕೂ ಹೆಚ್ಚು ಮಂದಿ ಸಾವು

ಟೆಹ್ರಾನ್ ಸ್ಫೋಟ, ದಟ್ಟ ಹೊಗೆ

ಇರಾನ್ ಮೇಲೆ ಇಸ್ರೇಲ್ ಮತ್ತು ಅಮೆರಿಕ ಸೋಮವಾರ ಜಂಟಿಯಾಗಿ ನಡೆಸಿದ ವಾಯುದಾಳಿಗಳಲ್ಲಿ 25ಕ್ಕೂ ಹೆಚ್ಚು ಜನರು ಮೃತಪಟ್ಟಿದ್ದಾರೆ. ಇದಕ್ಕೆ ಪ್ರತಿಯಾಗಿ ಇರಾನ್ ಇಸ್ರೇಲ್ ಹಾಗೂ ಅದರ ಗಲ್ಫ್ ಅರಬ್ ನೆರೆಯ ರಾಷ್ಟ್ರಗಳತ್ತ ಕ್ಷಿಪಣಿ ದಾಳಿ ನಡೆಸಿದೆ. ಈ ನಡುವೆ ಹಾರ್ಮುಜ್ ಕಣಿವೆಯನ್ನು ಮರುತೆರೆಯಲು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನೀಡಿದ ಗಡುವು ಸಮೀಪಿಸುತ್ತಿದ್ದು, ಮಧ್ಯಪ್ರಾಚ್ಯದಲ್ಲಿ ಉದ್ವಿಗ್ನತೆ ಹೆಚ್ಚಳವಾಗಿದೆ.

ಟೆಹ್ರಾನ್ ನಗರದಲ್ಲಿ ಹಲವು ಸ್ಫೋಟಗಳು ಕೇಳಿಬಂದಿದ್ದು, ಕಡಿಮೆ ಎತ್ತರದಲ್ಲಿ ಹಾರಿದ ಯುದ್ಧ ವಿಮಾನಗಳ ಶಬ್ದ ಗಂಟೆಗಳ ಕಾಲ ಮುಂದುವರಿದಿತ್ತು. ನಗರದ ಆಜಾದಿ ಚೌಕದ ಬಳಿ ಗಾಢ ಕಪ್ಪು ಹೊಗೆ



ಏರಿದ ದೃಶ್ಯ ಕಂಡುಬಂತು. ಶರೀಫ್ ತಾಂತ್ರಿಕ ವಿಶ್ವವಿದ್ಯಾಲಯದ ಆವರಣದಲ್ಲಿ ನಡೆದ ದಾಳಿಯಲ್ಲಿ ಕಟ್ಟಡಗಳಿಗೆ ಹಾನಿಯಾಗಿದೆ. ಈ ದಾಳಿಯಲ್ಲಿ ಇರಾನ್ ರೆವಲ್ಯೂಷನರಿ ಗಾರ್ಡ್‌ನ ಗುಪ್ತಚರ ಮುಖ್ಯಸ್ಥ ಮೇಜರ್ ಜನರಲ್ ಮಜೀದ್ ಖಾಡೆಮಿ ಮೃತಪಟ್ಟಿದ್ದಾರೆ ಎಂದು ಇರಾನ್ ಮಾಧ್ಯಮಗಳು ಹಾಗೂ ಇಸ್ರೇಲ್ ರಕ್ಷಣಾ ಸಚಿವರು ತಿಳಿಸಿದ್ದಾರೆ.

ಉದ್ವಿಗ್ನತೆ ಮುಂದುವರಿಕೆ: ಇರಾನ್ ಹಾರ್ಮುಜ್ ಕಣಿವೆಯ ನಿಯಂತ್ರಣವನ್ನು ಸಡಿಲಗೊಳಿಸುವ ಯಾವುದೇ ಲಕ್ಷಣ ತೋರಿಸುತ್ತಿಲ್ಲ. ಯುದ್ಧ ಆರಂಭವಾದ ನಂತರ ಸಾಗರ ಸಾರಿಗೆ 90% ಕ್ಕಿಂತ ಹೆಚ್ಚು ಕುಸಿದಿದೆ. ಕೆಲವು ಹಡಗುಗಳಿಗೆ ಮಾತ್ರ ಅನುಮತಿ ನೀಡಲಾಗುತ್ತಿದೆ.

ಇರಾನ್, ಇಸ್ರೇಲ್ ಮತ್ತು ಅಮೆರಿಕ ನಡುವಿನ ಈ ಸಂಘರ್ಷವು ವೇಗವಾಗಿ ಉಲ್ಬಣಗೊಳ್ಳುತ್ತಿದೆ. ಜಾಗತಿಕ ಇಂಧನ ಸರಬರಾಜು, ಭದ್ರತೆ ಮತ್ತು ರಾಜತಾಂತ್ರಿಕ ಸಂಬಂಧಗಳ ಮೇಲೆ ಇದರ ಪರಿಣಾಮ ಗಂಭೀರವಾಗಿದೆ. ಯುದ್ಧ ವಿರಾಮ ಪ್ರಸ್ತಾವನೆ ಯಶಸ್ವಿಯಾಗುತ್ತದೆಯೇ ಎಂಬುದು ಮುಂದಿನ ದಿನಗಳಲ್ಲಿ ಸ್ಪಷ್ಟವಾಗಲಿದೆ.



ಇಸ್ರೇಲ್, ಗಲ್ಫ್ ರಾಷ್ಟ್ರಗಳ ಮೇಲೆ ಪ್ರತಿದಾಳಿ

ಇರಾನ್‌ನ ಕ್ಷಿಪಣಿಗಳು ಇಸ್ರೇಲ್‌ನ ಹೈಫಾ ನಗರವನ್ನು ತಾಕಿ, ನಾಲ್ವರು ನಾಗರಿಕರು ಮೃತಪಟ್ಟಿದ್ದಾರೆ. ಕುವೈತ್, ಯುನೈಟೆಡ್ ಅರಬ್ ಎಮಿರೇಟ್ಸ್ ಮತ್ತು ಸೌದಿ ಅರೇಬಿಯಾ ತಮ್ಮ ವಾಯು ರಕ್ಷಣಾ ವ್ಯವಸ್ಥೆಗಳನ್ನು ಸಕ್ರಿಯಗೊಳಿಸಿ, ಇರಾನ್‌ನ ಕ್ಷಿಪಣಿಗಳು ಮತ್ತು ಡ್ರೋನ್‌ಗಳನ್ನು ತಡೆಯಲು ಪ್ರಯತ್ನಿಸಿವೆ. ಹಾರ್ಮುಜ್ ಕಣಿವೆಯ ಮೇಲಿನ ನಿಯಂತ್ರಣದಿಂದ ಇರಾನ್ ಜಾಗತಿಕ ತೈಲ ಸರಬರಾಜಿನ ಮೇಲೆ ಒತ್ತಡ ತರುತ್ತಿದ್ದು, ಇದರ ಪರಿಣಾಮವಾಗಿ ಇಂಧನ ಬೆಲೆಗಳು ಏರಿಕೆಯಾಗಿವೆ.

ವಾಯುದಾಳಿಗಳಲ್ಲಿ ಹೆಚ್ಚುತ್ತಿರುವ ಸಾವು

ಟೆಹ್ರಾನ್ ಹೊರವಲಯ ಎಸ್ಲಾಮ್‌ಶಹರ್ ಪ್ರದೇಶದಲ್ಲಿ ನಡೆದ ದಾಳಿಯಲ್ಲಿ ಕನಿಷ್ಠ 15 ಜನರು ಮೃತಪಟ್ಟಿದ್ದಾರೆ. ಕೋಮ್ ನಗರದಲ್ಲಿ ಐದು ಜನ ಬಲಿಯಾದ್ದು, ಇತರ ನಗರಗಳಲ್ಲಿ ನಡೆದ ದಾಳಿಗಳಲ್ಲಿ ಇನ್ನೂ ಆರು ಜನರು ಮೃತಪಟ್ಟಿದ್ದಾರೆ. ಟೆಹ್ರಾನ್‌ನಲ್ಲೇ ಮನೆ ಮೇಲೆ ಬಿದ್ದ ಬಾಂಬ್ ದಾಳಿಯಲ್ಲಿ ಮೂವರು ಮೃತಪಟ್ಟಿದ್ದಾರೆ.

ಸಾವು- ನೋವುಗಳು

ಯುದ್ಧ ಆರಂಭವಾದ ನಂತರ ಇರಾನ್‌ನಲ್ಲಿ 1,900ಕ್ಕೂ ಹೆಚ್ಚು ಜನರು ಮೃತಪಟ್ಟಿದ್ದಾರೆ ಎಂದು ಅಂದಾಜಿಸಲಾಗಿದೆ. ಲೆಬನಾನ್‌ನಲ್ಲಿ 1,400ಕ್ಕೂ ಹೆಚ್ಚು ಜನರು ಬಲಿಯಾಗಿದ್ದು, ಲಕ್ಷಾಂತರ ಜನರು ಸ್ಥಳಾಂತರಗೊಂಡಿದ್ದಾರೆ. ಇಸ್ರೇಲ್‌ನಲ್ಲಿ 23 ಜನರು, ಗಲ್ಫ್ ಪ್ರದೇಶಗಳಲ್ಲಿ ಎರಡು ದಶಕಕ್ಕೂ ಹೆಚ್ಚು ಜನರು ಮೃತಪಟ್ಟಿದ್ದಾರೆ. ಅಮೆರಿಕದ 13 ಸೈನಿಕರೂ ಮೃತಪಟ್ಟಿದ್ದಾರೆ.

ಅಮೆರಿಕ ದುಬಾರಿ ಕಾರ್ಯಾಚರಣೆ



ಇಸ್ಫಾಹಾನ್: ನೈರುತ್ಯ ಇರಾನ್‌ನ ಪರ್ವತ ಪ್ರದೇಶದಲ್ಲಿ ಶುಕ್ರವಾರ ಹೊಡೆದುರುಳಿಸಲಾದ ಅಮೆರಿಕ ವಾಯುಪಡೆಯ ಎಫ್-15ಇ ಸ್ಟ್ರೈಕ್ ಈಗಲ್ ವಿಮಾನದ ಇಬ್ಬರು ಸಿಬ್ಬಂದಿಯನ್ನು ರಕ್ಷಿಸಲು ಬೃಹತ್ ಮಟ್ಟದ ಯುದ್ಧಕಾಲದ ಶೋಧ ಮತ್ತು ರಕ್ಷಣಾ ಕಾರ್ಯಾಚರಣೆ ನಡೆಸಿದೆ.

ಇಸ್ಫಾಹಾನ್ ಸಮೀಪದ ಬೆಟ್ಟಗುಡ್ಡಗಳಲ್ಲಿ 494ನೇ ಫೈಟರ್ ಸ್ಕ್ವಾಡ್ರನ್‌ಗೆ ಸೇರಿದ ಅಮೆರಿಕಾದ ವಿಮಾನ ಪತನಗೊಂಡಿತ್ತು. ನೂರಾರು ಸಿಬ್ಬಂದಿ, ಹಲವಾರು ವಿಮಾನಗಳು ಮತ್ತು ಸಿಐಎ ನೇತೃತ್ವದ ಕಾರ್ಯಾಚರಣೆಯನ್ನೂ ಒಳಗೊಂಡಿದ್ದ ಎರಡು ದಿನಗಳ ಈ ರಕ್ಷಣಾ ಕಾರ್ಯದಲ್ಲಿ ಇಬ್ಬರೂ ಸಿಬ್ಬಂದಿಯನ್ನು ಯಶಸ್ವಿಯಾಗಿ ರಕ್ಷಿಸಲಾಗಿದೆ.

ಉಪಕರಣಗಳ ನಷ್ಟ ಮತ್ತು ವೆಚ್ಚ: ಈ ಕಾರ್ಯಾಚರಣೆಯ ವೇಳೆ ಅಮೆರಿಕದ ಕನಿಷ್ಠ ಮೂರು ವಿಮಾನಗಳು ನಾಶವಾಗಿವೆ. ತಲಾ 100 ಮಿಲಿಯನ್ ಡಾಲರ್ ಮೌಲ್ಯದ ಎರಡು ಸಿ-130 ಹರ್ಕ್ಯುಲಸ್(ಅಂದಾಜಿನ ಪ್ರಕಾರ ಎಂಸಿ-130ಜೆ ಕಮಾಂಡೋ) ಮತ್ತು 7.5 ಮಿಲಿಯನ್ ಡಾಲರ್ ಮೌಲ್ಯದ ಎಂಹೆಚ್-6 ಲಿಟಲ್ ಬರ್ಡ್ ಹೆಲಿಕಾಪ್ಟರ್‌ನ ಅವಶೇಷಗಳನ್ನು ಗುರುತಿಸಲಾಗಿದೆ. ಇವು ಇರಾನ್ ಕೈಗೆ ಸಿಗದಂತೆ ನೆಲದ ಮೇಲೆಯೇ ನಾಶಪಡಿಸಲಾಗಿದೆ ಎಂದು ಅಮೆರಿಕ ಹೇಳಿದ್ದರೆ, ಇರಾನ್ ಎರಡು ಸಿ-130

ಇಸ್ಫಾಹಾನ್‌ನಲ್ಲಿ ಎಫ್-15ಇ ಪೈಲಟ್‌ಗಳ ರಕ್ಷಣೆ



ಮತ್ತು ಎರಡು ಬ್ಲಾಕ್‌ಹಾಕ್ ಹೆಲಿಕಾಪ್ಟರ್‌ಗಳನ್ನು ಹೊಡೆದುರುಳಿಸಿರುವುದಾಗಿ ಪ್ರತಿಪಾದಿಸಿದೆ.

ಹಣಕಾಸು ಮತ್ತು ಕಾರ್ಯತಂತ್ರ: ಎಫ್-15ಇ ವಿಮಾನದ ಮೌಲ್ಯವನ್ನೂ ಒಳಗೊಂಡಂತೆ ಈ ಕಾರ್ಯಾಚರಣೆಯ ಒಟ್ಟು ವೆಚ್ಚ 210 ಮಿಲಿಯನ್‌ನಿಂದ 310 ಮಿಲಿಯನ್ ಡಾಲರ್ 1972ರಲ್ಲಿ ಲೆಫ್ಟಿನೆಂಟ್ ಕರ್ನಲ್ ಐಸಿಯಲ್ ಹ್ಯಾಂಬಲ್ಟನ್ ಅವರ ರಕ್ಷಣಾ ಕಾರ್ಯಾಚರಣೆಯ ಮಾದರಿಯಲ್ಲೇ, ಯಾವುದೇ ಸೈನಿಕನನ್ನು ಶತ್ರುಪಾಳಯದಲ್ಲಿ ಬಿಡಬಾರದು ಎಂಬ ಮಿಲಿಟರಿ ತತ್ವವನ್ನು ಇಲ್ಲಿ ಅನುಸರಿಸಲಾಗಿದೆ.

ಭಾರತಕ್ಕೆ ಇನ್ನೆರಡು ಎಲ್‌ಪಿಜಿ ನೌಕೆಗಳು

ಹೊಸದಿಲ್ಲಿ: ಹಾರ್ಮುಜ್ ಜಲಸಂಧಿ ಮೂಲಕ ಭಾರತೀಯ ಧ್ವಜವಿರುವ ಇನ್ನೆರಡು ಎಲ್‌ಪಿಜಿ ನೌಕೆಗಳು ಭಾರತೀಯ ಬಂದರುಗಳ ಕಡೆಗೆ ಹೊರಟಿವೆ. ಇದೇ ವೇಳೆ 16 ಇತರ ನೌಕೆಗಳು ಪರ್ಶಿಯನ್ ಕೊಲ್ಲಿಯಲ್ಲೇ ಬಾಕಿಯಾಗಿವೆ ಎಂದು ಅಧಿಕಾರಿಗಳು ಸೋಮವಾರ ತಿಳಿಸಿದ್ದಾರೆ. ಸುಮಾರು 46,650 ಟನ್‌ಗಳಷ್ಟು ಎಲ್‌ಪಿಜಿಯುಕ್ತ ನೌಕೆ ಗ್ರೀನ್ ಸಾನ್ವಿ ಮಂಗಳವಾರ ಭಾರತೀಯ ಬಂದರು ತಲುಪಲಿದೆ. 15,500 ಟನ್ ಎಲ್‌ಪಿಜಿ ಲೋಡ್‌ನ ಇನ್ನೊಂದು ನೌಕೆ ಗ್ರೀನ್ ಆಶಾ ಏ.9ರಂದು ಭಾರತೀಯ ಕರಾವಳಿ ತಲುಪಲಿದೆ ಎಂದು ಬಂದರು, ಶಿಪ್ಪಿಂಗ್ ಮತ್ತು ಜಲಮಾರ್ಗಗಳ ಖಾತೆ ಹೆಚ್ಚುವರಿ ಕಾರ್ಯದರ್ಶಿ ಮುಖೇಶ್ ಮಂಗಲ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಎರಡು ಎಲ್‌ಪಿಜಿ ಟ್ಯಾಂಕರ್‌ಗಳು ಸುರಕ್ಷಿತವಾಗಿ ಹಾರ್ಮುಜ್ ಜಲಸಂಧಿ ದಾಟುವ ಮೂಲಕ, ಇರಾನ್ ವಿರುದ್ಧ ಅಮೆರಿಕ -ಇಸ್ರೇಲ್ ದಾಳಿ ಹಿನ್ನೆಲೆಯಲ್ಲಿ ಮುಚ್ಚಿರುವ ಹಾರ್ಮುಜ್ ಜಲಸಂಧಿಯಿಂದಾಗಿ ಭಾರತದ ಒಟ್ಟು 8 ಎಲ್‌ಪಿಜಿ ಟ್ಯಾಂಕರ್‌ಗಳು ಸುರಕ್ಷಿತವಾಗಿ ಭಾರತೀಯ ಕರಾವಳಿಗೆ ತಲುಪಿದಂತಾಗಿದೆ.

ಯಾವೆಲ್ಲ ನೌಕೆಗಳು?: ಪರ್ಶಿಯನ್ ಕೊಲ್ಲಿಯಲ್ಲಿ ಬಾಕಿಯಾಗಿರುವ ನೌಕೆಗಳ ಪೈಕಿ ಒಂದು ದ್ರವೀಕೃತ ನೈಸರ್ಗಿಕ ಅನಿಲ (ಎಲ್‌ಎನ್‌ಜಿ) ಲೋಡ್‌ಯುಕ್ತ ನೌಕೆ. ಎರಡು ಎಲ್‌ಪಿಜಿ ಟ್ಯಾಂಕರ್‌ಗಳು (ಒಂದರಲ್ಲಿ ಲೋಡ್ ಇದೆ, ಇನ್ನೊಂದು ಖಾಲಿ), ಆರು ಕಚ್ಚಾತೈಲ ತುಂಬಿದ ನೌಕೆಗಳು (5ಲೋಡೆಡ್, ಒಂದು ಖಾಲಿ), ಮೂರು ಕಂಟೈನರ್ ಹಡಗುಗಳು, ಒಂದು ಡ್ರೆಡ್ಜರ್, ಒಂದು ಕೆಮಿಕಲ್ ಸರಕು ತುಂಬಿರುವ ನೌಕೆ, ಮತ್ತೆರಡು ಬೃಹತ್ ಸರಕು ಸಾಗಣೆ ಹಡಗುಗಳು ಎಂದು ಅಧಿಕಾರಿ ಮಾಹಿತಿ ನೀಡಿದರು.

ರಸಗೊಬ್ಬರ ಘಟಕಗಳಿಗೆ ಶೇ.90 ಅನಿಲ ಪೂರೈಕೆ

ಹೊಸದಿಲ್ಲಿ: ಇಂಧನ ವ್ಯತ್ಯಯವನ್ನು ಸರಿದೂಗಿಸಲು ತೈಲ ಕಂಪನಿಗಳು ಮುಕ್ತ ಮಾರುಕಟ್ಟೆಯಿಂದ ಅನಿಲ ಖರೀದಿ ಮಾಡಿದ ಹಿನ್ನೆಲೆಯಲ್ಲಿ, ರಸಗೊಬ್ಬರ ಘಟಕಗಳಿಗೆ ನೈಸರ್ಗಿಕ ಅನಿಲ ಪೂರೈಕೆಯನ್ನು ಅವುಗಳ ಅಗತ್ಯದ ಶೇ.90ರಷ್ಟು ಹೆಚ್ಚಿಸಲಾಗಿದೆ.

ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯದ ಜಂಟಿ ಕಾರ್ಯದರ್ಶಿ ಸುಜಾತಾ ಶರ್ಮಾ ಮಾತನಾಡಿ, ಏಪ್ರಿಲ್ 6 ರಿಂದ ಅನಿಲ ಪೂರೈಕೆಯನ್ನು ಶೇ. 60 ರಿಂದ ಶೇ. 90 ಕ್ಕೆ ಏರಿಸಲಾಗಿದೆ ಎಂದು ತಿಳಿಸಿದ್ದಾರೆ. ಹಾರ್ಮುಜ್ ಜಲಸಂಧಿಯ ಬಿಕ್ಕಟ್ಟಿನಿಂದಾಗಿ ಕತಾರ್‌ನಿಂದ ಪೂರೈಕೆ ಸ್ಥಗಿತಗೊಂಡಿದ್ದರೂ, ಭಾರತೀಯ ಕಂಪನಿಗಳು ಅಮೆರಿಕ, ಆಸ್ಟ್ರೇಲಿಯಾ ಮತ್ತು ರಷ್ಯಾದಿಂದ ದ್ರವೀಕೃತ



ನೈಸರ್ಗಿಕ ಅನಿಲವನ್ನು (ಎಲ್‌ಎನ್‌ಜಿ) ಪಡೆಯುತ್ತಿವೆ.

ವಿವಿಧ ವಲಯಗಳ ಪೂರೈಕೆ ಸ್ಥಿತಿ: ನಗರ ಅನಿಲ ವಿತರಣಾ ಜಾಲಗಳು ಮತ್ತು ಇತರ ಕೈಗಾರಿಕಾ ವಲಯಗಳಿಗೆ ಸೋಮವಾರದಿಂದ ಪೂರೈಕೆಯಲ್ಲಿ ಶೇ.10ರಷ್ಟು ಹೆಚ್ಚಳವಾಗಿದೆ. ಮನೆಗಳಿಗೆ ಪೂರೈಸುವ ಪೈಪ್ಡ್ ಅಡುಗೆ ಅನಿಲ ಮತ್ತು ಸಾರಿಗೆ ಸಿಎನ್‌ಜಿ ಪೂರೈಕೆ ಶೇ.100ರಷ್ಟು ಮುಂದುವರಿಯಲಿದೆ. ಹೋಟೆಲ್‌ಗಳಿಗೆ ಬಳಸುವ ವಾಣಿಜ್ಯ ಎಲ್‌ಪಿಜಿ ಹಂಚಿಕೆಯನ್ನು ಬಿಕ್ಕಟ್ಟಿನ ಮುನ್ನಾ ಅವಧಿಯ ಶೇ.70ಕ್ಕೆ ಏರಿಸಲಾಗಿದೆ. ಮಾ.1ರಿಂದ ಇದುವರೆಗೆ 18 ಕೋಟಿಗೂ ಹೆಚ್ಚು ಗೃಹಬಳಕೆಯ ಸಿಲಿಂಡರ್‌ಗಳನ್ನು ವಿತರಿಸಲಾಗಿದೆ.

ತೈಲ ಸಂಸ್ಕರಣಾಗಾರಗಳ ಉತ್ಪಾದನೆ ಹೆಚ್ಚಿಸಲಾಗಿದ್ದು, ಸಿಲಿಂಡರ್ ಬುಕಿಂಗ್ ಅವಧಿಯನ್ನು ನಗರ ಪ್ರದೇಶಗಳಲ್ಲಿ 25 ದಿನ ಹಾಗೂ ಗ್ರಾಮೀಣ ಭಾಗದಲ್ಲಿ 45 ದಿನಗಳಿಗೆ ನಿಗದಿಪಡಿಸಲಾಗಿದೆ. ಕಾಳಸಂತೆಯಲ್ಲಿ ಮಾರಾಟ ತಡೆಯಲು ಅಧಿಕಾರಿಗಳು 1,00,000ಕ್ಕೂ ಹೆಚ್ಚು ಕಡೆ ದಾಳಿ ನಡೆಸಿದ್ದು, 52,000 ಸಿಲಿಂಡರ್‌ಗಳನ್ನು ವಶಪಡಿಸಿಕೊಂಡು 220 ಜನರನ್ನು ಬಂಧಿಸಿದ್ದಾರೆ.

ಐಆರ್‌ಜಿಸಿ ಗುಪ್ತಚರ ಮುಖ್ಯಸ್ಥನ ಹತ್ಯೆ

ಟೆಹ್ರಾನ್: ಇರಾನ್ ರಾಜಧಾನಿ ಬಳಿಯ ವಸತಿ ಪ್ರದೇಶಗಳನ್ನು ಗುರಿಯಾಗಿಸಿ ಸೋಮವಾರ ಅಮೆರಿಕ ಮತ್ತು ಇಸ್ರೇಲ್ ನಡೆಸಿದ ವೈಮಾನಿಕ ದಾಳಿಯಲ್ಲಿ ತನ್ನ ಗುಪ್ತಚರ ಮುಖ್ಯಸ್ಥ ಮಜೀದ್ ಖಾಡೆಮಿ ಮೃತಪಟ್ಟಿರುವುದನ್ನು ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್ (ಐಆರ್‌ಜಿಸಿ) ಖಚಿತಪಡಿಸಿದೆ.



ಭಯೋತ್ಪಾದಕ ದಾಳಿ ಎಂದು ಬಣ್ಣಿಸಲಾದ ಈ ದಾಳಿಯಲ್ಲಿ ಮೇಜರ್ ಜನರಲ್ ಮಜೀದ್ ಖಾಡೆಮಿ ಮುಂಜಾನೆ ಮೃತಪಟ್ಟಿದ್ದಾರೆ ಎಂದು ಮಿಲಿಟರಿ ಸಂಸ್ಥೆ ವರದಿ ಮಾಡಿದೆ. ಸಾವಿನ ನಿಖರ ಸ್ಥಳವನ್ನು ಉಲ್ಲೇಖಿಸದಿದ್ದರೂ, ಈ ಘಟನೆ ಟೆಹ್ರಾನ್ ಸುತ್ತಮುತ್ತ ನಡೆದ ಸರಣಿ ವೈಮಾನಿಕ ಬಾಂಬ್ ದಾಳಿಗಳ ಸಮಯದಲ್ಲಿ ಸಂಭವಿಸಿದೆ ಎನ್ನಲಾಗಿದೆ. ಜೂನ್‌ನಲ್ಲಿ ಹತರಾದ ಜನರಲ್ ಮೊಹಮ್ಮದ್ ಕಜೆಮಿ ಅವರ ಸ್ಥಾನಕ್ಕೆ ಖಾದೆಮಿ ನೇಮಕಗೊಂಡಿದ್ದರು.

ಖಾಡೆಮಿ ನೇರವಾಗಿ ಇರಾನ್‌ನ ಸರ್ವೋಚ್ಚ ನಾಯಕನಿಗೆ ಉತ್ತರಿಸುವ ಮತ್ತು ದೇಶೀಯ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ಸರ್ವೋಚ್ಚ ಅಧಿಕಾರ ಹೊಂದಿರುವ ಸಂಸ್ಥೆಯನ್ನು ಮುನ್ನಡೆಸುತ್ತಿದ್ದರು. ಕಳೆದ ಒಂದು ತಿಂಗಳ ಸಂಘರ್ಷದಲ್ಲಿ ದಿವಂಗತ ಸರ್ವೋಚ್ಚ ನಾಯಕ ಅಲಿ ಖಮೇನಿ ಮತ್ತು ಉನ್ನತ ಅಧಿಕಾರಿ ಅಲಿ ಲಾರಿಜಾನಿ ಸೇರಿದಂತೆ ಹಲವು ಉನ್ನತ ಮಟ್ಟದ ವ್ಯಕ್ತಿಗಳ ಸಾವಿನ ಬೆನ್ನಲ್ಲೇ ಇವರ ಸಾವು ಸಂಭವಿಸಿದೆ.

ಮಾ.17ರಂದು ನಡೆದ ದಾಳಿಯಲ್ಲಿ ರಾಷ್ಟ್ರೀಯ ಭದ್ರತಾ ಮಂಡಳಿ ಮುಖ್ಯಸ್ಥ ಮತ್ತು ಅವರ ಕುಟುಂಬ ಸದಸ್ಯರು ಹತರಾಗಿದ್ದರು. ಸರಣಿ ದಾಳಿಗಳಲ್ಲಿ ಬಸಿಜ್ ಕಮಾಂಡರ್ ಘೋಲಮ್ರೆಜಾ ಸೊಲೈಮಾನಿ ಮತ್ತು ರೆವಲ್ಯೂಷನರಿ ಗಾರ್ಡ್ಸ್ ವಕ್ತಾರ ಅಲಿ ಮೊಹಮ್ಮದ್ ನೈನಿ ಕೂಡ ಹತರಾಗಿದ್ದಾರೆ ಎಂದು ವರದಿಯಾಗಿದೆ.

ಕಿರುಸುದ್ದಿ

ಐಎಸ್‌ಐ ನಂಟು: ಮೂವರ ಬಂಧನ

ಚಂಡೀಗಢ: ಪಂಜಾಬ್ ಪೊಲೀಸರ ಕೌಂಟರ್ ಇಂಟೆಲಿಜೆನ್ಸ್ ವಿಭಾಗವು ಪಾಕಿಸ್ತಾನದ ಐಎಸ್‌ಐ ಬೆಂಬಲಿತ ಭಯೋತ್ಪಾದಕ ಘಟಕವನ್ನು ಭೇದಿಸಿ, ಮೂವರನ್ನು ಬಂಧಿಸಿದೆ. ಬಂಧಿತರಿಂದ ಗ್ಲಾಕ್ ಪಿಸ್ತೂಲ್ ಜತೆಗೆ ಎರಡು ಹ್ಯಾಂಡ್ ಗ್ರೆನೇಡ್‌ಗಳನ್ನು ವಶಪಡಿಸಿಕೊಂಡಿದೆ. ಈ ಗ್ರೆನೇಡ್‌ಗಳು ಪಿಒಎಫ್ (ಪಾಕಿಸ್ತಾನ ಆರ್ಡನೆನ್ಸ್ ಫ್ಯಾಕ್ಟರಿ) ಗುರುತುಗಳನ್ನು ಹೊಂದಿದ್ದು, ಇದು ಗಡಿಯಾಚೆಗಿನ ಸಂಪರ್ಕವನ್ನು ಬಹಿರಂಗಪಡಿಸುತ್ತಿದೆ ಎಂದು ಪೊಲೀಸ್ ಮಹಾನಿರ್ದೇಶಕ ಗೌರವ್ ಯಾದವ್ ಹೇಳಿದ್ದಾರೆ. ಬಂಧಿತರನ್ನು ತರ್ನ್ ತರಾನ್‌ನ ಅಮ್ಮಿಶಾ ಗ್ರಾಮದ ನಿವಾಸಿ ಸರಬ್‌ಜಿತ್ ಸಿಂಗ್, ಅಮೃತಸರದ ನಂಗಲ್ ಪನ್ನುವಾನ್ ಗ್ರಾಮದ ನಿವಾಸಿ ಬಿಕ್ರಮ್ಜಿತ್ ಸಿಂಗ್ ಮತ್ತು ಅಮೃತಸರದ ಇಂದ್ರ ಕಾಲೋನಿಯ ನಿವಾಸಿ ಅಮನ್ದೀಪ್ ಸಿಂಗ್ ಎಂದು ಗುರುತಿಸಲಾಗಿದೆ. ಪ್ರಾಥಮಿಕ ವರದಿ ಪ್ರಕಾರ, ಬಂಧಿತ ದೇಶದ್ರೋಹಿಗಳು, ಅನೇಕ ರಾಜ್ಯಗಳಲ್ಲಿ ಪೊಲೀಸ್ ಸಂಸ್ಥೆಗಳನ್ನು ಗುರಿಯಾಗಿಸಲು ಸಂಚು ರೂಪಿಸಿತ್ತು. ಇದೀಗ ಪೊಲೀಸರು ಇದನ್ನು ಯಶಸ್ವಿಯಾಗಿ ತಪ್ಪಿಸಿದ್ದಾರೆ.

ಹೈಕೋರ್ಟ್‌ಗೆ ಖುದ್ದು ಹಾಜರಾದ ಕೇಜ್ರಿವಾಲ್

ಹೊಸದಿಲ್ಲಿ: ಅಬಕಾರಿ ಹಗರಣ ಪ್ರಕರಣದಲ್ಲಿ ಸಿಬಿಐ ಸಲ್ಲಿಸಿದ್ದ ಅರ್ಜಿ ವಿಚಾರಣೆಯಿಂದ ನ್ಯಾಯಮೂರ್ತಿ ಸ್ವರ್ಣಕಾಂತ ಶರ್ಮಾ ಅವರನ್ನು ಹೊರಗಿಡಬೇಕೆಂದು ಕೋರಿ ಮಾಜಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ದಿಲ್ಲಿ ಹೈಕೋರ್ಟ್ ಮುಂದೆ ಖುದ್ದು ಹಾಜರಾಗಿ ವಾದಿಸಿದ್ದಾರೆ.



ಈ ಪ್ರಕರಣದ ಮುಂದಿನ ವಿಚಾರಣೆಯನ್ನು ಏ.13ಕ್ಕೆ ನಿಗದಿಪಡಿಸಲಾಗಿದೆ. ಅರವಿಂದ್ ಕೇಜ್ರಿವಾಲ್ ಮತ್ತು ಇತರ ಎಲ್ಲ ಆರೋಪಿಗಳನ್ನು ಖುಲಾಸೆಗೊಳಿಸಿರುವುದನ್ನು ಪ್ರಶ್ನಿಸಿ ಸಿಬಿಐ ಹೈಕೋರ್ಟ್ ಮೊರೆ ಹೋಗಿದೆ. ಸಿಬಿಐ ಪರವಾಗಿ ಹಾಜರಾದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, ನ್ಯಾಯಾಲಯವು ನಾಟಕಗಳಿಗೆ ವೇದಿಕೆಯಲ್ಲ. ಕೇಜ್ರಿವಾಲ್ ಅವರು ಈ ಪ್ರಕರಣದಲ್ಲಿ ವೈಯಕ್ತಿಕವಾಗಿ ಹಾಜರಾಗಲು ಬಯಸಿದರೆ ತಮ್ಮ ವಕೀಲರನ್ನು ಬಿಡಬೇಕು ಎಂದು ವಾದಿಸಿದರು. ಅವರು ಅರ್ಜಿಯನ್ನು ಹಿಂತೆಗೆದುಕೊಳ್ಳುವುದನ್ನು ತೀವ್ರವಾಗಿ ವಿರೋಧಿಸಿದರು. ಕೇಜ್ರಿವಾಲ್ ಅವರ ಆರೋಪಗಳು ಕ್ಷುಲ್ಲಕ ಮತ್ತು ತಿರಸ್ಕಾರದಿಂದ ಕೂಡಿವೆ ಎಂದು ಹೇಳಿದರು.ಈ ಹಿಂದೆ ಪಶ್ಚಿಮಬಂಗಾಳದಲ್ಲಿ ಎಸ್‌ಐಆರ್ ಪ್ರಕ್ರಿಯೆ ವಿರೋಧಿಸಿ ಸುಪ್ರೀಂಕೋರ್ಟ್‌ನಲ್ಲಿ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ವಾದ ಮಂಡಿಸಿದ್ದನ್ನಿಲ್ಲಿ ಸ್ಮರಿಸಬಹುದು.

ಸೈಕಲ್‌ನಲ್ಲೇ ಎವರೆಸ್ಟ್ ಬೇಸ್ ಕ್ಯಾಂಪ್ ತಲುಪಿದ ಮಹಿಳೆ

ಲಖನೌ: ಉತ್ತರಪ್ರದೇಶದ ಗೋರಖ್‌ಪುರ ಯುವತಿ ದಿವ್ಯಾ ಸಿಂಗ್ ಸೈಕಲ್‌ನಲ್ಲಿ ಯಶಸ್ವಿಯಾಗಿ ಎವರೆಸ್ಟ್ ಶಿಖರದ ಬೇಸ್ ಕ್ಯಾಂಪ್ ತಲುಪುವ ಮೂಲಕ ಇತಿಹಾಸ ಬರೆದಿದ್ದಾರೆ. ಈ ಮೂಲಕ ದಿವ್ಯಾ ಸಿಂಗ್, ಎವರೆಸ್ಟ್ ಬೇಸ್ ಕ್ಯಾಂಪ್‌ಗೆ ಸೈಕಲ್‌ನಲ್ಲಿ ತಲುಪಿದ ಮೊದಲ ಮಹಿಳೆಯಾಗಿದ್ದು, ವಿಶ್ವದಲ್ಲೇ ಇಷ್ಟು ಎತ್ತರವನ್ನು ಸೈಕಲ್‌ನಲ್ಲಿ ತಲುಪಿ ಸಾಧನೆಗೈದ



ದ್ವಿತೀಯ ಮಹಿಳೆಯಾಗಿದ್ದಾರೆ. ದಿವ್ಯಾ ಸಿಂಗ್ ಎವರೆಸ್ಟ್ ಬೇಸ್ ಕ್ಯಾಂಪ್‌ನಲ್ಲಿ ತಮ್ಮ ಸೈಕಲ್ ಮತ್ತು ಕೈಯಲ್ಲಿ ಭಾರತೀಯ ಧ್ವಜದೊಂದಿಗೆ ನಿಂತಿರುವ ವಿಡಿಯೋ ಸಾಮಾಜಿಕ ಮಾಧ್ಯಮದಲ್ಲಿ ವೈರಲ್ ಆಗಿದ್ದು, ಹಲವರಿಗೆ ಸ್ಫೂರ್ತಿ ತುಂಬಿದೆ. ಅವರು ನೇಪಾಳದ ಕಠ್ಮಂಡುವಿನಿಂದ ಎವರೆಸ್ಟ್ ಬೇಸ್ ಕ್ಯಾಂಪ್‌ಗೆ 14 ದಿನಗಳ ಕಾಲ ಸೈಕಲ್ ಸವಾರಿ ಮಾಡಿದ್ದಾರೆ. ವಿಪರೀತ ಚಳಿ ಮತ್ತು ಮಂಜಿನಿಂದ ಆವೃತವಾದ ಈ ಪ್ರದೇಶದಲ್ಲಿ ಅವರ ಸೈಕಲ್ ಪ್ರವಾಸ ಸುಗಮವಾಗಿರಲಿಲ್ಲ. ಪ್ರತಿನಿತ್ಯ 10-12 ಗಂಟೆ ಸೈಕಲ್‌ನಲ್ಲಿ ಪ್ರಯಾಣಿಸುತ್ತಿದ್ದರು. ಈ ವೇಳೆ ಪ್ರತಿಕೂಲ ಹವಾಮಾನ ಕೂಡ ಸುಗಮ ಪ್ರಯಾಣಕ್ಕೆ ಅಡ್ಡಿಪಡಿಸುತ್ತಿತ್ತು. ಈ ಸಾಧನೆಗೆ ಭಾರೀ ಪ್ರಶಂಸೆಗೆ ಪಾತ್ರವಾಗಿರುವ ದಿವ್ಯಾ ಸಿಂಗ್ ಅವರ ಧೈರ್ಯಕ್ಕೆ ಉತ್ತಮ ಪ್ರತಿಕ್ರಿಯೆಗಳು ದೊರಕುತ್ತಿದೆ.

ಹೈವೇಗಳಲ್ಲಿ ಜಾನುವಾರು: ರಾಜ್ಯ, ಕೇಂದ್ರಕ್ಕೆ ಸೂಚನೆ

ಹೊಸದಿಲ್ಲಿ: ಹೆದ್ದಾರಿಗಳಿಗೆ ಅಲೆಮಾರಿ ಜಾನುವಾರುಗಳು ನುಗ್ಗುವುದು ಮತ್ತು ಅಪಘಾತಗಳನ್ನು ತಡೆಯುವಂತೆ ಕೋರಿ ಸಲ್ಲಿಸಲಾದ ಅರ್ಜಿಗೆ ಸಂಬಂಧಿಸಿದಂತೆ ಸರ್ವೋಚ್ಚ ನ್ಯಾಯಾಲಯ, ಕೇಂದ್ರ ಸರ್ಕಾರ ಮತ್ತು ಇತರರಿಂದ ಪ್ರತಿಕ್ರಿಯೆ ಕೇಳಿದೆ. ನ್ಯಾಯಮೂರ್ತಿಗಳಾದ ವಿಕ್ರಮ್ ನಾಥ್ ಮತ್ತು ಸಂದೀಪ್ ಮೆಹ್ತಾ ಅವರ ಪೀಠ, ಕೇಂದ್ರ, ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳು ಮತ್ತು ಭಾರತೀಯ ಜಾನುವಾರು ಕಲ್ಯಾಣ ಮಂಡಳಿಗೆ ನೋಟಿಸ್ ಜಾರಿ ಮಾಡಿದ್ದು, ನಾಲ್ಕು ವಾರಗಳೊಳಗೆ ಪ್ರತಿಕ್ರಿಯೆ ನೀಡುವಂತೆ ಸೂಚಿಸಿದೆ. ಈ ಅವಧಿಯ ನಂತರ ಪ್ರಕರಣದ ಮುಂದಿನ ವಿಚಾರಣೆ ನಡೆಯಲಿದೆ. ಲಾಯರ್ಸ್ ಫಾರ್ ಹ್ಯೂಮನ್ ರೈಟ್ ಇಂಟರ್ನ್ಯಾಷನಲ್ ಸಲ್ಲಿಸಿದ ಈ ಅರ್ಜಿ, ಜಾನುವಾರುಗಳ ರಸ್ತೆಗೆ ನುಗ್ಗುವಿಕೆಯನ್ನು ತಡೆಯಲು ಏಕರೂಪದ ರಾಷ್ಟ್ರೀಯ ಮಾರ್ಗಸೂಚಿಗಳು, ಹೆದ್ದಾರಿಗಳಿಗೆ ಕಡ್ಡಾಯ ಬೇಲಿ, ಜಾನುವಾರು ಆಶ್ರಯ ತಾಣಗಳ ಸ್ಥಾಪನೆ ಮತ್ತು ಪ್ರಾಣಿಗಳನ್ನು ಕಾನೂನುಬಾಹಿರವಾಗಿ ಬೀದಿಗೆ ಬಿಡುವವರ ಮೇಲೆ ದಂಡ ವಿಧಿಸುವಂತೆ ಕೋರಿದೆ. ಅಲ್ಲದೆ, ಅಪಘಾತಕ್ಕೊಳಗಾದ ಸಂತ್ರಸ್ತರಿಗೆ(ಯಾರೇ ಆಗಿದ್ದರೂ) ನೋ-ಫಾಲ್ಟ್ ಪರಿಹಾರ ರೂಪಿಸಲು ಒತ್ತಾಯಿಸಿದೆ.

ಹಲವು ರಾಜ್ಯಗಳು ಶೇ.10ರಷ್ಟು ಗೋ ಸಂರಕ್ಷಣಾ ಸೆಸ್ ವಿಧಿಸುತ್ತಿವೆಯಾದರೂ, ಅದನ್ನು ಜಾರಿಗೊಳಿಸುವ ಕ್ರಮಗಳ ಕೊರತೆಯಿದೆ ಎಂದು ನ್ಯಾಯಾಲಯ ಗಮನಿಸಿದೆ. ಇದಕ್ಕೆ ಸಂಬಂಧಿಸಿದ ವಿಷಯಗಳು ಈಗಾಗಲೇ ಬಾಕಿ ಇರುವ ಅಲೆಮಾರಿ ನಾಯಿಗಳ ಪ್ರಕರಣದಲ್ಲಿ ಚರ್ಚೆಯಾಗಿದೆ ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಪೀಠಕ್ಕೆ ತಿಳಿಸಿದೆ.

ಸಿಇಸಿ ಪದಚ್ಯುತಿ ಕೋರಿದ್ದ ನೋಟಿಸ್ ತಿರಸ್ಕರಿಸಿದ ವಿಪಿ

ಹೊಸದಿಲ್ಲಿ: ಭಾರತದ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ವಿರುದ್ಧ ವಿರೋಧ ಪಕ್ಷಗಳು ಸಲ್ಲಿಸಿದ್ದ ಮಹಾಭಿಯೋಗ ನೋಟಿಸ್ ಅನ್ನು ಉಪರಾಷ್ಟ್ರಪತಿ ಮತ್ತು ರಾಜ್ಯಸಭಾ ಸಭಾಪತಿಗಳೂ ಆಗಿರುವ ಸಿ.ಪಿ.ರಾಧಾಕೃಷ್ಣನ್ ಅವರು ತಿರಸ್ಕರಿಸಿದ್ದಾರೆ. ಚುನಾವಣಾ ಆಯೋಗದ ಕಾರ್ಯಪದ್ಧತಿಯಲ್ಲಿ ಪಕ್ಷಪಾತ ನಡೆದಿದೆ ಎಂಬ ಆರೋಪದ ಮೇಲೆ ವಿರೋಧ ಪಕ್ಷಗಳು ಈ ಮಹಾಭಿಯೋಗ ಪ್ರಕ್ರಿಯೆ ಆರಂಭಿಸಲು ಮುಂದಾಗಿದ್ದವು. ಸುಮಾರು 190ಕ್ಕೂ ಹೆಚ್ಚು ಸಂಸದರು ಸಹಿ ಹಾಕಿದ ಈ ನೋಟಿಸ್ ಅನ್ನು ರಾಜ್ಯಸಭೆಗೆ ಸಲ್ಲಿಸಲಾಗಿತ್ತು. ಆದರೆ, ಪ್ರಕ್ರಿಯಾತ್ಮಕ ಮಾನದಂಡಗಳನ್ನು ಪೂರೈಸಿಲ್ಲ ಎಂಬ ಕಾರಣ ನೀಡಿ ಅದನ್ನು ಅಂಗೀಕರಿಸಲು ಅಧ್ಯಕ್ಷರು ನಿರಾಕರಿಸಿದ್ದಾರೆ ಎಂದು ತಿಳಿದುಬಂದಿದೆ. ವಿರೋಧ ಪಕ್ಷಗಳು ಮುಖ್ಯ ಚುನಾವಣಾ ಆಯುಕ್ತರ ವಿರುದ್ಧ ಚುನಾವಣಾ ಪ್ರಕ್ರಿಯೆಯಲ್ಲಿ ಪಕ್ಷಪಾತ, ಮತದಾರರ ಪಟ್ಟಿಯಲ್ಲಿ ಅಕ್ರಮಗಳು ಹಾಗೂ ವಿಶೇಷ ತೀವ್ರ ಪರಿಷ್ಕರಣೆ (ಎಸ್ ಐಆರ್) ವೇಳೆ ನಿಯಮ ಉಲ್ಲಂಘನೆ ನಡೆದಿರುವುದಾಗಿ ಗಂಭೀರ ಆರೋಪಗಳನ್ನು ಮಾಡಿದ್ದವು. ಕೆಲವು ರಾಜ್ಯಗಳಲ್ಲಿ ನಿರ್ದಿಷ್ಟ ರಾಜಕೀಯ ಪಕ್ಷಗಳಿಗೆ ಅನುಕೂಲವಾಗುವ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂಬುದನ್ನೂ ಅವರು ಉಲ್ಲೇಖಿಸಿದ್ದರು. ಇನ್ನೊಂದೆಡೆ, ಆಡಳಿತ ಪಕ್ಷ ಈ ನಿರ್ಧಾರವನ್ನು ಸಮರ್ಥಿಸಿಕೊಂಡಿದ್ದು, ಸಂವಿಧಾನಾತ್ಮಕ ಪ್ರಕ್ರಿಯೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಲಾಗಿದೆ ಎಂದು ಹೇಳಿದೆ. ಭಾರತ ಸಂವಿಧಾನದ ಪ್ರಕಾರ ಮುಖ್ಯ ಚುನಾವಣಾ ಆಯುಕ್ತರನ್ನು ತೆಗೆದುಹಾಕಲು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಯಂತೆಯೇ ಕಠಿಣ ಮಹಾಭಿಯೋಗ ಪ್ರಕ್ರಿಯೆ ಅನಿವಾರ್ಯವಾಗಿದ್ದು, ಎರಡೂ ಸದನಗಳಲ್ಲಿ ವಿಶೇಷ ಬಹುಮತದ ಅನುಮೋದನೆ ಅಗತ್ಯವಿದೆ.

ಬುಡಕಟ್ಟು ಜನರಿಗೆ ಕೈ ವಂಚನೆ: ನಡ್ಡಾ

ತಿನ್ಸುಕಿಯಾ: ಅಸ್ಸಾಂ ಚಹಾ ಬುಡಕಟ್ಟು ಜನಾಂಗದವರ ಕಲ್ಯಾಣಕ್ಕಾಗಿ ಕೆಲಸ ಮಾಡದೆ ಪ್ರತಿ ಐದು ವರ್ಷಗಳಿಗೊಮ್ಮೆ ಕೊಯ್ಲು ಮಾಡುವ ಮತ ಬ್ಯಾಂಕ್ ಎಂದು ಕಾಂಗ್ರೆಸ್ ಪರಿಗಣಿಸುತ್ತಿದೆ ಎಂದು ಕೇಂದ್ರ ಸಚಿವ ಜೆ.ಪಿ. ನಡ್ಡಾ ಸೋಮವಾರ ಆರೋಪಿಸಿದ್ದಾರೆ. ಬಿಜೆಪಿಯ ಡೂಮ್ಡೂಮಾ ಅಭ್ಯರ್ಥಿ ರೂಪೇಶ್ ಗೋವಾಲಾ ಅವರನ್ನು ಬೆಂಬಲಿಸುವ ರ್‍ಯಾಲಿಯನ್ನುದ್ದೇಶಿಸಿ ಮಾತನಾಡಿದ ನಡ್ಡಾ, ಈ ಈಶಾನ್ಯ ರಾಜ್ಯದಲ್ಲಿ ಕಾಂಗ್ರೆಸ್ ತನ್ನ ಆಡಳಿತದ ಅವಧಿಯಲ್ಲಿ ಒಳನುಸುಳುವವರಿಗಾಗಿ ರೆಡ್ ಕಾರ್ಪೆಟ್ ಅನ್ನು ಹೊರತಂದಿದೆ ಎಂದು ಹೇಳಿದ್ದಾರೆ. ಕಾಂಗ್ರೆಸ್ ಚಹಾ ಬುಡಕಟ್ಟುಗಳನ್ನು ಪ್ರತಿ ಐದು ವರ್ಷಗಳಿಗೊಮ್ಮೆ ಕೊಯ್ಲು ಮಾಡಬೇಕಾದ ಮತ ಬ್ಯಾಂಕ್ ಎಂದು ಪರಿಗಣಿಸಿತು. ಇದು ಸಮುದಾಯದ ಭವಿಷ್ಯವನ್ನು ಕತ್ತಲೆಗೆ ತಳ್ಳಿತು ಎಂದು ಅವರು ಹೇಳಿದರು. ಕಾಂಗ್ರೆಸ್ ಅಸ್ಸಾಂಗೆ ನುಸುಳುಕೋರರನ್ನು ಆಹ್ವಾನಿಸಿತು. ಅವರಿಗೆ ಇಲ್ಲಿ ಆಶ್ರಯ ನೀಡಿತು, ತುಷ್ಟೀಕರಣದ ರಾಜಕೀಯಕ್ಕಾಗಿ ಅವರಿಗೆ ಆಧಾರ ಮತ್ತು ಆಯುಷ್ಮಾನ್ ಭಾರತ್ ಕಾರ್ಡ್‌ಗಳನ್ನು ಒದಗಿಸಿತು ಎಂದು ಆರೋಪಿಸಿದ್ದಾರೆ.

ಕಸ್ಟೋಡಿಯಲ್ ಹಿಂಸೆ ಪ್ರಕರಣದಲ್ಲಿ ಸತ್ರ ನ್ಯಾಯಾಲಯ ಐತಿಹಾಸಿಕ ತೀರ್ಪು

ತಮಿಳುನಾಡಿನ 9 ಪೊಲೀಸರಿಗೆ ಮರಣದಂಡನೆ

ಚೆನ್ನೈ: ದೇಶವನ್ನೇ ನಡುಗಿಸಿದ್ದ ತಮಿಳುನಾಡಿನ ಸಾಥಾಂಕುಳಂ ಕಸ್ಟೋಡಿಯಲ್ ಸಾವು ಪ್ರಕರಣದಲ್ಲಿ ಮಹತ್ವದ ತೀರ್ಪು ಹೊರಬಿದ್ದಿದ್ದು, ಒಂಬತ್ತು ಪೊಲೀಸ್ ಸಿಬ್ಬಂದಿಗೆ ಮರಣದಂಡನೆ ವಿಧಿಸಲಾಗಿದೆ. ಮದುರೈ ಪ್ರಥಮ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯವು 2020ರಲ್ಲಿ ನಡೆದ ತಂದೆ-ಮಗ ಪಿ. ಜಯರಾಜ್ ಮತ್ತು ಜೆ.ಬೆನಿಕ್ಸ್ ಅವರ ಸಾವಿಗೆ ಸಂಬಂಧಿಸಿದ ಪ್ರಕರಣದಲ್ಲಿ ಈ ಕಠಿಣ ತೀರ್ಪು ಪ್ರಕಟಿಸಿದೆ.

2020ರ ಜೂನ್‌ನಲ್ಲಿ ಕೋವಿಡ್ ಲಾಕ್‌ಡೌನ್ ನಿಯಮ ಉಲ್ಲಂಘನೆ ಆರೋಪದ ಮೇಲೆ ಜಯರಾಜ್ ಮತ್ತು ಅವರ ಪುತ್ರ ಬೆನಿಕ್ಸ್ ಅವರನ್ನು ಸಾಥಾಂಕುಳಂ ಪೊಲೀಸರು ಬಂಧಿಸಿದ್ದರು. ಬಂಧನದ ನಂತರ ಪೊಲೀಸ್ ಠಾಣೆಯಲ್ಲಿ ನಡೆದ ಅಮಾನವೀಯ ಹಿಂಸೆ ಪರಿಣಾಮವಾಗಿ ಇಬ್ಬರೂ ಮೃತಪಟ್ಟಿದ್ದರು. ಈ ಘಟನೆ ದೇಶಾದ್ಯಂತ ಭಾರೀ ಆಕ್ರೋಶಕ್ಕೆ ಕಾರಣವಾಗಿ, ಪೊಲೀಸ್ ದೌರ್ಜನ್ಯ ಮತ್ತು ಕಸ್ಟೋಡಿಯಲ್ ಹಿಂಸೆ ವಿರುದ್ಧ ತೀವ್ರ ಚರ್ಚೆ ಹುಟ್ಟಿಸಿತ್ತು. ಪ್ರಕರಣದ ತೀವ್ರತೆಯನ್ನು ಗಮನಿಸಿ, ತನಿಖೆಯನ್ನು ನಂತರ ಕೇಂದ್ರ ತನಿಖಾ ದಳಕ್ಕೆ(ಸಿಬಿಐ) ಹಸ್ತಾಂತರಿಸಲಾಗಿತ್ತು. ವಿಚಾರಣೆ ವೇಳೆ ಸಾಕ್ಷ್ಯಾಧಾರಗಳು, ವೈದ್ಯಕೀಯ ವರದಿಗಳು ಮತ್ತು ಸಾಕ್ಷಿದಾರರ ಹೇಳಿಕೆಗಳನ್ನು ಪರಿಗಣಿಸಿದ ನ್ಯಾಯಾಲಯ, ಆರೋಪಿಗಳನ್ನು ದೋಷಿಗಳೆಂದು ಘೋಷಿಸಿ, ಪ್ರಕರಣವನ್ನು 'ಅಪರೂಪದ ಅತ್ಯಂತ ಕ್ರೂರ ಪ್ರಕರಣ'ಎಂದು ಪರಿಗಣಿಸಿದೆ.

ನ್ಯಾಯಾಲಯವು ತನ್ನ ತೀರ್ಪಿನಲ್ಲಿ, ಕಾನೂನು ಜಾರಿಗೊಳಿಸುವವರಿಂದಲೇ ಇಂತಹ ಅಮಾನವೀಯ ಕೃತ್ಯಗಳು ನಡೆದಿರುವುದು ಸಮಾಜದ ವಿಶ್ವಾಸಕ್ಕೆ ದೊಡ್ಡ ಧಕ್ಕೆಯಾಗಿದೆ ಎಂದು ಹೇಳಿ, ಕಠಿಣ ಶಿಕ್ಷೆ ಅನಿವಾರ್ಯವೆಂದು ಅಭಿಪ್ರಾಯಪಟ್ಟಿದೆ. ಸುಮಾರು ಆರು ವರ್ಷಗಳ ವಿಚಾರಣೆಯ ನಂತರ ಹೊರಬಂದ ಈ ತೀರ್ಪು, ಕಸ್ಟೋಡಿಯಲ್ ಹಿಂಸೆ ವಿರುದ್ಧ ಕಠಿಣ ಸಂದೇಶ ನೀಡುವಂತೆ ಪರಿಣಮಿಸಿದೆ.

ಈ ಪ್ರಕರಣವು ದೇಶದಲ್ಲಿ ಮಾನವ ಹಕ್ಕುಗಳ ರಕ್ಷಣೆಯ ಅಗತ್ಯವನ್ನು ಮತ್ತೊಮ್ಮೆ ಒತ್ತಿಹೇಳಿದಂತಾಗಿದ್ದು, ಪೊಲೀಸ್ ವ್ಯವಸ್ಥೆಯಲ್ಲಿ ಸುಧಾರಣೆಗಳ ಅಗತ್ಯದ ಕುರಿತು ಚರ್ಚೆಯನ್ನು ಪುನರುಜ್ಜೀವನಗೊಳಿಸಿದೆ.

- ಸಾಥಾಂಕುಳಂ ಕಸ್ಟೋಡಿಯಲ್ ಸಾವು ಪ್ರಕರಣದಲ್ಲಿ 9 ಪೊಲೀಸರಿಗೆ ಮರಣದಂಡನೆ
- 2020ರಲ್ಲಿ ತಂದೆ-ಮಗ ಮೇಲೆ ಪೊಲೀಸ್ ಹಿಂಸೆ; ಇಬ್ಬರೂ ಮೃತಪಟ್ಟರು
- ಅತ್ಯಂತ ಅಪರೂಪದ ಕ್ರೂರ ಪ್ರಕರಣ' ಎಂದು ನ್ಯಾಯಾಲಯದ ಅಭಿಪ್ರಾಯ
- ಸಿಬಿಐ ತನಿಖೆ ಬಳಿಕ ದೋಷಿಗಳೆಂದು ಘೋಷಣೆ
- ಕಸ್ಟೋಡಿಯಲ್ ಹಿಂಸೆ ವಿರುದ್ಧ ಕಠಿಣ ಸಂದೇಶ ನೀಡಿದ ತೀರ್ಪು

ಜಾಗತಿಕ ಇಂಧನಕ್ಕಾಗಿ ಚಂದ್ರನ ಸುತ್ತ 6,800 ಮೈಲಿ ಉದ್ದ ಸೌರಫಲಕ ಪಟ್ಟಿ

ಟೋಕಿಯೋ: ಭೂಮಿಗೆ ನಿರಂತರವಾಗಿ ಶುದ್ಧ ಇಂಧನ ಪೂರೈಸುವ ಸಲುವಾಗಿ ಚಂದಿರನ ಸಮಭಾಜಕ ವೃತ್ತದ ಸುತ್ತ 6,800 ಮೈಲಿ ಉದ್ದದ ಸೌರ ಫಲಕಗಳ ಪಟ್ಟಿಯೊಂದನ್ನು ನಿರ್ಮಿಸುವ ಮಹತ್ವಾಕಾಂಕ್ಷೆಯ ಯೋಜನೆಯೊಂದನ್ನು ಜಪಾನಿನ ಶಿಮಿಜು ಕಾರ್ಪೊರೇಷನ್ ಅನಾವರಣಗೊಳಿಸಿದೆ.



ಲೂನಾ ರಿಂಗ್ ಎಂದು ಹೆಸರಿಸಲಾದ ಈ ಯೋಜನೆ, ಭೂಮಿಯ ಮೇಲಿನ ಸಮಸ್ಯೆಗಳನ್ನು ಮೆಟ್ಟಿ ನಿಂತು ನಿರಂತರ ವಿದ್ಯುತ್ ಉತ್ಪಾದಿಸುವ ಗುರಿ ಹೊಂದಿದೆ. ಚಂದಿರನ ಮೇಲಿನ ಸೌರ ಕೋಶಗಳು ಸೂರ್ಯನ ಬೆಳಕನ್ನು ವಿದ್ಯುತ್ ಆಗಿ ಪರಿವರ್ತಿಸುತ್ತವೆ ಮತ್ತು ಕೇಬಲ್‌ಗಳ ಮೂಲಕ ಈ ಶಕ್ತಿಯನ್ನು ಭೂಮಿಗೆ ಮುಖ ಮಾಡಿರುವ ಚಂದಿರನ ಮುಂಭಾಗಕ್ಕೆ ಸಾಗಿಸಲಾಗುತ್ತದೆ. ಅಲ್ಲಿಂದ ಮೈಕ್ರೋವೇವ್ ಕಿರಣಗಳು ಮತ್ತು ಅಧಿಕ ಶಕ್ತಿಯ ಲೇಸರ್‌ಗಳ ಮೂಲಕ ಭೂಮಿಗೆ ಇಂಧನವನ್ನು ರವಾನಿಸಲಾಗುತ್ತದೆ. ಭೂಮಿಯ ಮೇಲಿರುವ ವಿಶೇಷ ಆಂಟೆನಾಗಳು ಈ ಕಿರಣಗಳನ್ನು ಸ್ವೀಕರಿಸಿ ಪುನಃ ವಿದ್ಯುತ್ ಆಗಿ ಪರಿವರ್ತಿಸಿ ಗ್ರಿಡ್‌ಗೆ ಪೂರೈಸಲಿವೆ.

ಈ ಬೃಹತ್ ನಿರ್ಮಾಣ ಕಾರ್ಯ ಸಂಪೂರ್ಣವಾಗಿ ಭೂಮಿಯಿಂದಲೇ ನಿಯಂತ್ರಿಸಲ್ಪಡುವ ರೋಬೋಟ್‌ಗಳ ಮೇಲೆ ಅವಲಂಬಿತವಾಗಿರುತ್ತದೆ. ಈ ಯಂತ್ರಗಳು ಚಂದ್ರನ ಮೇಲ್ಮೈಯನ್ನು ಅಗೆಯುವುದಲ್ಲದೆ, ಅಲ್ಲಿನ ಮಣ್ಣನ್ನು ಬಳಸಿಯೇ ಸೌರ ಕೋಶಗಳು, ಕಾಂಕ್ರೀಟ್ ಮತ್ತು ಗಾಜನ್ನು ತಯಾರಿಸಲಿವೆ. ಸ್ವಯಂಚಾಲಿತ ಉತ್ಪಾದನಾ ಘಟಕಗಳು 400 ಕಿಮೀ ಅಗಲದವರೆಗಿನ ಈ ಸೌರ ಪಟ್ಟಿಯನ್ನು ಚಂದಿರನ ಸುತ್ತ ಅಳವಡಿಸಲಿವೆ.

ಈ ಯೋಜನೆಯ ಬಗ್ಗೆ ಆಸಕ್ತಿ ಹೆಚ್ಚಾಗಿದ್ದರೂ, ಇದರ ವೆಚ್ಚದ ಬಗ್ಗೆ ನಿಖರ ಅಂದಾಜು ಇಲ್ಲ ಮತ್ತು ಯಾವುದೇ ಬಾಹ್ಯಾಕಾಶ ಸಂಸ್ಥೆಗಳಿಂದ ಅಧಿಕೃತ ಅನುಮೋದನೆ ದೊರೆತಿಲ್ಲ. ಜಿಯೋಥರ್ಮಲ್ ಪವರ್‌ನಂತಹ ಪರ್ಯಾಯಗಳಿಗೆ ಹೋಲಿಸಿದರೆ ಈ ಯೋಜನೆ ಅತ್ಯಂತ ದುಬಾರಿ, ತಂತ್ರಜ್ಞಾನವೂ ಸಿದ್ಧವಾಗಿಲ್ಲ, ಎಂದು ವಿಮರ್ಶಕರು ಅಭಿಪ್ರಾಯಪಡುತ್ತಾರೆ.

ಕಿರುಸುದ್ದಿ

ಏ. 11ರಿಂದ ರಾಮಕೃಷ್ಣ ಮಠದಲ್ಲಿ ಸಮ್ಮರ್ ಕ್ಯಾಂಪ್

ಮಂಗಳೂರು: ಮಂಗಳಾದೇವಿಯ ರಾಮಕೃಷ್ಣ ಮಠದಲ್ಲಿ 'ಕಲರ್‌ಫುಲ್ ಆ್ಯಂಡ್ ಅಟ್ರಾಕ್ಟಿವ್ ಸಮ್ಮರ್ ಕ್ಯಾಂಪ್ 2026' ಎಂಬ ಶಿಬಿರವನ್ನು ಏ. 11ರಿಂದ 20ರವರೆಗೆ ಪ್ರತಿದಿನ ಬೆಳಿಗ್ಗೆ 8.30ರಿಂದ ಮಧ್ಯಾಹ್ನ 12ರವರೆಗೆ ಆಯೋಜಿಸಲಾಗಿದೆ. 4 ರಿಂದ 18 ವರ್ಷದ ಮಕ್ಕಳಿಗಾಗಿ ನಡೆಯುವ ಈ ಶಿಬಿರದಲ್ಲಿ ಗೀತಾ ಪಾರಾಯಣ, ಭಜನೆ, ಧ್ಯಾನ, ಕರಾಟೆ, ಕೈಚಟುವಟಿಕೆಗಳು, ನೃತ್ಯ, ಆಟಗಳು, ಚಿತ್ರಕಲೆ ಮುಂತಾದ ಕಾರ್ಯಕ್ರಮಗಳು ಇರುತ್ತವೆ. ಟಿಫಿನ್ ಹಾಗೂ ಜ್ಯೂಸ್ ವ್ಯವಸ್ಥೆಯಿದೆ. ಹೆಚ್ಚಿನ ಮಾಹಿತಿಗಾಗಿ 0824-2414412 ಸಂಪರ್ಕಿಸಬಹುದು.

ಶತಮಾನ ಪೂರೈಸಿದ ಸಂಸ್ಥೆಗಳ ಪುಸ್ತಕ ಪ್ರಕಟಣೆಗೆ ಆಹ್ವಾನ

ಮಂಗಳೂರು: ಶತಮಾನ ಪೂರೈಸಿದ ತುಳುನಾಡಿನ ಸಂಘ, ಸಂಸ್ಥೆಗಳ, ಶಾಲಾ ಕಾಲೇಜು, ಕೈಗಾರಿಕಾ ಸಂಸ್ಥೆ, ಕಲಾ ಸಂಸ್ಥೆಗಳ ಬಗ್ಗೆ ಪುಸ್ತಕ ಪ್ರಕಟಿಸಲು ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ನಿರ್ಧರಿಸಿದೆ. ಈ ಹಿನ್ನೆಲೆಯಲ್ಲಿ ಸದ್ರಿ ಸಂಸ್ಥೆಯವರು ಅಥವಾ ಈ ಬಗ್ಗೆ ಕೃತಿ ಬರೆಯಲು ಇಚ್ಛಿಸುವವರು ಕರ್ನಾಟಕ ತುಳುಸಾಹಿತ್ಯ ಅಕಾಡೆಮಿಗೆ ಹಸ್ತ ಪ್ರತಿಯನ್ನು ಸಲ್ಲಿಸಬಹುದು ಹಾಗೂ ಹೆಚ್ಚಿನ ಮಾಹಿತಿಗಾಗಿ ಅಕಾಡೆಮಿಯನ್ನು ಸಂಪರ್ಕಿಸಬಹುದಾಗಿದೆ ಎಂದು ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಅಧ್ಯಕ್ಷ ತಾರಾನಾಥ್ ಗಟ್ಟಿ ಕಾಪಿಕಾಡ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪಿಲಿಕ್ಕೋಡು ಸಾರ್ವಜನಿಕ ಸ್ಥಳದಲ್ಲಿ ತ್ಯಾಜ್ಯ ಎಸೆತ: ದಂಡ

ಕಾಸರಗೋಡು: ಕೊಡಕ್ಕಾಡ್ ವೆಳ್ಳಾಲ್ ರಸ್ತೆ ಬದಿಯಲ್ಲಿ ವಾಹನಗಳಲ್ಲಿ ತಂದು ತ್ಯಾಜ್ಯ ಎಸೆಯುತ್ತಿರುವ ಕೃತ್ಯ ಹೆಚ್ಚುತ್ತಿದ್ದು, ತ್ಯಾಜ್ಯ ಎಸೆದ ವ್ಯಕ್ತಿಯನ್ನು ಪತ್ತೆಹಚ್ಚಿ ಆತನಿಂದಲೇ ತ್ಯಾಜ್ಯ ತೆಗೆಸಿದ ಘಟನೆ ನಡೆದಿದೆ. ಪಿಲಿಕ್ಕೋಡ್ ಪಂಚಾಯತ್ ಅಧಿಕಾರಿಗಳ ನೇತೃತ್ವದಲ್ಲಿ ಹಾಗೂ ಸಾರ್ವಜನಿಕರ ಸಹಭಾಗಿತ್ವದಲ್ಲಿ ತಪಾಸಣೆ ನಡೆಸಲಾಗಿದ್ದು, ತ್ಯಾಜ್ಯ ಎಸೆದ ಬಸ್ ಮಾಲಕನಿಗೆ 10 ಸಾವಿರ ರೂ. ದಂಡ ವಿಧಿಸಲಾಯಿತು. ರಸ್ತೆ ಬದಿಗಳಲ್ಲಿ ತ್ಯಾಜ್ಯ ಎಸೆಯುತ್ತಿರುವ ಕೃತ್ಯ ಹೆಚ್ಚಾಗುತ್ತಿರುವ ಬಗ್ಗೆ ದೂರುಗಳು ಬಂದ ಹಿನ್ನೆಲೆಯಲ್ಲಿ ಪಂಚಾಯತ್ ನೇತೃತ್ವದಲ್ಲಿ ಸಿಸಿಟಿವಿ ಕ್ಯಾಮರಾ ಅಳವಡಿಸಲು ಕ್ರಮ ಕೈಗೊಳ್ಳಲಾಯಿತು.

ಬೆಂಕಿ ನಂದಿಸಲು ಹೋದ ವ್ಯಕ್ತಿ ಕುಸಿದು ಸಾವು

ಹಿರಿಯಡ್ಕ: ಬೆಂಕಿ ನಂದಿಸಲು ಹೋದ ವ್ಯಕ್ತಿಯೊಬ್ಬರು ಕುಸಿದು ಬಿದ್ದು ಮೃತಪಟ್ಟ ಘಟನೆ ಏ.4ರಂದು ಸಂಜೆ ವೇಳೆ ಪೆರ್ಡೂರು ಗ್ರಾಮದ ಪೆಳಚೆಕಟ್ಟೆ ಎಂಬಲ್ಲಿ ನಡೆದಿದೆ. ಮೃತರನ್ನು ಪೆಳಚೆಕಟ್ಟೆ ನಿವಾಸಿ ಜ್ಞಾನೇಶ್ ಹೆಗ್ಡೆ (58) ಎಂದು ಗುರುತಿಸಲಾಗಿದೆ. ಮನೆ ಸಮೀಪದ ಕಾಡಿಗೆ ಬೆಂಕಿ ಬಿದ್ದಿದ್ದು ಅದನ್ನು ನಂದಿಸಲು ಜ್ಞಾನೇಶ್ ನೀರು ತೆಗೆದುಕೊಂಡು ಹೋಗಿದ್ದರು. ಅಲ್ಲಿ ಬೆಂಕಿ ನಂದಿಸುವ ವೇಳೆ ಅವರು ಕುಸಿದು ಬಿದ್ದು ಮೃತಪಟ್ಟರೆಂದು ತಿಳಿದುಬಂದಿದೆ. ಈ ಬಗ್ಗೆ ಹಿರಿಯಡ್ಕ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಮಹತೋಭಾರ ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನಕ್ಕೆ ಸೋಮವಾರ ಮಾಜಿ ಕ್ರಿಕೆಟಿಗ ಕೃಷ್ಣಾಮಚಾರಿ ಶ್ರೀಕಾಂತ್ ಭೇಟಿ ನೀಡಿ ಶ್ರೀ ದೇವರ ದರುಶನ ಪಡೆದು ಸೇವಾದಿಗಳನ್ನು ನೆರವೇರಿಸಿದರು. ಅವರನ್ನು ದೇವಳದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಹರೀಶ್ ಎಸ್. ಇಂಜಾಡಿ ಗೌರವಿಸಿದರು. ಈ ಸಂದರ್ಭ ವ್ಯವಸ್ಥಾಪನಾ ಸಮಿತಿ ಸದಸ್ಯರಾದ ಸೌಮ್ಯ ಭರತ್, ಡಾ.ರಘು, ಲೀಲ ಮನಮೋಹನ್, ಪ್ರವೀಣ ರೈ ಮರುವಂಜ, ಅಜಿತ್ ಪಾಲೇರಿ ಉಪಸ್ಥಿತರಿದ್ದರು.

ಇರ್ದೆ ಬೆಂದ್ರ್ ತೀರ್ಥ ಕ್ಷೇತ್ರ ಅಭಿವೃದ್ಧಿ ಕಾಮಗಾರಿ ಶುರು

ನಿಡ್ಪಳ್ಳಿ: ಶಿವಾಜಿ ಯುವಸೇನೆ ಬೆಂದ್ರ್ ತೀರ್ಥ ಇರ್ದೆ ಸಂಘಟನೆಯ ನೇತೃತ್ವದಲ್ಲಿ ಪುಣ್ಯಕ್ಷೇತ್ರ ಬೆಂದ್ರ್ ತೀರ್ಥ ಅಭಿವೃದ್ಧಿ ಕಾಮಗಾರಿ ಏ.1ರಿಂದ ಆರಂಭಿಸಲಾಗಿದೆ.

ತೀರ್ಥ ಕೆರೆಯ ಸುತ್ತ ಸಿಮೆಂಟ್ ಸಾರಣೆ ಮತ್ತು ಕೆರೆಯ ಮುಂಭಾಗದಲ್ಲಿ ಕಾಂಪೌಂಡ್ ಕೆಲಸದ ಕಾಮಗಾರಿ ಸುಮಾರು ರೂ.50 ಸಾವಿರ ವೆಚ್ಚದಲ್ಲಿ ನಡೆಯುತ್ತಿದೆ. ಬೆಂದ್ರ್ ತೀರ್ಥವನ್ನು ಮುಂದಿನ ದಿನಗಳಲ್ಲಿ ಸುಂದರ ತಾಣವನ್ನಾಗಿಸಲು ಪಣ ತೊಟ್ಟ ಶಿವಾಜಿ ಯುವ ಸೇನೆಯ ಉತ್ಸಾಹಿ ಯುವಕರ ತಂಡ ಕಳೆದ 10 ವರ್ಷಗಳಿಂದ ಇಲ್ಲಿ ಹಲವಾರು ಯೋಜನೆಗಳನ್ನು ಕೈಗೆತ್ತಿಕೊಂಡು ಕಾರ್ಯ ಪ್ರವೃತ್ತವಾಗಿದೆ. ಇದೀಗ ಸಂಘಟನೆಗೆ 10 ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ಕಾರ್ಯಕರ್ತರು ವಾರದಲ್ಲಿ ತಮ್ಮ ಕೈಲಾದ ದೇಣಿಗೆಯ ಮೊತ್ತದಲ್ಲಿ ಮತ್ತು ಊರಿನ ದಾನಿಗಳ ಸಹಕಾರದಿಂದ ಎರಡನೇ ಹಂತದ ಅಭಿವೃದ್ಧಿ ಕೆಲಸಕ್ಕೆ ತನ್ನ ಹೆಜ್ಜೆಯನ್ನು ಮುಂದಿಟ್ಟಿದ್ದಾರೆ.

> ಈ ಕ್ಷೇತ್ರ ಹತ್ತೂರಲ್ಲಿ ಬೆಳಗಲು ಸಂಘಟನೆ ಕೇವಲ ನೇತೃತ್ವ ವಹಿಸಿ ಕ್ಷೇತ್ರದ ಸ್ವಚ್ಛತೆಗೆ ಆದ್ಯತೆ ನೀಡುವುದರ ಜೊತೆಗೆ ಒಂದಿಷ್ಟು ಅಭಿವೃದ್ಧಿಯ ಕನಸು ಕಾಣುತ್ತಿದೆ. ಆದ್ದರಿಂದ ಊರಿನ ದಾನಿಗಳು ಬೆಂದ್ರ್ ತೀರ್ಥ ಅಭಿವೃದ್ಧಿ ವಿಚಾರದಲ್ಲಿ ಏಕ ಮನಸ್ಸಿನಿಂದ ಸಂಘಟನೆಯ ಜೊತೆಗೆ ಕೈ ಜೋಡಿಸುವಂತೆ ಕಳಕಳಿಯ ವಿನಂತಿ.
> ■ **ಧನ್ಯರಾಜ್,** ಅಧ್ಯಕ್ಷರು, ಶಿವಾಜಿ ಯುವ ಸೇನೆ, ಇರ್ದೆ

ಮುಂದಿನ ಯೋಜನೆ: ಪ್ರಕೃತಿಯ ನೈಜ ಸೌಂದರ್ಯ ವನ್ನು ಹೆಚ್ಚಿಸಲು ತೀರ್ಥ ಬಾವಿಯಲ್ಲಿ ಶಾಶ್ವತ ನೀರಿನ ವ್ಯವಸ್ಥೆ ಮತ್ತು ಕ್ಷೇತ್ರದ ಸುತ್ತ ಮುತ್ತ ಗಾರ್ಡನ್ ಮಾಡಲು ಯೋಜನೆ ರೂಪಿಸಲಾಗಿದೆ ಎಂದು ಯುವ ಸೇನೆಯ ಪ್ರಮುಖರು ತಿಳಿಸಿದ್ದಾರೆ.

ವಿಬಿ ಜಿ ರಾಮ್ ಜೀ । ಫಲಾನುಭವಿಗಳಿಗೆ ರಾಜ್ಯದಲ್ಲಿ ಉತ್ತರವಿಲ್ಲ

ಹೊಸತಿಲ್ಲ, ಹಳೇದು ಮುಗ್ದಿಲ್ಲ!

▸ ಮಿಥುನ್ ಕರ್ಲಪ್ಪಾಡಿ

ಸುಳ್ಯ: ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯನ್ನು ಕೇಂದ್ರ ಸರಕಾರ ವಿಬಿ ಜಿ ರಾಮ್ ಜೀ ಎಂದು ಹೆಸರು ಬದಲಾವಣೆಗೊಳಿಸಿದೆ.

ಕೂಲಿ ಕಾರ್ಮಿಕರ ಅನುಕೂಲಕ್ಕಾಗಿ ದಿನಗೂಲಿ ದಿನಗಳ ಸಂಖ್ಯೆಗಳ ಜೊತೆಗೆ ಪಾರದರ್ಶಕ ಕಾಮಗಾರಿ ನಡೆಸುವ ಸಲುವಾಗಿ ಈ ಬದಲಾವಣೆಯಾಗಿದೆ. ಆದರೆ ಈ ಹೆಸರು ಬದಲಾವಣೆಯ ಬಳಿಕ ಇದೀಗ ರಾಜ್ಯದಲ್ಲಿ ಸಾವಿರಾರು ಕಾಮಗಾರಿಗಳಿಗಾಗಿ ಅರ್ಜಿ ಸಲ್ಲಿಸಿದ ಫಲಾನುಭವಿಗಳು ಉತ್ತರವಿಲ್ಲದೆ ಅತಂತ್ರರಾಗಿದ್ದಾರೆ.

ಕೇಂದ್ರ ಸರಕಾರ ಈ ಹಿಂದೆ ಶೇ. 90 ವೇತನ ಪಾವತಿ ಮಾಡುತ್ತಿದ್ದು ಕೇವಲ ರಾಜ್ಯ ಸರಕಾರ ಶೇ. 10 ನೀಡುತ್ತಿದ್ದವು. ಆದರೆ, ಇತ್ತೀಚೆಗೆ ಕೇಂದ್ರ ಸರಕಾರ 60:40 ಅನುಪಾತಕ್ಕೆ ಇಳಿಸಿ ಪಾರದರ್ಶಕವಾಗಿಸುವ ನಿಟ್ಟಿನಲ್ಲಿ ಪ್ರತಿನಿತ್ಯ ಜಿಪಿಎಸ್ ಆಧಾರಿತ ಚಿತ್ರಗಳ ಸಹಿತ ಮಾನವ ದಿನಗೂಲಿಗಳನ್ನು 100ರಿಂದ 125ಕ್ಕೆ ಏರಿಕೆ ಮಾಡಲಾಗಿದ್ದು ಇದೀಗ ಈ ಯೋಜನೆಯು 2026-27ನೇ ಆರ್ಥಿಕ ವರ್ಷದ ಮೊದಲ ವಾರವೇ ಕಾಮಗಾರಿಗಳಿಗೆ ಅನುಮೋದನೆ ದೊರೆತು ಕಾಮಗಾರಿ ಪ್ರಾರಂಭವಾಗಬೇಕಿತ್ತು. ಆದರೆ, ಈಗಾಗಲೇ ಕಾಮಗಾರಿಗಳ ಪಟ್ಟಿ ಸ್ಥಳೀಯ ಪಂಚಾಯತ್‌ಗಳಿಂದ ತಾಲೂಕು ಪಂಚಾಯತ್‌ಗಳಿಗೆ ರವಾನೆಯಾಗಿದ್ದು, ಅಲ್ಲಿಂದ ಎಲ್ಲಾ ಅರ್ಜಿದಾರರ ಕಾಮಗಾರಿಗಳ ಹೆಸರುಗಳ ಜೊತೆಗೆ ಕಾಮಗಾರಿಗಳ ವಿಧಗಳನ್ನು ಪಟ್ಟಿ ಮಾಡಿ ಜಿಲ್ಲಾ ಪಂಚಾಯತ್‌ಗೆ ರವಾನಿಸಲಾಗಿದೆ. ಇದೀಗ ಅಲ್ಲಿ ಕಾರ್ಯಯೋಜನೆ ಅನುಮೋದನೆಗೆ ರಾಜ್ಯ ಮತ್ತು ಕೇಂದ್ರ ಸರಕಾರದ ಯಾವುದೇ ಸುತ್ತೋಲೆಗಳು ಅಧಿಕಾರಿಗಳ ಕೈ ಸೇರದೇ ಇರುವುದು ತೊಡಕಾಗಿದೆ. ಸಲ್ಲಿಸಿದ ಅರ್ಜಿಗಳ ಪೈಕಿ ವೈಯಕ್ತಿಕ ತೋಟಗಾರಿಕ ಬೆಳೆಯಾದ ಅಡಿಕೆ ಕೃಷಿಯನ್ನು ಕೈಬಿಡಲಾಗಿದೆ ಎಂಬ ಮಾತುಗಳು ಕೇಳಿ ಬರುತ್ತಿದ್ದು, ಜೊತೆಗೆ 7 ವಿಭಾಗಗಳಲ್ಲಿ ಕಾಮಗಾರಿಗಳನ್ನು ವಿಂಗಡಿಸಲಾಗಿದ್ದು ಅದರಲ್ಲಿ ಸಮಗ್ರ ನೈಸರ್ಗಿಕ ಸಂಪನ್ಮೂಲ ನಿರ್ವಹಣೆಯ ಕಾಮಗಾರಿ, ಹಸಿರೀಕರಣ ಕಾಮಗಾರಿ, ಜೀವನೋಪಾಯ ಸಂಬಂಧಿಸಿದ ಕಾಮಗಾರಿ, ಸಮಗ್ರ ಶಾಲೆಗಳ ಅಭಿವೃದ್ಧಿ ಕಾಮಗಾರಿ, ಆರೋಗ್ಯ ಮತ್ತು ನೈರ್ಮಲ್ಯಕ್ಕೆ ಸಂಬಂಧಿಸಿದ ಕಾಮಗಾರಿ, ಗ್ರಾಮೀಣ ಮೂಲ ಸೌಕರ್ಯಗಳ ಕಾಮಗಾರಿ ಹಾಗೂ ಗೋಮಾಳ ಅಭಿವೃದ್ಧಿ ಕಾಮಗಾರಿಗಳು ಎಂದು ವಿಭಾಗಿಸಲಾಗಿದೆ.

ಪ್ರಾತಿನಿಧಿಕ ಚಿತ್ರ



ಅರ್ಜಿಗಳ ಕತೆಯೇನು...?

ಸುಳ್ಯ ತಾಲೂಕಿನಲ್ಲಿ ಈಗಾಗಲೇ 2026-27ನೇ ಆರ್ಥಿಕ ವರ್ಷದಲ್ಲಿ ಸುಮಾರು 2030 ಕಾಮಗಾರಿಗಳನ್ನು ನೋಂದಣಿ ಮಾಡಲಾಗಿದ್ದು, ಇವುಗಳು ಇದೀಗ ಜಿಲ್ಲಾ ಪಂಚಾಯತ್‌ಗೆ ಪಟ್ಟಿಗಳನ್ನು ರವಾನಿಸಲಾಗಿದೆ. ಇವುಗಳಲ್ಲಿ ಪ್ರಮುಖವಾಗಿ ಕೆರೆ ನಿರ್ಮಾಣ, ಕೃಷಿ ಹೊಂಡ, ಬಸಿಗಾಲುವೆ, ಸಾರ್ವಜನಿಕ ಸ್ಥಳಗಳಲ್ಲಿ ಗಿಡ ನಾಟಿ, ಜೀವನೋಪಾಯ ಸಂಬಂಧಿಸಿದ ಕಾಮಗಾರಿ ಗಳಾದ ದನ, ಕುರಿ, ಕೋಳಿ, ಹಂದಿ ಶೆಡ್, ಎರೆ ಗೊಬ್ಬರ ಗುಂಡಿ, ವಸತಿ ಕಾಮಗಾರಿ ಸೇರಿದಂತೆ ಇತರ ಅಭಿವೃದ್ಧಿ ಕಾರ್ಯಗಳು ನೆನೆಗುದಿಗೆ ಬಿದ್ದಿವೆ.

> ಹೊಸ ಕಾಮಗಾರಿಗಳ ಪಟ್ಟಿಯನ್ನು ನಾವು ಸಿದ್ಧಪಡಿಸಿಲ್ಲ. ಹಳೆಯ ಕಾಮಗಾರಿಗಳ ಮುಕ್ತಾಯಕ್ಕೆ 3 ತಿಂಗಳುಗಳ ಸಮಯಾವಕಾಶ ನೀಡಿದ್ದು ಬಾಕಿ ಉಳಿದ ಕಾಮಗಾರಿಗಳ ಮುಕ್ತಾಯಕ್ಕೆ ಶ್ರಮ ವಹಿಸಲಾಗುತ್ತಿದೆ. ಆದರೆ, ಯಾವುದೇ ಹೊಸ ಕಾಮಗಾರಿಗಳನ್ನು ಸದ್ಯ ಕೈಗೆತ್ತಿಕೊಂಡಿಲ್ಲ.
> ■ **ನರ್ವಾಡೆ ವಿನಾಯಕ ಕಾರ್ಬಾರಿ,** ದ.ಕ. ಜಿ.ಪಂ ಮುಖ್ಯ ಕಾರ್ಯನಿರ್ವಹಣಾಧಿಕಾರಿ

ಮಾಂಗಲ್ಯ ಯೋಗ, ಸಂತಾನ ಭಾಗ್ಯ ಸಿದ್ಧಿ

ಬ್ರಹ್ಮಕಲಶೋತ್ಸವ ಸಂಭ್ರಮಕ್ಕೆ ಸಜ್ಜಾಗುತ್ತಿದೆ ನಿಡ್ವಾಳ ಶ್ರೀಕ್ಷೇತ್ರ

ಸುಬ್ರಹ್ಮಣ್ಯ: ಭಕ್ತರ ಸಕಲ ಇಷ್ಟಾರ್ಥಗಳನ್ನು ಪೂರೈಸುವ ಮಹಿಮಾತ್ಮಕ ಕ್ಷೇತ್ರ ನಿಡ್ವಾಳದ ಮಹಾವಿಷ್ಣು ದೇವಸ್ಥಾನವು ಬ್ರಹ್ಮಕಲಶೋತ್ಸವಕ್ಕೆ ಸಿದ್ಧವಾಗುತ್ತಿದೆ. ಏ.24ರಿಂದ ಮೇ 3ರ ತನಕ ಕ್ಷೇತ್ರದಲ್ಲಿ ವಿರಾಟ್ ಉತ್ಸವ ನಡೆಯಲಿದೆ. ಇದೀಗ ಸಕಲ ಭಕ್ತರ ಸಹಕಾರದಲ್ಲಿ ಶ್ರೀ ದೇವಳದ ಜೀರ್ಣೋದ್ಧಾರದ ಅಂತಿಮ ಕೆಲಸ ಕಾರ್ಯಗಳು ಭರದಿಂದ ನಡೆಯುತ್ತಿದೆ.

ಸುಳ್ಯ ತಾಲೂಕು, ಐವತ್ತೊಕ್ಲು ಗ್ರಾಮದ ನಿಡ್ವಾಳ ಎಂಬಲ್ಲಿ ಪ್ರಕೃತಿಯ ಮಡಿಲಲ್ಲಿ ಶ್ರೀ ಮಹಾವಿಷ್ಣು ದೇವಸ್ಥಾನವು ನೂರಾರು ವರ್ಷಗಳ ಹಿಂದೆ ಪ್ರತಿಷ್ಠಾಪನೆಯಾಗಿದೆ. ಹಾಲು ಪಾಯಸ ಪ್ರಿಯನಾದ ದೇವರನ್ನು ಅನನ್ಯ ಭಕ್ತಿಯಿಂದ ಪ್ರಾರ್ಥಿಸಿದಲ್ಲಿ ಮಾಂಗಲ್ಯ ಯೋಗ, ಸಂತಾನ ಭಾಗ್ಯ ಮತ್ತು ನಮ್ಮ ಇಷ್ಟಾರ್ಥಗಳು ಸಿದ್ಧಿಯಾಗುವುದು ಎಂಬ ಪ್ರತೀತಿ ಇದೆ.

ಕೋಟಿ ಚೆನ್ನಯರ ಆರಾಧ್ಯ ದೇವರು

ತುಳುನಾಡಿನ ಅವಳಿ ವೀರ ಸಹೋದರರಾದ ಕೋಟಿ-ಚೆನ್ನಯರು ಎಣ್ಮೂರಿನ ಬಲ್ಲಾಳ ಅರಸರೊಡನಿರುವಾಗ ಶ್ರೀ ಮಹಾವಿಷ್ಣು ದೇವರನ್ನು ಆರಾಧಿಸಿಕೊಂಡಿದ್ದರು. ಕ್ರಿ.ಶ. 1585ರಲ್ಲಿ ಪಂಜ ಹಾಗೂ ಎಣ್ಮೂರಿನ ಬಲ್ಲಾಳ ಅರಸರಿಗೆ ನಡೆದ ಯುದ್ಧದಲ್ಲಿ ಪಾಲ್ಗೊಂಡು, ವಿಜಯ ಮಾಲೆಯಯನ್ನು ಎಣ್ಮೂರಿಗೆ ತಂದು ಕೊಟ್ಟು, ದೈವತ್ವಕ್ಕೇರುವ ಸಂದರ್ಭದಲ್ಲಿ ಶ್ರೀ ಮಹಾವಿಷ್ಣು ದೇವರ ಪೂಜೆ ನಡೆದು ತೀರ್ಥ ಸ್ವೀಕರಿಸಿದ ನಂತರವೇ ಇಹಲೋಕ ತ್ಯಜಿಸಿದರು ಎಂದು ತಿಳಿದು ಬರುತ್ತದೆ.



ಧನ ಸಹಕಾರ ಅಗತ್ಯ

ರೂ.4 ಕೋಟಿ ವೆಚ್ಚದಲ್ಲಿ ಪುನರ್ ನಿರ್ಮಾಣ ಕಾರ್ಯ ನಡೆಯುತ್ತಿದ್ದು, ದೇವಳದಲ್ಲಿ ಇನ್ನಷ್ಟು ಅಭಿವೃದ್ಧಿ ಕಾರ್ಯ ನಡೆಸಲು ಭಕ್ತರು ಉದಾರ ದೇಣಿಗೆಯನ್ನಿತ್ತು ಸಹಕರಿಸಬೇಕಾಗಿ ಆಡಳಿತ ಮಂಡಳಿ, ಪುನರ್ ನಿರ್ಮಾಣ ಸಮಿತಿ ವಿನಂತಿಸಿದೆ. ಧನ ಸಹಕಾರ ನೀಡುವವರು ಕರ್ನಾಟಕ ಬ್ಯಾಂಕ್‌ನ ನಿಂತಿಕಲ್ ಶಾಖೆಯ ದೇವಳದ ಖಾತೆ ಸಂಖ್ಯೆ 9912000100005801ಕ್ಕೆ ಜಮೆ ಮಾಡಲು ವಿನಂತಿಸಿದೆ. ಐಎಫ್‌ಎಸ್‌ಸಿ ಕೋಡ್ ಕೆಎಆರ್‌ಬಿ0000991 ಆಗಿದೆ.

ಕಣ್ಮನ ಸೆಳೆಯುತ್ತಿದೆ ಕಾಮಗಾರಿ । ಪ್ರವಾಸೋದ್ಯಮಕ್ಕೆ ಸಿಗಲಿದೆ ಉತ್ತೇಜನ

ಫಲ್ಗುಣಿಗೆ ಬೋ ಸ್ಟ್ರಿಂಗ್‌ನ ಶೃಂಗಾರ!


ಸುರತ್ಕಲ್: ಮಂಗಳೂರು ನಗರವನ್ನು ತಣ್ಣೀರುಬಾವಿ ಜತೆ ಬೆಸೆಯುವ, ಆ ಮೂಲಕ ಈ ಭಾಗದ ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡುವ ಉದ್ದೇಶದ ಬೋ ಸ್ಟ್ರಿಂಗ್ (ಬಿಲ್ಲಿನಾಕಾರದ) ಸೇತುವೆ ನಿರ್ಮಾಣ ಕಾಮಗಾರಿ ಆರಂಭಗೊಂಡಿದೆ. ನಗರದ ಸುಲ್ತಾನ್ ಬತ್ತೇರಿ ಬಳಿ ಫಲ್ಗುಣಿ ನದಿಗೆ ಅಡ್ಡಲಾಗಿ ತಣ್ಣೀರುಬಾವಿಗೆ ಈ ಸೇತುವೆ ಸಂಪರ್ಕ ಕಲ್ಪಿಸಲಿದೆ. ಮಂಗಳೂರು ಸ್ಮಾರ್ಟ್ ಸಿಟಿಯಿಂದ ಸೇತುವೆ ನಿರ್ಮಾಣ ಕಾಮಗಾರಿ ಚುರುಕಾಗಿ ನಡೆಯುತ್ತಿದೆ. ಕಾಮಾನು ಪಿಲ್ಲರ್ ಕುಳ್ಳಿರಿಸುವ ಕೆಲಸ ನಡೆಯುತ್ತಿದೆ.

ಈ ಭಾಗದಲ್ಲಿ ಮೀನುಗಾರಿಕೆ ಜೆಟ್ಟಿಯೂ ಇರುವುದರಿಂದ ಬೋಟ್‌ಗಳ ಸಂಚಾರ ಹೆಚ್ಚಾಗಿ ಇರುತ್ತದೆ. ಹಾಗಾಗಿ ಅವುಗಳ ಸಂಚಾರಕ್ಕೆ ಅನುಕೂಲವಾಗುವ ರೀತಿಯಲ್ಲಿ ನೀರಿನ ಮಟ್ಟದಿಂದ ಎತ್ತರಕ್ಕೆ ಈ ಬೋಸ್ಟ್ರಿಂಗ್ ಆಕಾರದ ಸೇತುವೆ ನಿರ್ಮಿಸಲಾಗುತ್ತಿದೆ.

98 ಮೀಟರ್ ಉದ್ದದ ಸೇತುವೆ

ನದಿಯ ಹೈಟೈಡ್ ರೇಖೆಯಿಂದ 10 ಮೀಟರ್‌ನಷ್ಟು ಎತ್ತರದಲ್ಲಿರುವಂತೆ 98 ಮೀಟರ್ ಉದ್ದದ ಸೇತುವೆ ನಿರ್ಮಿಸಲಾಗುತ್ತದೆ. ಇವುಗಳಿಗೆ ಇಕ್ಕೆಲಗಳಲ್ಲೂ ತಲಾ 93 ಮೀಟರ್ ಉದ್ದದ ರ್‍ಯಾಂಪ್ ನಿರ್ಮಿಸಲಾಗುವುದು, ಅಲ್ಲದೆ ಇಕ್ಕೆಲಗಳಲ್ಲೂ ತಲಾ 100 ಮೀಟರ್ ಕೂಡು ರಸ್ತೆಯೂ ಇರಲಿದೆ. ಎಲ್ಲವೂ ಸಹಿತ ಸೇತುವೆ ಉದ್ದ 480 ಮೀ. ಇರಲಿದೆ. ಇದರಲ್ಲಿ 98 ಮೀಟರ್ ಬೋ ಸ್ಟ್ರಿಂಗ್ ಸೇತುವೆಯನ್ನು ಗುರುಗ್ರಾಂ ಕಡೆಯಿಂದ ತರಿಸಲಾಗುತ್ತದೆ. ಈ ಸೇತುವೆಗೆ ಯಾವುದೇ ಪಿಲ್ಲರ್ ಇರುವುದಿಲ್ಲ, ಹಾಗಾಗಿ ಅದರ ಅಡಿಯಲ್ಲಿ ಸರಾಗವಾಗಿ ಬೋಟ್‌ಗಳು ಸಂಚರಿಸಬಹುದು.

ಇಕ್ಕೆಲದ ರ್‍ಯಾಂಪ್‌ಗ್ಗು ಮಾತ್ರ ಪ್ರಿಸ್ಟ್ರೆಸ್ಟ್. ಇದು ಇಪಿಸಿ ಮಾದರಿಯಲ್ಲಿ ನಿರ್ಮಾಣಗೊಳ್ಳಲಿರುವ ಯೋಜನೆಯಾಗಿದ್ದು, ಇಂಜಿನಿಯರಿಂಗ್, ಖರೀದಿ, ನಿರ್ಮಾಣ ಮೂರನ್ನೂ ಕಾಮಗಾರಿಯ ಗುತ್ತಿಗೆದಾರರಾದ ಮುಗ್ರೋಡಿ ಕನ್‌ಸ್ಟ್ರಕ್ಷನ್ಸ್ ನವರು ನಡೆಸಿ ಕೊಡಲಿದ್ದಾರೆ. 18 ತಿಂಗಳ ಕಾಲಾವಧಿಯ ಯೋಜನೆ ಇದಾಗಿದೆ.



ಸಲೀಯರು, ಪ್ರವಾಸಿಗರಿಗೆ ವರ

ತಣ್ಣೀರುಬಾವಿ, ಬೆಂಗ್ರೆ ಪ್ರದೇಶದ ಜನರಿಗೆ ಯಾವುದೇ ತುರ್ತು ಸನ್ನಿವೇಶದಲ್ಲಿ ನಗರಕ್ಕೆ ಬರಬೇಕಾದರೆ ಪ್ರಸ್ತುತ ಕೂಳೂರು ಮೂಲಕ ಬರಬೇಕಾಗುತ್ತದೆ ಅಥವಾ ದೋಣಿಯ ಮೊರೆ ಹೋಗಬೇಕಾಗುತ್ತದೆ. ಈಗ ಸೇತುವೆ ನಿರ್ಮಾಣವಾದರೆ ತ್ವರಿತವಾಗಿ ನಗರಕ್ಕೆ ಬರಬಹುದು. ಇನ್ನೊಂದೆಡೆ ಸುಲ್ತಾನ್ ಬತ್ತೇರಿಗೆ ಭೇಟಿ ನೀಡುವ ಪ್ರವಾಸಿಗರು ಹೆಚ್ಚು, ಅವರನ್ನು ತಣ್ಣೀರುಬಾವಿ ಸಮುದ್ರಕಿನಾರೆಗೆ ಸೆಳೆಯುವುದಕ್ಕೂ ಈ ಸೇತುವೆ ಸಹಾಯಕಾರಿಯಾಗಲಿದೆ.

ಆರ್ತಿವೊಡಲು ಬ್ರಹ್ಮಕಲಶೋತ್ಸವಕ್ಕೆ ಹಸಿರುವಾಣಿ ಹೊರೆಕಾಣಿಕೆ

ಧಾರ್ಮಿಕ ಜಾಗೃತಿ ನಿರಂತರವಾಗಿ ನಡೆಯಲಿ

ಮಂಗಳೂರು: ಅಷ್ಟಬಂಧ ಬ್ರಹ್ಮ ಕಲಶದಂತಹ ಮಹತ್ವದ ಧಾರ್ಮಿಕ ಕಾರ್ಯಗಳಿಂದಾಗಿ ದೇವರು ಮತ್ತು ಭಕ್ತರ ನಡುವಿನ ಸಂಬಂಧ ಮತ್ತಷ್ಟು ಗಟ್ಟಿಗೊಳ್ಳಲು ಸಾಧ್ಯ ಎಂದು ಕಾವೂರು ಶ್ರೀ ಮಹಾಲಿಂಗೇಶ್ವರ ದೇವಳದ ಪ್ರಧಾನ ಅರ್ಚಕ ಶ್ರೀನಿವಾಸ ಭಟ್ ಹೇಳಿದರು.

ಕುಂಜತ್ತಬೈಲ್ ಕೊಂಗಿರ್‌ಬೈಲ್ ಆರ್ತಿವೊಡಲು ಶ್ರೀ ವಿಷ್ಣುಮೂರ್ತಿ ದೇವಸ್ಥಾನದ ಅಷ್ಟಬಂಧ ಬ್ರಹ್ಮ ಕಲಶೋತ್ಸವ ಏ.6ರಿಂದ 12ರ ತನಕ ವೇದಮೂರ್ತಿ ಬ್ರಹ್ಮಶ್ರೀ ಕುಡುಪು ನರಸಿಂಹ ತಂತ್ರಿಗಳ ನೇತೃತ್ವದಲ್ಲಿ ನಡೆಯಲಿದ್ದು, ಸೋಮವಾರ ವೈಭವದ ಹಸಿರುವಾಣಿ ಹೊರೆಕಾಣಿಕೆ ಮೆರವಣಿಗೆ ಕಾವೂರು ಸೊಸೈಟಿ ಮುಂಭಾಗ ಉದ್ಘಾಟಿಸಿ ಅವರು ಆಶೀರ್ವಚನ ನೀಡಿದರು. ದಾನ ಧರ್ಮದಿಂದ ಯಾವುದಾದರೂ ರೂಪದಲ್ಲಿ ಪ್ರತಿಫಲ ಸಿಗುತ್ತದೆ. ಪ್ರತಿಯೊಬ್ಬರೂ ಸತ್ಕರ್ಮ ಮಾಡಿದಾಗ ಊರು ಸಮೃದ್ಧವಾಗುತ್ತದೆ. ಧಾರ್ಮಿಕ ಜಾಗೃತಿಯ ಕಾರ್ಯಗಳು ಎಲ್ಲೆಡೆ ನಿರಂತರವಾಗಿ ನಡೆಯಬೇಕು ಎಂದರು.

ಮರೋಳಿ ಶ್ರೀ ಸೂರ್ಯನಾರಾಯಣ ದೇವಳದ ಮೊಕ್ತೇಸರ ಗಣೇಶ್ ಶೆಟ್ಟಿ ಚೆಪ್ಪುಗುಡ್ಡೆಗುತ್ತು ಮಾತನಾಡಿ, ಧರ್ಮ ಕಾರ್ಯಗಳಿಂದ ದೇವರು ನಮ್ಮ ಸಂಕಲ್ಪ ಈಡೇರಿಸುತ್ತಾರೆ ಎಂದರು.

ಉದ್ಯಮಿ ರವಿರಾಜ್ ಆಚಾರ್ಯ, ಆಡಳಿತ ಮೊಕ್ತೇಸರ ಡಾ.ನರೇಶ್ ರೈ ದೆಪ್ಪುಣಿಗುತ್ತು, ಅನುವಂಶಿಕ ಮೊಕ್ತೇಸರ ಹಾಗೂ ಪ್ರಧಾನ ಅರ್ಚಕ ಕೆ.ನಾರಾಯಣ ಮಯ್ಯ ಕೊಂಗಿರ್‌ಬೈಲ್, ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ವಿಠಲ ಆಳ್ವ ಹಳೆಮೊಗರು, ಬ್ರಹ್ಮಕಲಶೋತ್ಸವ ಸಮಿತಿಯ ಕಾರ್ಯಾಧ್ಯಕ್ಷ ಆಶಿಕ್ ಬಲ್ಲಾಳ್, ಜೀರ್ಣೋದ್ಧಾರ ಸಮಿತಿ ಗೌರವ ಅಧ್ಯಕ್ಷ ಸುಧಾಕರ ಶೆಟ್ಟಿ ಮುಗ್ರೋಡಿ ಮೊದಲಾದವರು ಉಪಸ್ಥಿತರಿದ್ದರು.

ಸುಧಾಕರ ಆಳ್ವ ಕಾರ್ಯಕ್ರಮ ನಿರೂಪಿಸಿದರು. ಹೊರೆಕಾಣಿಕೆ ಸಮಿತಿ ಸಂಚಾಲಕ ರಮಾನಂದ ಭಂಡಾರಿ ವಂದಿಸಿದರು. ಕಾವೂರು ವ್ಯವಸಾಯ ಬ್ಯಾಂಕ್‌ನ ಬಳಿಯಿಂದ ಹಸಿರುವಾಣಿ ಹೊರೆಕಾಣಿಕೆ ಮೆರವಣಿಗೆ ಹೊರಟು ಶ್ರೀ ಕ್ಷೇತ್ರಕ್ಕೆ ತಲುಪಿತು. ಭಕ್ತರು ಹಾಗೂ ವಿವಿಧ ಸಂಘಟನೆಗಳು ನೀಡಿದ ತರಕಾರಿ, ದಿನಸಿ ವಸ್ತುಗಳು, ಪಾತ್ರೆಗಳು ಸೇರಿದಂತೆ ವಿವಿಧ ವಸ್ತುಗಳು ಕ್ಷೇತ್ರಕ್ಕೆ ಸಮರ್ಪಿಸಲ್ಪಟ್ಟಿತು. ಮೆರವಣಿಗೆಯಲ್ಲಿ ಕಲಶ ಹಿಡಿದ ಸುಮಂಗಲೆಯರು, ಕೊಂಬು, ಕಹಳೆ, ಚೆಂಡೆ ಬಳಗ, ಹುಲಿ ವೇಷ ಕುಣಿತ, ಕುಣಿತ ಭಜನೆ ತಂಡಗಳು, ಕೀಲು ಕುದುರೆ ಮೆರವಣಿಗೆಗೆ ಮೆರುಗು ನೀಡಿತು.



▸ **ಶ್ರೀ ಕ್ಷೇತ್ರದಲ್ಲಿ ಇಂದು**

ಏ.7 ರಂದುಸಂಜೆ 5ರಿಂದ ಆಚಾರ್ಯವರಣ, ಪ್ರಾಸಾದಶುದ್ಧಿ, ಅಂಕುರಾರೋಪಣ, ರಕ್ಷೋಘ್ನಹೋಮ, ವಾಸ್ತುಹೋಮ ವಾಸ್ತು ಬಲಿ, ವಾಸ್ತುಕಲಶಾಭಿಷೇಕ ನಡೆಯಲಿದೆ. ಬಳಿಕ ಸಂಜೆ 6.30ರಿಂದ ಶಾಸಕ ಡಾ.ವೈ.ಭರತ್ ಶೆಟ್ಟಿ ಅಧ್ಯಕ್ಷತೆಯಲ್ಲಿ ಧಾರ್ಮಿಕ ಸಭೆ ನಡೆಯಲಿದ್ದು, ಶ್ರೀಆದಿಚುಂಚನಗಿರಿ ಕಾವೂರು ಶಾಖಾ ಮಠದ ಶ್ರೀ ಧರ್ಮಪಾಲನಾಥ ಸ್ವಾಮೀಜಿ ಅವರ ಉಪಸ್ಥಿತಿಯಲ್ಲಿ ಕದ್ರಿ ಮಂಜುನಾಥ ದೇವಳದ ಅರ್ಚಕ ಕೃಷ್ಣ ಅಡಿಗ ಉಪನ್ಯಾಸ ನೀಡಲಿದ್ದಾರೆ.

ರಸ್ತೆ, ಪಾರ್ಕ್‌ಗಳ ಅಭಿವೃದ್ಧಿ । ಕದ್ರಿ ದೇವಸ್ಥಾನ ಸುತ್ತಲೂ ಡ್ರೈನೇಜ್ ಸಮಸ್ಯೆ

ಕದ್ರಿ ಉತ್ತರ: ನೀರು ಸರಬರಾಜು ಸರಾಗ

▸ ಹರೀಶ ಕುಲ್ಕುಂದ

ಮಂಗಳೂರು: ಕದ್ರಿ ಉತ್ತರ ವಾರ್ಡ್‌ನಲ್ಲಿ ನೀರು ಪೂರೈಕೆ ಸರಾಗವಾಗಿದೆ. ವಾರ್ಡ್‌ನ ಬಹುತೇಕ ಕಡೆಗೆ ಸಮರ್ಪಕವಾಗಿ ಕುಡಿಯುವ ನೀರು ಪೂರೈಕೆಯಾಗುತ್ತಿದ್ದು, ಅಗತ್ಯ ಇರುವ ಕಡೆಗಳಲ್ಲಿ ಬಾವಿ ನೀರನ್ನು ಆಶ್ರಯಿಸಲಾಗಿದೆ.

ಕದ್ರಿ ಮುಂಡಾಣ, ಕದ್ರಿ ಕಂಬಳ, ಕದ್ರಿ ದೇವಸ್ಥಾನ ಸುತ್ತಲಿನ ಪ್ರದೇಶ, ಮಂಜುಶ್ರೀ ಲೇಔಟ್, ಮಲ್ಲಿಕಾ ಬಡಾವಣೆ, ನಂತೂರು ಒಂದರಿಂದ ಆರನೇ ಕ್ರಾಸ್, ಬಿಕರ್ನಕಟ್ಟೆ ಕಂಡೆಟ್ಟು, ಯೆಯ್ಯಾಡಿಯಿಂದ ಶಕ್ತಿನಗರ ಕುಂಟಲ್ಪಾಡಿ, ಯೆಯ್ಯಾಡಿ ಕೈಗಾರಿಕಾ ಪ್ರದೇಶ, ಗುಂಡಳಿಕೆ, ಶರ್ಬತ್‌ಕಟ್ಟೆವರೆಗೆ ವ್ಯಾಪಿಸಿರುವ ಕದ್ರಿ ಉತ್ತರ ವಾರ್ಡ್‌ನಲ್ಲಿ ನೀರಿನ ಸಮಸ್ಯೆ ಅಷ್ಟಾಗಿ ಕಾಣಿಸಿಕೊಂಡಿಲ್ಲ.

ಈ ವಾರ್ಡ್‌ಗೆ ಸರ್ಕೀಟ್ ಹೌಸ್ ಬಳಿಯ ಆಕಾಶವಾಣಿ ಬಳಿಯ ಟ್ಯಾಂಕ್, ಕದ್ರಿ ಪದವು ಭದ್ರಕಾಳಿ ದೇವಸ್ಥಾನ ಬಳಿಯ ಟ್ಯಾಂಕ್‌ನಿಂದ ನೀರು ಸರಬರಾಜು ಮಾಡಲಾಗುತ್ತಿದೆ. ಆಕಾಶವಾಣಿ ಟ್ಯಾಂಕ್‌ನಿಂದ ಕದ್ರಿ ಮುಂಡಾಣ, ನಂತೂರು, ಸರ್ಕೀಟ್ ಹೌಸ್ ಪ್ರದೇಶಗಳಿಗೆ, ಭದ್ರಕಾಳಿ ದೇವಸ್ಥಾನ ಬಳಿಯ ಟ್ಯಾಂಕ್‌ನಿಂದ ನಂತೂರು, ಗುಂಡಳಿಕೆ, ಯೆಯ್ಯಾಡಿ ಪ್ರದೇಶಗಳಿಗೆ ನೀರು ಬರುತ್ತಿದೆ. ಯೆಯ್ಯಾಡಿ ಕೈಗಾರಿಕಾ ಪ್ರದೇಶಕ್ಕೆ ಬೋರ್‌ವೆಲ್‌ಗಳು ನೀರಿನ ಮೂಲವಾಗಿವೆ. ಇಲ್ಲಿನ ಮಂಗಳೂರು ಮಹಾನಗರ ಪಾಲಿಕೆಯ ಯಾವುದೇ ಬೋರ್‌ವೆಲ್, ಸರಕಾರಿ ಬಾವಿಗಳು ಇಲ್ಲ. ಬಹುತೇಕ ಜನತೆ ತಮ್ಮ ಮನೆಯ ಮುಂದಿರುವ ಬಾವಿಯಿಂದಲೇ ನೀರು ಪಡೆಯುತ್ತಿದ್ದಾರೆ.

ಈ ವಾರ್ಡ್‌ನಲ್ಲಿ ಜಲಸಿರಿ ಯೋಜನೆ ಕಾಮಗಾರಿ ಬಹುತೇಕ ಪೂರ್ಣಗೊಂಡಿದೆ. ಪೈಪ್‌ಲೈನ್ ಅಳವಡಿಕೆ ಕಾರ್ಯ ಸಮರ್ಪಕವಾಗಿ ನಡೆದಿದೆ. ಮೈನ್ ಪೈಪ್‌ಲೈನ್, ನೀರಿನ ಸಂಪರ್ಕ ಇನ್ನಷ್ಟೇ ಆಗಬೇಕಿದೆ.

ಚಿತ್ರ: ರಾಜೇಶ್ ಶೆಟ್ಟಿ ಬಳ್ಳಾಲ್‌ಬಾಗ್



ಕದ್ರಿ ಪದವು ಭದ್ರಕಾಳಿ ದೇವಸ್ಥಾನ ಬಳಿಯ ಟ್ಯಾಂಕ್‌ನಿಂದ ಕದ್ರಿ ಉತ್ತರ ವಾರ್ಡ್‌ಗೆ ನೀರು ಒದಗಿಸಲಾಗುತ್ತಿದೆ



> ಕದ್ರಿ ಉತ್ತರ ವಾರ್ಡ್‌ನಲ್ಲಿ ನೀರು ಪೂರೈಕೆಯಲ್ಲಿ ಯಾವುದೇ ಸಮಸ್ಯೆ ಇಲ್ಲ. ನಂತೂರಿನಲ್ಲಿ ಮಾತ್ರ ಹೆದ್ದಾರಿ ಅಭಿವೃದ್ಧಿ ಕಾಮಗಾರಿ ವೇಳೆ ಪೈಪ್ ಲೈನ್‌ಗೆ ಹಾನಿ ಉಂಟಾಗಿ ನೀರು ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಿದ್ದು, ಮನಪಾ ವತಿಯಿಂದ ಟ್ಯಾಂಕರ್ ಮೂಲಕ ನೀರು ನೀಡಲಾಗಿದೆ. ಉಳಿದಂತೆ ನೀರಿನ ಸಮಸ್ಯೆ ಉಂಟಾದರೆ ಮಂಗಳೂರು ಮಹಾನಗರ ಪಾಲಿಕೆ ಸಹಕಾರದೊಂದಿಗೆ ಸ್ಪಂದಿಸಲಾಗಿದೆ. ಶಾಸಕ ವೇದವ್ಯಾಸ ಕಾಮತ್ ಅವರ ಅನುದಾನ ಹಾಗೂ ಸಹಕಾರದಲ್ಲಿ ಕದ್ರಿ ಉತ್ತರ ವಾರ್ಡ್‌ನಲ್ಲಿ ರಸ್ತೆ ಅಭಿವೃದ್ಧಿ, ಪಾರ್ಕ್ ನಿರ್ಮಾಣ ಸಹಿತ ವಿವಿಧ ಕಾಮಗಾರಿ ನಡೆಸಲಾಗಿದೆ.
> ■ **ಶಕೀಲಾ ಕಾವ,** ಕದ್ರಿ ಉತ್ತರ ವಾರ್ಡ್ ನಿಕಟಪೂರ್ವ ಕಾರ್ಪೊರೇಟರ್

ರಸ್ತೆ ಅಭಿವೃದ್ಧಿ

ಕದ್ರಿ ಉತ್ತರ ವಾರ್ಡ್‌ನಲ್ಲಿ ಕೆಲ ರಸ್ತೆಗಳನ್ನು ಅಭಿವೃದ್ಧಿಪಡಿಸಲಾಗಿದೆ. ಕಾರ್ಮಿಕ ಭವನ ಶರ್ಬತ್‌ಕಟ್ಟೆ ಗುಂಡಳಿಕೆ ರಸ್ತೆ, ಕಂಡೆಟ್ಟು-ಬಿಕರ್ನಕಟ್ಟೆ ಈಡನ್ ಲೇಔಟ್ ರಸ್ತೆಯನ್ನು ಅಭಿವೃದ್ಧಿ ಮಾಡಲಾಗಿದೆ. ಬಹುದಿನಗಳ ಬೇಡಿಕೆಯಾಗಿದ್ದ ಯೆಯ್ಯಾಡಿ ಶಕ್ತಿನಗರ ರಸ್ತೆಯನ್ನು ಅಗಲೀಕರಣ ಮಾಡಲಾಗಿದೆ. ಜತೆಗೆ ರಾಜಕಾಲುವೆಯಿಂದ ನೀರು ಉಕ್ಕೇರದಂತೆ ಅಲ್ಲಲ್ಲಿ ತಡೆಗೋಡೆ ನಿರ್ಮಿಸಲಾಗಿದೆ. ಈಡನ್ ಲೇಔಟ್, ಕದ್ರಿ ಕಂಬಳ ಬಳಿ ತಡೆಗೋಡೆ ಮಾಡಲಾಗಿದೆ. ಕುಂಟಲ್ಪಾಡಿ- ಯೆಯ್ಯಾಡಿ, ಕದ್ರಿಯಲ್ಲಿ ತಡೆಗೋಡೆ ಕಾಮಗಾರಿ ಬಾಕಿ ಇದೆ.

ಕದ್ರಿ ದೇವಸ್ಥಾನ ಸುತ್ತಮುತ್ತ ಡ್ರೈನೇಜ್ ಸಮಸ್ಯೆ

ಕದ್ರಿ ಉತ್ತರ ವಾರ್ಡ್‌ನ ಕದ್ರಿ ದೇವಸ್ಥಾನ ಸುತ್ತಲಿನ ಪ್ರದೇಶದಲ್ಲಿ ಡ್ರೈನೇಜ್ ಸಮಸ್ಯೆ ಇದೆ. ಇಲ್ಲಿ ಮಳೆಗಾಲದಲ್ಲಿ ಡ್ರೈನೇಜ್ ಬ್ಲಾಕ್ ಆಗಿ ಮ್ಯಾನ್‌ಹೋಲ್‌ಗಳಲ್ಲಿ ಕೊಳಚೆ ನೀರು ಉಕ್ಕೇರುತ್ತಿದೆ. ಕದ್ರಿ ಉತ್ತರದ ಬಹುತೇಕ ಕಡೆ ಡ್ರೈನೇಜ್ ಸಮಸ್ಯೆಗೆ ಪರಿಹಾರ ಕಲ್ಪಿಸಲಾಗಿದ್ದು, ಕದ್ರಿ ದೇವಳ ಸುತ್ತಲಿನ ಪ್ರದೇಶದ ಡ್ರೈನೇಜ್ ಸಮಸ್ಯೆ ಇನ್ನಷ್ಟೇ ಬಗೆಹರಿಯಬೇಕಿದೆ.

ಪಾರ್ಕ್‌ಗಳಿಗೆ ಹೊಸ ರೂಪ

ಕದ್ರಿ ಉತ್ತರ ವಾರ್ಡ್‌ನಲ್ಲಿ ಮುಡಾ ಸಹಕಾರದೊಂದಿಗೆ ಅನೇಕ ಪಾರ್ಕ್‌ಗಳನ್ನು ಅಭಿವೃದ್ಧಿಪಡಿಸಿ ಸುಂದರಗೊಳಿಸಲಾಗಿದೆ. ಜನವಸತಿ ಪ್ರದೇಶಗಳ ಹಿರಿಯ ನಾಗರಿಕರಿಗೆ, ಮಕ್ಕಳಿಗೆ ಅನುಕೂಲವಾಗುವಂತೆ ಉದ್ಯಾನವನಗಳನ್ನು ಅಭಿವೃದ್ಧಿಪಡಿಸಲಾಗಿದೆ. ಶರ್ಬತ್‌ಕಟ್ಟೆ ಬಳಿಯ ಕದ್ರಿ ಐಟಿಐ ಸಮೀಪ, ಈಡನ್ ಲೇಔಟ್, ಕದ್ರಿ ಕಂಬಳ, ನಂತೂರಿನಲ್ಲಿ ಉದ್ಯಾನವನಗಳಿಗೆ ಹೊಸ ರೂಪ ನೀಡಲಾಗಿದೆ. ಕದ್ರಿ ಕಂಬಳದಲ್ಲಿ ಕೆರೆಯನ್ನೂ ನಿರ್ಮಿಸಲಾಗಿದೆ.

ಹೆದ್ದಾರಿ ಕಾಮಗಾರಿಯಿಂದ ಪೈಪ್‌ಲೈನ್‌ಗೆ ಹಾನಿ

ನಂತೂರು ಪ್ರದೇಶದಲ್ಲಿ ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಕಾಮಗಾರಿ ನಡೆಯುತ್ತಿದ್ದು, ಈ ವೇಳೆ ಕೆಲವೆಡೆ ನೀರಿನ ಪೈಪ್‌ಲೈನ್‌ಗೆ ಹಾನಿಯಾಗಿದೆ. ಹೀಗಾಗಿ ನಂತೂರು ಸುತ್ತಲಿನ ಪ್ರದೇಶಗಳಲ್ಲಿ ನೀರಿನ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಿದೆ. ಪೈಪ್ ಒಡೆದು ನೀರು ಸರಬರಾಜು ಸ್ಥಗಿತಗೊಂಡ ಸ್ಥಳಗಳಿಗೆ ಮಂಗಳೂರು ಮಹಾನಗರ ಪಾಲಿಕೆ ವತಿಯಿಂದ ಟ್ಯಾಂಕರ್ ಮೂಲಕ ನೀರು ಒದಗಿಸಲಾಗಿದೆ. ಉಳಿದಂತೆ ಕದ್ರಿ ಉತ್ತರ ವಾರ್ಡ್‌ನಲ್ಲಿ ನೀರಿನ ಸಮಸ್ಯೆ ಕಾಣಿಸಿಕೊಂಡಿಲ್ಲ ಎನ್ನುತ್ತಾರೆ ಇಲ್ಲಿನ ನಿಕಟಪೂರ್ವ ಕಾರ್ಪೊರೇಟರ್ ಶಕೀಲಾ ಕಾವ.

ನಾಳೆ ವಾರ್ಡ್ -33 ಕದ್ರಿ ದಕ್ಷಿಣ ಪರಿಸರದ ಸ್ಥಿತಿಗತಿ

ರಾಷ್ಟ್ರೋತ್ಥಾನದ ಸಿಬಿಎಸ್ಇ ಶಾಲಾ ಕಟ್ಟಡ ಲೋಕಾರ್ಪಣೆ

ಬೆಂಗಳೂರು: ರಾಷ್ಟ್ರೋತ್ಥಾನ ವಿದ್ಯಾ ಕೇಂದ್ರ ಸಿಬಿಎಸ್ಇ ಶಾಲಾ ಸಮೂಹದ 19ನೇ ಶಾಲಾ ಕಟ್ಟಡದ ಲೋಕಾರ್ಪಣೆಯು ಎಲೆಕ್ಟ್ರಾನಿಕ್ ಸಿಟಿ 1ನೇ ಹಂತದ ಹುಲಿಮಂಗಲದಲ್ಲಿ ಸೋಮವಾರ ಜರುಗಿತು. ಶಾಲೆಯು ಜೂನ್‌ನಿಂದ ಶೈಕ್ಷಣಿಕ ಚಟುವಟಿಕೆಗಳನ್ನು ಪ್ರಾರಂಭಿಸಲಿದೆ.

ಮುಖ್ಯ ಅತಿಥಿಯಾಗಿ ಭಾಗವಹಿಸಿದ ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್, ಶಾಲೆಗಳು ಹೇರಳವಾಗಿದ್ದು, ಶಾಲೆಗಳು ಮುಚ್ಚುತ್ತಿರುವ ಕಾಲಘಟ್ಟದಲ್ಲಿ ನಾವಿದ್ದೇವೆ. ಶಾಲೆಗಳು ದೇಶಕ್ಕೆ, ಸಮಾಜಕ್ಕೆ ಉತ್ತಮ ಸ್ತ್ರೀ-ಪುರುಷರನ್ನು ಕೊಡುವಂತಿರಬೇಕು. ಆದರೆ ಶಾಲಾ-ಕಾಲೇಜಿನ ಅಧ್ಯಾಪಕರ ನಿಯೋಜನೆ, ಶೇಕಡಾವಾರು ಫಲಿತಾಂಶದ ಮೇಲೆ ಅದರ ವಿಶ್ವಾಸಾರ್ಹತೆ ನಿರ್ಣಯವಾಗುತ್ತಿದೆ. ಭಾರತದ ಕಲ್ಪನೆಯಲ್ಲಿ ಶಾಲೆ ಇಷ್ಟೇ ಅಲ್ಲ, ನಮ್ಮ ಶಾಲೆಯಲ್ಲಿ ಇಂತಹ ವ್ಯಕ್ತಿಗಳು ಕಲಿತಿದ್ದರು ಎನ್ನುವುದರ ಮೇಲೆ ಆ ಶಾಲೆಯ ವಿಶ್ವಾಸಾರ್ಹತೆ ಅರ್ಥವಾಗುತ್ತದೆ ಎಂದು ಹೇಳಿದರು.

ಸಮಾಜದ ಒಂದು ವರ್ಗ ಅಂದಂದಿನ ಜೀವನ ಮುಗಿದರೆ ಸಾಕು ಎಂದರೆ ನಾಗರಿಕ ವರ್ಗ ತಾನು, ಮನೆ, ಮಕ್ಕಳು ಎನ್ನುತ್ತಾರೆ. ಆದರೆ, ಈ ಮಣ್ಣಿನ ಮಕ್ಕಳ ವರ್ಗ ಮಾತ್ರ ದೇಶ, ಸಮಾಜ ಎನ್ನುತ್ತದೆಯಾದರೂ ಅಂತಹವರ ಸಂಖ್ಯೆ ಸಣ್ಣದಿದೆ. ನಳಂದಾ, ತಕ್ಷಶಿಲಾ ವಿಶ್ವವಿದ್ಯಾಲಯಗಳು ನಿಯೋಜನೆ, ಫಲಿತಾಂಶದ ಮೇಲೆ ನಿಂತಿರಲಿಲ್ಲ. ಚಾಣಕ್ಯ, ಚಂದ್ರಗುಪ್ತನನ್ನು ಕೊಟ್ಟಿದ್ದೇ ಶೇಕಡಾವಾರು ಫಲಿತಾಂಶ. ಅವೆಲ್ಲ ಕರ್ತವ್ಯದ ಕಾರಣಕ್ಕಾಗಿ ಆದ ನಿಯೋಜನೆಗಳು ಎಂದು ವಿವರಿಸಿದರು.



ವಿದ್ಯೆಕಲಿಯಬೇಕು, ಅಂಕತೆಗೆಯಬೇಕು ಆದರೆ ಅದೇ ಕೊನೆಯಲ್ಲ. ಸಮಾಜದಲ್ಲಿ ನಿಯಮ, ಮೌಲ್ಯ ಎನ್ನುವುದಿದೆ. ನಿಯಮಕ್ಕೆ ನಿಲ್ಲದೇ ಮೌಲ್ಯದ ಕಡೆಗೆ ಸಾಗಬೇಕು. ಭಾರತದ ಶಾಲೆಗಳು ನಿಯಮಕ್ಕೆ, ವಿದ್ಯೆಗೆ ನಿಲ್ಲದೇ ಮೌಲ್ಯ, ವಿವೇಕದ ಕಡೆಗೆ ಸಾಗುತ್ತಿದ್ದವು. ಪೋಷಕರು ಶಾಲೆಗೆ ಸೇರಿಸಿ ಅಂಕ ನಿರೀಕ್ಷೆ ಮಾಡುವುದು ಮಾತ್ರವಲ್ಲ, ಮಕ್ಕಳ ಏಳ್ಗೆಯಲ್ಲಿ ಪಾಲುದಾರರಾಗಬೇಕು. ಯಾವುದನ್ನು ಮಾಡಬೇಕು, ಯಾವುದನ್ನು ಮಾಡಬಾರದು ಎನ್ನುವುದರ ತಿಳಿವಳಿಕೆಯನ್ನು ಶಿಕ್ಷಣ ನೀಡಬೇಕು. ಹಂಚುವುದನ್ನು ಕಲಿಸಬೇಕು. ಮನೆಯ ವಾತಾವರಣ ಶಾಲೆಯಲ್ಲಿ, ಶಾಲೆಯ ವಾತಾವರಣ ಮನೆಯಲ್ಲಿರಬೇಕು. ಹೊರಗಿನಿಂದ ಬಂದ ಶಿಕ್ಷಕರು ಇಲ್ಲಿ ಹೊಸದನ್ನು ಕಲಿಯಬೇಕು ಎಂದು ಅಭಿಪ್ರಾಯಪಟ್ಟರು.

ರಾಷ್ಟ್ರೋತ್ಥಾನ ಶಾಲೆಯಲ್ಲಿ ವಿದ್ಯೆ ವಿವೇಕವಾಗುವುದನ್ನು ಮತ್ತು ನಿಯಮ ಮೌಲ್ಯವಾಗುವುದನ್ನು ಕಲಿಸಲಾಗುತ್ತದೆ. ಪೋಷಕರು, ಶಿಕ್ಷಕರು ಪರಸ್ಪರ ಪೂರಕವಾಗಿ ಮಕ್ಕಳನ್ನು ಬೆಳೆಸಬೇಕು. ರಾಷ್ಟ್ರೋತ್ಥಾನಕ್ಕೆ ಯಾರೂ ಮಾಲೀಕರಿಲ್ಲ, ಅದು ಸಾಮಾಜಿಕ ಸಂಸ್ಥೆ. ಪೋಷಕರು ಈ ಆಸ್ತಿಯಲ್ಲಿ ಒಂದಾಗಬೇಕು ಎಂದು ಕರೆ ನೀಡಿದರು.

ಮೈಸೂರಿನ ರಾಮಕೃಷ್ಣ ಆಶ್ರಮದ ಅಧ್ಯಕ್ಷ ಶ್ರೀಮುಕ್ತಿದಾನಂದ ಮಹಾರಾಜ್ ಆಶೀರ್ವಚನ ನೀಡಿ, ರಾಷ್ಟ್ರೋತ್ಥಾನ ಶಿಕ್ಷಣ ಸಂಸ್ಥೆಗಳು ಆದರ್ಶಪ್ರಾಯವಾಗಿವೆ. ನಮ್ಮ ದೇಶಕ್ಕೆ ನಿಜವಾಗಿ ನಮ್ಮ ಸಂಸ್ಕೃತಿ, ಮೌಲ್ಯ ಪರಂಪರೆಯನ್ನು ಮುಂದಿನ ಪೀಳಿಗೆಗೆ ದಾಟಿಸುವ ಶಿಕ್ಷಣ ಸಂಸ್ಥೆಗಳ ಆವಶ್ಯಕತೆಯಿದೆ. ಶಿಕ್ಷಣವು ಸಮಾಜದ ಎಲ್ಲ ಪಿಡುಗಿಗೆ ದಿವ್ಯೌಷಧ ಎನ್ನುತ್ತಾರೆ ವಿವೇಕಾನಂದರು. ಮಕ್ಕಳು ಆದರ್ಶಪ್ರಾಯರಾಗಲು ಯೋಗ್ಯ ಶಿಕ್ಷಣಬೇಕು. ಚಾರಿತ್ರ್ಯ ನಿರ್ಮಾಣ ಮಾಡುವ ಶಿಕ್ಷಣ ನಮಗೆ ಬೇಕಾಗಿದೆ. ಪ್ರತಿಯೊಬ್ಬರಲ್ಲೂ ಅಡಗಿರುವ ಮೌಲ್ಯವನ್ನು ಹೊರತರಬೇಕು. ನಮ್ಮೊಳಗಿರುವ ದೈವತ್ವದೊಡನೆ ಅನುಸಂಧಾನ ಮಾಡುವ ಶಿಕ್ಷಣಬೇಕು ಎಂದರು.

ಕಟ್ಟಡಕ್ಕೆ ಸ್ಥಳವನ್ನುದಾನಮಾಡಿದ ಎಚ್.ಟಿ. ಸೋಮಶೇಖರ್ ರೆಡ್ಡಿ ಮತ್ತು ಅವರ ಪುತ್ರ ವಿಧಾನಪರಿಷತ್ ಸದಸ್ಯ ಎಚ್.ಎಸ್. ಗೋಪಿನಾಥರೆಡ್ಡಿ ಹಾಗೂ ಪತ್ನಿ ಗಾಯತ್ರಿ ರೆಡ್ಡಿ ಅವರನ್ನು ಗೌರವಿಸಲಾಯಿತು. ಕಟ್ಟಡ ನಿರ್ಮಾಣ ಮಾಡಿಕೊಟ್ಟ ಮೈಸೂರು ಕನ್ಸಲ್ಟೆಂಟ್ಸ್ ಪ್ರತಿನಿಧಿಗಳನ್ನು ಸನ್ಮಾನಿಸಲಾಯಿತು. ರಾಷ್ಟ್ರೋತ್ಥಾನ ಪರಿಷತ್ತಿನ ಪ್ರಧಾನ ಕಾರ್ಯದರ್ಶಿ ನಾ. ದಿನೇಶ್ ಹೆಗ್ಡೆ ಪ್ರಾಸ್ತಾವಿಕವಾಗಿ ಮಾತನಾಡಿದರು.

ಯುದ್ಧ ಅಂತ್ಯಕ್ಕೆ ಇರಾನ್ ಆಗ್ರಹ

ಪುಟ ೧➔ **ಪ್ರಾದೇಶಿಕ ಉದ್ವಿಗ್ನತೆ, ಪ್ರತಿದಾಳಿ:** ಕುವೈತ್, ಯುಎಇ ಮತ್ತು ಸೌದಿ ಅರೇಬಿಯಾ ತಮ್ಮ ವಾಯು ರಕ್ಷಣಾ ವ್ಯವಸ್ಥೆಯನ್ನು ಸಕ್ರಿಯಗೊಳಿಸಿವೆ. ಇರಾನ್ ಕ್ಷಿಪಣಿಗಳು ಮತ್ತು ಡ್ರೋನ್ ದಾಳಿಗಳನ್ನು ಮುಂದುವರಿಸಿದೆ. ಇಸ್ರೇಲ್‌ನ ಹೈಫಾ ನಗರದಲ್ಲಿ ಕ್ಷಿಪಣಿ ದಾಳಿಯಿಂದ ನಾಲ್ವರು ಮತಪಟ್ಟಿದ್ದಾರೆ.

ಮಧ್ಯವರ್ತಿಗಳ ಯತ್ನ, ರಾಜತಾಂತ್ರಿಕ ಒತ್ತಡ: ಈಜಿಪ್ಟ್, ಪಾಕಿಸ್ತಾನ ಮತ್ತು ಟರ್ಕಿ ಮಧ್ಯವರ್ತಿಗಳಾಗಿ 45 ದಿನಗಳ ಕದನ ವಿರಾಮ ಪ್ರಸ್ತಾವನೆಯನ್ನು ಇರಾನ್, ಅಮೆರಿಕಕ್ಕೆ ನೀಡಿವೆ. ಆದರೆ, ಇರಾನ್ ವಿದೇಶಾಂಗ ಸಚಿವಾಲಯದ ವಕ್ತಾರರು, ಬೆದರಿಕೆಗಳ ನಡುವೆ ಮಾತುಕತೆ ಸಾಧ್ಯವಿಲ್ಲ ಎಂದು ಹೇಳಿದ್ದಾರೆ.

ತೈಲ ಬೆಲೆ ಏರಿಕೆ, ಆರ್ಥಿಕ ಸಂಕಷ್ಟ: ಯುದ್ಧದ ಪರಿಣಾಮವಾಗಿ ಬ್ರೆಂಟ್ ಕಚ್ಚಾ ತೈಲದ ಬೆಲೆ ಬ್ಯಾರಲ್‌ಗೆ 109 ಡಾಲರ್‌ವರೆಗೆ ಏರಿಕೆಯಾಗಿದೆ. ಇದು ಯುದ್ಧ ಆರಂಭದ ನಂತರ ಸುಮಾರು 50% ಹೆಚ್ಚಳವಾಗಿದೆ. ಜಾಗತಿಕ ಮಾರುಕಟ್ಟೆಗಳಲ್ಲಿ ಅನಿಶ್ಚಿತತೆ ಮುಂದುವರಿದಿದೆ. ಇರಾನ್ ಮಾಜಿ ವಿದೇಶಾಂಗ ಸಚಿವರು, ವಿದ್ಯುತ್ ಸ್ಥಾವರಗಳ ಮೇಲೆ ದಾಳಿ ನಡೆದರೆ ಸಂಪೂರ್ಣ ಪ್ರದೇಶವೇ ಕತ್ತಲೆಯಲ್ಲಿ ಮುಳುಗಬಹುದು ಎಂದು ಎಚ್ಚರಿಸಿದ್ದಾರೆ.

ಹಾರ್ಮುಜ್ ಪರಿಣಾಮ: ಟ್ರಂಪ್ ನೀಡಿದ ಗಡುವಿನ ಪ್ರಮುಖ ಅಂಶವೆಂದರೆ, ಹಾರ್ಮುಜ್ ಜಲಸಂಧಿ ತೆರೆಯುವುದು. ಸಾಮಾನ್ಯ ಪರಿಸ್ಥಿತಿಯಲ್ಲಿ ವಿಶ್ವದ ಸುಮಾರು ಐದನೇ ಭಾಗದ ತೈಲ ಸಾಗಾಟ ಇದೇ ಮಾರ್ಗದ ಮೂಲಕ ನಡೆಯುತ್ತದೆ. ಇರಾನ್ ಈ ಮಾರ್ಗದ ಮೇಲಿನ ನಿಯಂತ್ರಣ ಹೆಚ್ಚಿಸಿರುವುದರಿಂದ ತೈಲದ ಬೆಲೆಗಳು ಏರಿಕೆಯಾಗಿದ್ದು ಜಾಗತಿಕ ಆರ್ಥಿಕತೆಗೆ ಧಕ್ಕೆಯಾಗಿದೆ. ಇರಾನ್ ಮತ್ತು ಒಮಾನ್ ಅಧಿಕಾರಿಗಳು ಈ ಸಾಗರ ಮಾರ್ಗದ ನಿರ್ವಹಣೆಗೆ ಹೊಸ ವ್ಯವಸ್ಥೆ ರೂಪಿಸಲು ಚರ್ಚೆ ನಡೆಸುತ್ತಿದ್ದಾರೆ ಎಂದು ತಿಳಿದುಬಂದಿದೆ.

ಕಿಡಿ ನುಡಿ

◆ ವಾಸುದೇವರಾವ್ ಕಕ್ಕೆನೇಜಿ

ನಾವು ಸಾಲ ಮಾಡಿದ್ದೇವೆ ನಿಜ, ಪ್ರಧಾನಿ ಮೋದಿ ಸಾಲವನ್ನೇ ಮಾಡಿಲ್ಲವೆ? - ಡಿಕೆಶಿ

- ಆಪತ್ತಿನಲ್ಲಿ, ದೇಶದ ಹಿತಕ್ಕಾಗಿ ಸಾಲ ಮಾಡೋದು ತಪ್ಪಲ್ಲ. ತುಪ್ಪ ತಿನ್ನಲು, ಪಕ್ಷದ ಹಿತಕ್ಕಾಗಿ ಸಾಲ ಮಾಡೋದು ಸರಿಯಲ್ಲ!

ದಿನ ಭವಿಷ್ಯ

ಮೇಷ
ನಿಲ್ಲಿಸಿದ್ದ ಯೋಜನೆ ಅಥವಾ ಕಾರ್ಯಕ್ಕೆ ಮರುಚಾಲನೆ ನೀಡಿ. ಅನ್ಯರ ವಿಷಯದಲ್ಲಿ ಹಸ್ತಕ್ಷೇಪ ಮಾಡದಿರಿ. ಕೌಟುಂಬಿಕ ಸಾಮರಸ್ಯ.

ವೃಷಭ
ಹೊರಗಿನ ವ್ಯವಹಾರದಲ್ಲಿ ಹೆಚ್ಚು ವ್ಯಸ್ತ. ಆರ್ಥಿಕ ಸ್ಥಿರತೆ. ದಂಪತಿಗಳಿಗೆ ಶುಭ ಬೆಳವಣಿಗೆ. ಆಸ್ತಿ ಮಾರಾಟಕ್ಕೆ ಸೂಕ್ತ ದಿನ.

ಮಿಥುನ
ಸಹೋದ್ಯೋಗಿ ಜತೆ ಎಚ್ಚರದಿಂದ ವ್ಯವಹರಿಸಿ. ಜಗಳ, ಭಿನ್ನಮತ ಉಂಟಾದೀತು. ದೀರ್ಘಾವಧಿ ಯೋಜನೆಗೆ ಹಣ ಹೂಡಬೇಡಿ.

ಕಟಕ
ಹೊಟ್ಟೆ ಕೆಡುವ ಸಾಧ್ಯತೆ. ಆಹಾರದಲ್ಲಿ ಎಚ್ಚರ ವಹಿಸಿ. ಸಂಗಾತಿ ಜತೆ ಭಿನ್ನಾಭಿಪ್ರಾಯ. ದೇಹಾಭ್ಯಾಸ ಅತಿಯಾಗಿ ಮಾಡಬೇಡಿ.

ಸಿಂಹ
ಲಾಭವೂ ಇಲ್ಲದ ನಷ್ಟವೂ ಇಲ್ಲದ ದಿನ. ಹಣಗಳಿಕೆಯ ಸುಲಭ ದಾರಿಗೆ ಹೋಗದಿರಿ. ಆಪ್ತರೊಬ್ಬರು ಮನಸ್ಸಿಗೆ ನೆಮ್ಮದಿ, ಸಂತೋಷ ತರುವರು.

ಕನ್ಯಾ
ಮನೆಯವರ ಜತೆ ಅನುನಯದಿಂದ ವರ್ತಿಸಿ. ಕೋಪತಾಪ ಬೇಡ. ಮಕ್ಕಳು ಹಠಮಾರಿ ಧೋರಣೆ ತೋರುವರು. ಸಂಯಮವಿರಲಿ.

ತುಲಾ
ಆರ್ಥಿಕ ಸ್ಥಿರತೆ, ವ್ಯವಹಾರ ಹಿಗ್ಗಿಸಲು ಅವಕಾಶ. ಕೌಟುಂಬಿಕ ವಿಚಾರದಲ್ಲಿ ತುಸು ಚಿಂತೆ. ಆರೋಗ್ಯದ ಬಗ್ಗೆ ಹೆಚ್ಚಿನ ಗಮನ ಅಗತ್ಯ.

ವೃಶ್ಚಿಕ
ಸ್ವಂತ ವ್ಯವಹಾರ ಆರಂಭಿಸಲು ಕಾಲ ಸೂಕ್ತವಾಗಿದೆ. ವಿದ್ಯಾರ್ಥಿಗಳು ಜಡತ್ವ ಬಿಟ್ಟು ಉತ್ಸಾಹಿಗಳಾಗಬೇಕು. ಆರ್ಥಿಕ ಒತ್ತಡ ಅಂತ್ಯ.

ಧನು
ಇತರರ ಜತೆ ಮಾತನಾಡುವಾಗ ತಾಳ್ಮೆ ವಹಿಸಿ. ಸಣ್ಣ ವಿಷಯಕ್ಕೆ ರೇಗದಿರಿ. ಬಂಧುಗಳ ಜತೆ ಪ್ರವಾಸ ಹೋಗುವ ಅವಕಾಶ ಸಿಗಲಿದೆ.

ಮಕರ
ಮನಸ್ಥಿತಿ ಏರುಪೇರು ಮಾಡುವ ಬೆಳವಣಿಗೆ ಉಂಟಾದೀತು. ಎಲ್ಲವನ್ನು ಸರಿತೂಗಿಸಿಕೊಂಡು ಹೋಗಿ. ಅನ್ಯರ ತಿರಸ್ಕಾರಕ್ಕೆ ಬೆಲೆ ಕೊಡಬೇಡಿ.

ಕುಂಭ
ವೃತ್ತಿಯಲ್ಲಿ ಹೊಸ ಸವಾಲು. ಧೃತಿಗೆಡಬೇಡಿ. ಆರ್ಥಿಕ ನಷ್ಟ. ಖರ್ಚು ಕಡಿಮೆ ಮಾಡಲು ಗಮನ ಕೊಡಿ. ಬಂಧು ಜತೆ ವಿರಸವಾದೀತು.

ಮೀನ
ಸಂಗಾತಿ ಜತೆ ಪ್ರಾಮಾಣಿಕತೆಯಿಂದ ವರ್ತಿಸಿ. ಮುಚ್ಚುಮರೆ ಬೇಡ. ವೃತ್ತಿಯಲ್ಲಿ ತೊಡಕು. ಗಮನವಿಟ್ಟು ಕಾರ್ಯ ನಿರ್ವಹಿಸಿ.

ರಾಹುಕಾಲ: 3.00- 4.30
ಗುಳಿಕಕಾಲ: 12.00-1.30

ಅದೃಷ್ಟ ಸಂಖ್ಯೆ: 4,7,3,1

ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಕಿವಿಮಾತು

ಯೋಜನೆ ಜನರಿಗೆ ತಲುಪಲಿ

ಬಾಗಲಕೋಟೆ: ಬೂತ್ ಮಟ್ಟದಲ್ಲಿ ನಾವು ಜನರ ಕಣ್ಣೀರನ್ನು ಒರೆಸುವ ಕೆಲಸ ಮಾಡಬೇಕು. ಹಿಂದಿನ ಬಿಜೆಪಿ ಸರ್ಕಾರ ಹಾಗೂ ಕೇಂದ್ರ ಸರ್ಕಾರದ ಯೋಜನೆಗಳನ್ನು ಜನರಿಗೆ ತಲುಪಿಸಬೇಕು ಎಂದು ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಹೇಳಿದರು.

ನವನಗರದ ಬಿಜೆಪಿ ಜಿಲ್ಲಾ ಕಾರ್ಯಾಲಯದಲ್ಲಿ ಏರ್ಪಡಿಸಿದ ಬಿಜೆಪಿ ಸಂಸ್ಥಾಪನಾ ದಿನದ ಕಾರ್ಯಕ್ರಮದಲ್ಲಿ ಮಾತನಾಡಿ, ಹಿರಿಯರ ಅನುಭವದ ಜೊತೆ ಯುವಕರ ಉತ್ಸಾಹ ಸೇರಿದರೆ ಸಂಘಟನೆ ಬಲಿಷ್ಠವಾಗಲು ಸಾಧ್ಯ. ನಮ್ಮದು ವಿಶ್ವದ ಅತಿ ದೊಡ್ಡ ರಾಜಕೀಯ ಪಕ್ಷ ಎಂದರು.

ಪಕ್ಷದ ಬೆಳವಣಿಗೆಗೆ ಶ್ರಮಿಸಿದ ಎಲ್ಲ ಮಹನೀಯರನ್ನು ನೆನಪಿಸಿಕೊಂಡರು. 1980ರಲ್ಲಿ ಆರಂಭವಾದ ನಮ್ಮ ಪಕ್ಷದ ಪ್ರಯಾಣ ಜನರ ಆಶೀರ್ವಾದ ಮತ್ತು ನಿಮ್ಮ ಬೆಂಬಲದಿಂದ ಇವತ್ತು ಬಲಿಷ್ಠ ಮತ್ತು ಇಷ್ಟು ಎತ್ತರಕ್ಕೆ ಬೆಳೆದಿದೆ ಎಂದು ಅವರು ತಿಳಿಸಿದರು. ಜನರೇ ನಮ್ಮ ದೇವರು, ಜನಸೇವೆಯೇ ನಮ್ಮ ಕಾಯಕ. ಅವರ ಮುಂದೆ ನಾವು ನಮ್ರವಾಗಿ ಇರಬೇಕು ಎಂದು ಸೂಚಿಸಿದರು.

ಅಟಲ್ ಬಿಹಾರಿ ವಾಜಪೇಯಿ ಅವರ ಶ್ರಮ, ಆಡ್ವಾಣಿಯವರ ಸಂಘಟನಾ ಶಕ್ತಿ ಪ್ರತಿಯೊಬ್ಬ ಕಾರ್ಯಕರ್ತನ ಹೃದಯದಲ್ಲಿದೆ. ಪಕ್ಷದ ಬೆಳವಣಿಗೆಗೆ ಅನೇಕ ಮಹನೀಯರು ಶ್ರಮಿಸಿದ್ದಾರೆ ಎಂದು ವಿವರಿಸಿದರು. ಮಾಜಿ ಸಿಎಂ ಬಸವರಾಜ ಎಸ್.ಬೊಮ್ಮಾಯಿ ಮಾಜಿ ಸಚಿವರಾದ ಸಿ.ಸಿ.ಪಾಟೀಲ್, ಬಸವರಾಜ ಮತ್ತಿಮೂಡ, ಸಿದ್ದು ಸವದಿ, ಸಿ.ಕೆ.ರಾಮಮೂರ್ತಿ, ರಾಜ್ಯ ಕಾರ್ಯದರ್ಶಿ ಶರಣು ತಳ್ಳಿಕೇರಿ ಇದ್ದರು.



ಸಿದ್ದರಾಮಯ್ಯ ಜಾತಿವಾದಿ: ಬಿ.ಎಸ್.ಯಡಿಯೂರಪ್ಪ

ಸಿದ್ದರಾಮಯ್ಯ ಜಾತಿವಾದಿಯಾಗಿದ್ದು, ಕೆಲವೇ ಜನಾಂಗವನ್ನು ಎತ್ತಿ ಹಿಡಿದು ಅಧಿಕಾರ ನಡೆಸುತ್ತಿದ್ದಾರೆ. ಬಿಜೆಪಿ ಅಧಿಕಾರದಲ್ಲಿದ್ದಾಗ ಎಲ್ಲ ಜನಾಂಗಕ್ಕೂ ಪ್ರಾಶಸ್ತ್ಯ ನೀಡಿದೆ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹೇಳಿದರು. ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಾಗಲಕೋಟೆ, ದಾವಣಗೆರೆಯಲ್ಲಿ ಬಿಜೆಪಿ ಅಭ್ಯರ್ಥಿಗಳು ಗೆಲ್ಲುವುದು ನಿಶ್ಚಿತ. ಬಾಗಲಕೋಟೆಯಲ್ಲಿ ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ 10 ಸಾವಿರ ಮತಗಳ ಅಂತರದಿಂದ ಗೆಲುವು ಸಾಧಿಸಲಿದ್ದಾರೆ. ಮತದಾರರು ಕಾಂಗ್ರೆಸ್ ಪಕ್ಷಕ್ಕೆ ಈ ಚುನಾವಣೆಯಲ್ಲಿ ತಕ್ಕ ಪಾಠ ಕಲಿಸಲಿದ್ದಾರೆ ಎಂದು ಹೇಳಿದರು. ಬಾಗಲಕೋಟೆ ಮತ್ತು ದಾವಣಗೆರೆಯ ಉಪಚುನಾವಣೆಯಲ್ಲಿ ಬಿಜೆಪಿ ಪರವಾಗಿ ಜನ ಒಲವು ತೋರಿಸುತ್ತಿದ್ದಾರೆ. ಕಳೆದ ಮೂರು ವರ್ಷದಲ್ಲಿ ಕಾಂಗ್ರೆಸ್ ಸರ್ಕಾರದ ಸಾಧನೆ ಶೂನ್ಯವಾಗಿದೆ. ಅಭಿವೃದ್ಧಿ ಕಾರ್ಯ ಯಾವುದೂ ನಡೆದಿಲ್ಲ. ಮುಖ್ಯಮಂತ್ರಿ ಕುರ್ಚಿಗಾಗಿ ಕಾದಾಡುತ್ತಿದ್ದಾರೆ ಟೀಕಿಸಿದರು.

ಶೃಂಗೇರಿ ವಿಧಾನಸಭಾ ಕ್ಷೇತ್ರ: ಅಂಚೆ ಮತ ಮರು ಎಣಿಕೆಗೆ ಹೈಕೋರ್ಟ್ ಆದೇಶ

ಪುಟ ೧➔ ತಿರಸ್ಕೃತಗೊಂಡಿರುವ 279 ಅಂಚೆ ಮತಗಳನ್ನು ಚುನಾವಣಾಧಿಕಾರಿ ಪರಿಶೀಲಿಸಬೇಕು. ಮರು ಪರಿಶೀಲಿಸುವಾಗ ಚುನಾವಣಾ ಅಧಿಕಾರಿಗಳ ಕೈಪಿಡಿ 2023ರ ಮಾರ್ಗಸೂಚಿ 15.14.7ನ್ನು ಅನೂಚಾನವಾಗಿ ಪಾಲಿಸಬೇಕು, ಅಂಚೆ ಮತಗಳು ಸಮಸ್ಯಾತ್ಮಕವಾಗಿದೆಯೇ ಎಂಬುದನ್ನು ಪತ್ತೆ ಮಾಡಬೇಕು. ಅಂಚೆ ಮತಗಳನ್ನು ಪರಿಶೀಲಿಸಿದ ಬಳಿಕ ಎಲ್ಲಾ ಅಂಚೆ ಮತಗಳನ್ನು ಮರು ಎಣಿಕೆ ಮಾಡಿ ಅರ್ಜಿದಾರರು ಅಥವಾ ಪ್ರತಿವಾದಿಗಳು ಪಡೆದಿರುವ ಮತಗಳ ಫಲಿತಾಂಶ ಪ್ರಕಟಿಸಬೇಕು.

ಇದನ್ನು ಎರಡು ವಾರಗಳಲ್ಲಿ ಮಾಡಬೇಕು ಎಂದು ನ್ಯಾಯಾಲಯ ನಿರ್ದೇಶಿಸಿದೆ. ಆದೇಶದ ಪ್ರತಿಯನ್ನು ಭಾರತೀಯ ಚುನಾವಣಾ ಆಯೋಗ, ಜಿಲ್ಲಾ ಚುನಾವಣಾಧಿಕಾರಿ, ಶೃಂಗೇರಿಯ ಚುನಾವಣಾಧಿಕಾರಿಗೆ ರಿಜಿಸ್ಟ್ರಿ ಸ್ಪೀಡ್ ಪೋಸ್ಟ್ ಅಥವಾ ಇ-ಮೇಲ್ ಮೂಲಕ ಕಳುಹಿಸಿಕೊಡಬೇಕು ಎಂದು ನ್ಯಾಯಾಲಯ ಆದೇಶಿಸಿತು. ರಾಜೇಗೌಡ ಪರ ಹಿರಿಯ ವಕೀಲ ಕೆ.ಎನ್. ಫಣೀಂದ್ರ ಅವರು ಆದೇಶಕ್ಕೆ ಎರಡು-ಮೂರು ವಾರಗಳ ತಡೆ ನೀಡಬೇಕು. ಇದನ್ನು ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಲಾಗುವುದು ಎಂದರು. ಇದಕ್ಕೆ ಒಪ್ಪಿದ ನ್ಯಾಯಾಲಯವು ಆದೇಶಕ್ಕೆ ಎರಡು ವಾರಗಳಿಗೆ ತಡೆ ನೀಡಿತು.

ಆದೇಶಕ್ಕೆ ತಡೆ ನೀಡುವುದಕ್ಕೆ ಜೀವರಾಜ್ ಪರ ವಕೀಲೆ ಪಿ.ಎಲ್. ವಂದನಾ ಅವರು ವಿರೋಧಿಸಿದರು. 2023ರ ವಿಧಾನಸಭಾ ಚುನಾವಣೆಯಲ್ಲಿ ಶೃಂಗೇರಿ ಕ್ಷೇತ್ರದಲ್ಲಿ 1,811 ಅಂಚೆ ಮತಗಳು ಚಲಾವಣೆಯಾಗಿದ್ದು, ಕಾಂಗ್ರೆಸ್‌ನ ರಾಜೇಗೌಡ ಅವರು 201 ಮತಗಳಿಂದ ವಿಜೇತರಾಗಿದ್ದರು.

ಬದಲಿ ನಿವೇಶನ: ಹೈಗೆ ಇಡಿ ಅರ್ಜಿ

ಬೆಂಗಳೂರು: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದಿಂದ ಅಕ್ರಮವಾಗಿ ಬದಲಿ ನಿವೇಶನ ಪಡೆದ ಆರೋಪಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸಿದ್ದ ಲೋಕಾಯುಕ್ತ ಪೊಲೀಸರು ಸಲ್ಲಿಸಿದ್ದ ಬಿ ರಿಪೋರ್ಟ್ ಅಂಗೀಕರಿಸಿದ್ದ ಜನ ಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ಆದೇಶ ಪ್ರಶ್ನಿಸಿ, ಜಾರಿ ನಿರ್ದೇಶನಾಲ(ಇಡಿ)ಯ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದೆ. ವಿಶೇಷ ನ್ಯಾಯಾಲಯದ ಆದೇಶವನ್ನು ಪ್ರಶ್ನಿಸಿ ಇ.ಡಿ. ಸೋಮವಾರವಷ್ಟೇ ಅರ್ಜಿ ಸಲ್ಲಿಸಿದ್ದು, ಇನ್ನಷ್ಟೇ ವಿಚಾರಣೆಗೆ ನಿಗದಿಯಾಗಬೇಕಾಗಿದೆ. ಇದೇ ಆರೋಪಕ್ಕೆ ಸಂಬಂಧಿಸಿದಂತೆ ಪ್ರಕರಣದ ದೂರುದಾರ ಸ್ನೇಹಮಯಿ ಕೃಷ್ಣ ಈಗಾಗಲೇ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ. ಅರ್ಜಿಯ ವಿಚಾರಣೆ ನಡೆಸಿರುವ ನ್ಯಾ. ಸುನೀಲ್ ದತ್ತ ಯಾದವ್ ಅವರಿದ್ದ ಪೀಠ, ಲೋಕಾಯುಕ್ತ ಪೊಲೀಸರು, ಜಾರಿ ನಿರ್ದೇಶನಾಲಯ (ಇ.ಡಿ), ಮುಡಾದ ಮಾಜಿ ಆಯುಕ್ತ ಜಿ.ಟಿ. ದಿನೇಶ್ ಕುಮಾರ್, ಜಮೀನಿನ ಮೂಲ ಮಾಲೀಕ ದೇವರಾಜು ಸೇರಿದಂತೆ ಪ್ರತಿವಾದಿಗಳಿಗೆ ನೋಟಿಸ್ ಜಾರಿ ಮಾಡಿದೆ.

ಬಿಎಸ್‌ವೈ ಪ್ರಚಾರ ಯಾರ ಪರ?: ಸಿಎಂ

ಪುಟ ೧➔ ಯಡಿಯೂರಪ್ಪ ಮಾಡಿದ ನಂಬಿಕೆ ದ್ರೋಹಿ ಎಂಬ ಆರೋಪಕ್ಕೂ ಸಿಎಂ ಕಿಡಿಕಾರಿದರು. ನಾನು ಯಾರಿಗೆ ದ್ರೋಹ ಮಾಡಿದ್ದೇನೆ ಎಂಬುದನ್ನು ಸ್ಪಷ್ಟವಾಗಿ ಹೇಳಬೇಕು. ಸುಮ್ಮನೆ ಆರೋಪ ಮಾಡಿದರೆ ಅದು ಸತ್ಯವಾಗುವುದಿಲ್ಲ ಎಂದು ತಿರುಗೇಟು ನೀಡಿದರು.

ಎನ್‌ಎಸ್‌ಯುಐ ಕರಪತ್ರ ಹಂಚಿಕೆ ವಿಚಾರಕ್ಕೂ ಪ್ರತಿಕ್ರಿಯಿಸಿದ ಅವರು, ಬಿಜೆಪಿಯವರೇ ಇದರಲ್ಲಿ ಭಾಗಿಯಾಗಿರಬಹುದು. ಆದರೆ, ತಪ್ಪು ಯಾರಿಂದಾದರೂ ನಡೆದಿದ್ದರೆ ಅವರ ವಿರುದ್ಧ ಕ್ರಮವಾಗಬೇಕು ಎಂದು ಹೇಳಿದರು.

ಬಿಜೆಪಿಗೆ ಬೆಂಬಲ: ಜೋಶಿ ವಿಶ್ವಾಸ

ಪುಟ ೧➔ ತಾಯಿ ಸಂಸದರು. ಇದರ ಜತೆಗೆ ಮಗನೂ ಶಾಸಕನಾಗಬೇಕು ಎಂದು ಟಿಕೆಟ್ ನೀಡಿದ್ದಾರೆ. ಒಂದೇ ಕುಟುಂಬಕ್ಕೆ ಮಣೆ ಹಾಕುವ ಮೂಲಕ ದಾವಣಗೆರೆಯನ್ನು ಕಬ್ಜಾ ಮಾಡಲು ಮುಂದಾಗಿದ್ದಾರೆ. ಕಾಂಗ್ರೆಸ್ ಈ ಬಾರಿಯೂ ಗೆದ್ದರೆ ಮುಂದಿನ 40 ವರ್ಷ ಕಾಂಗ್ರೆಸ್ ಪಕ್ಷದಿಂದ ಬೇರೆ ಯಾರಿಗೂ ಟಿಕೆಟ್ ಸಿಗುವುದಿಲ್ಲ ಎಂದು ಎಚ್ಚರಿಸಿದರು. ದಾವಣಗೆರೆಯಲ್ಲಿ ಬೇರೆ ಯಾರೂ ಸಮರ್ಥರೇ ಇಲ್ಲ ಎಂಬಂತೆ ಶಾಮನೂರು ಕುಟುಂಬಕ್ಕೆ ಟಿಕೆಟ್ ನೀಡಿದ್ದಾರೆ. ಸೋನಿಯಾ ಗಾಂಧಿ ಕುಟುಂಬದಂತೆ ಶಾಮನೂರು ಕುಟುಂಬವೂ ಅಧಿಕಾರದಲ್ಲಿ ಇರಬೇಕು ಎಂದು ಬಯಸಿದ್ದಾರೆ. ಈ ಕುಟುಂಬದಲ್ಲಿ ಭ್ರಷ್ಟಾಚಾರದಿಂದ ಮಾಡಿದ ಹಣವಿದೆ. ದುಡ್ಡಿನ ಬಲದಿಂದ ಪ್ರಜಾಪ್ರಭುತ್ವವನ್ನು ನಿರ್ನಾಮ ಮಾಡಲು ಹೊರಟಿದ್ದಾರೆ. ಇದನ್ನು ಜನ ಗಂಭೀರವಾಗಿ ಪರಿಗಣಿಸಬೇಕು. ಕಾಂಗ್ರೆಸ್ ಪಕ್ಷಕ್ಕೆ ಮತದಾರ ಈ ಬಾರಿ ತಕ್ಕ ಬುದ್ಧಿ ಕಲಿಸಬೇಕು ಎಂದು ಅವರು ಸಲಹೆ ನೀಡಿದರು.

ಉಪಚುನಾವಣೆ ಬಹಿರಂಗ ಪ್ರಚಾರಕ್ಕೆ ಇಂದು ತೆರೆ

ಪುಟ ೧➔ ಆಡಳಿತಾರೂಢ ಕಾಂಗ್ರೆಸ್ ಪಕ್ಷ ಚುನಾವಣೆಯನ್ನು ಗಂಭೀರವಾಗಿ ಪರಿಗಣಿಸಿದ್ದು, ಕಳೆದ ಬಾರಿಯ ಉಪ ಚುನಾವಣೆಯ ರೀತಿಯಲ್ಲೇ ತಂತ್ರ ರೂಪಿಸಿ ಗೆಲ್ಲುವ ಲೆಕ್ಕಾಚಾರ ಹಾಕಿದ್ದು, ಸಂಪುಟದ ಪ್ರಭಾವಿ ಸಚಿವರಿಗೆ ಉಸ್ತುವಾರಿ ನೀಡಲಾಗಿದೆ. ಮುನಿಸಿಕೊಂಡಿದ್ದ ಸಚಿವ ಜಮೀರ್ ಅಹ್ಮದ್ ಕೂಡ ದಾವಣಗೆರೆಯಲ್ಲಿ ಪ್ರಚಾರ ಕೈಗೊಂಡಿದ್ದಾರೆ. ಬಿಜೆಪಿಯಿಂದಲೂ ಜೋರು ಪ್ರಚಾರ ನಡೆದಿದ್ದು, ಮಾಜಿ ಸಿಎಂ ಬಿ.ಎಸ್. ಯಡಿಯೂರಪ್ಪ, ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಪ್ರತಿಪಕ್ಷ ನಾಯಕ ಆರ್. ಅಶೋಕ ಪ್ರಚಾರ ನಡೆಸಿದ್ದಾರೆ. ಉಚ್ಚಾಟಿತ ನಾಯಕ ಯತ್ನಾಳ ಕೂಡ ಬಾಗಲಕೋಟೆ ಪ್ರಚಾರದಲ್ಲಿ ಭಾಗಿಯಾಗಿದ್ದು, ಚುನಾವಣಾ ಕಣ ರಂಗೇರಿದೆ. ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಬಿಜೆಪಿ ಅಭ್ಯರ್ಥಿಗಳ ಪ್ರಚಾರ ನಡೆಸಿದ್ದಾರೆ.

ಮನೆ ಮನೆ ಪ್ರಚಾರ: ಉಪಚುನಾವಣೆಯ 2ಕ್ಷೇತ್ರಗಳ ಬಹಿರಂಗ ಪ್ರಚಾರಕ್ಕೆ ಸಂಜೆ ತೆರೆ ಬೀಳಲಿದ್ದು, ನಂತರ ಮನೆ ಮನೆ ಪ್ರಚಾರಕ್ಕೆ ಮಾತ್ರ ಅವಕಾಶ ಇರಲಿದೆ. ಮತದಾರರನ್ನು ಓಲೈಸಲು ವಿವಿಧ ಪ್ರಕಾರದ ಲೆಕ್ಕಾಚಾರಗಳನ್ನು ಉಭಯ ಪಕ್ಷಗಳು ರೂಪಿಸಿವೆ.

ಎನ್‌ಐಎಗೆ ಮಾಲ್ಡಾ ಘಟನೆ

ಪುಟ ೧➔ ಘಟನೆ ದಿನವಾದ ಏ.1ರಂದು ನ್ಯಾಯಾಧಿಕಾರಿಗಳನ್ನು ಘೇರಾವ್ ಮಾಡಲಾಗಿದ್ದಾಗ, ಕೋಲ್ಕತ್ತಾ ಹೈ ಮುಖ್ಯ ನ್ಯಾಯಮೂರ್ತಿಗಳ ಕರೆ ಸ್ವೀಕರಿಸದಿರುವುದು ಗಂಭೀರ ನಿರ್ಲಕ್ಷ್ಯ ಎಂದು ಹೇಳಿದ ನ್ಯಾಯಾಲಯ, ಮುಖ್ಯ ಕಾರ್ಯದರ್ಶಿ ದುಷ್ಯಂತ್ ನಾರಿಯಾಲಾ ಅವರು ಕ್ಷಮೆ ಕೇಳಬೇಕು ಎಂದು ಸೂಚಿಸಿದೆ. ಇದು ಜಿಲ್ಲಾ ಆಡಳಿತದ ವೈಫಲ್ಯ ತೋರಿಸುತ್ತದೆ ಎಂದು ಪೀಠ ಸ್ಪಷ್ಟಪಡಿಸಿದೆ. ಅಲ್ಲದೆ, ಎಸ್‌ಐಆರ್ ಕಾರ್ಯದಲ್ಲಿ ತೊಡಗಿದ್ದ ನ್ಯಾಯಾಧಿಕಾರಿಗಳನ್ನು ಗಂಟೆಗಳ ಕಾಲ ಘೇರಾವ್ ಮಾಡಿರುವ ಘಟನೆ ಪೂರ್ವನಿಯೋಜಿತ ಎಂದು ಸುಪ್ರೀಂ ಕೋರ್ಟ್ ಅಭಿಪ್ರಾಯಪಟ್ಟಿದೆ. ಪ್ರಸ್ತುತ ನಡೆಯುತ್ತಿರುವ ಎಸ್‌ಐಆರ್ ಪ್ರಕ್ರಿಯೆಯಲ್ಲಿ ಮತದಾರರ ಪಟ್ಟಿಯಿಂದ ಹೊರಗೊಳ್ಳಲಾದ 60 ಲಕ್ಷಕ್ಕೂ ಹೆಚ್ಚು ಆಕ್ಷೇಪಣೆಗಳನ್ನು ಪರಿಶೀಲಿಸಲು ಪಶ್ಚಿಮ ಬಂಗಾಳ, ಒಡಿಶಾ ಮತ್ತು ಜಾರ್ಖಂಡ್ ರಾಜ್ಯಗಳಿಂದ ಸುಮಾರು 700 ನ್ಯಾಯಾಧಿಕಾರಿಗಳನ್ನು ನಿಯೋಜಿಸಲಾಗಿದೆ.

ಏನಾಸಂ ಸಾಕಾರಕ್ಕೆ ಬದ್ಧ

ಪುಟ ೧➔ **ಸವಾಲು ನಿಭಾಯಿಸಲು ಶ್ರಮ:** ನಮ್ಮ ಧ್ಯೇಯಗಳ ಸಾಕಾರ ನಿಟ್ಟಿನಲ್ಲಿ ಪ್ರಯತ್ನಗಳು ಸಾಗಿವೆ. ದೇಶವನ್ನು ಸಂಪನ್ನ ಮತ್ತು ಸ್ವಾವಲಂಬಿಯಾಗಿಸುವುದು ಬಿಜೆಪಿ ಗುರಿ ಮತ್ತು ಈ ಗುರಿಯ ಸಾಕಾರ ನಿಟ್ಟಿನಲ್ಲಿ ನಿರಂತರ ಪ್ರಯತ್ನಗಳನ್ನು ಮುಂದುವರೆಸಲಿದೆ. ಎದುರಾಗುವ ಪ್ರತಿಯೊಂದು ಸವಾಲುಗಳನ್ನು ನಿಭಾಯಿಸಲು ಬಿಜೆಪಿ ಪ್ರಾಮಾಣಿಕವಾಗಿ ಶ್ರಮಿಸುತ್ತಿದೆ ಎಂದು ಪ್ರಧಾನಿ ಹೇಳಿದರು. ಒಂದು ರಾಷ್ಟ್ರ ಒಂದು ಚುನಾವಣೆ ವ್ಯವಸ್ಥೆಯಲ್ಲಿ ಏಕಕಾಲಕ್ಕೆ ಲೋಕಸಭೆ ಮತ್ತು ವಿಧಾನಸಭೆಗಳಿಗೆ ಚುನಾವಣೆ ನಡೆಸುವುದು ಮೋದಿ ಸರಕಾರದ ಆಶಯ. ಜಾತಿ ಮತ ಭೇದರಹಿತವಾಗಿ ದೇಶದ ಪ್ರತಿ ಪ್ರಜೆಗೂ ಮುಖ್ಯವಾಗಿ ವಿವಾಹ, ದತ್ತು ಸ್ವೀಕಾರ ಮತ್ತಿತರ ವಿಚಾರಗಳಲ್ಲಿ ಸಮಾನ ಕಾನೂನನ್ನು ಅನ್ವಯಿಸುವುದು ಏನಾಸಂ ಸಂಹಿತೆಯ ಧ್ಯೇಯವಾಗಿದೆ.

ನೂರಾರು ಸತ್ಕಾರ್ಯ ಸಾಕಾರ: ಬ್ರಿಟಿಷರ ಕಾಲದಿಂದಲೇ ಊರ್ಜಿತದಲ್ಲಿದ್ದ ನೂರಾರು ದೋಷಪೂರ್ಣ ಕಾಯಿದೆಗಳನ್ನು ರದ್ದುಪಡಿಸಲಾಗಿದೆ. ಹೊಸ ಸಂಸತ್ ಭವನ ನಿರ್ಮಾಣ, ಜನರಲ್ ಕೆಟಗರಿಯಲ್ಲಿ ಬಡವರಿಗೆ ಶೇ.10 ಮೀಸಲಾತಿ, ತ್ರಿವಳಿ ತಲಾಖ್ ರದ್ದತಿ, ಪೌರತ್ವ ತಿದ್ದುಪಡಿ ಕಾಯಿದೆ, ಆಯೋಧ್ಯೆಯಲ್ಲಿ ಶ್ರೀರಾಮ ಮಂದಿರ ನಿರ್ಮಾಣ ಹೀಗೆ ಸಾಕಾರಗೊಂಡಿರುವ ಅದೆಷ್ಟೋ ನೂರಾರು ಸತ್ಕಾರ್ಯಗಳು ಬಿಜೆಪಿಯ ಪ್ರಾಮಾಣಿಕ ಪ್ರಯತ್ನಗಳ ಫಲವಾಗಿದೆ. 1994ರಲ್ಲಿ ಪ್ರಥಮವಾಗಿ ವಡೋದರಲ್ಲಿ ಮಹಿಳಾ ಮೀಸಲಾತಿಯ ಪ್ರಸ್ತಾವ ಮುಂದಿಟ್ಟದ್ದು ಕೂಡ ಬಿಜೆಪಿ ಎಂದು ಪ್ರಧಾನಿ ಮೋದಿ ಗಮನ ಸೆಳೆದರು.

ವಸುಧೈವ ಕುಟುಂಬಕಮ್: ನಮ್ಮ ಪಕ್ಷ ಸಂಘಟನೆಯಲ್ಲಿ ಮಹಿಳೆಯರಿಗೆ ಉತ್ತೇಜನವೀಯಲು ನಾವು ನಿರ್ಧರಿಸಿದ್ದೆವು ಮತ್ತು ಅಧಿಕಾರಕ್ಕೆ ಬಂದಾಕ್ಷಣ ಈ ಭರವಸೆ ಸಾಕಾರಗೊಳಿಸಿದ್ದೇವೆ. ಇನ್ನೀಗ 2029ರ ಮಹಾ ಚುನಾವಣೆಗಳ ಸಂದರ್ಭ ನಾರಿ ವಂದನ್ ಅಧಿನಿಯಮ್ (ಮಹಿಳಾ ಮೀಸಲಾತಿ ಕಾಯಿದೆ)ನ್ನು ಅನುಷ್ಠಾನಿಸಲು ನಾವು ಸಂಪೂರ್ಣ ಬದ್ಧರಿದ್ದೇವೆ. ಯುದ್ಧದ ಸಂದರ್ಭವೂ ವಸುಧೈವ ಕುಟುಂಬಕಮ್ ಸಿದ್ಧಾಂತಕ್ಕೆ ಬದ್ಧರಿರುವವರು ನಾವು ಎಂದು ಪ.ಏಷ್ಯಾ ಸಂಘರ್ಷವನ್ನು ಉಲ್ಲೇಖಿಸಿ ನುಡಿದರು.

ಬಿಜೆಪಿ ಆಡಳಿತ ಶೈಲಿ ವಿಶಿಷ್ಟ

ಪುಟ ೧➔ ಜನಸಂಖ್ಯಾ ಸ್ವರೂಪ ಬದಲಾವಣೆ, ಅಕ್ರಮ ನುಸುಳುವಿಕೆ, ಭ್ರಷ್ಟಾಚಾರ, ಪರಿವಾರ ರಾಜಕಾರಣ, ಜನರನ್ನು ಗುಲಾಮಗಿರಿ ಮನೋಸ್ಥಿತಿಯಿಂದ ಮುಕ್ತಗೊಳಿಸುವುದೇ ಇತ್ಯಾದಿ ಸವಾಲುಗಳನ್ನು ಎದುರಿಸುವ ನಿಟ್ಟಿನಲ್ಲಿ ಸರಕಾರ ಶ್ರಮ ನಿರತವಾಗಿದೆ. ದೇಶವನ್ನು ಇವೆಲ್ಲಾ ಸವಾಲುಗಳಿಂದ ಮುಕ್ತಗೊಳಿಸುವ ಹೊಣೆಗಾರಿಕೆ ಬಿಜೆಪಿಗಿದೆ ಮತ್ತು ಈ ಹೊಣೆಗಳನ್ನು ನಿಭಾಯಿಸುವ ಸಾಮರ್ಥ್ಯವಿರುವುದು ಕೂಡ ಬಿಜೆಪಿಗೆ ಮಾತ್ರ ಎಂದು ಪ್ರಧಾನಿ ಗಮನ ಸೆಳೆದರು. ಜಮ್ಮು ಕಾಶ್ಮೀರವನ್ನು ಸಂಪೂರ್ಣವಾಗಿ ದೇಶದ ಇತರ ಭಾಗಗಳೊಂದಿಗೆ ಜೋಡಿಸುವ ಪ್ರಯತ್ನಗಳಿಗೆ ತಡೆಯಾಗಿದ್ದ ಸಂವಿಧಾನದ 370ನೇ ವಿಧಿ ರದ್ದತಿ ಅಸಂಭವ ಎಂದು ಜನರು ಭಾವಿಸಿದ್ದರು. ಈ ವಿಧಿಯನ್ನು ರದ್ದುಪಡಿಸಿಯೇ ಸಿದ್ಧ ಎಂದು ನಾವು ಭರವಸೆ ನೀಡಿದ್ದೆವು ಮತ್ತು 2019ರಲ್ಲಿ ಭರವಸೆಯನ್ನು ಸಾಕಾರಗೊಳಿಸಿಬಿಟ್ಟೆವು ಎಂದು ಪ್ರಧಾನಿ ಮೋದಿ ಹೆಮ್ಮೆ ವ್ಯಕ್ತಪಡಿಸಿದರು.

ಮಿತ್ರಕೂಟ ರಾಜನೀತಿಗೆ ಎನ್‌ಡಿಎ ಮಾದರಿ

ಪುಟ ೧➔ ಎನ್‌ಡಿಎಯು ಎಲ್ಲರ ಒಳಗೊಳ್ಳುವಿಕೆಗೆ ಅವಕಾಶವಿರುವ ಮಿತ್ರಕೂಟವಾಗಿದೆ ಮತ್ತು ಎನ್‌ಡಿಎಯ ನಿರಂತರ ವಿಸ್ತರಣೆ ಇದಕ್ಕೆ ಸಾಕ್ಷಿ. ವಲಯವಾರು ಆಶೋತ್ತರಗಳಿಗೆ ಪ್ರಾಧಾನ್ಯತೆ ನೀಡುವ ಮುಖೇನ ಎನ್‌ಡಿಎ ಕಾರ್ಯ ನಿರ್ವಹಿಸುತ್ತಿದೆ ಎಂದು ಪ್ರಧಾನಿ ಮೋದಿ ಮೆಚ್ಚುಗೆ ವ್ಯಕ್ತಪಡಿಸಿದರು.

ಪಾಕ್ ತಾಳಕ್ಕೆ ಕುಣಿಯುವ ಕಾಂಗ್ರೆಸ್: ಮೋದಿ

ಪುಟ ೧➔ 2016ರ ಸರ್ಜಿಕಲ್ ಸ್ಟ್ರೈಕ್ ಮತ್ತು 2025ರ ಆಪರೇಷನ್ ಸಿಂದೂರ್ ಸಂದರ್ಭದಲ್ಲೂ ಕಾಂಗ್ರೆಸ್ ಪಾಕಿಸ್ತಾನದ ಗುಣಗಾನದಲ್ಲೇ ನಿರತವಾಗಿತ್ತು ಮತ್ತು ನೆರೆ ರಾಷ್ಟ್ರದ ಅಜೆಂಡಾಗೆ ಮಹತ್ವ ನೀಡಿತ್ತು. ಪಾಕ್ ಜತೆಗಿನ ಈ ಸಖ್ಯ ದೇಶಕ್ಕೆ ಘನ ಹೊರೆಯಾಗಿದೆ ಮತ್ತು ನಾವು ಇದಕ್ಕೆ ಎಂದಿಗೂ ಅವಕಾಶ ಕೊಡಕೂಡದು ಎಂದು ಪ್ರಧಾನಿ ಮೋದಿ ಎಚ್ಚರಿಸಿದರು. ಸರಕಾರ ಮಾಜಿ ಯೋಧರಿಗೆ ಪ್ರಸ್ತುತ ಯೋಜನೆ ಜಾರಿಗೊಳಿಸುವ ಮುಖೇನ ನ್ಯಾಯ ನೀಡಿದೆ. ಇದುವರೆಗೆ 1.24ಲಕ್ಷ ಕೋಟಿ ರೂ.ಮೊತ್ತವನ್ನು ಮಾಜಿ ಸೇನಾ ಸಿಬ್ಬಂದಿಯ ಬ್ಯಾಂಕ್ ಖಾತೆಗಳಿಗೆ ಬಿಡುಗಡೆ ಮಾಡಿದೆ ಎಂದು ಪ್ರಧಾನಿ ಮಾಹಿತಿ ನೀಡಿದರು.

ದಿಲ್ಲಿ ವಿಧಾನಸಭೆಯಲ್ಲಿ ಭಾರೀ ಭದ್ರತಾ ಲೋಪ

ಪುಟ ೧➔ ಘಟನಾ ಸ್ಥಳದಿಂದ ಹೊರಬರುವ ಮುನ್ನ ಬಂಧಿತ ಸಿಂಗ್, ಸಭಾಧ್ಯಕ್ಷ ವಿಜೇಂದ್ರ ಗುಪ್ತಾ ಅವರ ಕಚೇರಿಯ ಬಳಿ ಹೂವಿನ ಪುಷ್ಪಗುಚ್ಛ ಇರಿಸಿದ್ದಾನೆಂದು ವರದಿಯಾಗಿದೆ. ಇದನ್ನು ಪ್ರಮುಖ ಭದ್ರತಾ ಉಲ್ಲಂಘನೆ ಎಂದು ಪರಿಗಣಿಸಿ, ಗಂಭೀರ ಭದ್ರತಾ ಕಳವಳಗಳನ್ನು ಹುಟ್ಟುಹಾಕಿದೆ ಎಂದು ಅಧಿಕಾರಿ ಹೇಳಿದರು. ಈ ಮಧ್ಯೆ, ವಿಧಿವಿಜ್ಞಾನ ತಜ್ಞರು ಸಭೆಯ ಆವರಣದೊಳಗೆ ಇರಿಸಲಾಗಿರುವ ಹೂವಿನ ಪುಷ್ಪಗುಚ್ಛವನ್ನು ಪರಿಶೀಲಿಸಿದ್ದಾರೆ. ಬಾಂಬ್ ನಿಷ್ಕ್ರಿಯ ದಳ ಮತ್ತು ಶ್ವಾನ ದಳವು ಪ್ರದೇಶವನ್ನು ಕೂಲಂಕಷವಾಗಿ ಪರಿಶೀಲಿಸಿದೆ.

ಸಿಸಿಟಿವಿ ದೃಶ್ಯಾವಳಿ ಸಹಾಯದಿಂದ ಸೆರೆ: ದಿಲ್ಲಿ ಪೊಲೀಸರು ಸಿಸಿಟಿವಿ ದೃಶ್ಯಾವಳಿಗಳು ಹಾಗೂ ಇತರ ಪುರಾವೆಗಳನ್ನು ಅವಲಂಬಿಸಿ ವಾಹನವನ್ನು ಪತ್ತೆಹಚ್ಚಿ ಚಾಲಕನನ್ನು ಬಂಧಿಸಿದ್ದಾರೆ. ಅಂತೆಯೇ ಸಮಗ್ರ ತನಿಖೆ ಆರಂಭಿಸಿದ್ದಾರೆ. ಇತ್ತೀಚೆಗೆ ಮುಕ್ತಾಯಗೊಂಡ ಬಜೆಟ್ ಅಧಿವೇಶನದಲ್ಲಿ ವಿಧಾನಸಭೆಗೆ ಬಾಂಬ್ ಬೆದರಿಕೆಗಳು ಬಂದ ಬೆನ್ನಲ್ಲೇ ಈ ಘಟನೆ ಸಂಭವಿಸಿರುವುದು ಮತ್ತಷ್ಟು ಆತಂಕಕ್ಕೆ ಕಾರಣವಾಗಿದೆ.

ರಾಷ್ಟ್ರ ಸಂಪನ್ನವಾದರೆ ಜನರ ಪ್ರಗತಿ

ಪುಟ ೧➔ ಹಾಗಾಗಿ ಈ ವಿಚಾರದಲ್ಲಿ ಗೊಂದಲವಿರಕೂಡದು. ಸೂಕ್ತ ಮಾರ್ಗವನ್ನು ಆಯ್ಕೆ ಮಾಡುವುದೇ ಮುಖ್ಯವೆಂದು ಕರೆ ನೀಡಿದರು. ಕಾರ್ಯಕ್ರಮದಂಗವಾಗಿ ಭಗವಾನ್ ಶ್ರೀಕೃಷ್ಣನ ಪ್ರತಿಮೆಗೆ ಸರಸಂಘಚಾಲಕರು ಪುಷ್ಪಾರ್ಚನೆ ಮಾಡಿದರು. ಬಾಲಗೋಕುಲಂ ಸಮಾವೇಶದಲ್ಲಿ ಪಾಲ್ಗೊಂಡ ಚಿಣ್ಣರೊಂದಿಗೆ ಡಾ.ಭಾಗ್ವತ್ ಅವರು ಇದೇ ವೇಳೆ ಸಂವಾದ ನಡೆಸಿದರು.

ಸಾಮಾಜಿಕ ಜಾಲತಾಣ ಬಿಟ್ಟು ಪ್ರಾಚೀನ ಯುದ್ಧ ಕಲೆ ಕಲಿತ ಪ್ರಣಿಕಾ ರಂಜಿನಿ

ಕಳರಿಪಯಟ್ಟುವಿನಲ್ಲಿ ಅಸಾಧಾರಣ ಸಾಧನೆ

▶ ಅನುಷಾ ಕೆ.

ದಿಗಂತ ವಿಶೇಷ

ಬೆಂಗಳೂರು: ಇತ್ತೀಚೆಗೆ ಯುವಕರು ಸಾಮಾಜಿಕ ಜಾಲತಾಣಕ್ಕೆ ವ್ಯಾಮೋಹಿತರಾಗಿ, ಭಾರತೀಯ ಕಲೆಯ ಮೇಲೆ ಆಸಕ್ತಿ ಕಳೆದುಕೊಳ್ಳುತ್ತಿದ್ದಾರೆ. ಈ ನಡುವೆ ಪ್ರಾಚೀನ ಯುದ್ಧ ಕಲೆ ಕಳರಿಪಯಟ್ಟು, ಭರತ ನಾಟ್ಯದಲ್ಲಿ ಶ್ರೇಷ್ಠತೆ ಮೂಲಕ ಯುವ ಜನತೆಗೆ ಸಿಲಿಕಾನ್ ಸಿಟಿಯ ಪ್ರಣಿಕಾ ರಜಿನಿ ಮಾದರಿಯಾಗಿದ್ದಾರೆ.



ಭಾರತವು ಸಾವಿರಾರು ವರ್ಷಗಳ ಶ್ರೀಮಂತ ಸಾಹಿತ್ಯ, ಕಲೆ ಹಾಗೂ ಸಂಸ್ಕೃತಿಯ ತವರೂರಾಗಿದೆ. ಹಾಗೇ ಯುವಕರ ಕೈಗೆ ಈ ನೆಲದ ವಿಶಿಷ್ಟ ಸಂಸ್ಕೃತಿ, ಪರಂಪರೆ ಸೇರಿದರೆ ಭಾರತದ ಸೊಗಡು ಉಳಿಯಲು ಸಾಧ್ಯ. ಆದರೆ, ಇತ್ತೀಚೆಗೆ ಯುವಕರು ಜಾಲತಾಣಕ್ಕೆ ವ್ಯಾಮೋಹಿತರಾಗಿ, ಭಾರತೀಯ ಕಲೆ ಮೇಲೆ ಆಸಕ್ತಿ ಕಳೆದುಕೊಳ್ಳುತ್ತಿದ್ದಾರೆ. ಹೀಗಿರುವಾಗ ಭರತನಾಟ್ಯ, ಶಾಸ್ತ್ರೀಯ ಕಲಾತ್ಮಕತೆ ಮತ್ತು ಸಮರ ಶಿಸ್ತಿನ ಸಂಗಮ ಪ್ರತಿನಿಧಿಸುವ ಕಳರಿಪಯಟ್ಟುವಿನಲ್ಲಿ ಪ್ರಣಿಕಾ ರಜಿನಿ ಅಸಾಧಾರಣ ಸಾಧನೆ ಮಾಡುವ ಮೂಲಕ ಯುವ ಜನತೆಗೆ ಮಾದರಿಯಾಗಿ ಹೊರಹೊಮ್ಮುತ್ತಿದ್ದಾರೆ.

ಈ ಯುವ ಪ್ರತಿಭೆಯು ಬೆಂಗಳೂರಿನ ವೀವಾ ಸೈಂಟಿಫಿಕ್ ಪ್ರೈವೇಟ್ ಇಂಡಿಯಾ ಲಿಮಿಟೆಡ್ ಸ್ಥಾಪಕ ನಿರ್ದೇಶಕ ರಜಿನಿ ಲೋಕನಾಥನ್ ಹಾಗೂ ರಾಷ್ಟ್ರೀಯ ನೃತ್ಯ, ಕಲೆ ಮತ್ತು ಸಂಗೀತ ಸಂಸ್ಥೆ ಸ್ಥಾಪಕ ನಿರ್ದೇಶಕಿ ಪೂರ್ಣಿಮಾ ರಜಿನಿ ದಂಪತಿಯ ಪುತ್ರಿಯಾಗಿದ್ದಾರೆ. ಒಂದನೇ ತರಗತಿಯಿಂದ ಹತ್ತನೇ ತರಗತಿವರೆಗೆ ಕುಮಾರಣ್ಣನ ಮಕ್ಕಳ ಮನೆಯಲ್ಲಿ ಕಲಿತು, ಪ್ರಥಮ ಪಿಯು ಆನ್ನು ರಯಾನ್ ಅಂತಾರಾಷ್ಟ್ರೀಯ ಶಾಲೆಯಲ್ಲಿ ಶಿಕ್ಷಣ ಪೂರೈಸಿ, ದ್ವಿತೀಯ ಪಿಯುಸಿ ವ್ಯಾಸಂಗ ಮಾಡುತ್ತಿದ್ದಾರೆ. ಎಸ್.ಎಸ್.ಎಲ್.ಸಿಯಲ್ಲಿ ಶೇ.98 ಅಂಕ ಪಡೆಯುವ ಮೂಲಕ ಪಾಠದೊಂದಿಗೆ ಪಠ್ಯೇತರ ಚಟುವಟಿಕೆಯಲ್ಲಿಯೂ ಸೈ ಅನಿಸಿಕೊಂಡಿದ್ದಾರೆ.

ಕಳರಿಪಯಟ್ಟು ಹಾಗೂ ಭರತನಾಟ್ಯದಲ್ಲಿ ಶ್ರೇಷ್ಠತೆ: ಎಂಟನೇ ವಯಸ್ಸಿನಿಂದಲೇ ಆಯೋಧನ ಗುರುಕುಲದ ಗುರು ಮನೋಜ್ ಕುಮಾರ್ ಗುರುಕ್ಕಲ್ ಅವರ ಮಾರ್ಗದರ್ಶನದಲ್ಲಿ ಕಳರಿಪಯಟ್ಟು ಅಭ್ಯಾಸ ಮಾಡುತ್ತಿದ್ದಾರೆ. ಚಾವುಟ್ಟು ಪುಂಗಿಯಲ್ಲಿ ಪರಿಣತಿ ಹೊಂದಿರುವ ಪ್ರಣಿಕಾ ವಡಕ್ಕನ್ ಕಳರಿಪಯಟ್ಟು ಕಠಿಣ ತರಬೇತಿ ಪಡೆಯುತ್ತಿದ್ದಾರೆ. ಇದರೊಂದಿಗೆ ಭರತನಾಟ್ಯ,ಚಿತ್ರಕಲೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಕಲಿಕೆಗೆ ತಾಯಿಯೇ ಮೊದಲ ಗುರು ಎನ್ನುವಂತೆ ಇವರಿಗೆ ಭರತನಾಟ್ಯ ಕಲಿಕೆಯಲ್ಲಿಯೂ ತಾಯಿ ವಿದುಷಿ ಪೂರ್ಣಿಮಾ ರಜಿನಿ ಅವರ ಮಾರ್ಗದರ್ಶನದಲ್ಲಿ ನಾಲ್ಕನೇ ವಯಸ್ಸಿನಿಂದ ಭರತನಾಟ್ಯ ಅಭ್ಯಾಸ ಮಾಡುತ್ತಿದ್ದಾರೆ. ಈಗಾಗಲೇ ಜುನಿಯರ್ ಪರೀಕ್ಷೆ ಬರೆದಿದ್ದಾರೆ.

ನಾಲ್ಕು ಬಾರಿ ರಾಷ್ಟ್ರೀಯ ಗರಿ

ಪ್ರಣಿಕಾ ಕಳರಿಪಯಟ್ಟುವಿನಲ್ಲಿ ಸತತ ನಾಲ್ಕು ಬಾರಿ ರಾಷ್ಟ್ರೀಯ ಚಾಂಪಿಯನ್ ಆಗಿದ್ದಾರೆ ಹೊರಹೊಮ್ಮಿದ್ದಾರೆ. 2023ರಲ್ಲಿ ರಾಷ್ಟ್ರೀಯ ಕಳರಿಪಯಟ್ಟು ಚಾಂಪಿಯನ್ ಶಿಪ್‌ನಲ್ಲಿ ಹೈ ಕಿಕ್‌ನಲ್ಲಿ ಕಂಚಿನ ಪದಕ, 2024ರಲ್ಲಿ ಜಿಲ್ಲಾಮಟ್ಟದಲ್ಲಿ ಚಿನ್ನದ ಪದಕ, ರಾಜ್ಯಮಟ್ಟದಲ್ಲಿ ಚಿನ್ನದ ಪದಕ, ರಾಷ್ಟೀಯ ಮಟ್ಟದಲ್ಲಿ ಕಂಚಿನ ಪದಕ, 2025ರಲ್ಲಿ ಜಿಲ್ಲಾಮಟ್ಟದಲ್ಲಿ ಚಿನ್ನದ ಪದಕ, ರಾಜ್ಯಮಟ್ಟದಲ್ಲಿ ಚಿನ್ನದ ಪದಕ, ರಾಷ್ಟೀಯ ಮಟ್ಟದಲ್ಲಿ ಕಂಚಿನ ಪದಕ ಪಡೆದುಕೊಂಡಿದ್ದಾರೆ. ಜ.17,18ರವರೆಗೆ ನಡೆದ ಜೂನಿಯರ್ 18 ವರ್ಷದೊಳಗಿನ ರಾಷ್ಟ್ರೀಯ ಮಟ್ಟದಲ್ಲಿ ಚಿನ್ನದ ಪದಕ ಪಡೆದುಕೊಂಡಿದ್ದಾರೆ.

> ಕಳರಿಪಯಟ್ಟುವಿನಿಂದ ಜೀವನದಲ್ಲಿ ಶಿಸ್ತು, ಆತ್ಮವಿಶ್ವಾಸ, ದೈಹಿಕ ಮತ್ತು ಮಾನಸಿಕ ಶಕ್ತಿ ಹೆಚ್ಚಾಗುತ್ತದೆ, ಮುಂದಿನ ದಿನಗಳಲ್ಲಿ ನನಗೆ ವೈದ್ಯಳಾಗಿ, ಕಳರಿಪಯಟ್ಟು ಮತ್ತು ಭರತನಾಟ್ಯವನ್ನು ಮುಂದುವರಿಸಬೇಕೆಂದಿದ್ದೇನೆ.
>
> ■ ಪ್ರಣಿಕಾ ರಂಜಿನಿ, ಕಳರಿಯಪಟ್ಟು ಕಲಾವಿದೆ

ಅನಿಲ ಪೂರೈಕೆ ವಿಫಲ: ಸಚಿವ



ಬೆಂಗಳೂರು: ರಾಜ್ಯದಲ್ಲಿ ಇಂಧನ ತೈಲ ಮತ್ತು ಅನಿಲ ಪೂರೈಕೆಯ ಸಮಸ್ಯೆಯ ಹಿನ್ನೆಲೆಯಲ್ಲಿ ಆಹಾರ ಸಚಿವ ಕೆ.ಎಚ್ ಮುನಿಯಪ್ಪ ಆತಂಕ ವ್ಯಕ್ತಪಡಿಸಿದ್ದು, ಕೇಂದ್ರ ಸರ್ಕಾರವು ಸಮಯೋಚಿತ ಕ್ರಮಗಳನ್ನು ಕೈಗೊಳ್ಳುವಲ್ಲಿ ವಿಫಲವಾಗಿದೆ ಎಂಬುದು ಸ್ಪಷ್ಟವಾಗುತ್ತದೆ. ವಿದೇಶಾಂಗ ನೀತಿ ಮತ್ತು ಇಂಧನ ನಿರ್ವಹಣೆಯ ನಡುವೆ ಸಮನ್ವಯದ ಕೊರತೆ ಕಾಣಿಸಿಕೊಂಡಿದ್ದು, ಅದರ ಹೊರೆ ಜನರ ಮೇಲೆ ಬಿದ್ದಿದೆ ಎಂದು ತಿಳಿಸಿದ್ದಾರೆ.

ದೇಶದಲ್ಲಿ ಎಲ್ಪಿಜಿ ಗ್ಯಾಸ್, ವಾಣಿಜ್ಯ ಗ್ಯಾಸ್ ಸಿಲಿಂಡರ್, ಸಿಎನ್‌ಜಿ, ಪೆಟ್ರೋಲ್ ಹಾಗೂ ಡೀಸೆಲ್ ಪೂರೈಕೆ ಮಾಡುವ ಜವಾಬ್ದಾರಿ ಸಂಪೂರ್ಣವಾಗಿ ಕೇಂದ್ರ ಸರ್ಕಾರದ ಅಧೀನದಲ್ಲಿದೆ. ಪೆಟ್ರೋಲಿಯಂ, ನೈಸರ್ಗಿಕ ಅನಿಲ ಸಚಿವಾಲಯದ ಮೂಲಕ ಈ ವ್ಯವಸ್ಥೆ ನಡೆಯುತ್ತದೆ. ರಾಜ್ಯ ಸರ್ಕಾರಕ್ಕೆ ಈ ಪೂರೈಕೆಯನ್ನು ನೇರವಾಗಿ ನಿಯಂತ್ರಿಸುವ ಅಧಿಕಾರವಿಲ್ಲ ಎಂಬುದು ಸಾರ್ವಜನಿಕರು ಗಮನಿಸಬೇಕಾದ ವಿಷಯವಾಗಿದೆ ಎಂದು ಮಾಧ್ಯಮ ಹೇಳಿಕೆ ನೀಡಿದ್ದಾರೆ. ಸಿಎನ್‌ಜಿ ಕೊರತೆಯಿಂದ ಆಟೋ ಚಾಲಕರು ಸಂಕಷ್ಟದಲ್ಲಿದ್ದು, ಹೊಟೇಲ್ ಮತ್ತು ಆಹಾರ ಉದ್ಯಮಗಳು ವಾಣಿಜ್ಯ ಗ್ಯಾಸ್ ಕೊರತೆಯಿಂದ ತೊಂದರೆ ಅನುಭವಿಸುತ್ತಿವೆ ಮತ್ತು ಗೃಹಿಣಿಯರು ಅಡುಗೆ ಮಾಡಲು ಗ್ಯಾಸ್ ಸಿಗದೆ ಪರದಾಡುತ್ತಿರುವುದನ್ನು ಗಮನಿಸಿದಾಗ ಇಂಧನ ಪೂರೈಕೆಯಲ್ಲಿ ರಾಜ್ಯಗಳ ನಡುವೆ ಸಮಾನತೆ ಕಾಣುತ್ತಿಲ್ಲ ಎಂಬ ಅಂಶವೂ ಗಮನಕ್ಕೆ ಬಂದಿದೆ ಎಂದು ಹೇಳಿದ್ದಾರೆ.

ಆಟೋ ಚಾಲಕರ ಮುತ್ತಿಗೆ

ರಾಜಧಾನಿಯಲ್ಲಿ ಉಂಟಾಗಿರುವ ಆಟೋ ಗ್ಯಾಸ್ ವ್ಯತ್ಯಯದಿಂದ ಕಂಗೆಟ್ಟಿರುವ ಆಟೋ ಚಾಲಕರು ಸೋಮವಾರ ಸಚಿವ ಮುನಿಯಪ್ಪ ನಿವಾಸಕ್ಕೆ ಮುತ್ತಿಗೆ ಹಾಕಿ, ಪ್ರತಿಭಟನೆ ನಡೆಸಿದರು. ಹೆಬ್ಬಾಳದ ಸಂಜಯನಗರದಲ್ಲಿರುವ ಸಚಿವರ ಮನೆ ಎದುರು ಜಮಾಯಿಸಿದ ಆಟೋ ಚಾಲಕರು ಗ್ಯಾಸ್ ಕೊಡಬೇಕು ಎಂದು ಘೋಷಣೆ ಕೂಗಿದರು.

ಆರಾಧನಾ ಮಹೋತ್ಸವ



ಬೆಂಗಳೂರು ಗ್ರಾಮಾಂತರ ಜಿಲ್ಲೆ ಹೊಸಕೋಟೆ ತಾಲೂಕಿನ ತಾವರಕೆರೆಯಲ್ಲಿ ಶ್ರೀ ರಾಮೇಶ್ವರ ಸ್ವಾಮಿ, ಶ್ರೀ ಸಿದ್ದೇಶ್ವರ ಸ್ವಾಮಿ ದೇವಸ್ಥಾನದ ವತಿಯಿಂದ ಆಯೋಜಿಸಿದ್ದ ಕುಲದೇವತಾ ಆರಾಧನಾ ಮಹೋತ್ಸವವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು. ಕಾಗಿನೆಲೆ ಮಹಾಸಂಸ್ಥಾನದ ಶ್ರೀ ನಿರಂಜನಾನಂದಪುರಿ ಸ್ವಾಮೀಜಿ, ಸಚಿವ ಬೈರತಿ ಸುರೇಶ್ ಉಪಸ್ಥಿತರಿದ್ದರು.

ಕರ್ನಾಟಕಕ್ಕೆ ಮೂರನೇ ಸ್ಥಾನ

ಬೆಂಗಳೂರು: ಕೌಶಲ ಕ್ಷೇತ್ರದಲ್ಲಿ ಕರ್ನಾಟಕ ಈಗ ಇಡೀ ದೇಶದಲ್ಲಿ ಮುಂಚೂಣಿಯತ್ತ ಸಾಗುತ್ತಿದೆ. ಇತ್ತೀಚೆಗೆ ಗ್ರೇಟರ್ ನೋಯ್ಡಾದ ಇಂಡಿಯಾ ಎಕ್ಸ್‌ಪೋ ಮಾರ್ಟ್‌ನಲ್ಲಿ ನಡೆದ ಇಂಡಿಯಾ ಸ್ಕಿಲ್ಸ್ 2025-26ರ ರಾಷ್ಟ್ರೀಯ ಸ್ಪರ್ಧೆಯಲ್ಲಿ ಕರ್ನಾಟಕ 3ನೇ ಸ್ಥಾನ ಪಡೆದುಕೊಂಡಿದೆ.



32 ಕೌಶಲ ವಿಭಾಗದಲ್ಲಿ ನಡೆದ ಸ್ಪರ್ಧೆಗಳಲ್ಲಿ 48 ಮಂದಿ ಭಾಗವಹಿಸಿದ್ದು, ಒಟ್ಟು 29 ವಿಭಾಗದಲ್ಲಿ ಕರ್ನಾಟಕ ತನ್ನ ಹಿರಿಮೆ ಮೆರೆದಿದೆ. ಕ್ಲೌಡ್ ಕಂಪ್ಯೂಟಿಂಗ್, ಸೈಬರ್ ಸೆಕ್ಯುರಿಟಿ, ಮೆಕಾಟ್ರಾನಿಕ್ಸ್, ಸಂಯೋಜಕ ಉತ್ಪಾದನೆ ಮತ್ತು ಬೇಕರಿ ಮತ್ತು ದೃಶ್ಯ ವ್ಯಾಪಾರೀಕರಣ ಸೇರಿದಂತೆ ಹೈಟೆಕ್ ಮತ್ತು ಸೃಜನಶೀಲ ಕ್ಷೇತ್ರಗಳಲ್ಲಿ ಕರ್ನಾಟಕ ಗಮನಾರ್ಹ ಸಾಧನೆ ಮಾಡಿದೆ.

ಈ ಕುರಿತು ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ್ ಪಾಟೀಲ್ ಮಾತನಾಡಿ, ಕರ್ನಾಟಕ ಕೌಶಲ ಅಭಿವೃದ್ಧಿ ನಿಗಮ (ಕೆಎಸ್‌ಡಿಸಿ)ದಿಂದ ತರಬೇತಿ ಪಡೆದ ಕರ್ನಾಟಕದ ವಿದ್ಯಾರ್ಥಿಗಳು 10 ಚಿನ್ನ, 6 ಬೆಳ್ಳಿ, 6 ಕಂಚು ಮತ್ತು 7 ಶ್ರೇಷ್ಠತೆ ಪದಕಗಳನ್ನು ಒಳಗೊಂಡಂತೆ ಒಟ್ಟು 29 ಪದಕಗಳನ್ನು ಪಡೆದುಕೊಂಡಿದ್ದಾರೆ ಎಂದು ತಿಳಿಸಿದರು. ಕರ್ನಾಟಕ ತಂಡದ ರಾಜ್ಯ ಅಧಿಕಾರಿ ಮತ್ತು ಮಾರ್ಗದರ್ಶಕ ಕ್ಯಾಪ್ಟನ್ ಕೌಸ್ತವ್ ನಾಥ್ ಮಾತನಾಡಿ, ಈ ಫಲಿತಾಂಶ ನಿಜಕ್ಕೂ ಗಮನಾರ್ಹ ಸಾಧನೆಯಾಗಿದೆ. ನಾವು ಅಪಾರ ಪ್ರತಿಭೆಯನ್ನು ತೋರಿಸಿದ್ದೇವೆ. ಮುಂದಿನ ಬಾರಿ ಅಗ್ರ ಸ್ಥಾನವನ್ನು ಪಡೆಯಲು ಉತ್ತಮ ರೀತಿಯಲ್ಲಿ ಪರಿಶ್ರಮ ಪಡುತ್ತೇವೆ ಎಂದರು.

ಕಿರುಸುದ್ದಿ

ಏ.15ರಂದು ಭೈರವೈಕ್ಯ ಮಂದಿರ ಲೋಕಾರ್ಪಣೆಗೆ ಮೋದಿ

ನಾಗಮಂಗಲ: ತಾಲೂಕಿನ ಆದಿಚುಂಚನಗಿರಿ ಡಾ.ಬಾಲಗಂಗಾಧರನಾಥ ಸ್ವಾಮೀಜಿ ಅವರ ಶ್ರೀಗುರು ಭೈರವೈಕ್ಯ ಮಂದಿರವನ್ನು ಏ.15ರಂದು ಲೋಕಾರ್ಪಣೆಯನ್ನು ಪ್ರಧಾನಿ ನರೇಂದ್ರ ಮೋದಿ ಮಾಡಲಿದ್ದಾರೆ ಎಂದು ಶ್ರೀ ಮಠದ ಆಡಳಿತ ಮಂಡಳಿ ತಿಳಿಸಿದೆ. ತಾಲೂಕಿನ ಆದಿಚುಂಚನಗಿರಿ ಶ್ರೀ ಕ್ಷೇತ್ರದ ಅಧಿದೇವತೆ ಶ್ರೀ ಕಾಲಭೈರವೇಶ್ವರಸ್ವಾಮಿ ದೇವಾಲಯದ ಸಮೀಪದಲ್ಲಿ ನಡೆದ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಾ. ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ. ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ, ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ, ಸಚಿವ ಎನ್.ಚಲುವರಾಯಸ್ವಾಮಿ ಹಾಗೂ ರಾಜ್ಯದ ವಿವಿಧ ಮಠಾಧೀಶರು ಭಾಗವಹಿಸಲಿದ್ದಾರೆ. ಪ್ರಧಾನಿ ನರೇಂದ್ರ ಮೋದಿಯವರ ಉದ್ಘಾಟನಾ ಕಾರ್ಯಕ್ರಮದ ಸ್ಥಳ ಪರಿಶೀಲನೆ ನಡೆಸಿದ ಜಿಲ್ಲಾಧಿಕಾರಿ ಡಾ.ಕುಮಾರ್ ಹಾಗೂ ಎಸ್ಪಿ ಡಾ.ಶೋಭಾರಾಣಿ ಆದಿಚುಂಚನಗಿರಿ ಮಠಕ್ಕೆ ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿದರು.



ಪೊಲೀಸರಿಂದ 862ಕೆಜಿ ಮಾದಕ ವಸ್ತು ನಾಶ

ಹಾರೋಹಳ್ಳಿ: ಮೈಸೂರು ದಕ್ಷಿಣ ಪೊಲೀಸ್ ಠಾಣಾ ವ್ಯಾಪ್ತಿಯ ಪ್ರಕರಣವೊಂದರಲ್ಲಿ ವಶಪಡಿಸಿಕೊಂಡಿದ್ದ 862.853ಕೆಜಿ ಮಾದಕ ವಸ್ತುವನ್ನು ಹಾರೋಹಳ್ಳಿ ಕೈಗಾರಿಕಾ ಪ್ರದೇಶದ ಇನ್ಯಾನೋ ಇನ್ಸಿನ್‌ಟೆಕ್ ಕಾರ್ಖಾನೆ ಯಲ್ಲಿ ನಾಶಪಡಿಸಲಾಯಿತು. ಹಾರೋಹಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ಇನ್ಯಾನೋ ಇನ್ಸಿನ್‌ಟೆಕ್ ಕಾರ್ಖಾನೆಯಲ್ಲಿ ಅಪಾರ ಪ್ರಮಾಣದ ಮಾದಕ ವಸ್ತುಗಳನ್ನು ನಾಶಪಡಿಸಲಾಗಿದ್ದು ಮೈಸೂರು ದಕ್ಷಿಣ ಪೊಲೀಸರು ವಿಶೇಷ ಕಾರ್ಯಾಚರಣೆ ನಡೆಸಿ ಮಾದಕ ವಸ್ತುಗಳನ್ನು ವಶಪಡಿಸಿಕೊಂಡಿದ್ದರು. ಮೈಸೂರು ದಕ್ಷಿಣ ಪೊಲೀಸರು ಮನೆ ಮನೆಗೆ ಪೊಲೀಸರು ಎಂಬ ವಿಶೇಷ ಅಭಿಯಾನವನ್ನು ಹಮ್ಮಿಕೊಂಡಿದ್ದ ವೇಳೆಯಲ್ಲಿ ಈ ಪ್ರಕರಣ ಪತ್ತೆಯಾಗಿದ್ದು, ಮೈಸೂರು ಜಿಲ್ಲೆಯ ಎಸ್.ಪಿ. ಮಲ್ಲಿಕಾರ್ಜುನ ಬಾಲದಂಡಿಯವರ ನೇತೃತ್ವದಲ್ಲಿ ವಿಶೇಷ ಕಾರ್ಯಾಚರಣೆಯನ್ನು ನಡೆಸಿ 862ಕೆಜಿ ಮಾದಕ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿತ್ತು ಎಂದು ಪೊಲೀಸರು ಮಾಹಿತಿ ನೀಡಿದರು. ಇನ್ನು ಮಾದಕ ವಸ್ತುಗಳನ್ನ ನಾಶಪಡಿಸುವ ಸಲುವಾಗಿ ನ್ಯಾಯಾಲಯದಿಂದ ಅನುಮತಿಯನ್ನು ಪಡೆಯಲಾಗಿದ್ದು ಮೈಸೂರು ಜಿಲ್ಲೆಯ ಪೊಲೀಸ್ ಅಧೀಕ್ಷಕ ಮಲ್ಲಿಕಾರ್ಜುನ ಬಾಲದಂಡಿ,ಸದಸ್ಯರಾದ ಎಲ್.ನಾಗೇಶ್, ಡಿವೈಎಸ್‌ಪಿ ಟಿ.ಬಿರಾಜಣ್ಣ ನೇತೃತ್ವದಲ್ಲಿ ಸಭೆ ನಡೆಸಿ ಹಾರೋಹಳ್ಳಿ ಕೈಗಾರಿಕಾ ಪ್ರದೇಶದ ಇ ನ್ಯಾನೋ ಇನ್‌ಸಿನ್‌ಟೆಕ್ ಕಾರ್ಖಾನೆಯಲ್ಲಿ ಮಾದಕ ವಸ್ತುಗಳನ್ನು ನಾಶಪಡಿಸಲು ತೀರ್ಮಾನಿಸಲಾಯಿತು. ಅದರಂತೆ ಹೆಚ್ಚುವರಿ ಪೊಲೀಸ್ ಅಧೀಕ್ಷಕ ನಾಗೇಶ್ ಅವರ ನೇತೃತ್ವದಲ್ಲಿ ಮಾದಕ ವಸ್ತುಗಳನ್ನು ನಾಶಪಡಿಸಲಾಯಿತು.

ಸಚಿವ ಜಮೀರ್‌ಗೆ ಎಐಸಿಸಿ ಮಟ್ಟದಲ್ಲಿ ಸ್ಥಾನಮಾನ

ಬೆಂಗಳೂರು: ಸಚಿವ ಜಮೀರ್ ಅಹಮದ್ ಅವರನ್ನು ಎಐಸಿಸಿ ಅಲ್ಪಸಂಖ್ಯಾತರ ಘಟಕದ ಸಲಹಾ ಪರಿಷತ್‌ನ ಸದಸ್ಯರನ್ನಾಗಿ ನೇಮಕ ಮಾಡಲಾಗಿದೆ. ತಾರೀಖ್ ಅನ್ವರ್, ಸಲ್ಮಾನ್ ಖುರ್ಷಿದ್, ಅಭಿಷೇಕ್ ಮನು ಸಿಂಗ್ವಿ, ಇಮ್ರಾನ್ ಪ್ರತಾಪ್ ಗಡಿ ಅವರು ಎಐಸಿಸಿ ಅಲ್ಪಸಂಖ್ಯಾತರ ಘಟಕದ ಸಲಹಾ ಪರಿಷತ್‌ನಲ್ಲಿ ಇದ್ದು, ಜಮೀರ್ ಅಹಮದ್‌ಗೆ ಎಐಸಿಸಿ ಮಟ್ಟದಲ್ಲಿ ಮಹತ್ವದ ಸ್ಥಾನಮಾನ ದೊರೆತಿದೆ.

ಕೊಟ್ಟ ಕುದುರೆ ಏರದವನು ವೀರನೂ ಅಲ್ಲ, ಶೂರನೂ ಅಲ್ಲ

ಅಸ್ತಿತ್ವಕ್ಕಾಗಿ ಬಿಜೆಪಿ ಯತ್ನ: ಸಿಎಂ

ದಾವಣಗೆರೆ: ಈಗ ತಮ್ಮ ಅಸ್ತಿತ್ವ ಉಳಿಸಿಕೊಳ್ಳಲು ಬಿಜೆಪಿ ಸೇರಿರುವವರೆಲ್ಲರೂ ಈ ಹಿಂದೆ ಬಿಜೆಪಿ, ಆರೆಸ್ಸೆಸ್, ಮೋದಿಯವರ ಬಗ್ಗೆ ಏನೇನು ಮಾತಾಡಿದ್ದಾರೆ? ಇವರಿಗೆಲ್ಲಾ ನಮ್ಮನ್ನು ಟೀಕಿಸುವ ಯಾವ ನೈತಿಕತೆ ಇದೆ? ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶ್ನಿಸಿದರು.



ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿ, ಹೆಚ್.ಡಿ.ದೇವೇ ಗೌಡರು, ಹೆಚ್.ಡಿ.ಕುಮಾರಸ್ವಾಮಿ, ಚಲವಾದಿ ನಾರಾಯಣಸ್ವಾಮಿ ಮೊದಲೆಲ್ಲಾ ಬಿಜೆಪಿ, ಆರೆಸ್ಸೆಸ್, ಮೋದಿಯವರ ಬಗ್ಗೆ ಎಂತೆಂಥಾ ಮಾತಾಡಿದ್ದಾರೆ ಗೊತ್ತಾ? ಚಲವಾದಿ ನಾರಾಯಣಸ್ವಾಮಿ ಮೊದಲು ಕಾಂಗ್ರೆಸ್ಸಿನಲ್ಲಿದ್ದು ಲಾಭ ಪಡೆದರು. ಈಗ ಬಿಜೆಪಿಗೆ ಹೋಗಿ ಅಲ್ಲೂ ಲಾಭ ಮಾಡಿ ಕೊಂಡಿದ್ದಾರೆ. ದೇವೇಗೌಡರು, ಕುಮಾರಸ್ವಾಮಿ ತಮ್ಮ ಅಸ್ತಿತ್ವ ಉಳಿಸಿಕೊಳ್ಳಲು ಈಗ ಬಿಜೆಪಿ ಜೊತೆ ಸೇರಿದ್ದಾರೆ. ಅವರೆಲ್ಲಾ ಬಿಜೆಪಿ, ಆರೆಸ್ಸೆಸ್ ಬಗ್ಗೆ ಏನೇನು ಮಾತಾಡಿದ್ದಾರೆ ಎಂಬುದನ್ನು ನೆನಪಿಸಿಕೊಳ್ಳಲಿ ಎಂದರು.

ನಾನು ಜೆಡಿಎಸ್ ಅಧ್ಯಕ್ಷನಾಗಿದ್ದಾಗ 59 ಸೀಟ್ ಗೆದ್ದಿದ್ದೆವು. ಆನಂತರ ಅಷ್ಟು ಸೀಟ್ ಗೆಲ್ಲಲೇ ಇಲ್ಲ. ಈಗ 19 ಸ್ಥಾನಕ್ಕೆ ಇಳಿದಿದ್ದಾರೆ. ರಾಜ್ಯದಲ್ಲಿ ಕೈಗಾರಿಕಾ ಅಭಿವೃದ್ಧಿಗೆ ಕಾಂಗ್ರೆಸ್ ಸಹಕರಿಸುತ್ತಿಲ್ಲ ಎನ್ನುವ ಕುಮಾರಸ್ವಾಮಿಯದ್ದು ಕೊಟ್ಟ ಕುದುರೆಯನ್ನು ಏರದವನು ವೀರನೂ ಅಲ್ಲ, ಶೂರನೂ ಅಲ್ಲ ಎಂಬಂತಹ ಸ್ಥಿತಿ ಎಂದು ಅವರು ವ್ಯಂಗ್ಯವಾಡಿದರು.

ನಾವು ಕುಟುಂಬ ರಾಜಕಾರಣ ಮಾಡಲ್ಲ. ಜನರೇ ನಮ್ಮನ್ನು ಕರೆ ತಂದು ಚುನಾವಣೆಗೆ ನಿಲ್ಲಿಸಿದ್ದಾರೆ ಎನ್ನುವ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಮಗ ಚನ್ನಪಟ್ಟಣದಲ್ಲಿ ಸೋತಿದ್ದು ಏಕೆ? ಜನ ಬಯಸಿದಾಗ ಚುನಾವಣೆಗೆ ಸ್ಪರ್ಧಿಸುವುದು ತಪ್ಪಲ್ಲ. ಜನ ತಿರಸ್ಕರಿಸಿದಾಗಲೂ ಆ ರೀತಿ ಮಾತಾಡುತ್ತಾರಲ್ಲಾ? ಎಂದು ಅವರು ತಿರುಗೇಟು ನೀಡಿದರು.

ಉಪಚುನಾವಣೆ ಗೆಲ್ಲಲು ಕಾಂಗ್ರೆಸ್ ಹರಸಾಹಸ

ದಾವಣಗೆರೆ: ರಾಜ್ಯದಲ್ಲಿ ನಡೆಯುತ್ತಿರುವ ದಾವಣಗೆರೆ ದಕ್ಷಿಣ ಹಾಗೂ ಬಾಗಲಕೋಟೆ ವಿಧಾನಸಭಾ ಕ್ಷೇತ್ರದ ಉಪಚುನಾವಣೆಗಳು ಕಾಂಗ್ರೆಸ್ ಸರ್ಕಾರಕ್ಕೆ ದೊಡ್ಡ ಸವಾಲಾಗಿ ಪರಿಣಮಿಸಿವೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ತಿಳಿಸಿದರು. ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಗ್ಯಾರಂಟಿಗಳ ಮುಖವಾಡದ ಹಿಂದೆ ಜನರನ್ನು ಮರುಳಾಗಿಸಲು ಯತ್ನಿಸುತ್ತಿರುವ ಕಾಂಗ್ರೆಸ್ ಸರ್ಕಾರಕ್ಕೆ ಈ ಉಪಚುನಾವಣೆಗಳು ಕಬ್ಬಿಣದ ಕಡಲೆಯಾಗಿವೆ. ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆ ಕ್ಷೇತ್ರಗಳನ್ನು ಉಳಿಸಿಕೊಳ್ಳುವ ಒತ್ತಡದಲ್ಲಿ ಮುಖ್ಯಮಂತ್ರಿ ಮತ್ತು ಸಚಿವರು ತಬ್ಬಿಬ್ಬಾಗಿದ್ದಾರೆ. ಚುನಾವಣೆಯು ಆಡಳಿತಾರೂಢ ಕಾಂಗ್ರೆಸ್ ಸರ್ಕಾರ ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯನವರ ನಿದ್ದೆ ಕದಡಿದ್ದು, ಈ ಕ್ಷೇತ್ರಗಳನ್ನು ಗೆಲ್ಲಲು ಮುಖ್ಯಮಂತ್ರಿ ಹರಸಾಹಸ ಪಡುತ್ತಿದ್ದಾರೆ ಎಂದು ವ್ಯಂಗ್ಯವಾಡಿದರು. ಕಳೆದ ಮೂರು ವರ್ಷಗಳಿಂದ ರಾಜ್ಯದಲ್ಲಿ ಯಾವುದೇ ಗಮನಾರ್ಹ ಅಭಿವೃದ್ಧಿ ಕೆಲಸಗಳು ನಡೆದಿಲ್ಲ. ಗ್ಯಾರಂಟಿ ಯೋಜನೆಗಳನ್ನೇ ಮುಂದಿಟ್ಟುಕೊಂಡು, ಅವುಗಳನ್ನೇ ಅಭಿವೃದ್ಧಿ ಅಂತಾ ಬಿಂಬಿಸಲು ಸರ್ಕಾರ ಪ್ರಯತ್ನಿಸುತ್ತಿದೆ. ತಮ್ಮ ವೈಫಲ್ಯಗಳನ್ನು ಮುಚ್ಚಿಕೊಳ್ಳಲು ಮುಖ್ಯಮಂತ್ರಿ ಮತ್ತು ಸಚಿವರು ಕೇಂದ್ರ ಸರ್ಕಾರದ ಮೇಲೆ ಆರೋಪ ಮಾಡುತ್ತಿದ್ದಾರೆ. ಅತಿ ಹೆಚ್ಚು ಬಾರಿ ಬಜೆಟ್ ಮಂಡಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಅನುಭವ ರಾಜ್ಯದ ಅಭಿವೃದ್ಧಿಗೆ ಪ್ರಯೋಜನವಾಗುತ್ತಿಲ್ಲ. ಅಹಿಂದ ಹೆಸರಿನಲ್ಲಿ ಅಧಿಕಾರಕ್ಕೆ ಬಂದ ಸರ್ಕಾರವು ಹಿಂದುಳಿದ ವರ್ಗಗಳನ್ನು ನಿರ್ಲಕ್ಷಿಸಿದೆ. ವಿಶೇಷವಾಗಿ ಅಲ್ಪಸಂಖ್ಯಾತರನ್ನು ಕಡೆಗಣಿಸಲಾಗಿದೆ ಎಂದು ಆರೋಪಿಸಿದರು.



ಬಿಜೆಪಿ ಗ್ಯಾರಂಟಿ ವಿರೋಧಿ

ಜನರು ಕಾಂಗ್ರೆಸ್ಸಿನ ಗ್ಯಾರಂಟಿ ಯೋಜನೆಗಳನ್ನು ಮೆಚ್ಚಿಕೊಂಡಿದ್ದಾರೆ. ಬಿಜೆಪಿ ಗ್ಯಾರಂಟಿಗಳನ್ನು ವಿರೋಧಿಸುತ್ತಿದೆ. ಹೀಗೆ ಬಡವರ ವಿರೋಧಿ, ಸಂವಿಧಾನ ವಿರೋಧಿಯಾಗಿರುವ ಬಿಜೆಪಿಯನ್ನು ಬೆಂಬಲಿಸಲು ರಾಜ್ಯದ ಜನರಿಗೆ ಕಾರಣವೇ ಇಲ್ಲ ಎಂದರಲ್ಲದೆ, ಸಚಿವ ಜಮೀರ್ ಅಹಮದ್ ಕೇರಳ, ಬಾಗಲಕೋಟೆ ಸೇರಿ ಎಲ್ಲಾ ಕಡೆ ಕೆಲಸ ಮಾಡಿದ್ದಾರೆ. ಹಾಗೆಯೇ ದಾವಣಗೆರೆಗೂ ಬಂದು ಪ್ರಚಾರ ಮಾಡಿ ಹೋಗಿದ್ದಾರೆ. ಜಮೀರ್ ಪಕ್ಷದ ಸಿಪಾಯಿಯಾಗಿದ್ದು, ಕಾಂಗ್ರೆಸ್ ಪರವಾಗಿ ಮತದಾರರಿಗೆ, ಕಾರ್ಯಕರ್ತರಿಗೆ ಸ್ಪಷ್ಟ ಸಂದೇಶ ನೀಡಿದ್ದಾರೆ ಎಂದು ಅವರು ಸಮರ್ಥಿಸಿಕೊಂಡರು.

ಸಿದ್ದರಾಮಯ್ಯ ಇನ್ನೂ 2 ವರ್ಷ ಸಿಎಂ: ಪರಂ

ಮೈಸೂರು: ಇನ್ನೂ ಎರಡು ವರ್ಷಗಳ ಕಾಲ ಸಿದ್ದರಾಮಯ್ಯನವರೇ ಸಿಎಂ ಆಗಿ ಮುಂದುವರಿ ಯಲಿದ್ದಾರೆ. 5 ವರ್ಷಗಳ ಅಧಿಕಾರದ ಅವಧಿಯನ್ನು ಪೂರ್ಣಗೊಳಿಸಲಿದ್ದಾರೆ ಎಂದು ಗೃಹ ಸಚಿವ ಪರಮೇಶ್ವರ್ ಹೇಳಿದರು.



ಸೋಮವಾರ ಖಾಸಗಿ ಕಾರ್ಯಕ್ರಮಕ್ಕಾಗಿ ಮೈಸೂರಿಗೆ ಆಗಮಿಸಿದ್ದ ಸುದ್ದಿಗಾರರೊಂದಿಗೆ ಮಾತನಾಡಿ, ಈಗ ಸಿದ್ದರಾಮಯ್ಯನವರು ಸಿಎಂ ಆಗಿದ್ದಾರೆ. ಇನ್ನೂ 2 ವರ್ಷ ಅವರೇ ಮುಖ್ಯಮಂತ್ರಿಯಾಗಿ ಇರುತ್ತಾರೆ. 2013ರಲ್ಲಿ ಸಿದ್ದರಾಮಯ್ಯ 5 ವರ್ಷ ಸಿಎಂ ಎಂದು ಹೈಕಮಾಂಡ್ ಘೋಷಣೆ ಮಾಡಿರಲಿಲ್ಲ. ಆದರೂ ಅವರು 5 ವರ್ಷ ಸಿಎಂ ಆಗಿದ್ದರು. 2023ರಲ್ಲಿ ಸಿದ್ದರಾಮಯ್ಯ ಸಿಎಂ ಎಂದು ಹೈಕಮಾಂಡ್ ಘೋಷಣೆ ಮಾಡಿತ್ತು. ಅದರ ಅಧಿಕಾರದ ಅವಧಿ 2028,. ಅದನ್ನ ಮುಗಿಸಬೇಕು ತಾನೇ. ಹೈಕಮಾಂಡ್ ನೀವೇ 5 ವರ್ಷ ಸಿಎಂ ಎಂದು ಪ್ರತ್ಯೇಕವಾಗಿ ಸಿದ್ದರಾಮಯ್ಯನವರಿಗೆ ಸ್ಪಷ್ಟೀಕರಣ ಕೊಡುವ ಅವಶ್ಯಕತೆ ಇಲ್ಲ. ಹೈಕಮಾಂಡ್ ಯಾವ ಗೊಂದಲಗಳನ್ನ ಸೃಷ್ಟಿ ಮಾಡಿಲ್ಲ. ಯಾರು ಏನೇ ಹೇಳಿದರು ಅದು ಮುಖ್ಯ ಅಲ್ಲ.

ಹೈಕಮಾಂಡ್ ಯಾವತ್ತಾದರೂ ಸಿದ್ದರಾಮಯ್ಯ ಅವಧಿ ಇಷ್ಟು ಎಂದು ಹೇಳಿದ್ಯಾ? ಯಾವತ್ತಾದರೂ ಬದಲಾವಣೆ ಬಗ್ಗೆ ಮಾತನಾಡಿದ್ದಾರಾ?. ಅದರ ಅರ್ಥ ಆ ರೀತಿಯ ಯಾವ ಬೆಳವಣಿಗೆ ಇಲ್ಲ ಎಂದು. ಸಿಎಂ ಸ್ಥಾನ ಬದಲಾವಣೆ ಮಾಡಬೇಕಾಗಿರುವುದು ಹೈಕಮಾಂಡ್. ಅಲ್ಲಿಯವರೆಗೆ ಯಾರು ಏನೇ ಮಾತನಾಡಿದರೂ, ಅದು ಅವರ ವೈಯಕ್ತಿಕ ಹೇಳಿಕೆಯ ಅಭಿಪ್ರಾಯವಷ್ಟೇ. ಅಭಿಮಾನಿಗಳು ಸಾಮಾನ್ಯವಾಗಿ ಅವರ ನಾಯಕರು ಸಿಎಂ ಆಗಲೆಂದು ಆಸೆಪಡುತ್ತಾರೆ. ಸದ್ಯ ಸಿಎಂ ಹುದ್ದೆ ಖಾಲಿ ಇಲ್ಲ ಎಂದರು.

ಎಲ್ಲಾ ಶಾಸಕರು ಸಿಎಂ ಸ್ಥಾನಕ್ಕೆ ಅರ್ಹರು

ಡಿ.ಕೆ.ಶಿವಕುಮಾರ್ ಕೆಪಿಸಿಸಿ ಅಧ್ಯಕ್ಷರಾಗಿದ್ದಾರೆ, ಡಿಸಿಎಂ ಆಗಿದ್ದಾರೆ. ಅವರು ನಮ್ಮ ನಾಯಕರು. ಅವರಿಗೆ ಯಾವ ಸಮಸ್ಯೆಯೂ ಆಗಿಲ್ಲ. ಸಿಎಂ ಸಿದ್ದರಾಮಯ್ಯನವರೇ ವಿಧಾನಸಭೆಯಲ್ಲೇ ನಮ್ಮ ಎಲ್ಲಾ ಶಾಸಕರು ಸಿಎಂ ಸ್ಥಾನಕ್ಕೆ ಅರ್ಹರು ಎಂದು ಹೇಳಿದ್ದಾರೆ. ಅದರಲ್ಲಿ ನಾನು ಅರ್ಹ, ಇನ್ನೊಬ್ಬರು ಎಂಬ ಪ್ರಶ್ನೆಯೇ ಬರುವುದಿಲ್ಲ ಎಂದರು. 2 ವಿಧಾನ ಸಭಾ ಕ್ಷೇತ್ರಗಳಿಗೆ ನಡೆಯುತ್ತಿರುವ ಉಪಚುನಾವಣೆಯ ಫಲಿತಾಂಶಕ್ಕೂ ಬೇರೆ ವಿಚಾರಕ್ಕೆ ಸಂಬಂಧವೇ ಇಲ್ಲ. ಈ ಉಪಚುನಾವಣೆ ಫಲಿತಾಂಶ ರಾಜ್ಯ ರಾಜಕೀಯದ ದಿಕ್ಸೂಚಿ ಅಲ್ಲ. ಉಪಚುನಾವಣೆಯ ಫಲಿತಾಂಶ ರಾಜ್ಯ ಸರ್ಕಾರಕ್ಕೆ ನೀಡುವ ಮಾರ್ಕ್ಸ್ ಕೂಡ ಅಲ್ಲ. ಅದರ ಫಲಿತಾಂಶದ ಮೇಲೆ ಯಾವ ಬದಲಾವಣೆಯೂ ಆಗುವುದಿಲ್ಲ ಎಂದರು.

ಕೈಗೆ ಸೋಲುವ ಭಯ: ಅಶೋಕ

ಬೆಂಗಳೂರು: ದಾವಣಗೆರೆ ದಕ್ಷಿಣ, ಬಾಗಲಕೋಟೆ ಉಪ ಚುನಾವಣೆಯಲ್ಲಿ ಬಿಜೆಪಿಗೆ ದೊಡ್ಡ ಅಂತರದ ಗೆಲುವು ಸಿಗಲಿದೆ. ಕಾಂಗ್ರೆಸ್‌ಗೆ ಎರಡೂ ಕಡೆ ಸಮಸ್ಯೆಗಳಿವೆ. ದಾವಣಗೆರೆಯಲ್ಲಿ ಮುಸ್ಲಿಮರು ಮತ ಹಾಕುವುದಿಲ್ಲ ಎನ್ನುತ್ತಿದ್ದಾರೆಂದು ಪ್ರತಿಪಕ್ಷದ ನಾಯಕ ಆರ್. ಅಶೋಕ ತಿಳಿಸಿದರು.



ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸೋಲುವ ಸುಳಿವು ಸಿಕ್ಕ ಕೂಡಲೇ ಕೇರಳಕ್ಕೆ ಹೋದ ಮುಖ್ಯಮಂತ್ರಿ ಬಾಗಲಕೋಟೆಗೆ ದೌಡಾಯಿಸಿದ್ದಾರೆ ಎಂದರು.

ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಭಿವೃದ್ಧಿ ಮಾಡಿದ್ದರೆ, ಗ್ಯಾರಂಟಿಗಳನ್ನು ಸರಿಯಾಗಿ ಕೊಟ್ಟಿದ್ದರೆ ಇಷ್ಟು ಕಷ್ಟ ಯಾಕೆ ಪಡಬೇಕಿತ್ತು? ಇವರು ಅಭಿವೃದ್ಧಿ ಮಾಡಿದ್ದರೆ ಜನರೇ ಹತ್ತಿರ ಬಂದು ನಿಮಗೆ ಮತ ಹಾಕುತ್ತೇವೆ ಎನ್ನುತ್ತಿದ್ದರು. ಆದರೆ ಹಾಗೆ ಇಲ್ಲ, ಕಳೆದ ಮೂರು ವರ್ಷಗಳಿಂದ ರಾಜ್ಯದಲ್ಲಿ ಅಭಿವೃದ್ಧಿ ಏನೂ ಆಗಿಲ್ಲ. ಅಭಿವೃದ್ಧಿ ಶೂನ್ಯವಾಗಿದೆ. ಸಾಲಗಾರರ ರಾಜ್ಯವನ್ನಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾಡಿದರು. ಅಭಿವೃದ್ಧಿ ಹೋಗಲಿ; ಗ್ಯಾರಂಟಿ ಸಹ ಸರಿಯಾಗಿ ಕೊಡಲಿಲ್ಲ. ಅನ್ನಭಾಗ್ಯವನ್ನು ಕನ್ನಭಾಗ್ಯ ಮಾಡಿದ್ದಾರೆ. ಕಾಂಗ್ರೆಸ್ ಅಭಿವೃದ್ಧಿ ವಿರೋಧಿ ಆಗಿರುವುದಿಂದ ಜನರೇ ಪಾಠ ಕಲಿಸಲಿದ್ದಾರೆ ಎಂದು ವಿಶ್ಲೇಷಿಸಿದರು.

ಎರಡೂ ಕಡೆ ಕಾಂಗ್ರೆಸ್‌ನವರೇ ಬಂದು ಒಳಗೊಳಗೆ ಬಿಜೆಪಿ ಪರ ಪ್ರಚಾರ ಮಾಡುತ್ತಿದ್ದಾರೆ. ದಾವಣಗೆರೆಯಲ್ಲಿ ಬಡವರನ್ನು ಗೆಲ್ಲಿಸಿ ಎಂದು ಸಿದ್ದರಾಮಯ್ಯ ಹೇಳಿದ್ದಾರೆ. ದಾವಣಗೆರೆಯ ಬಿಜೆಪಿ ಅಭ್ಯರ್ಥಿ ಬಡವರು. ಆದ್ದರಿಂದ ಸಿದ್ದರಾಮಯ್ಯ ಸಹ ನಮ್ಮ ಪರ ಪ್ರಚಾರ ಮಾಡಿದ್ದಾರೆ ಎಂದು ಹೇಳಿದರು.

ಇಡೀ ವಿಶ್ವಕ್ಕೆ ಅಡುಗೆ ಅನಿಲ ಸಮಸ್ಯೆ

ಅಡುಗೆ ಅನಿಲ ಸಮಸ್ಯೆ ಇಡೀ ದೇಶಕ್ಕೆ ಆಗಿದೆ. ನಮ್ಮ ದೇಶದಲ್ಲಿ ಮಾತ್ರವಲ್ಲ. ರಾಹುಲ್ ಗಾಂಧಿ ಅವರು ಮೆಚ್ಚುವ ದೇಶ ಪಾಕಿಸ್ತಾನದಲ್ಲಿ ಪೆಟ್ರೋಲ್ 500 ರೂ. ಆಗಿದೆ. ಇದೆಲ್ಲ ತಿಳಿಯದ ಡಿ.ಕೆ. ಶಿವಕುಮಾರ್ ಅವರು ಗ್ಯಾಸ್ ಸಮಸ್ಯೆಗೆ ಪ್ರಧಾನಿ ಮೋದಿ ಕಾರಣ ಎಂದು ಟೀಕೆ ಮಾಡುತ್ತಾರೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.
ಕೊಲ್ಲಿ ರಾಷ್ಟ್ರಗಳಲ್ಲಿ ಯುದ್ಧ ಇದ್ದರೂ ಇರಾನ್ ಜೊತೆ ಮಾತನಾಡಿ ಹಡಗುಗಳು ಭಾರತಕ್ಕೆ ಬರುವಂತೆ ಪ್ರಧಾನಿ ಮೋದಿ ಮಾಡಿದ್ದಾರೆ. ಹರ್ಮುಜ್ ಜಲಸಂಧಿಯಿಂದ ಸಮಸ್ಯೆಯಾಗಿದೆ. ಬೇರೆ ದೇಶದ ಹಡಗುಗಳಿಗೆ ಬಿಡುತ್ತಿಲ್ಲ. ಆದರೆ, ಭಾರತದ ಹಡಗುಗಳಿಗೆ ಅನುಮತಿ ನೀಡಿದ್ದಾರೆ. ಇದು ಕೇಂದ್ರ ಸರ್ಕಾರದ ಪ್ರಯತ್ನದಿಂದ ಸಾಧ್ಯವಾಗಿದೆ. ಇಷ್ಟೆಲ್ಲ ಆದರೂ ಡಿ.ಕೆ. ಶಿವಕುಮಾರ್ ಮತ್ತು ಸಿದ್ದರಾಮಯ್ಯ ಅವರು ಬೆಂಕಿ ಹಚ್ಚಲು ಕಾಯುತ್ತಿದ್ದಾರೆ ಎಂದರು.

ಡ್ರಗ್ಸ್ ಮುಕ್ತ ಭಾರತಕ್ಕಾಗಿ ಸಂಕಲ್ಪ ತೊಡಿ



ಕಲಬುರಗಿ: ಸಮಾಜದ ಬಲವರ್ಧನೆಗಾಗಿ ಕುಟುಂಬ ವ್ಯವಸ್ಥೆಗೂ ಮಹತ್ವ ನೀಡಬೇಕಿದ್ದು, ಪ್ರತಿಯೊಬ್ಬ ಹಿಂದು ಕನಿಷ್ಠ ಮೂರು ಮಕ್ಕಳನ್ನು ಹೊಂದಬೇಕು ಎಂದು ವಿಶ್ವ ಹಿಂದು ಪರಿಷತ್ತಿನ ಕೇಂದ್ರೀಯ ಸಂಘಟನಾ ಮಹಾಮಂತ್ರಿ ಮಿಲಿಂದ್ ಪರಾಂಡೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

ವಿಶ್ವ ಹಿಂದು ಪರಿಷತ್ ಕಲಬುರಗಿ ಗ್ರಾಮಾಂತರ ಜಿಲ್ಲಾ ಘಟಕದ ವತಿಯಿಂದ ನಗರದ ಹೈದರಾಬಾದ್ ಕರ್ನಾಟಕ ಶಿಕ್ಷಣ ಸಂಸ್ಥೆಯ ಸ್ಯಾಕ್ ಆಡಿಟೋರಿಯಂನಲ್ಲಿ ನೂರು ಸಮಿತಿಗಳ ಉದ್ಘಾಟನೆ ಹಾಗೂ ಕಾರ್ಯಕರ್ತರ ಅಭ್ಯಾಸ ವರ್ಗ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಎಲ್ಲ ಹಿಂದು ನಮ್ಮವರು ಎಂಬ ಭಾವನೆ ಪ್ರತಿಯೊಬ್ಬರಲ್ಲಿ ಬಲವಾಗಿರಬೇಕು. ಧರ್ಮೋ ರಕ್ಷತಿ ರಕ್ಷಿತಃ ಎಂಬ ಸಂಕಲ್ಪ ನಮ್ಮದಾಗಿರಬೇಕು ಎಂದು ಹೇಳಿದ ಅವರು, ಕನ್ಯಾ ಭ್ರೂಣ ಹತ್ಯೆ ನಿರ್ಮೂಲನೆಗೆ ಎಲ್ಲರೂ ಪಣ ತೊಡಬೇಕು ಎಂದು ಕರೆ ನೀಡಿದರು.

ಇಂದಿನ ಯುವ ಪೀಳಿಗೆಗೆ ನಶಾ ಮುಕ್ತ ಭಾರತ ನಿರ್ಮಾಣಕ್ಕಾಗಿ ಕಾರ್ಯಕರ್ತರು ಸಮಾಜದಲ್ಲಿ ಜಾಗೃತಿ ಅಭಿಯಾನಗಳನ್ನು ಹಮ್ಮಿಕೊಳ್ಳಬೇಕು. ವರದಕ್ಷಿಣೆ ನಿರ್ಮೂಲನೆಗೆ ಯುವಕರು ಮುಂದಾಗಬೇಕು. ಸಮಾಜದಲ್ಲಿ ಉತ್ತಮ ಮೌಲ್ಯ ಬೆಳೆಸುವಲ್ಲಿ ಕಾರ್ಯಕರ್ತರ ಪಾತ್ರ ಮಹತ್ವದಾಗಿದ್ದು, ಎಲ್ಲವನ್ನೂ ಪೂಜಿಸುವ ಮೂಲಕ ನಾವು ಬೇರೆ ಸಮಾಜದವರನ್ನೂ ಗೌರವದಿಂದ ಕಾಣಬೇಕು ಎಂದರು.

> **ಇಂದಿನ ವರ್ತನೆ ಸುಧಾರಿಸಿದರೆ ಭವಿಷ್ಯವೂ ಉತ್ತಮವಾಗುತ್ತದೆ. ಸಂಘಟಿತ ಸಮಾಜವೇ ಶಕ್ತಿಯ ಮೂಲವಾಗಿದ್ದು, ದೇಶ, ಧರ್ಮ ಸಂಸ್ಕೃತಿಯ ಉಳಿವಿಗಾಗಿ ಹಿಂದೂ ಸದಾ ಸಾಮಾಜಿಕ ಕಾರ್ಯದಲ್ಲಿ ಹಾಗೂ ರಾಷ್ಟ್ರ ಜಾಗೃತಿಯ ಕಾರ್ಯದಲ್ಲಿ ಸದಾ ಮುಂಚೂಣಿಯಲ್ಲಿರುವ ಸಾಹಸ ಮಾಡಬೇಕು.**
> ■ ಮಿಲಿಂದ್ ಪರಾಂಡೆ, ಕೇಂದ್ರೀಯ ಸಂಘಟನಾ ಮಹಾಮಂತ್ರಿ, ವಿಶ್ವ ಹಿಂದು ಪರಿಷತ್

ಚಿಕಿತ್ಸೆಗೆ ವಿನಾಯಿತಿ

ಬೆಂಗಳೂರು: ಚಿಕ್ಕಬಳ್ಳಾಪುರದ ಶ್ರೀ ಸತ್ಯಸಾಯಿ ಸರಳ ಮೆಮೋರಿಯಲ್ ಆಸ್ಪತ್ರೆ, ವಿಜಯಪುರದ ಎಂ.ಬಿ. ಪಾಟೀಲ್ ಮೆಡಿಕಲ್ ಕಾಲೇಜ್ ಆಸ್ಪತ್ರೆ ರಿಸರ್ಚ್ ಸೆಂಟರ್‌ನಿಂದ ಆಯುಷ್ಮಾನ್ ಭಾರತ-ಆರೋಗ್ಯ ಕರ್ನಾಟಕ ಯೋಜನೆಯಲ್ಲಿ ಇನ್ನೂ ಒಂದು ವರ್ಷದ ಅವಧಿಗೆ ಪ್ರಾಯೋಗಿಕ ಆಧಾರದ ಮೇಲೆ 2ಬಿ ಚಿಕಿತ್ಸಾ ವಿಧಾನಗಳು ಹಾಗೂ 3ಎ ಚಿಕಿತ್ಸಾ ವಿಧಾನಗಳಿಗೆ ಸರ್ಕಾರಿ ಆಸ್ಪತ್ರೆಗಳ ಶಿಫಾರಸ್ಸುಗಳು ಇಲ್ಲದೇ ನೇರವಾಗಿ ಚಿಕಿತ್ಸೆ ನೀಡಲು ಅನುಕೂಲವಾಗುವಂತೆ ವಿನಾಯಿತಿ ಮುಂದುವರೆಸಿ ಸರ್ಕಾರ ಆದೇಶಿಸಿದೆ.

ಈ 2ಬಿ, 3ಎ ಚಿಕಿತ್ಸಾ ವಿಧಾನಗಳ ರೆಫರಲ್ ವಿನಾಯಿತಿಯು ಪ್ರಾಯೋಗಿಕವಾಗಿ ಒಂದು ವರ್ಷದ ಅವಧಿಯ ನಂತರ ಈ ಪ್ರಾಯೋಗಿಕ ಯೋಜನೆ ವಾಸ್ತವಾಂಶಗಳೊಂದಿಗೆ ಮುಂದಿನ ನಿರ್ಧಾರಕ್ಕಾಗಿ ಸರ್ಕಾರಕ್ಕೆ ಸಲ್ಲಿಸಬೇಕು ಎಂದು ಸೂಚಿಸಿದೆ. 2ಬಿ, 3ಎ ಚಿಕಿತ್ಸಾ, 4ಎ ಚಿಕಿತ್ಸಾ ವಿಧಾನ ಗಳ ಪೈಕಿ ಸಮಾನಾಂತರ ವಿಧಾನಗಳಿಗೆ ಯಾವ ಕಡಿಮೆ ದರ ಇರುವುದೋ ಅದನ್ನು ಪಾವತಿಸಲಾಗುತ್ತದೆ ಎಂದು ಆರೋಗ್ಯ ಇಲಾಖೆಯ ಸರ್ಕಾರದ ಅಧೀನ ಕಾರ್ಯದರ್ಶಿಗಳು ತಿಳಿಸಿದ್ದಾರೆ.

ಕೋಟ್ಯಂತರ ಕಾರ್ಡ್‌ದಾರರಿಗೆ ಸಿಗದ ಪಡಿತರ | ತಿಂಗಳಿಗೆ 4.34 ಲಕ್ಷ ಮೆಟ್ರಿಕ್ ಟನ್ ಆಹಾರ ಪೂರೈಕೆ


ನ್ಯಾಯಬೆಲೆ ಅಂಗಡಿ ವರ್ತಕರಿಂದ ಹಗಲು ದರೋಡೆ

▸ ನಂದಿನಿ ಎನ್.

ದಿಗಂತ ವಿಶೇಷ

ಬೆಂಗಳೂರು: ಕೇಂದ್ರ ಮತ್ತು ರಾಜ್ಯ ಸರ್ಕಾರವು ಸಾವಿರಾರು ಕೋಟಿ ರೂ. ಹಣ ಭರಿಸಿ, ಬಡವರಿಗೆ ಉಚಿತವಾಗಿ ರೇಷನ್ ನೀಡುತ್ತಿದೆ. ಆದರೆ, ರಾಜ್ಯದಲ್ಲಿ ಕೋಟ್ಯಂತರ ಕಾರ್ಡ್‌ದಾರರ ಪಾಲಿಗೆ ಸೇರಬೇಕಿದ್ದ ಪಡಿತರ ಕೊಡದೆ ನ್ಯಾಯಬೆಲೆ ಅಂಗಡಿ ವರ್ತಕರು ಹಗಲು ದರೋಡೆ ಮಾಡುತ್ತಿದ್ದಾರೆ.

ರಾಜ್ಯದಲ್ಲಿ 1.28 ಕೋಟಿ ಬಿಪಿಎಲ್, 10.80 ಲಕ್ಷ ಅಂತ್ಯೋದಯ ಕಾರ್ಡ್ (ಎಎವೈ)ಗಳಿಂದ ಒಟ್ಟಾರೆ 4.11 ಕೋಟಿ ಫಲಾನುಭವಿಗಳಿದ್ದಾರೆ. ಪ್ರತಿ ತಿಂಗಳು 4.34 ಲಕ್ಷ ಮೆಟ್ರಿಕ್ ಟನ್ ಆಹಾರ ಪದಾರ್ಥಗಳನ್ನು ಕಾರ್ಡ್‌ದಾರರಿಗೆ ವಿತರಿಸಬೇಕು. ಕೇಂದ್ರ ಸರ್ಕಾರದ ಪ್ರಧಾನಮಂತ್ರಿ ಗರೀಬ್ ಕಲ್ಯಾಣ ಅನ್ನ ಹಾಗೂ ರಾಜ್ಯ ಸರ್ಕಾರದ ಅನ್ನಭಾಗ್ಯ ಯೋಜನೆ ಅಡಿಯಲ್ಲಿ ತಲಾ 5 ಕೆ.ಜಿ ಸೇರಿ ಒಟ್ಟು 10 ಕೆ.ಜಿ ಅಕ್ಕಿ ಹಾಗೂ ರಾಗಿಯನ್ನು ಬಿಪಿಎಲ್ ಹೊಂದಿರುವ ಪ್ರತಿ ಸದಸ್ಯರಿಗೂ ವರ್ತಕರು, ಪ್ರತಿ ತಿಂಗಳು ಉಚಿತವಾಗಿ ನೀಡಬೇಕು.



ಅಂತ್ಯೋದಯ ಕಾರ್ಡ್‌ಗೆ 20 ಕೆ.ಜಿ ಅಕ್ಕಿ, 15 ಕೆ.ಜಿ ರಾಗಿ ಸೇರಿ ಒಟ್ಟು 35 ಕೆ.ಜಿ ನೀಡಬೇಕು. ಪ್ರತಿ ತಿಂಗಳು 1ನೇ ತಾರೀಖಿನಿಂದ ಸಗಟು ಮಳಿಗೆಗಳಿಂದ ಎತ್ತುವಳಿ ಮಾಡುವ ನ್ಯಾಯಬೆಲೆ ಅಂಗಡಿಗಳು, ಆಯಾ ತಿಂಗಳಿನ 5ನೇ ತಾರೀಖಿನಿಂದ ಕಾರ್ಡ್‌ದಾರರಿಗೆ ಪಡಿತರ ಹಂಚಿಕೆ ಪ್ರಾರಂಭ ಮಾಡುತ್ತಾರೆ. ಈ ವೇಳೆ ರೇಷನ್ ಕಾರ್ಡ್ ಸಂಖ್ಯೆಯನ್ನು ನಮೂದಿಸಿ, ಕಾರ್ಡ್‌ದಾರರ ಬೆರಳಚ್ಚು ಪಡೆದು ಪಡಿತರ ನೀಡಲಾಗುತ್ತಿದೆ. ಆದರೆ, ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆ ಪ್ರಕಾರ 2 ಯೋಜನೆಗಳಿಂದ ಬಿಪಿಎಲ್ ಹೊಂದಿರುವ ಪ್ರತಿ ಫಲಾನುಭವಿಗೆ 10 ಕೆ.ಜಿ ಬದಲಾಗಿ 5 ಕೆ.ಜಿ ಆಹಾರ ಪದಾರ್ಥ ಕೊಡುವ ಮಾಲೀಕರು, ಉಳಿದ ಅಕ್ಕಿಯನ್ನು ಕಾಳಸಂತೆಯಲ್ಲಿ ದಂಧೆಕೋರರಿಗೆ ಮಾರಾಟ ಮಾಡುವ ಮೂಲಕ ಮಾಲೀಕರು, ಲಕ್ಷಾಂತರ ರೂ. ಹಣವನ್ನು ಗಳಿಸುತ್ತಿದ್ದಾರೆ.

ವಲಸಿಗರಿಗೆ ಸಿಗುತ್ತಿಲ್ಲ ಆಹಾರ ಪದಾರ್ಥ: ಒನ್ ನೇಷನ್ ಒನ್ ಕಾರ್ಡ್ ಯೋಜನೆಯನ್ನು ರಾಜ್ಯದಲ್ಲಿ ಅನುಷ್ಠಾನಕ್ಕೆ ತರಲಾಗಿದೆ. ಯೋಜನೆಯ ಅಡಿ ಕೂಲಿ ಕೆಲಸಕ್ಕಾಗಿ ಊರು ಬಿಟ್ಟು ನಗರ ಪ್ರದೇಶಗಳಿಗೆ ಅಥವಾ ಬೇರೆ ಜಿಲ್ಲೆಗಳಿಗೆ ಗುಳೆ ಹೋಗುವ ಕಾರ್ಮಿಕರಿಗೆ, ಮನೆಗೆಲಸದವರು ಸೇರಿ ವಲಸಿಗರು ರೇಷನ್ ಪಡೆಯಬಹುದು. ರಾಜ್ಯದಲ್ಲಿ ಸರಾಸರಿ 5 ರಿಂದ 6 ಲಕ್ಷ ವಲಸಿಗರು ರೇಷನ್ ಪಡೆಯಲು ಒಂದು ಅಂಗಡಿಯಿಂದ ಮತ್ತೊಂದು ಅಂಗಡಿಗೆ ಅಲೆದಾಡಬೇಕಿದೆ.

ರೇಷನ್ ಸಾಗಾಟ

ನ್ಯಾಯಬೆಲೆ ಅಂಗಡಿ ಮಾಲೀಕರು ರೇಷನ್ ವಿತರಣೆ ವೇಳೆ ತೂಕದಲ್ಲಿ ಮೋಸ ಮಾಡಿದರೆ, ಅಕ್ಕಿ ಗಿರಣಿ ಮಾಲೀಕರು ಕಾಳಸಂತೆಯಲ್ಲಿ ಅಕ್ರಮವಾಗಿ ಅಕ್ಕಿ ಖರೀದಿಸಿ ಪಾಲಿಶ್, ಸಾರ್ಟೆಕ್ಸ್ ಮಾಡಿ ವಿವಿಧ ಬ್ರಾಂಡ್ ಹೆಸರಿನಲ್ಲಿ ಪ್ಯಾಕಿಂಗ್ ಮಾಡಿ ಮಾರುಕಟ್ಟೆಯಲ್ಲಿ ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿದ್ದಾರೆ. ಕೆಲ ಸಂದರ್ಭದಲ್ಲಿ ಗೋದಾಮುಗಳಿಂದ ಪಡಿತರ ಸಾಗಾಣೆ ಮಾಡುವ ವೇಳೆ ಟೆಂಡರ್‌ನಲ್ಲಿ ನೋಂದಾಯಿಸದೆ ಇರುವ ವಾಹನಗಳಲ್ಲಿ ಅಪಾರ ಪ್ರಮಾಣದಲ್ಲಿ ರೇಷನ್ ಸಾಗಿಸಲಾಗುತ್ತಿದೆ ಎಂದು ಆರೋಪ ಕೇಳಿಬಂದಿದೆ.

> **ಕೆಲವೊಮ್ಮೆ ಅಕ್ಕಿ ಕೊಟ್ಟರೆ ರಾಗಿ ಕೊಡುವುದಿಲ್ಲ. ರಾಗಿ ಕೊಟ್ಟರೆ ಅಕ್ಕಿ ಕೊಡುವುದಿಲ್ಲ. ನ್ಯಾಯಬೆಲೆ ಅಂಗಡಿ ಮಾಲೀಕರನ್ನು ಪ್ರಶ್ನಿಸಿದರೆ ಕಾರ್ಡ್ ರದ್ದು ಮಾಡುವುದಾಗಿ ಬೆದರಿಕೆ ಹಾಕುತ್ತಾರೆ. ಹಾಗಾಗಿ, ಅನಿವಾರ್ಯವಾಗಿ ವರ್ತಕರು ಎಷ್ಟು ಅಕ್ಕಿ ಕೊಡುತ್ತಾರೋ ಅಷ್ಟನ್ನೂ ಮಾತ್ರ ಮನೆಗೆ ತೆಗೆದುಕೊಂಡು ಹೋಗುತ್ತೇವೆ.**
> ■ ಪ್ರಕಾಶ್ ಎಸ್., ಬಿಪಿಎಲ್ ಕಾರ್ಡ್‌ದಾರ

ಏ.20ರಿಂದ ಮಕ್ಕಳಿಗಾಗಿ ಸ್ಟಾಪ್ ಮೋಷನ್ ಅನಿಮೇಷನ್ ಶಿಬಿರ

ಬೆಂಗಳೂರು: ಪರಮ್ ಫೌಂಡೇಶನ್ ವತಿಯಿಂದ 11 ರಿಂದ 16 ವರ್ಷ ವಯಸ್ಸಿನ ಮಕ್ಕಳಿಗಾಗಿ ಹಳೆಯ ನೀತಿಕಥೆಗಳಿಗೆ ಆಧುನಿಕ ಸಮಾಜದ ಸವಾಲುಗಳನ್ನು ಬೆರೆಸಿ, ಕಿರುಚಿತ್ರ ತಯಾರಿಸುವ ವಿನೂತನ ಸ್ಟಾಪ್ ಮೋಷನ್ ಅನಿಮೇಷನ್ ಶಿಬಿರವನ್ನು ಏ.20ರಿಂದ ಮೇ 8ರವರೆಗೆ ಆಯೋಜಿಸಲಾಗಿದೆ.

ಶಿಬಿರವು ಸೋಮವಾರದಿಂದ ಶುಕ್ರವಾರದವರೆಗೆ ಬೆಳಗ್ಗೆ 10ರಿಂದ ಸಂಜೆ 5 ಗಂಟೆವರೆಗೆ (ತಜ್ಞರ ಸೆಷನ್ ಬೆಳಗ್ಗೆ 11 ರಿಂದ 12 ಗಂಟೆವರೆಗೆ) ಜಯನಗರದ ಪರಮ್ ಸೈನ್ಸ್ ಎಕ್ಸ್‌ಪೀರಿನ್ಸ್ ಸೆಂಟರ್‌ನಲ್ಲಿ ನಡೆಯಲಿದೆ.

ಈ ಶಿಬಿರದಲ್ಲಿ ಸಂಗೀತಗಾರ ರಘು ದೀಕ್ಷಿತ್ ತಮ್ಮ ವಿಶಿಷ್ಟ ಸಂಗೀತದ ಮೂಲಕ ಸಿನಿಮಾದಲ್ಲಿ ಭಾವನೆಗಳನ್ನು ತುಂಬುವ ಕಲೆ ಕಲಿಸಲಿದ್ದಾರೆ. ಸಂಗೀತ ಗಾಯಕಿ ಎಂ.ಡಿ. ಪಲ್ಲವಿ ಮತ್ತು ಶ್ವೇತಾ ಕಥೆಯ ಪಾತ್ರಗಳಿಗೆ ಜೀವ ತುಂಬುವ ಧ್ವನಿ ಸಂಯೋಜನೆ ಕುರಿತು ತರಬೇತಿ ನೀಡಲಿದ್ದಾರೆ. ಗೀತ ರಚನೆಕಾರ ಕಾರ್ತಿಕ್ ಸರಗೂರು ದೃಶ್ಯಕಾವ್ಯವನ್ನು ಕಟ್ಟಿಕೊಡುವ ಪರಿ ಹಾಗೂ ಇತಿಹಾಸದ ಮಹತ್ವ ವಿವರಿಸಲಿದ್ದಾರೆ.

ಚಿತ್ರಕಥೆಗಾರ ಸಿದ್ಧಾರ್ಥ್ ಭರತ್ ಮಕ್ಕಳಿಗೆ ಅನಿಮೇಷನ್‌ನಲ್ಲಿ ವಿಜ್ಞಾನದ ಆವಿಷ್ಕಾರಗಳನ್ನು ಹೇಗೆ ಅಳವಡಿಸಬಹುದು ಎಂಬ ವಿಭಿನ್ನ ನೋಟ ನೀಡಲಿದ್ದಾರೆ. ಅಮೆರಿಕದ ರಾಷ್ಟ್ರೀಯ ಅನಿಮೇಷನ್ ವಸ್ತುಸಂಗ್ರಹಾಲಯದ ರಾಬಿನ್ ಸ್ಟ್ಯಾಪ್ಲಿ ಅವರು ಶಿಬಿರದಲ್ಲಿ ಭಾಗಿಯಾಗಲಿದ್ದಾರೆ.

ಮೇ 9ರಂದು ನಡೆಯಲಿರುವ ಗ್ರ್ಯಾಂಡ್ ಶೋಕೇಸ್‌ನಲ್ಲಿ ಪೋಷಕರು, ಪ್ರೇಕ್ಷಕರ ಸಮ್ಮುಖದಲ್ಲಿ ಮಕ್ಕಳೇ ಸಿದ್ಧಪಡಿಸಿದ ಈ ಅದ್ಭುತ ಕಿರುಚಿತ್ರಗಳನ್ನು ಪ್ರದರ್ಶಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ Paramfoundation.org ಹಾಗೂ ಮೊಬೈಲ್ 84312 66867 ಸಂಖ್ಯೆಗೆ ಸಂಪರ್ಕಿಸಬಹುದಾಗಿದೆ.

ಸಂಪಾದಕೀಯ

ಮರಳಿ ಚಂದ್ರನತ್ತ...

ಮಾನವನ ಈ ಸಣ್ಣ ಹೆಜ್ಜೆಯು ಮನುಕುಲದ ಪಾಲಿಗೆ ಬೃಹತ್ ನೆಗೆತ ಎಂಬುದಾಗಿ ನೀಲ್ ಆರ್ಮ್‌ಸ್ಟ್ರಾಂಗ್ ಚಂದ್ರನ ಮೇಲೆ ಮೊದಲ ಹೆಜ್ಜೆಯೂರಿದಾಗ ನುಡಿದಿದ್ದ. ಆದಾಗಿ ಈಗ ಅರ್ಧ ಶತಮಾನವೇ ಕಳೆದಿದೆ. ಚಂದ್ರನ ಮೇಲೆ ಹೆಜ್ಜೆಯೂರಲು ಭಾರೀ ಪೈಪೋಟಿ ನಡೆಸಿದ್ದ ಮಾನವ ಕೆಲವರ್ಷಗಳ ಬಳಿಕ ಚಂದ್ರನ ಕುರಿತು ಆಸಕ್ತಿ ಕಳಕೊಂಡು ಬಿಟ್ಟ. ಅದಕ್ಕೂ ಕಾರಣವಿತ್ತು.



ಅಂದು ಚಂದ್ರನೆಡೆಗೆ ನಡೆದ ಖಗೋಳಯಾನಗಳು ಅಮೆರಿಕ ಮತ್ತು ರಶ್ಯಾಗಳ ವ್ಯೋಮ ಸಾರ್ವಭೌಮತೆಯ ಕುರಿತಂತೆ ಉಂಟಾದ ಸ್ಪರ್ಧೆಯ ಕಾರಣದಿಂದಾಗಿತ್ತು. ಅಮೆರಿಕವು ರಶ್ಯಾದ ಮೇಲೆ ಮೇಲುಗೈ ಸಾಧಿಸಿದ್ದು ಸಾಬೀತಾದ ಮೇಲೆ ಆ ಕುರಿತಾದ ಆಸಕ್ತಿ ಮರೆಯಾಯಿತು. ಆದರೆ ಇತ್ತೀಚಿನ ವರ್ಷಗಳಲ್ಲಿ ಮತ್ತೆ ಚಂದ್ರನ ಕುರಿತಂತೆ ವಿಜ್ಞಾನಿ ಸಂಕುಲಕ್ಕೆ ಕುತೂಹಲ ಹೆಚ್ಚಿದೆ. ಆದರೆ ಈ ಬಾರಿಯದು ಸಂಶೋಧನಾತ್ಮಕ ಕುತೂಹಲ. ಚಂದ್ರನಲ್ಲಿ ಏನಿದೆ- ಏನಿಲ್ಲ, ಆತ ಮಾನವವಾಸಕ್ಕೆ ಯೋಗ್ಯನೇ ಅಲ್ಲವೇ ಎಂಬ ಕುತೂಹಲ. ಈ ಉದ್ದೇಶದಿಂದಲೇ ಈಗ ಅಮೆರಿಕದ ಆರ್ಟೆಮಿಸ್-2 ಎಂಬ ವ್ಯೋಮವಾಹನವು ನಾಲ್ವರು ಗಗನಯಾನಿಗಳನ್ನು ಹೊತ್ತು ಚಂದ್ರನತ್ತ ಹೊರಟಿರುವುದು. ಆ ಮೂಲಕ ಚಂದ್ರನತ್ತ ಮಾನವ ಸಹಿತ ಯಾತ್ರೆಯೊಂದು ಕಾರ್ಯಗತಗೊಂಡಿದೆ.

ಹಾಗೆಂದು ಈ ಚಂದ್ರಯಾನದಲ್ಲಿ ಚಂದ್ರನಲ್ಲಿ ಇಳಿಯುವ ಯೋಜನೆಯಿಲ್ಲ. ಏನಿದ್ದರೂ ವಾಹನದಲ್ಲಿದ್ದುಕೊಂಡೇ ಚಂದ್ರನನ್ನು ಸುತ್ತು ಬರುವುದು. ಚಂದ್ರನಿಗಿಂತಲೂ ಆಚೆ 6400 ಕೀ.ಮೀ. ದೂರ ಸಾಗಿ ಬರುವುದರಿಂದ ಮಾನವನು ಖಗೋಳದಲ್ಲಿ ಅತ್ಯಧಿಕ ದೂರ ಪ್ರಯಾಣಿಸಿದ ದಾಖಲೆ ನಿರ್ಮಿಸಲ್ಪಡಲಿದೆ. ಅಷ್ಟು ದೂರದ ಖಗೋಳ ಪಯಣವು ಮಾನವನ ಮೇಲೆ ಎಂತಹ ಪರಿಣಾಮ ಬೀರಬಲ್ಲುದು, ಮುಂದಕ್ಕೆ ಚಂದ್ರನಲ್ಲಿ ಮಾನವ ವಾಸ್ತವ್ಯ ನಿರ್ಮಿಸಲು ಸಹಕಾರಿಯಾದ ವಾತಾವರಣವಿದೆಯೆ ಮುಂತಾದ ವಿಚಾರಗಳು ಈ ಚಂದ್ರಯಾನದಿಂದ ಸಾಬೀತುಗೊಳ್ಳಲಿದೆ.

ಅಪೋಲೋ ಸರಣಿಯಲ್ಲಿ ಚಂದ್ರನತ್ತ ಸಾಗಿದ್ದವರೆಲ್ಲ ಮಿಲಿಟರಿ ಪೈಲಟ್‌ಗಳಾಗಿದ್ದರೆ, ಈಗ ಚಂದ್ರನತ್ತ ಹೊರಟಿರುವುದು ವೈಜ್ಞಾನಿಕ ಆಸಕ್ತಿಯುಳ್ಳ ಗಗನಯಾನಿಗಳು. ಅಲ್ಲಿಗೆ ಈಗಿನ ಚಂದ್ರಯಾನದ ಗುರಿಯೇ ಬೇರೆ ಎಂಬುದು ಸ್ಪಷ್ಟವಾಗುತ್ತದೆ. ಹಿಂದಿನದು ಸ್ಪರ್ಧಾತ್ಮಕ ಯಾತ್ರೆಗಳಾಗಿದ್ದರೆ ಈಗಿನದು ಪರಸ್ಪರ ಸಹಕಾರ ವೃದ್ಧಿಯ ಯಾತ್ರೆ. ಅಪೋಲೋ ಸರಣಿಯ ಯಾತ್ರೆಗಳು ಅಮೆರಿಕಕ್ಕಷ್ಟೇ ಸೀಮಿತವಾಗಿತ್ತು. ಈಗಿನದು ಅಂತಾರಾಷ್ಟ್ರೀಯ ಯೋಜನೆ ಎಂದೆನ್ನಬಹುದು. ಈ ಯಾನದಿಂದ ಸಿಗಲಿರುವ ಮಾಹಿತಿಗಳು ಎಲ್ಲಾ ದೇಶಗಳಿಗೂ ಉಪಯುಕ್ತವಾಗಲಿವೆ. ಒಟ್ಟಿನಲ್ಲಿ, ಚಂದ್ರ ಆಗಿನಿಂದ ಈಗಿನವರೆಗೆ ಬದಲಾಗದೆ ಉಳಿದಿದ್ದಾನೆ. ಆದರೆ ಚಂದ್ರನ ಕುರಿತಾದ ಮಾನವನ ಆಸಕ್ತಿ ಬದಲಾಗುತ್ತಲೇ ಬಂದಿದೆ.

ಸಾಧನೆಗೆ ಬೇಕು ಶ್ರದ್ಧೆ ಮತ್ತು ಪ್ರಯತ್ನ

ಅಂಧೇನ ಬಧಿರೇಣಾಪಿ ಖಂಜೇನಾಪಿ ಚ ಪಂಗುನಾ।
ಶ್ರದ್ಧಾವತಾ ಯತ್ನವತಾ ಸಾಧ್ಯತೇ ಕಿಂಚಿದದ್ಭುತಮ್॥ -ಸುವಚನ ಶತಕಮ್

ಮನುಷ್ಯನು ಕುರುಡನಾಗಲಿ, ಕಿವುಡನಾಗಲಿ, ಕುಂಟನಾಗಲಿ, ಎರಡೂ ಕಾಲು ಇಲ್ಲದವನಾಗಲಿ, ಅವನಲ್ಲಿ ಶ್ರದ್ಧೆಯೂ ಪ್ರಯತ್ನವೂ ಇದ್ದರೆ ಅವನು ಅದ್ಭುತವಾದ ಏನನ್ನಾದರೂ ಸಾಧಿಸಬಲ್ಲ -ಎಂಬುದು ಶ್ಲೋಕಾರ್ಥ.

ಮನುಷ್ಯರ ಬೇಡಿಕೆ ಸಾಕಷ್ಟಿರುತ್ತದೆ. ಬಯಕೆಯಂತೂ ಕೊನೆಯಿಲ್ಲದ್ದು. ಬೇಕುಗಳ ಪಟ್ಟಿಗೆ ಬ್ರೇಕ್ ಇಲ್ಲವೇ ಇಲ್ಲ. ಸಮಯ ಸಂದಂತೆ ಪಟ್ಟಿ ಬೆಳೆಯುತ್ತಾ ಸಾಗುತ್ತದೆ. ಇಂತಹ ಬೇಡಿಕೆಗಳನ್ನು ಹೊಂದಿರುವ ಮನುಷ್ಯ ಅವುಗಳನ್ನು ಸಾಧಿಸಲು ಅನುಸರಿಸಬೇಕಾದ ಮಾರ್ಗವನ್ನು ತುಳಿಯುವುದಿಲ್ಲ. ಸಾಧನೆಯ ಮಾರ್ಗದಲ್ಲಿ ಧೈರ್ಯದಿಂದ ಮುನ್ನುಗ್ಗಿ ಶ್ರದ್ಧೆಯಿಂದ ಪರಿಶ್ರಮ ಚೆಲ್ಲಿದರೆ ಅಸಾಧ್ಯವೆಂಬುದಿಲ್ಲ. ಧೈರ್ಯ, ಶ್ರದ್ಧೆ ಹಾಗೂ ಪರಿಶ್ರಮ ಸಂಕಲ್ಪವನ್ನು ಸಾಕಾರಗೊಳಿಸುತ್ತವೆ.

ಶ್ಲೋಕ ಸಾಗರ

• ಡಾ.ಸೋಂದಾ ಭಾಸ್ಕರ ಭಟ್

'ನಾಸ್ತ್ಯಸಾಧ್ಯಂ ನರಾಣಾಮ್' ಎಂಬುದು ಸೋತ್ಸಾಹಿ ಪುರುಷನ ಕುರಿತು ಹೇಳಿದ ಸೂಕ್ತಿ. "ಶ್ರದ್ಧಾಂ ಕಾಮಸ್ಯಾ ಮಾತರಮ್" ಹಾಗೆಯೇ ಬಯಕೆಯ ತಾಯಿ ಎಂಬ ಸೂಕ್ತಿ ಶ್ರದ್ಧೆಯ ಪಾರಮ್ಯ ವನ್ನು ಹೇಳುವಂಥದ್ದು. ಒಟ್ಟಿನಲ್ಲಿ ಶ್ರದ್ಧೆ ಮತ್ತು ಶ್ರಮ ಯಾರನ್ನೂ ಸಾಧಕನನ್ನಾಗಿ ಮಾಡುತ್ತದೆ. ಆದ್ದರಿಂದಲೇ ಪ್ರಕೃತ ಸುಭಾಷಿತದಲ್ಲಿ ಶ್ರದ್ಧಾವಂತ ಹಾಗೂ ಯತ್ನವಂತ ಅದ್ಭುತವನ್ನು ಸಾಧಿಸಬಲ್ಲ ಎಂದು ಹೇಳಲಾಗಿದೆ. ಅವಯವಗಳೆಲ್ಲ ಚೆನ್ನಾಗಿದ್ದು, ಸಾಧಿಸಲು ಬೇಕಾದ ಎಲ್ಲ ಬಗೆಯ ಅನುಕೂಲಗಳಿದ್ದೂ ಸಾಧಿಸದಿರುವವರು ಸಾಕಷ್ಟು ಜನರಿದ್ದಾರೆ. ಇವರು ಶ್ರದ್ಧೆ ಮತ್ತು ಶ್ರಮವನ್ನು ಸರಿಯಾಗಿ ಬಳಸಿಕೊಳ್ಳದ ಆಲಸಿಗಳು. ಇವುಗಳನ್ನು ಸರಿಯಾಗಿ ಬಳಸಿಕೊಂಡು ಎತ್ತರಕ್ಕೇರಿದ ವಿಕಲಾಂಗರು ಸಾಕಷ್ಟಿದ್ದಾರೆ.

ಎರಡೂ ಕಣ್ಣಿಲ್ಲದಿದ್ದರೂ ಸಂಗೀತದಲ್ಲಿ ಅಪೂರ್ವ ಸಾಧನೆ ಮಾಡಿದ ಪುಟ್ಟರಾಜ ಗವಾಯಿ ಸ್ವಾಮೀಜಿ ಲೋಕಕ್ಕೆಲ್ಲ ಗೊತ್ತು. ನೂರಾರು ಜನರಿಗೆ ಸಂಗೀತದ ಮಹಾಗುರುವಾಗಿ ಗುರುತಿಸಲ್ಪಟ್ಟಿದ್ದಾರೆ. ಶಿವಮೊಗ್ಗದ ಅಂಧ ಮಕ್ಕಳು ಕಣ್ಣಿರುವವರೂ ನಾಚುವ ತೆರದಲ್ಲಿ ಯಕ್ಷಗಾನ ಮಾಡುತ್ತಾರೆ. ಕಣ್ಣಿಲ್ಲದವರು ಕ್ರಿಕೆಟ್ ಆಡುವುದು ನಮಗೆಲ್ಲ ಗೊತ್ತು. ಅಂಗವಿಕಲರಾಗಿ ಹುಟ್ಟಿ, ಅವಯವಗಳಿರುವವರೂ ನಾಚುವ ರೀತಿಯಲ್ಲಿ ಸಮಾಜಸೇವೆ ಮಾಡಿ ಪದ್ಮಶ್ರೀ ಪ್ರಶಸ್ತಿಗೆ ಭಾಜನರಾದವರಿದ್ದಾರೆ. ಕಾಲಿಲ್ಲದೇ ಹಿಮಾಲಯವನ್ನು ಏರಿದವರಿದ್ದಾರೆ. ಹೀಗೆ ಹೇಳುತ್ತಾ ಹೋದರೆ ಪಟ್ಟಿ ಬೆಳೆಯುತ್ತಾ ಹೋಗುತ್ತದೆ.

ಇವರೆಲ್ಲರ ಈ ಸಾಧನೆಗೆ ಮುಖ್ಯವಾದದ್ದು ಅವರಿಗಿರುವ ಶ್ರದ್ಧೆ ಮತ್ತು ನಿರಂತರ ಪ್ರಯತ್ನ. ಇವೆರಡಿದ್ದರೂ ಏನನ್ನಾದರೂ ಸಾಧಿಸಬಹುದು ಎಂಬುದಕ್ಕೆ ಈ ಎಲ್ಲ ದೃಷ್ಟಾಂತಗಳು ಸಾಕ್ಷಿ. ಶ್ರದ್ಧೆ ಮತ್ತು ಪ್ರಯತ್ನಗಳನ್ನು ರೂಢಿಸಿಕೊಂಡ ಯಾರು ಬೇಕಾದರೂ ಸಾಧನೆ ಮಾಡಿ ಗೌರವಕ್ಕೆ ಭಾಜನರಾಗಬಹುದು. ಅಂತಹ ಮನೋಭಾವವನ್ನು ಬೆಳೆಸಿಕೊಳ್ಳಬೇಕು.

ನಾವು ಜೀವನದಲ್ಲಿ ಸೋಲುವುದಕ್ಕೆ, ಬಡವರಾಗಿಯೇ ಉಳಿಯುವುದಕ್ಕೆ ಇವೆರಡೇ ಪ್ರಮುಖ ಕಾರಣಗಳು. ಆದ್ದರಿಂದ ಸದಾ ಜಾಗ್ರತರಾಗಿ ಕರ್ತವ್ಯ ಪಥದಲ್ಲಿ ಮುಂದುವರಿಯಬೇಕು. ಪ್ರಯತ್ನವಿಲ್ಲದೇ ಯಾವುದೂ ಒಲಿಯುವುದಿಲ್ಲ. ಮೃಗರಾಜನಾದರೂ ಸಿಂಹ ಹಸಿದರೆ ಬೇಟೆಯಾಡಲೇಬೇಕು. ಆಹಾರಕ್ಕಾಗಿ ಶ್ರಮಿಸಲೇಬೇಕು.

ಆದ್ದರಿಂದ ದುಃಸಾಧ್ಯವಾದದ್ದನ್ನು ಸಾಧಿಸಲು ಸದಾ ಪ್ರಯತ್ನಿಸೋಣ. ಶ್ರದ್ಧೆಯಿಂದ ಮುಂದುವರಿಯೋಣ.

ಭವಿಷ್ಯದ ಬೆಂಗಳೂರು...

ಪತ್ರ ಮಿತ್ರ

ಬೆಂಗಳೂರಿನಲ್ಲಿ ದಿನೇದಿನೇ ವಾಹನಗಳ ಸಂಖ್ಯೆ ಅತೀವ ವೇಗದಲ್ಲಿ ಏರುತ್ತಿರುವುದು ಗಂಭೀರ ಸಮಸ್ಯೆಯಾಗಿದೆ.ಇತ್ತೀಚಿನ ವರದಿಗಳ ಪ್ರಕಾರ ಬೆಂಗಳೂರಿನಲ್ಲಿ ಪ್ರತಿದಿನ 2100 ವಾಹನಗಳು ನೋಂದಣಿಯಾಗುತ್ತಿದ್ದು, ವಾಹನಗಳ ಸಂಖ್ಯೆ 1.2 ಕೋಟಿ ಗಡಿ ದಾಟಿದೆ. ಇಂದಿನ ಪರಿಸ್ಥಿತಿಯಲ್ಲೇ ಸಂಚಾರ ದಟ್ಟಣೆ, ವಾಯುಮಾಲಿನ್ಯ ಮತ್ತು ಪಾರ್ಕಿಂಗ್ ಸಮಸ್ಯೆಗಳು ನಾಗರಿಕರನ್ನು ಕಂಗೆಡಿಸುತ್ತಿವೆ. ಇದೇ ರೀತಿ ಮುಂದುವರಿದರೆ, ಮುಂದಿನ ದಿನಗಳಲ್ಲಿ ನಗರದಲ್ಲಿ ಕಾಲಿಡಲು ಸಹ ಜಾಗವಿಲ್ಲದಂತಾಗುವ ಭೀತಿ ಎದುರಾಗಿದೆ.

ಈ ಹಿನ್ನೆಲೆಯಲ್ಲಿ ಸರ್ಕಾರವು ವಾಹನ ನೋಂದಣಿಗೆ ಕಟ್ಟುನಿಟ್ಟಿನ ನಿಯಮಗಳನ್ನು ಜಾರಿಗೆ ತರುವುದು ಅತ್ಯಗತ್ಯ. ಪ್ರತಿ ಮನೆಗೆ ಕೇವಲ ಒಂದು ವಾಹನಕ್ಕೆ ಮಾತ್ರ ಅನುಮತಿ ನೀಡುವ ಬಗ್ಗೆ ಪರಿಗಣಿಸಬೇಕು. ಜೊತೆಗೆ, ಹೊಸ ವಾಹನ ನೋಂದಣಿಗೆ ಪಾರ್ಕಿಂಗ್ ಸೌಲಭ್ಯವನ್ನು ಕಡ್ಡಾಯಗೊಳಿಸಬೇಕು. ಪಾರ್ಕಿಂಗ್ ವ್ಯವಸ್ಥೆ ಇಲ್ಲದ ಮನೆಗಳಿಗೆ ವಾಹನ ನೋಂದಣಿ ನಿರಾಕರಿಸುವ ಕ್ರಮವನ್ನು ಅನುಸರಿಸಿದರೆ, ರಸ್ತೆಗಳಲ್ಲಿ ಅಕ್ರಮ ಪಾರ್ಕಿಂಗ್ ಕಡಿಮೆಯಾಗುತ್ತದೆ. ಅದೇ ರೀತಿ, ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ಮತ್ತಷ್ಟು ಸುಧಾರಿಸಿ, ಜನರು ಅದರತ್ತ ಆಕರ್ಷಿತರಾಗುವಂತೆ ಕ್ರಮ ಕೈಗೊಳ್ಳಬೇಕು. ಮೆಟ್ರೋ, ಬಸ್ ಸೇವೆಗಳನ್ನು ವಿಸ್ತರಿಸುವುದು ಹಾಗೂ ಅವುಗಳನ್ನು ಸಮಯಪಾಲನೆಗೆ ಒಳಪಡಿಸುವುದು ಮುಖ್ಯ. ನಗರದ ಭವಿಷ್ಯವನ್ನು ಗಮನದಲ್ಲಿಟ್ಟುಕೊಂಡು ತಕ್ಷಣ ಕ್ರಮ ಕೈಗೊಳ್ಳುವುದು ಅಗತ್ಯ. ಇಲ್ಲವಾದರೆ, ಬೆಂಗಳೂರು ಜೀವಿಸಲು ಕಷ್ಟವಾದ ನಗರವಾಗುವ ಅಪಾಯವಿದೆ.

-ಜಿ.ನಾಗೇಂದ್ರ ಕಾವೂರು, ಸಂಡೂರು

ನಮ್ಮದಲ್ಲದಿದ್ದರೂ ನಮ್ಮದೇ ಆದ ಹೊರ್ಮುಜ್ ಜಲಸಂಧಿ

ಆಳದಲ್ಲಿ ತಾವು ಭಾರತೀಯರೊಂದಿಗೆ ಬೆಸೆದುಕೊಂಡವರೇ ಎನ್ನುವುದು ಇವತ್ತಿಗೂ ಇರಾನ್‌ನಲ್ಲಿ ಇರುವವರಿಗೆ ಗೊತ್ತು.

ರಾಘವಾಂಕಣ

• ರಾಘವೇಂದ್ರ ಸುಬ್ರಹ್ಮಣ್ಯ
raghavaankana@gmail.com



ಎಷ್ಟೋ ಸಲ ನಮ್ಮ ಕಲಿಕೆಗಳು ತೀರಾ ಅನಿರೀಕ್ಷಿತ ತಿರುವುಗಳಲ್ಲಿ ಅಡಗಿ ಕುಳಿತಿರುತ್ತವೆ. ಮೊದಲನೇ ಮಹಾಯುದ್ಧದಲ್ಲಿ ಅದುವರೆಗೂ ಯಾರು ಕೂಡ ಊಹಿಸಲೂ ಸಾಧ್ಯವಿರದ ವಾಯುಯುದ್ಧ, ಟ್ಯಾಂಕ್, ವಿಷಾನಿಲ, ಸಬ್‌ಮರೀನ್‌ಗಳು ಅಸ್ತಿತ್ವಕ್ಕೆ ಬಂದವು. ಎರಡನೇ ಮಹಾಯುದ್ಧದವರೆಗೂ ಕೇವಲ ಪಠ್ಯಕ್ಕೆ ಸೀಮಿತವಾಗಿದ್ದ ಅಣುಶಕ್ತಿ ಎಂಬ ಕಲ್ಪನೆ, ಹಠಾತ್ತನೆ ಎಲ್ಲರಿಗೂ ಬಾಯಿಪಾಠವಾಯ್ತು. ಜೊತೆಗೇ ಜೆಟ್ ಇಂಜಿನ್, ಕ್ಷಿಪಣಿ, ಕಂಪ್ಯೂಟರುಗಳು, ಪೆನಿಸಿಲಿನ್‌ಗಳು ಕೂಡಾ ಮನೆಮಾತಾದವು. ಕಳೆದೊಂದು ತಿಂಗಳಿನಿಂದ ನಮ್ಮೆಲ್ಲರಿಗೂ ಬಾಯಿಪಾಠವಾಗಿರುವ ಹೊಸ ಪದಗಳೆಂದರೆ ಅಸಮಪಾರ್ಶ್ವದ ಯುದ್ಧ (asymmetric warfare), ಆತ್ಮಾಹುತಿ ಡ್ರೋನುಗಳು (Kamikaze drones or loitering ammunition), ಇಂಧನ ಭದ್ರತೆ (energy security), ಇದರೊಂದಿಗೆ ನಾವೆಲ್ಲ ಕಲಿತ ಇನ್ನೊಂದು ಹೊಸ ವಿಷಯ 'ಹೊರ್ಮುಜ್ ಜಲಸಂಧಿ'.

ಜಲಸಂಧಿ ಅನ್ನುವುದನ್ನೇ ಮೊದಲಬಾರಿಗೆ ಕೇಳಿದವರೂ ಈ ಬಾರಿಯ ಕಲಿಕೆಯ ಗುಂಪಿನಲ್ಲಿರಬಹುದು. ಆದರೆ ಎಷ್ಟೋ ಜನ ಹೊರ್ಮುಜ್ ಜಲಸಂಧಿಯ ಬಗ್ಗೆಯಂತೂ ಖಂಡಿತಾ ತಿಳಿದುಕೊಂಡರು. ದುಬೈ ಎಲ್ಲಿದೆ ಅಂತಾ ತಿಳಿದವರು ಕೂಡಾ, ಅದರ ಪಕ್ಕದಲ್ಲೇ ಹೀಗೊಂದು ಜಾಗತಿಕ ಪ್ರಾಮುಖ್ಯತೆಯ ಜಾಗವಿದೆಯೆಂದೂ, ಮತ್ತದಕ್ಕೆ ನಮ್ಮ ಮನೆಯ ಅಡುಗೆ ಮನೆಯನ್ನೇ ಅಲ್ಲಾಡಿಸುವಷ್ಟು ತಾಕತ್ತಿದೆಯೆಂದು ಅಂದಾಜು ಮಾಡಿರಲಿಲ್ಲ. ಅಮೆರಿಕ ತೆಗೆದ ಕ್ಯಾತೆಯಿಂದಾಗಿ, ಹೊರ್ಮುಜ್ ಜಲಸಂಧಿಯಂತೂ ಖ್ಯಾತಿ ಪಡೆಯಿತು.

ಅರೇಬಿಯನ್ ಸಮುದ್ರ ಪಾಕಿಸ್ತಾನದ ಗಡಿಯನ್ನು ದಾಟಿ, ಇರಾನ್ ಮತ್ತು ಒಮಾನ್ ದೇಶಗಳ ಎಡಬಲಗಳನ್ನು ಸವರಿ, ಸರಕ್ಕನೇ ಎಡಕ್ಕೆ ತಿರುಗಿ ಪರ್ಷಿಯನ್ ಕೊಲ್ಲಿ ಅಥವಾ ಗಲ್ಫ್ ಕೊಲ್ಲಿಯೊಳಗೆ ನುಗ್ಗುವ ತೀರಾ ಇಕ್ಕಟ್ಟಿನ ಪ್ರದೇಶವೇ ಈ ಹೊರ್ಮುಜ್ ಜಲಸಂಧಿ. ಈ ಲೇಖನ ಜಲಸಂಧಿಯ ಪ್ರಾಮುಖ್ಯತೆಯನ್ನು ವಿವರಿಸಲಿಕ್ಕಲ್ಲ. ಅದನ್ನು ಈಗಾಗಲೇ ನೂರಾರು ಚಾನಲ್ಲುಗಳು ಹಾಗೂ ಲೇಖನಗಳು ತಿಳಿಸಿರಬಹುದು. ಈ ಲೇಖನ, ಆ ಜಲಸಂಧಿಗೆ ಹಾಗೊಂದು ಹೆಸರು ಬರಲಿಕ್ಕೆ ಕಾರಣ, ಅದರ ಇತಿಹಾಸ ಹಾಗೂ ಭಾರತದೆಡೆಗೆ ಅದಕ್ಕಿರುವ ಸಂಬಂಧದ ಬಗ್ಗೆ ಬೆಳಕು ಚೆಲ್ಲಲಿಕ್ಕಷ್ಟೇ.

ಈ ಯುದ್ಧಕ್ಕೂ ಮೊದಲೇ, ವರ್ಷಗಳಲ್ಲ, ದಶಕಗಳಲ್ಲ, ಶತಮಾನಗಳಷ್ಟೇ ಅಲ್ಲ, ಒಂದೆರಡು ಸಹಸ್ರಮಾನಕ್ಕೂ ಮೊದಲೇ ಈ ಜಲಸಂಧಿ ಭಾರತಕ್ಕೆ ಚಿರಪರಿಚಿತ. ಜಗತ್ತಿನ ಪುರಾತನ ನಾಗರಿಕತೆಗಳಲ್ಲೊಂದಾದ ಪರ್ಷಿಯನ್ ನಾಗರಿಕತೆಗೂ, ಅಷ್ಟೇ ಅಥವಾ ಅದಕ್ಕೂ ಪುರಾತನ ನಾಗರಿಕತೆಯಾದ ಭರತ ಖಂಡಕ್ಕೂ ಸಂಪರ್ಕದ ಸುಲಭ ದಾರಿಯಾಗಿದ್ದದ್ದೇ ಈ ಹೊರ್ಮುಜ್ ಜಲಸಂಧಿ. ಕಾಕಾಸಸ್ ಪರ್ವತ ಪ್ರದೇಶಗಳಿಂದ ಕಂಧಹಾರ್‌ವರೆಗೂ ಹರಡಿದ್ದ ಎರಡೂವರೆ ಮೂರು ಸಾವಿರ ವರ್ಷಗಳ ಹಿಂದಿನ ಪರ್ಶಿಯಾದಲ್ಲಿದ್ದದ್ದು ನಮ್ಮ ಸನಾತನ ಧರ್ಮದಂತದ್ದೇ, ಬಹುದೇವ ಆರಾಧಕ ಜನಪದ ಗುಂಪುಗಳು. ಅವರುಗಳು ಮುಖ್ಯವಾಗಿ ಪೂಜಿಸುತ್ತಿದ್ದ ಮೂರು ದೇವರುಗಳೆಂದರೆ 'ಮಿತ್ರ' ಎಂಬ ಹೆಸರಿನ ಒಡಂಬಡಿಕೆ-ಒಪ್ಪಂದಗಳು, ಬೆಳಕು, ಪ್ರಮಾಣಗಳು, ನ್ಯಾಯ, ನೀತಿ ಮತ್ತು ಸ್ನೇಹದ ದೇವರಾದ ಸೂರ್ಯ. 'ಅನಾಹಿತ' ಎಂಬ ಹೆಸರಿನ ನೀರು ಮತ್ತು ಫಲವತ್ತತೆಯ ದೇವತೆ. 'ವೈರತ್ರಜ್ಞ' ಎಂಬ ಯುದ್ಧ ಮತ್ತು ವಿಜಯದ ದೇವರು. ಎಲಮೈಟ್, ಅಸ್ಸಿರಿಯನ್, ಅರ್ಮೇನಿಯನ್,ಖಸ್ಸಿ, ಲುಲ್ಲುಬಿ, ಯಜ್ದಿ, ಜಿರೊಫ್ಟ್ ಮುಂತಾದ ಬುಡಕಟ್ಟುಗಳಿದ್ದ ಈ ಗುಂಪುಗಳಲ್ಲಿ ಹಲವಾರು ದೇವರಿದ್ದರು. ಆ ದೇವರುಗಳಿಗೆ ಆಕಾರಗಳೂ, ಮೂರ್ತಿಗಳೂ ಇದ್ದವು. ಮತ್ತವುಗಳ ಆರಾಧನೆಗೆಂದೇ ಕಟ್ಟಿದ ದೇವಸ್ಥಾನಗಳಿದ್ದವು, ಅದರ ಉಸ್ತುವಾರಿಗೆಂದೇ ನೇಮಕವಾದ ಜನರಿದ್ದರು. ಸುಮಾರು ಕ್ರಿಸ್ತಪೂರ್ವ 700ರವರೆಗೂ ಹಲವು ದೇವರುಗಳಲ್ಲಿ ಹಂಚಿಹೋಗಿದ್ದ ಈ ಧರ್ಮಗಳನ್ನು ಒಂದೇ ನಿಯಮದಡಿ, ಒಂದು ಅಥವಾ ಎರಡು ದೇವರಡಿ ಬರುವಂತೆ ಮಾಡುವಲ್ಲಿ 'ಜರಾತುಷ್ಟ್ರ' ಎಂಬ ಧಾರ್ಮಿಕ ಸುಧಾರಕನ ದೊಡ್ಡ ಪಾತ್ರವಿದೆ. ಝೋರಾಷ್ಟ್ರಿಯನ್ ಧರ್ಮದ ಆರಾಧಕರು ಇವನನ್ನು 'ಜರಾತುಷ್ಟ್ರ ಪಿತಾಮಹ' ಎಂದೇ ಕರೆಯುತ್ತಾರೆ. ಈತ ಕ್ರಿಪೂ 700 ಮತ್ತು 500ರ ನಡುವಿನ ಕಾಲಘಟ್ಟದಲ್ಲೆಲ್ಲೋ ಅಂದಿನ ಪ್ರಾಚೀನ ಇರಾನಿನ ಧರ್ಮದ ತತ್ವಗಳನ್ನು ಪ್ರಶ್ನಿಸಿ, ಧಾರ್ಮಿಕ ನಿಯಮಗಳನ್ನು ಹೊಸದಾಗಿ ಬರೆದು ಝೋರಾಷ್ಟ್ರಿಯನ್ ಧರ್ಮದ ಆಧ್ಯಾತ್ಮಿಕ ಸ್ಥಾಪಕನಾದ. ಈತನ ಬರಹಗಳು ಹಾಗೂ ಚಿಂತನೆಗಳು ಕಾಲಾನಂತರದಲ್ಲಿ ಮುಂದೆಬಂದ ಗ್ರೀಕ್ ತತ್ವಶಾಸ್ತ್ರಜ್ಞರಾಗಿದ್ದ ಹೆರಾಕ್ಲಿಟಸ್, ಪ್ಲೇಟೋ ಹಾಗೂ ಪೈಥಾಗೋರಸ್ ಮುಂತಾದವರನ್ನೂ ಪ್ರಭಾವಿಸಿತು. ಇಷ್ಟೆಲ್ಲಾ ಪ್ರಭಾವ ಬೀರಿದ ಈತನ ಚಿಂತನೆಗಳು ನಂತರ ಬಂದ ಅಬ್ರಾಹಾಮಿಕ್ ಮತಗಳನ್ನು ಪ್ರಭಾವಿಸದೇ ಇರಲು ಸಾಧ್ಯವೇ ಇಲ್ಲ.



ಈತ ಹುಟ್ಟುಹಾಕಿದ ಈ ಹೊಸ ಧರ್ಮದಲ್ಲಿ ಅಗ್ನಿಗೆ ಮಹತ್ವದ ಸ್ಥಾನವಿತ್ತು. ಸೂರ್ಯನ ಬೆಳಕು ಹಾಗೂ ಪವಿತ್ರೀಕರಿಸಿದ ಅಗ್ನಿಯನ್ನು 'ಅಥರ್' ಎಂಬ ಹೆಸರಿನಿಂದ ಕರೆಯುತ್ತಿದ್ದ ಝೋರಾಷ್ಟ್ರಿಯನ್ನರು ಅದನ್ನು ಪೂಜಿಸುತ್ತಿರಲಿಲ್ಲ. ಬದಲಿಗೆ ಸೂರ್ಯ ಹಾಗೂ ಅಗ್ನಿ ಅವರ ಪಾಲಿಗೆ ದೇವರಿಗೆ ತಮ್ಮ ಪ್ರಾರ್ಥನೆಯನ್ನು ತಲುಪಿಸುವ ಮಾಧ್ಯಮಗಳಾಗಿದ್ದವು. ನಮ್ಮ ಅಗ್ನಿಹೋತ್ರಿಗಳ ಪದ್ಧತಿಯಂತೆಯೇ ಅವರ ದೇವಾಲಯದ ಗರ್ಭಭಾಗದಲ್ಲಿ ಪವಿತ್ರೀಕರಿಸಿದ ಅಗ್ನಿ ಆರದೇ, ಸದಾಕಾಲ ಉರಿಯುತ್ತಿತ್ತು. ಇವರು ವಿಗ್ರಹಾರಾಧಕಾರಾಗಲಿ ಅಥವಾ ಬಹುದೇವೋಪಾಸಕರಾಗಲೀ ಆಗಿರಲಿಲ್ಲ. ಜರಾತುಷ್ಟ್ರ ಪಿತಾಮಹ ಬರೆದ 'ಗಾಥೆಗಳು' ಎಂಬ ಗ್ರಂಥಸರಣಿಯ ಪ್ರಕಾರ ಅವರ ದೇವ 'ಅಹುರ ಮಜ್ದ' ಎಂಬವನಾಗಿದ್ದ. ಅಂದು ಬಳಕೆಯಲ್ಲಿದ್ದ ಅವೆಸ್ಥಾನ್ ಭಾಷೆಯಲ್ಲಿ ಅಹುರ ಮಜ್ದ ಎಂದರೆ 'ವಿವೇಕವುಳ್ಳ ಅಥವಾ ಬುದ್ಧಿವಂತ ದೇವರು' ಎಂದರ್ಥ. ತಮ್ಮ ನಾಗರಿಕತೆಗೆ ಹೊಸ ಅತಿಥಿಗಳು ನೆಲದಮೂಲಕ ನೂರು ಬದಿಗಳಿಂದ ಬಂದರೂ,ಅವರನ್ನು ಸಮುದ್ರಮಾರ್ಗದಲ್ಲಿ ಕರೆತರಬಲ್ಲ ಏಕೈಕ ಮಾರ್ಗವಾಗಿದ್ದ ಆ ಜಲಸಂಧಿಗೆ ಅವರಿಟ್ಟ ಹೆಸರೇ 'ಅಹುರ ಮಜ್ದ ಜಲಸಂಧಿ'. ಇದೇ ಪದ ಮುಂದೆ ಹಳೆ ಪರ್ಷಿಯನ್ ಭಾಷೆಯಲ್ಲಿ ಔರಮಜ್ದ ಎಂದಾಗಿ, ಪಾರ್ಥಿಯನ್ ಭಾಷೆಯಲ್ಲಿ ಅಹುರ್ಮಜ್ದ್ ಎಂದಾಗಿ, ಪಹ್ಲಾವೀ ಭಾಷೆಯಲ್ಲಿ ಹೋರ್ಮಿಜ್ದ್ ಎಂದಾಗಿ, ಹೊಸಪರ್ಷಿಯನ್ನಿನಲ್ಲಿ ಹೊರ್ಮುಜ್ ಎಂದಾಗಿದ್ದು. ಅದರ ಮೂಲಕ ಈ ಜಲಸಂಧಿ ಹೊರ್ಮುಜ್ ಜಲಸಂಧಿಯಾಯ್ತು.

ಇಲ್ಲೊಂದೆರಡು ಕುತೂಹಲಕಾರಿ ವಿಷಯಗಳನ್ನು ಕೇಳಿ ನಿಮಗೆ ತಲೆಧಿಮ್ಮೆನ್ನಬಹುದು. ಈ ಝೋರಾಷ್ಟ್ರಿಯನ್ನರ ಪಿತಾಮಹ ಇದ್ದನಲ್ಲ, ಅದೇ ಜರಾತುಷ್ಟ್ರ ಪಿತಾಮಹ, ಆತ ತನ್ನ ಸಮಕಾಲೀನರು ಪೂಜಿಸುತ್ತಿದ್ದ ದೇವರನ್ನು ಧಿಕ್ಕರಿಸಿದನಲ್ಲ, ಅವುಗಳನ್ನು ಆತ ಕರೆದದ್ದೇನು ಗೊತ್ತೇನು? 'ದೈವಗಳು' ಎಂದು!! ಅಂದಿನ ಅವೆಸ್ಥಾ ಭಾಷೆಯಲ್ಲಿ ದೈವ ಎಂದರೆ 'ಕೆಟ್ಟದ್ದು' ಎಂದರ್ಥವಿತ್ತು. "ಹಾಗಾದರೆ ಒಳ್ಳೆಯದು ಎಂಬುದಕ್ಕೆ ಅವರಲ್ಲಿದ್ದ ಪದ ಯಾವುದು?" ಎಂಬುದು ನಿಮ್ಮ ಪ್ರಶ್ನೆಯಾದರೆ, ಅದಕ್ಕುತ್ತರ 'ಅಹುರ'. ಅವೆಸ್ಥಾದಲ್ಲಿ ಸ ಎಂಬಕ್ಷರ ಇರಲಿಲ್ಲವಾಗಿಯೇ, ಪರ್ಷಿಯನ್ನರು ಸಿಂಧೂ ನದಿಗೆ ಹಿಂದೂ ನದಿ ಎಂದದ್ದು. ಸಿಂಧೂವಿನ ಆ ತಟದಲ್ಲಿದ್ದವರಿಗೆ ಹಿಂದೂ ಎಂಬ ಹೆಸರು ಬಂದದ್ದು. ನಮ್ಮ ಸೋಮ, ಅವರಿಗೆ ಹೌಮ. ನಮ್ಮ ಸಪ್ತ ಅವರಿಗೆ ಹಪ್ತ. ಅಸುರ ಅವರಲ್ಲಿ ಅಹುರ.



ಈ ಹೊಸ ಧರ್ಮದ ಸ್ಥಾಪನೆಗಾಗಿ ಜರಾತುಷ್ಟ್ರ ಯುದ್ಧಗಳನ್ನೇನೂ ಸಾರಲಿಲ್ಲ. ಚರ್ಚೆ ಹಾಗೂ ಧಾರ್ಮಿಕ ಚಿಂತನೆಗಳಿಗೆ ಹೊಸಹೊಳಹು ಕೊಟ್ಟು ಆತ ಜನರನ್ನು ಸೆಳೆದ. ಆದರೆ ಈತನ ಕಾಲಾನಂತರ, ತನ್ನ ಹಳೆಯ ಧರ್ಮವನ್ನು ತೊರೆದು ಝೋರಾಷ್ಟ್ರಿಯನ್ ಧರ್ಮಕ್ಕೆ ಸೇರಿದ ವಿಶ್ತಸ್ಪ ಎಂಬ ರಾಜ ತನ್ನನ್ನು ತಾನೇ ಈ ಧರ್ಮದ ರಕ್ಷಕನೆಂದು ಕರೆದುಕೊಂಡು, ದೈವಗಳನ್ನು ಆರಾಧಿಸುತ್ತಿದ್ದವರ ಮೇಲೆ ಯುದ್ಧಸಾರಿದ. ಬಹಳಷ್ಟು ಬುಡಕಟ್ಟುಗಳು ಆಗ ಅಫ್ಘಾನಿಸ್ತಾನದ ಕಡೆಗೆ ವಲಸೆ ಹೋಗಿ, ಅಥವಾ ಸಿಂಧೂನದಿಯನ್ನೂ ದಾಟಿ, ಅಲ್ಲಿದ್ದ ಸನಾತನ ಧರ್ಮದ ಗುಂಪುಗಳೊಂದಿಗೆ ಒಂದಾದರು. ಝೋರಾಷ್ಟ್ರಿಯನ್ ಇತಿಹಾಸದಲ್ಲಿ ಇದನ್ನು 'ದೈವಾರಾಧಕರ ಮೇಲಿನ ಧರ್ಮಯುದ್ಧ' ಎಂದೇ ಉಲ್ಲೇಖಿಸಲಾಗಿದೆ. ಈಗ ನಮ್ಮ ತರ್ಕದಲ್ಲಿ ನಾವು ಕಾಣಬಹುದಾದ ಹೊಳಹುಗಳೆಂದರೆ,ಈ ಜರಾತುಷ್ಟ್ರ ಪಿತಾಮಹನ ಸುಧಾರಣೆಗಳನ್ನೂ, ವಿಶ್ತಸ್ಪನ ಆಕ್ರಮಣಶೀಲತೆಯನ್ನೂ ವಿರೋಧಿಸಿ ಬಂದ ಬುಡಕಟ್ಟುಗಳು ತಮ್ಮ ದೇವರುಗಳನ್ನೇ (ಒಳ್ಳೆಯತನದ ಪ್ರತೀಕವಾದ) ದೈವಗಳೆಂದೂ, ತಮ್ಮ ನಂಬಿಕೆಗಳನ್ನು ಹಳಿಯಲು ಬಂದವರನ್ನು ತಪ್ಪೆಂದು ಹೇಳಲಿಕ್ಕಾಗಿ ಅವರ ಅಹುರ ದೇವರನ್ನೇ (ಕೆಟ್ಟದರ ಪ್ರತೀಕವಾದ) ಅಸುರರೆಂದೂ ಕರೆದಿರಲಿಕ್ಕೆ ಸಾಕು.

ಮತ್ತೊಂದು ವಿಷಯವೆಂದರೆ, ಆರಂಭಿಕ ವೈದಿಕ ಪಠ್ಯಗಳಲ್ಲಿ,ಅಸುರ ಎಂಬ ಪದದ ಅರ್ಥ ಮೂಲತಃ ರಾಕ್ಷಸ ಎಂದಲ್ಲ. ಋಗ್ವೇದದಲ್ಲಿ, ಕೆಲವು ಪ್ರಮುಖ ದೇವರುಗಳನ್ನು ಸಕಾರಾತ್ಮಕ ಅರ್ಥದಲ್ಲೇ ಅಸುರ ಎಂದೂ ಕರೆಯುತ್ತಾರೆ. ಉದಾಹರಣೆಗೆ, ವರುಣ ಅಸುರನೇ. ಮಿತ್ರ, ಅಗ್ನಿ, ಸವಿತ್ರ ಮಾತ್ರವಲ್ಲ ಇಂದ್ರ ಹಾಗೂ ರುದ್ರ ಎಂಬ ಹೆಸರುಗಳೂ ಅಸುರವರ್ಗದಿಂದಲೇ ಬಂದವು. ಅಸುರ ಎಂದರೆ "ಪರಾಕ್ರಮಿ, ಅಧಿಪತಿ, ವಿಶೇಷ ಶಕ್ತಿಯುಳ್ಳವ" ಎಂಬ ಅರ್ಥವನ್ನು ನೀಡುತ್ತದೆ. ಮುಂದೆ ಅಥರ್ವವೇದದಲ್ಲಷ್ಟೇ ಅಸುರ ಎಂದರೆ ಸುರರ ಅಥವಾ ದೈವದ ವೈರಿ ಎಂಬರ್ಥದಲ್ಲಿ ಉಲ್ಲೇಖವಾದದ್ದು. ಆದರೆ, ಇದು ದೇವರ ಮೇಲಿನ ನಂಬಿಕೆ, ಭಾಷೆ, ನಾಗರಿಕತೆಗಳ ನೈತಿಕ ಮೌಲ್ಯಗಳು ಇತ್ಯಾದಿ ಹತ್ತಾರು ವಿಷಯಗಳ ಸಂಗಮದ ವಿಚಾರವಾದ್ದರಿಂದ ನಾನಿದನ್ನು ಇದಮಿತ್ಥಂ ಎಂದು ಬರೆಯುವ ದಾರ್ಷ್ಟ್ಯ ತೋರಲಾರೆ.

ಕಾಕಾಸಸ್ ಪರ್ವತ ಪ್ರದೇಶಗಳಿಂದ ಕಂದಹಾರ್‌ವರೆಗೂ ಹರಡಿದ್ದ ಝೋರಾಷ್ಟ್ರಿಯನ್ ಧರ್ಮ ಕ್ರಿ.ಪೂ.700 ರಿಂದ ಕ್ರಿಶ ಏಳನೇ ಶತಮಾನದವರೆಗೂ ಉಚ್ಛ್ರಾಯ ಸ್ಥಿತಿಯಲ್ಲಿದ್ದು, ಇರಾನಿನ ಮೇಲೆ ಅರಬ್-ಮುಸ್ಲಿಂ ದಾಳಿಗಳು ಪ್ರಾರಂಭವಾದಮೇಲೆ ಇಳಿಮುಖವಾಯ್ತು. ಎಂಟನೇ ಶತಮಾನದಲ್ಲಿ ಮುಸ್ಲಿಮರ ಕ್ರೌರ್ಯಕ್ಕೆ ಬಲಿಯಾಗದಂತೆ ಜೀವ ಉಳಿಸಿಕೊಂಡು ತಮ್ಮ ಪವಿತ್ರ ಅಗ್ನಿಯನ್ನು ಹಿಡಿದುಕೊಂಡು, ಇದೇ ಹೊರ್ಮುಜ್ ಜಲಸಂಧಿಯ ಮೂಲಕ ತಪ್ಪಿಸಿಕೊಂಡು, ಗುಜರಾತಿನ ತಟಕ್ಕೆ ಬಂದಿಳಿದು, ಅಲ್ಲಿನ ಹಿಂದೂ ರಾಜನಿಗೆ "ನಮಗೆ ಹಾಗೂ ನಮ್ಮ ದೇವರಿಗೆ ಜಾಗ ಬೇಕು ಹಾಗೂ ನಮ್ಮ ದೇವರ ಸುತ್ತಮುತ್ತ ಹತ್ತು ಯೋಜನದಲ್ಲಿ ಬೇರೆ ಯಾವ ದೇವರೂ ಇರುವಂತಿಲ್ಲ" ಎಂಬ ಬೇಡಿಕೆಯಿಟ್ಟಾಗ, ಅದಕ್ಕೆ ಒಪ್ಪಿ, ಇಂದಿನ ದಿಯು ದ್ವೀಪ ಪ್ರದೇಶವನ್ನು ಅವರಿಗೆ ಕೊಡಲಾಯ್ತು. ಹಾಗೆ ತಳವೂರಿ ನಿಂತವರೇ ಪರ್ಷಿಯಾದ ಕೊನೆಯ ತಲೆಮಾರಿನ ಜನರಾದ ಪಾರ್ಸಿಗಳು. ಅವತ್ತು ಬಂದಿಳಿದ ಆ ಪವಿತ್ರ ಅಗ್ನಿ ಇವತ್ತಿಗೂ ಸಾವಿರದಮುನ್ನೂರು ವರ್ಷಗಳ ನಂತರವೂ ನಿರಂತರವಾಗಿ ಗುಜರಾತಿನ ಉದವಾಡಾದಲ್ಲಿ ಇರಾನ್ ಶಾ ಆತಶ್ ಬೆಹ್ರಾಮ್ ಎಂಬ ಹೆಸರಿನಲ್ಲಿ ಉರಿಯುತ್ತಲೇ ಇದೆ. ಸರಿಸುಮಾರು ಮೂರುಸಾವಿರ ವರ್ಷಗಳ ಹಿಂದೆ ಇದೇ ಇರಾನಿನಲ್ಲಿ ಹುಟ್ಟಿದ ಆ ಅಗ್ನಿಯ ಕುರುಹು ಇವತ್ತು ಉಳಿದಿರುವುದು ಟೆಹ್ರಾನ್‌ನಲ್ಲಿ ಅಲ್ಲ. ಶಿರಾಜ್‌ನಲ್ಲಿ ಅಲ್ಲ. ಭಾರತದಲ್ಲಿ! ಒಟ್ಟಿನಲ್ಲಿ ಯಾವ ದೈವೋಪಾಸಕರನ್ನು ಝೋರಾಷ್ಟ್ರಿಯನ್ನರು ಓಡಿಸಿದ್ದರೋ, ಅದೇ ನೆಲಕ್ಕೆ ಅವರೂ ಬಂದು ಸೇರಿದರು.

ಪರ್ಷಿಯಾ ತನ್ನನ್ನು ತಾನೇ ಉಳಿಸಿಕೊಳ್ಳಲು ಸಾಧ್ಯವಾಗದಿದ್ದಾಗ, ಆ ಪರ್ಷಿಯನ್ ನಾಗರಿಕತೆಯನ್ನು ಉಳಿಸಿದ್ದು ನಮ್ಮ ಹೆಮ್ಮೆಯ ಭಾರತ.

ಮರಳಿ ಮುಖ್ಯ ವಿಷಯಕ್ಕೆ ಬಂದರೆ ಹೊರ್ಮುಜ್ ಜಲಸಂಧಿ ಭಾರತಕ್ಕೆ ಬಹಳ ವಿಶೇಷವಾದದ್ದು. ಯಾಕೆಂದರೆ, ಜಗತ್ತಿನಲ್ಲಿ ಇನ್ನೂ ಅಬ್ರಹಾಮಿಕ್ ತತ್ವಗಳ 'ಅ' ಕೂಡಾ ಹುಟ್ಟದೇ ಇದ್ದಾಗಲೂ, ಈ ಜಲಸಂಧಿಯ ಆಚೆ ಪರ್ಷಿಯಾ ಇತ್ತು. ಈಚೆ ಭಾರತವಿತ್ತು. ಸಹಸ್ರಮಾನಗಳ ನಂತರವೂ, ಇಸ್ಲಾಮಿಕ್ ಕತ್ತಿಯಲುಗಿನ ಪ್ರಹಾರದ ನಂತರವೂ 'ಇರಾನ್ ಶಹರ್'ನ ಜನರಿಗೆ ಭಾರತದ ನಂಟಿನ ಅರಿವಿತ್ತು. ಇಸ್ಲಾಂ ಧಾಳಿ, ಶಾಗಳ ಆಳ್ವಿಕೆ, ಅಯಾತೊಲ್ಲಾನ ಉಕ್ಕಿನ ಆಡಳಿತದ ನಂತರವೂ, ಅದೊಂದು ನಂಟು ಎರಡೂ ದೇಶಗಳ ನಡುವೆ ಉಳಿದೇ ಇತ್ತು. ಮತ್ತದು ಉಳಿದೇ ಇರುತ್ತದೆ. ಆಳದಲ್ಲಿ ನಾವು ಭಾರತೀಯರೊಂದಿಗೆ ಬೆಸೆದುಕೊಂಡವರೇ ಎನ್ನುವುದು ಇವತ್ತಿಗೂ ಇರಾನ್‌ನಲ್ಲಿ ಇರುವವರಿಗೆ ಗೊತ್ತು. ನೂರಾರು ವರ್ಷಗಳ ಹಿಂದೆ ಅವರು ಮತಾಂತರಗೊಂಡರೂ, ಸಂಸ್ಕೃತವನ್ನು ನಿಗ್ರಹಿಸಿದರೂ, ತಕ್ಷಶಿಲಾ ಮರೆತುಹೋದರೂ, ಸಂಪರ್ಕವೇ ಬಹುತೇಕ ಕಳೆದುಹೋದರೂ, ಡಿಎನ್ಎಗೆ ಆ ನಂಟು ನೆನಪಿದೆ. ನಂಬಿಕೆ ಉಳಿದುಕೊಂಡಿದೆ. ಮತ್ತದು ಯಾವಾಗಲೂ ಹಾಗೆಯೇ ಇರುತ್ತದೆ.

ಇದೇ ಕಾರಣಕ್ಕೆ ಇಂದಿನ ಘೋರ ಯುದ್ಧದ ನಡುವೆಯೂ ಭಾರತದ ಹಡಗುಗಳ ಮುಕ್ತಸಂಚಾರಕ್ಕೆ ಒಂದೇ ಒಂದು ಫೋನ್ ಕಾಲ್ ಸಾಕಾಗಿದ್ದು. ಇದು ಕೇವಲ ಪ್ರಸ್ತುತ ನಾಯಕರ ಸಂಬಂಧವಷ್ಟೇ ಅಲ್ಲ. ಇದು ಭಾರತದೆಡೆಗೆ ನಾಗರಿಕತೆಯೊಂದರ ನಂಬಿಕೆಯ ಕುರುಹೂ ಹೌದು..

ಕೊನೆಯ ಮಾಹಿತಿ: ಇರಾನಿನ ಹಳೆಯ ಹೆಸರು 'ಆಯಿರಾನ್ ಶಹರ್'. ಆರ್ಯನ್ನರ ಊರು ಎಂದು ಅದರರ್ಥ. ನಾವು ಆರ್ಯಾವರ್ತ ಎಂದೆವು. ಅವರ ಆಯಿರಾನ್ ಶಹರ್ ಮುಂದೆ 'ಇರಾನ್ ಶಹರ್' ಆಯಿತು. 1935ರಲ್ಲಿ ಶಾ ಪಹ್ಲಾವಿಯ ಆಡಳಿತದಲ್ಲಿ ಇರಾನ್ ಆಯಿತು. ಪರ್ಷಿಯಾ ಅನ್ನೋದು ಪಶ್ಚಿಮದವರು ಗ್ರೀಕರ ಪುಸ್ತಕಗಳನ್ನೋದಿ ಅರೆತರ್ಕದಲ್ಲಿ ಕೊಟ್ಟ ಹೆಸರಷ್ಟೇ. ಇವತ್ತಿನ ಶಿರಾಝ್ ನಗರವನ್ನು ರಾಜಧಾನಿಯಾಗಿಸಿಕೊಂಡಿದ್ದ ದಕ್ಷಿಣ ಇರಾನಿನ ಫಾರ್ಸ್/ಫಾರ್ಸಿಸ್ತಾನ್ ಪ್ರಾಂತ್ಯಕ್ಕೆ ಬಂದಿಳಿದ ಗ್ರೀಕರಲ್ಲಿ 'ಫ' ಅಕ್ಷರದ ಬಳಕೆಯಿರಲಿಲ್ಲವಾಗಿ ತಮ್ಮ ನಕ್ಷೆಗಳಲ್ಲಿ ಇದನ್ನು ಪಾರ್ಸ್ ಎಂದು ಗುರುತಿಸಿದರು. ಮುಂದಿನ ನಕ್ಷೆಗಳಲ್ಲಿ ಅದರ ಸುತ್ತಮುತ್ತಲಿನ ಪ್ರಾಂತ್ಯಗಳೆಲ್ಲಾ ಸೇರುತ್ತಾ ಹೋಗಿ, ಇಂದಿನ ಪರ್ಶಿಯಾ ಆಗಿದ್ದು.

ಗೋಬರ್ ಗ್ಯಾಸ್: ಸ್ವಾವಲಂಬನೆಯ ಸಂಕೇತ

ನಮ್ಮ ದೇಶದಲ್ಲಿ ಲಭ್ಯವಿರುವ ಕಚ್ಚಾ ವಸ್ತುಗಳನ್ನು ಸರಿಯಾಗಿ ಬಳಸಿಕೊಂಡಲ್ಲಿ ಇಂದಿಗೂ ತೈಲ ಕ್ಷೇತ್ರದಲ್ಲಿ ನಾವು ಸ್ವಾವಲಂಬಿಯಾಗಬಹುದಾಗಿದೆ.

ಧರಣಿ ಮಂಡಲ

• ಕೆ.ಎನ್. ಶೈಲೇಶ್ ಹೊಳ್ಳ
shyleshholla@gmail.com



ಪೆಟ್ರೋಲ್, ಡೀಸೆಲ್ ಸೇರಿದಂತೆ ಎಲ್ಲಾ ರೀತಿಯ ತೈಲೋತ್ಪನ್ನಗಳು ಇನ್ನೇನು ಒಂದೆರಡು ದಶಮಾನಗಳಲ್ಲಿ ಮುಗಿದು ಹೋಗುತ್ತದೆ ಎಂದೇ ಹೇಳಲಾಗುತ್ತಿದೆ. ಇದು ನಿಜವಾದಲ್ಲಿ ಭಾಗಶಃ ಮನುಷ್ಯನ ನಾಗರಿಕತೆಯೇ ಮುಗಿದಂತೆ. ವಾಸ್ತವದಲ್ಲಿ ಭಾರತ ಅತಿ ಹೆಚ್ಚು ತೈಲ ಆಮದು ಮಾಡಿಕೊಳ್ಳುತ್ತಿರುವುದು ರಷ್ಯಾದಿಂದ. ಸದ್ಯಕ್ಕೆ ಎರಡನೇ ಸ್ಥಾನದಲ್ಲಿ ಅರಬ್ ದೇಶಗಳು ಹಾಗೂ ಇರಾಕ್ ಇದೆ. ಅಮೆರಿಕದ ವಶದಲ್ಲಿರುವ ವೆನೆಜುವೆಲಾದ ತೈಲ ಭಾರತಕ್ಕೆ ತೆರೆದುಕೊಂಡರೆ ಬಹುಶಃ ಅದೇ ನಂಬರ್ ಒನ್ ಆಗುವ ಸಾಧ್ಯತೆ ಇದೆ ಎನ್ನಲಾಗಿದೆ.

ದೇಶದಲ್ಲಿರುವ ಒಂದಷ್ಟು ಎಡಪಂಥೀಯರದ್ದು ಯಾವಾಗಲೂ ಏನಾದರೊಂದು ಗೋಳು. ಈ ಬಾರಿಯ ವರಸೆ ಧೈರ್ಯವಿದ್ದರೆ ಅರಬ್ ದೇಶಗಳಲ್ಲಿ ಸಿಗುವ ಪೆಟ್ರೋಲಿಯಂ ಉತ್ಪನ್ನಗಳನ್ನು ಕೇಂದ್ರ ಸರ್ಕಾರ ಬಹಿಷ್ಕರಿಸಲಿ ಎಂಬುದಾಗಿದೆ. ನಿಮಗೆ ತಿಳಿದಿರಲಿ, ವಿಶ್ವದಲ್ಲೇ ಅತಿ ಹೆಚ್ಚು ಜನಸಂಖ್ಯೆ ಇರುವುದು ಭಾರತದಲ್ಲಿ. 700 ಕೋಟಿಯಲ್ಲಿ 150 ಕೋಟಿ ಇಲ್ಲೇ ಇದೆ. ಹಾಗಾಗಿ ಬೇಡಿಕೆಗೆ ತಕ್ಕಂತೆ ಪೂರೈಕೆ ಸ್ವಲ್ಪ ಸವಾಲಾಗಿರುವುದು ನಿಜ. ಹೇಗೆ ಭಾರತಕ್ಕೆ ಇಂಧನದ ಅವಶ್ಯಕತೆ ಇದೆಯೋ ಹಾಗೆಯೇ ಮರಳುಗಾಡಿನ ರಾಷ್ಟ್ರಗಳಿಗೆ ಜೀವನ ನಿರ್ವಹಣೆಗೆ ಮತ್ತು ಬದುಕಲು ಬೇಕಾದ ಅಕ್ಕಿ, ಗೋಧಿ, ಹಣ್ಣು, ತರಕಾರಿಗಳೆಲ್ಲವೂ ಭಾರತ ಸೇರಿದಂತೆ ಬೇರೆ ದೇಶಗಳಿಂದಲೇ ಬರಬೇಕು. ಅವರ ಆರ್ಥಿಕತೆ ನಿಂತಿರುವುದೇ ತೈಲೋತ್ಪನ್ನಗಳ ಮೇಲೆ. ಆದರೆ ಭಾರತದ ಆರ್ಥಿಕತೆ ಹಾಗಲ್ಲ. ಅರಬ್ ದೇಶಗಳಲ್ಲಿ ಪೆಟ್ರೋಲ್ ಸಿಗದಿದ್ದರೆ ಬೇರೆ ದೇಶಗಳಲ್ಲಿ ದೊರೆಯುತ್ತದೆ. ಇತ್ತೀಚೆಗೆ ಅರ್ಜೆಂಟೀನಾ ಸೇರಿದಂತೆ ಬೇರೆ ದೇಶಗಳಿಂದಲೂ ಇಂಧನ ಬರುವಂತಾಗಿದೆ. ತೀರಾ ವಿಷಮ ಸ್ಥಿತಿ ಎದುರಾದರೂ ಪೆಟ್ರೋಲ್ ಇಲ್ಲದೇ, ಪರ್ಯಾಯ ಯಾವುದಾದರೊಂದು ಇಂಧನ ಬಳಸಿ ಹೇಗೋ ನಾವು ಬದುಕಬಲ್ಲೆವು. ಆದರೆ ಅವರ ಕಥೆ ಹಾಗಲ್ಲ. ಬರೀ ಪೆಟ್ರೋಲ್ ಕುಡಿದೇ ಬದುಕಲು ಸಾಧ್ಯವಿಲ್ಲ.

ದೇಶದಲ್ಲಿ ಸ್ಥಳೀಯವಾಗಿ ಲಭ್ಯವಿರುವ ಸಂಪನ್ಮೂಲಗಳಿಂದ ಇಂಧನ ಉತ್ಪಾದನೆ ಮಾಡಿದಲ್ಲಿ ನಮಗೆ ಯಾವುದೇ ದೇಶದ ಮುಂದೆ ಕೈಕಟ್ಟಿ ಕೂರುವ ಪ್ರಮೇಯವೇ ಇರುವುದಿಲ್ಲ. ಪ್ರಮುಖವಾಗಿ ಸಾರಿಗೆಯ ದೂರ ಕಡಿಮೆಯಾಗುತ್ತದೆ, ತ್ಯಾಜ್ಯ ಕಡಿಮೆಯಾಗುತ್ತದೆ ಮತ್ತು ಗ್ರಾಮೀಣ ಆರ್ಥಿಕತೆ ಬಲವಾಗುತ್ತದೆ. ಇಂದಿನ ಜಗತ್ತಿನಲ್ಲಿ ಯುದ್ಧಗಳು, ಬಾಂಬ್ ಸ್ಫೋಟಗಳು ಮತ್ತು ದೊಡ್ಡ ಮಟ್ಟದ ಕೈಗಾರಿಕಾ ಮಾಲಿನ್ಯಗಳು ಪ್ರತಿ ದಿನ ವಾತಾವರಣಕ್ಕೆ ಅಪಾರ ಪ್ರಮಾಣದ ಅನಿಲಗಳನ್ನು ಬಿಡುಗಡೆ ಮಾಡುತ್ತಿವೆ. ಇಂತಹ ಜಾಗತಿಕ ಮಾಲಿನ್ಯದ ನಡುವೆ ಗ್ರಾಮೀಣ ಭಾರತದಲ್ಲಿ ಸ್ಥಳೀಯ ಬಯೋಮಾಸ್ ಇಂಧನವನ್ನು ಸಮರ್ಥವಾಗಿ ಬಳಸುವುದರಿಂದ ಒಂದೆಡೆ ಇಂಧನದ ಸಮಸ್ಯೆ ಬಗೆಹರಿಯುವುದರೊಂದಿಗೆ ಮಾಲಿನ್ಯದ ಸಮಸ್ಯೆಯೇ ಉದ್ಭವಿಸುವುದಿಲ್ಲ. ಗ್ರಾಮ ಸ್ವರಾಜ್ಯ ಎಂಬ ತತ್ವವು ಕೇವಲ ರಾಜಕೀಯ ಅಥವಾ ಸಾಮಾಜಿಕ ಕಲ್ಪನೆಯಲ್ಲ; ಅದೊಂದು ಆರ್ಥಿಕ ಮತ್ತು ಪರಿಸರದ ದೃಷ್ಟಿಯಿಂದಲೂ ಅತ್ಯಂತ ಪ್ರಸ್ತುತವಾದುದಾಗಿದೆ. ಗ್ರಾಮಗಳು ತಮ್ಮದೇ ಆಹಾರ, ಗೊಬ್ಬರ ಮತ್ತು ಇಂಧನವನ್ನು ಉತ್ಪಾದಿಸುವ ವ್ಯವಸ್ಥೆ ನಿರ್ಮಾಣವಾದರೆ ದೇಶದ ಆರ್ಥಿಕತೆ ಸದೃಢವಾಗುವುದರೊಂದಿಗೆ ಇಂಧನ ಭದ್ರತೆಯೂ ಹೆಚ್ಚುತ್ತದೆ.

ಇಂಧನ ಸ್ವಾವಲಂಬನೆಯ ಮತ್ತೊಂದು ದಾರಿಯೇ ಗ್ಯಾಸೀಕರಣ ಎನ್ನಲಾಗಿದೆ. ಕಲ್ಲಿದ್ದಲು ಅಥವಾ ಬಯೋಮಾಸ್‌ನ್ನು ಗ್ಯಾಸೀಕರಣ ಪ್ರಕ್ರಿಯೆಗೆ ಒಳಪಡಿಸಿದರೆ ಸಿಂಥೆಟಿಕ್ ಗ್ಯಾಸ್ ದೊರೆಯುತ್ತದೆ. ಈ ಅನಿಲವನ್ನು ವಿದ್ಯುತ್ ಉತ್ಪಾದನೆ, ಕೈಗಾರಿಕೆಗಳು ಮತ್ತು ಅಡುಗೆ ಇಂಧನವಾಗಿ ಬಳಸಬಹುದಾಗಿದೆ. ಭಾರತ ಕಲ್ಲಿದ್ದಲು ಸಂಪತ್ತಿನಲ್ಲಿ ಶ್ರೀಮಂತವಾಗಿರುವುದರಿಂದ ಈ ತಂತ್ರಜ್ಞಾನ ದೇಶಕ್ಕೆ ಮಹತ್ವದ ಅವಕಾಶವಾಗಿದೆ ಎಂದೇ ಹೇಳಲಾಗುತ್ತದೆ. ಇದರೊಂದಿಗೆ ಇಂದು ಸರ್ಕಾರದ ನವೀಕರಿಸಬಹುದಾದ ಇಂಧನ ಸಚಿವಾಲಯ ಬಯೋಗ್ಯಾಸ್ ಮತ್ತು ಬಯೋಮಾಸ್ ಯೋಜನೆಗಳಿಗೆ ಕೆಲವು ಅನುದಾನಗಳನ್ನು ನೀಡುತ್ತಿದೆ. ಆದರೆ ಗ್ರಾಮ ಮಟ್ಟದಲ್ಲಿ ಈ ಕಾರ್ಯಕ್ರಮಗಳನ್ನು ಇನ್ನಷ್ಟು ಬಲಪಡಿಸುವ ಅಗತ್ಯ ಇದೆ. ಗ್ರಾಮ ಪಂಚಾಯತಿಗಳಲ್ಲಿ ಸಮೂಹ ಬಯೋಗ್ಯಾಸ್ ಘಟಕಗಳಿಗೆ ಹೆಚ್ಚುವರಿ ಅನುದಾನವನ್ನು ನೀಡುವ ಮೂಲಕ ಇಂತಹ ಯೋಜನೆಗಳನ್ನು ಪ್ರೋತ್ಸಾಹಿಸಬೇಕಿದೆ. ಕೃಷಿ ತ್ಯಾಜ್ಯದಿಂದ ಸಿಗುವ ಬಯೋಮಾಸ್ ಬ್ರಿಕೆಟ್ ಉದ್ಯಮಗಳಿಗೆ ಪ್ರೋತ್ಸಾಹ ನೀಡಬೇಕಿದೆ. ಕಲ್ಲಿದ್ದಲು ಮತ್ತು ಬಯೋಮಾಸ್ ಆಧಾರಿತ ಗ್ಯಾಸೀಕರಣ ಘಟಕಗಳ ಸ್ಥಾಪನೆಯನ್ನು ಹೆಚ್ಚಿಸಬೇಕಿದೆ. ಸಣ್ಣ ಹೋಟೆಲ್ ಸೇರಿದಂತೆ ದೊಡ್ಡ ಹೋಟೆಲ್‌ಗಳಲ್ಲಿಯೂ ಬಯೋಮಾಸ್ ಅಥವಾ ಬಯೋಗ್ಯಾಸ್ ಬಳಕೆಗೆ ಪ್ರೋತ್ಸಾಹ ಯೋಜನೆಯನ್ನು ಅನುಷ್ಠಾನಗೊಳಿಸಬೇಕಿದೆ. ಇವೆಲ್ಲದರಿಂದ ಗ್ರಾಮೀಣ ಉದ್ಯೋಗಾವಕಾಶವನ್ನು ಹೆಚ್ಚಿಸಬಹುದಾಗಿದೆ.

ಇಂಟರ್ ನ್ಯಾಷನಲ್ ಎನರ್ಜಿ ಇನಿಷಿಯೇಟಿವ್ ಎಂಬ ಸಂಸ್ಥೆಯ ಅಂಗ ಸಂಸ್ಥೆಯಾದ ದಿ ಏಷ್ಯನ್ ರೀಜನಲ್ ಎನರ್ಜಿ ಇನಿಷಿಯೇಟಿವ್ ಎಂಬ ಸಂಸ್ಥೆಯು ತುಮಕೂರು ತಾಲ್ಲೂಕಿನ ಹೆಬ್ಬೂರು ಹೋಬಳಿಯ ಚಿಕ್ಕಣ್ಣದೇವರ ಹಟ್ಟಿ ಎಂಬ ಪುಟ್ಟ ಗ್ರಾಮದಲ್ಲಿ ಸಮೂಹ ಗೋಬರ್ ಗ್ಯಾಸ್ ಉತ್ಪಾದನಾ ಘಟಕವನ್ನು ಬಹಳ ಹಿಂದೆಯೇ ಸ್ಥಾಪಿಸಿತ್ತು. ಇದರಿಂದ ಆ ಗ್ರಾಮದ ಪ್ರತಿ ಮನೆಗೂ ಗೋಬರ್ ಗ್ಯಾಸ್ ಸಂಪರ್ಕ ಸಿಗುವಂತಾಗಿ 24 ಘಂಟೆ ಜೈವಿಕ ಅನಿಲದ ಸರಬರಾಜಾಗುತ್ತಿತ್ತು ಮತ್ತು ಪ್ರತಿಯೊಂದು ಮನೆಯಲ್ಲೂ ಕನಿಷ್ಠ ಒಂದೆರಡು ದೀಪಗಳು ಬೆಳಗುತ್ತಿತ್ತು. ಈ ವ್ಯವಸ್ಥೆಯನ್ನು ಸಂಸ್ಥೆಯು ಸಂಪೂರ್ಣ ಉಚಿತವಾಗಿ ಮಾಡಿಕೊಟ್ಟಿದ್ದಲ್ಲದೇ ಯಾವುದೇ ರೀತಿಯ ಹಣ ಹಾಗೂ ತೆರಿಗೆಯನ್ನು ವಿಧಿಸಿರಲಿಲ್ಲ. ಇದೊಂದು ಸಾಮೂಹಿಕ ಗೋಸಾಕಣೆ ಮತ್ತು ಗೋಬರ್ ಗ್ಯಾಸ್ ಪ್ಲಾಂಟ್‌ಗಳ ನಿರ್ಮಾಣವಾಗಿದ್ದು, ಏಷ್ಯಾದ ಮೊದಲ ಮಾದರಿ ಜೈವಿಕ ಇಂಧನ ಅಭಿವೃದ್ಧಿ ಯೋಜನೆಯಾಗಿತ್ತು. 15 ತಿಂಗಳಲ್ಲಿ 38 ಲಕ್ಷ ರೂಪಾಯಿ ವೆಚ್ಚ ಮಾಡಿ ಈ ಯೋಜನೆಯನ್ನು ಪೂರ್ಣಗೊಳಿಸಿದ್ದ ಸಂಸ್ಥೆಯು ಇದರ ನಿರ್ವಹಣೆಯನ್ನು ಸಂಪೂರ್ಣವಾಗಿ ನಂತರ ಗ್ರಾಮಸ್ಥರಿಗೆ ವಹಿಸಿತ್ತು.

ದಶಮಾನದ ಒಂದು ಹಿಂದಿನ ಸಮೀಕ್ಷೆಯ ಪ್ರಕಾರ ದೇಶದಲ್ಲಿರುವ ಜಾನುವಾರುಗಳು ತಮ್ಮ ಎಳೆಯುವ ಶಕ್ತಿಯ ಮೂಲಕ ವರ್ಷಕ್ಕೆ ಸುಮಾರು 50 ಸಾವಿರ ಕೋಟಿ ರೂಪಾಯಿಗಳಷ್ಟು ಪೆಟ್ರೋಲಿಯಂ ತೈಲವನ್ನು ಉಳಿತಾಯ ಮಾಡುತ್ತಿದ್ದವೆಂಬುದು ತಿಳಿದುಬರುತ್ತದೆ. ಇಂದಿನ ಲೆಕ್ಕಾಚಾರ ಲೆಕ್ಕಕ್ಕೂ ಸಿಗದಂತಾಗಿದೆ. ಮತ್ತೊಂದು ಸಮೀಕ್ಷೆಯ ಪ್ರಕಾರ ನಮ್ಮ ದೇಶದಲ್ಲಿ ಶೇಕಡಾ 65ರಿಂದ 90ರಷ್ಟು ಭೂಮಿಯನ್ನು ಎತ್ತುಗಳೇ ಸಾಗುವಳಿ ಮಾಡುತ್ತಿರುವುದರಿಂದ ಪ್ರತಿ ವರ್ಷ ಸುಮಾರು 60 ಲಕ್ಷ ಟನ್ ಡೀಸೆಲ್ ಉಳಿಯುತ್ತಿದೆಯಂತೆ. ಹೀಗೆ ಭಾರತೀಯ ಗೋವುಗಳು ಪ್ರತಿ ವರ್ಷ ಸುಮಾರು 24 ದಶ ಲಕ್ಷ ಟನ್‌ಗಳಷ್ಟು ಇಂಧನವನ್ನು ಉಳಿಸುವ ಮೂಲಕ ದೇಶದ ಆರ್ಥಿಕ ಹೊರೆಯನ್ನು ಕಡಿಮೆ ಮಾಡುತ್ತಿವೆಯಂತೆ.

ಒಂದು ಅಂದಾಜಿನಂತೆ ಪ್ರತಿಯೊಂದು ಮನೆಗೆ ತಿಂಗಳಿಗೆ ಒಂದು ಎಲ್‌ಪಿಜಿ ಗ್ಯಾಸ್ ಸಿಲಿಂಡರ್‌ನ ಅವಶ್ಯಕತೆ ಇರುತ್ತದೆ. ಈ ಲೆಕ್ಕಾಚಾರದಂತೆ ವರ್ಷಕ್ಕೆ ಸುಮಾರು 12 ಸಿಲಿಂಡರ್‌ಗಳು ಬೇಕಾಗುತ್ತವೆ. ಮನೆಯಲ್ಲಿ ಒಂದೆರಡು ಗೋವುಗಳನ್ನು ಕಟ್ಟಿಕೊಂಡು ಅದರಿಂದ ಗೋಬರ್‌ಗ್ಯಾಸ್‌ನ್ನು ಅಡುಗೆ ಮಾಡಲು ಬಳಸಿಕೊಂಡಿದ್ದೇ ಆದಲ್ಲಿ ವರ್ಷಕ್ಕೆ ಸುಮಾರು 6 ಎಲ್‌ಪಿಜಿ ಸಿಲಿಂಡರ್‌ಗಳು ಉಳಿತಾಯವಾಗಲಿವೆ. ಈ ಎಲ್‌ಪಿಜಿ ಸಿಲಿಂಡರ್ ಸೇರಿದಂತೆ ಬಹುತೇಕ ಪೆಟ್ರೋಲಿಯಂ ಉತ್ಪನ್ನಗಳಿಗೆ ನಾವು ಹೊರ ರಾಷ್ಟ್ರಗಳನ್ನೇ ನಂಬಿದ್ದೇವೆ. ಒಂದೊಮ್ಮೆ ಪ್ರತಿಯೊಂದು ಮನೆಯಲ್ಲಿ ಒಂದೆರಡು ಗೋವುಗಳನ್ನು ಕಟ್ಟುವ ಮೂಲಕ ಗೋಬರ್ ಗ್ಯಾಸ್ ಬಳಕೆ ಪ್ರಾರಂಭವಾದ್ದಲ್ಲಿ ನಾವು ದೇಶಕ್ಕೆ ಒಂದು ಉತ್ತಮ ಕೊಡುಗೆಯನ್ನೇ ನೀಡುತ್ತಿದ್ದೇವೆ ಎಂದರ್ಥ. ಈಗ ಉದ್ಭವಿಸಿರುವ ಅನಿರೀಕ್ಷಿತ ಗ್ಯಾಸ್ ಕೊರತೆಯ ಸಮಯದಲ್ಲಂತೂ ಗೋವಿನ ಸಗಣಿಯಿಂದ ತಯಾರಾಗುವ ಗೋಬರ್‌ಗ್ಯಾಸ್ ಘಟಕವು ಸ್ವಾಭಿಮಾನದ ಸಂಕೇತವೆಂಬಂತೆ ಕಾಣಿಸತೊಡಗಿದೆ. ಕೆಲವರು ಗೋಮಯ ಅಥವಾ ಕೃಷಿ ಅವಶೇಷಗಳನ್ನು ಸುಡುವುದು ಪರಿಸರ ಮಾಲಿನ್ಯಕ್ಕೆ ಕಾರಣವಾಗುತ್ತದೆ ಎಂದು ವಾದಿಸುತ್ತಾರೆ. ಪರಿಸರದ ಬಗ್ಗೆ ಕಾಳಜಿ ಅಗತ್ಯವೇ ಸರಿ. ಕೃಷಿ ಅವಶೇಷಗಳನ್ನು ಸುಡುವುದು ಮಾಲಿನ್ಯಕ್ಕೆ ಕಾರಣವಾಗುತ್ತದಾದರೂ ಗೋಮಯದಿಂದ ದೊರೆಯುವ ಬೆರಣಿ ಅಥವಾ ಗ್ಯಾಸ್ ಪರಿಸರ ಸಂರಕ್ಷಣೆಗೆ ಸಹಾಯಕವಾದುದಾಗಿದೆ. ಒಂದು ವಾಸ್ತವವನ್ನು ಗಮನಿಸಬೇಕು; ಸರಿಯಾದ ತಂತ್ರಜ್ಞಾನವನ್ನು ಬಳಸಿದ್ದೇ ಆದಲ್ಲಿ ಮಾಲಿನ್ಯವನ್ನು ನಿಯಂತ್ರಿಸಬಹುದು. ಉದಾಹರಣೆಗೆ ಮಣ್ಣಿನ ಇಟ್ಟಿಗೆ ಅಥವಾ ಸಿಮೆಂಟ್‌ನಿಂದ ತಯಾರಿಸಿದ ಅಡುಗೆ ಒಲೆ ಅಥವಾ ಸುಧಾರಿತ ಚುಲ್ಲಿಗಳು, ಬಯೋಗ್ಯಾಸ್ ಘಟಕಗಳು ಅಥವಾ ಗ್ಯಾಸೀಕರಣ ಘಟಕಗಳನ್ನು ಬಳಸಿದರೆ ಮಾಲಿನ್ಯವನ್ನು ಬಹಳ ಮಟ್ಟಿಗೆ ಕಡಿಮೆ ಮಾಡಬಹುದು.

ನಮ್ಮ ದೇಶದಲ್ಲಿ ಲಭ್ಯವಿರುವ ಕಚ್ಚಾ ವಸ್ತುಗಳನ್ನು ಸರಿಯಾಗಿ ಬಳಸಿಕೊಂಡಲ್ಲಿ ಇಂದಿಗೂ ತೈಲ ಕ್ಷೇತ್ರದಲ್ಲಿ ನಾವು ಸ್ವಾವಲಂಬಿಯಾಗಬಹುದಾಗಿದೆ. ಅಷ್ಟೇ ಯಾಕೆ ಸುಮಾರು 200ಕ್ಕೂ ಹೆಚ್ಚು ಗೋವುಗಳಿರುವ ಯಾವುದೇ ಒಂದು ಡೇರಿಯಲ್ಲಿ ಮಿಥೇನ್ ಉತ್ಪಾದನ ಘಟಕ ಸ್ಥಾಪಿಸಬಹುದಾಗಿದೆ. ಮಿಥೇನ್‌ಪಡೆದ ಮೇಲೆ ಸಾವಯವ ಗೊಬ್ಬರವಾಗಿ ಸಗಣಿಯನ್ನು ಪರಿವರ್ತಿಸಿಯೂ ಮಾರಾಟ ಮಾಡಬಹುದಾಗಿದೆ. ಇದರಿಂದ ಗೊಬ್ಬರ ಕ್ಷೇತ್ರದಲ್ಲೂ ಸ್ವಾವಲಂಬಿಯಾಗಬಹುದಾಗಿದೆ. ಮುಖ್ಯವಾಗಿ ನಮ್ಮ ದೇಹ ಹಾಗೂ ದೇಶ ಸ್ವಸ್ಥವಾಗಿಯೇ ಉಳಿಯಲಿದೆ.

ಕಿರುಸುದ್ದಿ

ಏ.9-10: ಪಾಲ್ತಾಡಿ ಚಾಕೋಟೆತ್ತಡಿಯಲ್ಲಿ ಪಿಲಿಚಾಮುಂಡಿ ದೈವದ ಪುನಃ ಪ್ರತಿಷ್ಠೆ ಕಲಶಾಭಿಷೇಕ

ಸವಣೂರು: ಪಾಲ್ತಾಡಿ ಗ್ರಾಮದ ಚಾಕೋಟೆತ್ತಡಿ ಶ್ರೀ ಧರ್ಮರಸು ಉಳ್ಳಾಕುಲು ದೈವಸ್ಥಾನದ ವಠಾರದಲ್ಲಿ ನೂತನವಾಗಿ ನಿರ್ಮಾಣಗೊಂಡಿರುವ ದೈವಸ್ಥಾನದಲ್ಲಿ ಬ್ರಹ್ಮ ಶ್ರೀ ಕೆಮ್ಮಿಂಜೆ ನಾಗೇಶ ತಂತ್ರಿಗಳ ನೇತೃತ್ವದಲ್ಲಿ ಪಿಲಿಚಾಮುಂಡಿ ದೈವದ ಪುನಃ ಪ್ರತಿಷ್ಠೆ ಹಾಗೂ ಕಲಶಾಭಿಷೇಕ ಏ.9ರಿಂದ ಏ.10ರವರೆಗೆ ನಡೆಯಲಿದೆ.

ಏ.9ರಂದು ಸಂಜೆ 5.30ರಿಂದ ದೇವತಾ ಪ್ರಾರ್ಥನೆ, ಆಚಾರ್ಯವರಣ, ಸ್ವಸ್ತಿ ಪುಣ್ಯಾಹವಾಚನ, ಪ್ರಾಸಾದ ಶುದ್ಧಿ, ಸ್ಥಳ ಶುದ್ಧಿ, ರಕ್ಷೋಘ್ನ ಹೋಮ, ವಾಸ್ತು ಹೋಮ, ವಾಸ್ತು ಪೂಜಾ ಬಲಿ, ಪ್ರಾಕಾರ ಬಲಿ, ಪ್ರಸಾದ ವಿತರಣೆ ನಡೆಯಲಿದೆ. ಏ.10ರಂದು ಬೆಳಗ್ಗೆ 7.30ರಿಂದ ಮಹಾಗಣಪತಿ ಹೋಮ, ಕಲಶ ಪೂಜೆ, 11.41ರ ಮಿಥುನ ಲಗ್ನ ಶುಭ ಮುಹೂರ್ತದಲ್ಲಿ ಪಿಲಿಚಾಮುಂಡಿ ದೈವದ ಪುನಃ ಪ್ರತಿಷ್ಠೆ ಹಾಗೂ ಕಲಶಾಭಿಷೇಕ, ಶ್ರೀ ಧರ್ಮರಸು ಉಳ್ಳಾಕುಲು ಹಾಗೂ ಪರಿವಾರ ದೈವಗಳಿಗೆ ಕಲಶ, ತಂಬಿಲ ಸೇವೆ, ಆಶ್ಲೇಷಾ ಬಲಿ, ನಾಗ ದೇವರಿಗೆ ತಂಬಿಲ ಪ್ರಸಾದ ವಿತರಣೆ ನಡೆಯಲಿದೆ ಎಂದು ಸಮಿತಿ ಗೌರವಾಧ್ಯಕ್ಷ ಸಂತೋಷ್ ಕುಮಾರ್ ರೈ ನಳೀಲು, ಅಧ್ಯಕ್ಷ ವಿನಯಚಂದ್ರ ಕೆಳಗಿಮನೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹತ್ತನೇ ತರಗತಿಯ ಮಕ್ಕಳಿಗೆ ಶುಭಾಶಂಸನಾ ಕಾರ್ಯಕ್ರಮ

ಕುಂದಾಪುರ: ಕುಂದಾಪುರದ ಶ್ರೀ ವೆಂಕಟರಮಣ ಆಂಗ್ಲ ಮಾಧ್ಯಮ ಪ್ರೌಢ ಶಾಲೆಯ ಪ್ರಸ್ತುತ ಸಾಲಿನ ಹತ್ತನೇ ತರಗತಿಯ ಮಕ್ಕಳಿಗೆ ಶುಭಾಶಂಸನಾ ಕಾರ್ಯಕ್ರಮ ಸೋಮವಾರ ನಡೆಯಿತು. ಸಂಸ್ಥೆಯ ಕಾರ್ಯದರ್ಶಿ ಕೆ. ರಾಧಾಕೃಷ್ಣ ಶೆಣೈ ಅಧ್ಯಕ್ಷತೆ ವಹಿಸಿದ್ದರು. ಸಂಸ್ಥೆಯ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಸಂದೀಪ ಗಾಣಿಗ ಮಕ್ಕಳಿಗೆ ಶುಭ ಹಾರೈಸಿದರು. ಶಾಲಾ ಶಿಕ್ಷಕರು ಹಾಗೂ ವಿದ್ಯಾರ್ಥಿ - ವಿದ್ಯಾರ್ಥಿನಿಯರು ತಮ್ಮ ಶಾಲಾ ಜೀವನದ ಅನುಭವಗಳನ್ನು ಹಂಚಿಕೊಂಡರು. ಪ್ರಾಥಮಿಕ ಶಾಲಾ ಮುಖ್ಯೋಪಾಧ್ಯಾಯಿನಿ ರೇಷ್ಮಾ ಡಿಸೋಜಾ, ನರ್ಸರಿ ವಿಭಾಗದ ಮುಖ್ಯೋಪಾಧ್ಯಾಯಿನಿ ಪ್ರಮೀಳಾ ಡಿ'ಸೋಜಾ ಉಪಸ್ಥಿತರಿದ್ದರು. ಮುಖ್ಯೋಪಾಧ್ಯಾಯ ಕೃಷ್ಣ ಅಡಿಗ ಸ್ವಾಗತಿಸಿದರು. ಸಂಗೀತ ಶಿಕ್ಷಕಿ ರಮಣಿ ಪ್ರಾರ್ಥನೆಗೈದರು. ಪ್ರೌಢಶಾಲಾ ಸಹಶಿಕ್ಷಕ ಪದ್ಮನಾಭ ಅಡಿಗ ಕಾರ್ಯಕ್ರಮವನ್ನು ನಿರೂಪಿಸಿ, ಪ್ರೌಢಶಾಲಾ ಸಹಶಿಕ್ಷಕ ಮಾಧವ ವಂದಿಸಿದರು.

ಇಂದು ಯಕ್ಷಗಾನ

ಶ್ರೀ ಕಟೀಲು ಯಕ್ಷಗಾನ ಮೇಳ

1. ದಿ। ಅನಿಲ್ ಟಿ. ಶೆಟ್ಟಿ, ದಿ। ಕುಶಲ ಶೆಟ್ಟಿ ಸ್ಮರಣಾರ್ಥ ಮಕ್ಕಳು, ಭಂಡಸಾಲೆ, ಪೆರಾಡಿ ವಯಾ ಶಿರ್ತಾಡಿ.
2. ದಿವಾಕರ ಶೆಟ್ಟಿ, ಗುಳ್ಳಾಡಿ ಪಾತ್ರಿ ಮನೆ, ಮಣೂರು, ಕುಂದಾಪುರ.
3. ಗಿರಿಜಾ ಮಂಜಯ್ಯ ಶೆಟ್ಟಿ, ಶಿವಂ ಬಿಲ್ಡಿಂಗ್, ಸಯನ್, ಮುಂಬಾಯಿ-ಶ್ರೀ ಕಟೀಲು ಕ್ಷೇತ್ರ ಮಹಾಲಕ್ಷ್ಮೀ ಸದನ.
4. ದಿ। ದಾಸು ಪೂಜಾರಿ ಇವರ ಕುಟುಂಬಿಕರ ಸೇವೆ, ಬೊಟ್ಟಿಕೆರೆ, ಸೂರಿಂಜೆ.
5. ಶೀನ ಪೂಜಾರಿ ಮತ್ತು ಫೇಮಿಲಿ, ಬಜಿಲೊಟ್ಟು ಮನೆ, ಉಳಾಯಿಬೆಟ್ಟು, ಪೆರ್ಮಂಕಿ ದೇವಸ್ಥಾನ ವಠಾರದಲ್ಲಿ.
6. ಸುಬ್ಬಣ್ಣ ಪೈ, 'ಹೋಟೆಲ್ ವಾಸುಕಿ', ಕಟೀಲು - ಶ್ರೀ ಕಟೀಲು ಕ್ಷೇತ್ರ ಸರಸ್ವತೀ ಸದನ.
7. ದಿನೇಶ್ ಕುಮಾರ್, ಕಾಯರ್‌ಮಾರ್ ಮನೆ, ಕಿನ್ನಿಬೆಟ್ಟು, ಅಮ್ಟಾಡಿ, ಬಂಟ್ವಾಳ (ತಾ).

ಶ್ರೀ ಧರ್ಮಸ್ಥಳ ಮೇಳ
ಚಿತ್ತೂರು ನೈಕಂಬಳಿಯಲ್ಲಿ
ಶ್ರೀ ಸತೀಶ್ ಶೆಟ್ಟಿ S/o ಸುಬ್ಬಣ್ಣ ಶೆಟ್ಟಿ, ಸುಬ್ರಹ್ಮಣ್ಯ ನಿಲಯ, ಕಳಿಮೇಲ್ಮನೆ

ಶ್ರೀ ಸಾಲಿಗ್ರಾಮ ಮೇಳ
ವಾಲಗಳ್ಳಿಯಲ್ಲಿ- **ಸ್ವಪ್ನ ಮಂಟಪ**

ಶ್ರೀ ಹನುಮಗಿರಿ ಮೇಳ
ಬೆಜ್ಜ ಮಂಜೇಶ್ವರದಲ್ಲಿ

ಶ್ರೀ ಪಾವಂಜೆ ಮೇಳ
ಕುಡ್ತಮುಗೇರು ವಿನಯಶ್ರೀ ಸರಸ್ವತಿ ಮಂಟಪದ ವಠಾರದಲ್ಲಿ
ಪಾಪಣ್ಣ ವಿಜಯ, ಗುಣಸುಂದರಿ



ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ ಸಿ ಟ್ರಸ್ಟ್ ಬ್ರಹ್ಮಾವರ ತಾಲೂಕು, ಪಾಂಡೇಶ್ವರ ವಲಯದ ಗುಂಡ್ಮಿ ಕಾರ್ಯಕ್ಷೇತ್ರದ ಸಮೃದ್ಧಿ ವಾತ್ಸಲ್ಯ ತಂಡದ ಸದಸ್ಯರಾದ ಲಕ್ಷ್ಮಿ ಎಂಬವರ ಗರ್ಭಕೋಶ ಶಸ್ತ್ರ ಚಿಕಿತ್ಸೆಗೆ ಯೋಜನೆಯ ಕ್ರಿಟಿಕಲ್ ಇಲ್ಲೆಸ್‌ನಲ್ಲಿ ಮಂಜೂರು ಮಾಡಿದ 20,000. ರೂ. ಮೊತ್ತದ ಮಂಜೂರಾತಿ ಪತ್ರವನ್ನು, ಉಡುಪಿ ಜಿಲ್ಲೆಯ ಜನಜಾಗೃತಿಯ ವೇದಿಕೆಯ ಮಾಜಿ ಅಧ್ಯಕ್ಷ ಅಚ್ಯುತ್ ಪೂಜಾರಿ ಹಸ್ತಾಂತರಿಸಿದರು. ವಲಯದ ಮೇಲ್ವಿಚಾರಕರಾದ ಜಯಲಕ್ಷ್ಮಿ ಮತ್ತು ಸ್ಥಳೀಯ ಸೇವಾ ಪ್ರತಿನಿಧಿ ಶಶಿಕಲಾ ಹಾಗೂ ತಂಡದ ಸದಸ್ಯರಾದ ಕಮಲ, ವನಜ, ಕಾವೇರಿ, ಸೋಮು ಪೂಜಾರಿ, ಗೋದಾವರಿ ಉಪಸ್ಥಿತರಿದ್ದರು.

ಸಾಲ ಮಾಡಿ ಜನರ ಮೇಲೆ ಹೊರಿಸಿದ್ದೇ ಸರ್ಕಾರದ ಸಾಧನೆ: ಕಿಶೋರ್ ಕುಮಾರ್

ಪುತ್ತೂರು: ರಾಜ್ಯ ಸರಕಾರವು ಸಾಲದ ಸುಳಿಯಲ್ಲಿ ಮುಳುಗಿದ್ದು, 2026ರ ಫೆಬ್ರವರಿವರೆಗೆ ರಾಜ್ಯ ಸರ್ಕಾರದ ಬಾಕಿ ಉಳಿದಿರುವ ಒಟ್ಟು ಸಾರ್ವಜನಿಕ ಸಾಲದ ಮೊತ್ತ ರೂ.5,71,921 ಕೋಟಿಗಳು ಮತ್ತು ರಾಜ್ಯದ ಪ್ರತಿಯೊಬ್ಬ ನಾಗರಿಕನ ಮೇಲಿನ ತಲಾ ಸಾಲದ ಹೊರೆ ರೂ.83,146ಗಳಾಗಿವೆ.



ಇತ್ತೀಚೆಗೆ ನಡೆದ ಬಜೆಟ್ ಅಧಿವೇಶನದಲ್ಲಿ ವಿಧಾನ ಪರಿಷತ್ ಸದಸ್ಯ ಕಿಶೋರ್ ಕುಮಾರ್ ಪುತ್ತೂರು ಅವರು ಆರ್ಥಿಕ ಇಲಾಖೆಗೆ ಕೇಳಿದ ಪ್ರಶ್ನೆಗೆ ಮುಖ್ಯಮಂತ್ರಿಯವರು ನೀಡಿದ ಉತ್ತರದಲ್ಲಿ ಈ ವಿಚಾರ ಬೆಳಕಿಗೆ ಬಂದಿದೆ. ರಾಜ್ಯ ಸರ್ಕಾರ 2023-24ರಲ್ಲಿ ರೂ.90,280 ಕೋಟಿ ಮತ್ತು 2024-25ರಲ್ಲಿ ರೂ.1,03,342 ಕೋಟಿ ಸಾಲ ಪಡೆದಿದ್ದು, ಕೇವಲ ಎರಡು ವರ್ಷಗಳಲ್ಲಿ ಈ ಮೊತ್ತ ರೂ.1,93,622 ಕೋಟಿಯಷ್ಟಾಗಿದೆ. ರಾಜ್ಯ ಸರ್ಕಾರ ಪಡೆದ ಸಾಲದ ಬಡ್ಡಿ ಪಾವತಿಸಲು 2023-24ರಲ್ಲಿ ರೂ.27,232 ಕೋಟಿ ಮತ್ತು 2024-25ರಲ್ಲಿ ರೂ.32,347 ಕೋಟಿ ಸೇರಿದಂತೆ ಒಟ್ಟು ರೂ.59,579 ಕೋಟಿ ವೆಚ್ಚ ಮಾಡಿದೆ.

ಹಣಕಾಸು ಹೊಣೆಗಾರಿಕೆ ಮತ್ತು ಬಜೆಟ್ ನಿರ್ವಹಣಾ ನಿಯಮಗಳ ಮಿತಿಯನ್ನು ಸರ್ಕಾರವು ಪಾಲಿಸುತ್ತಿದೆಯೇ ಎಂಬುದನ್ನು ಶಾಸಕರು ಕೇಳಿದ್ದು, ರಾಜ್ಯದ ವಿತ್ತೀಯ ಕೊರತೆ ಮತ್ತು ಹೊಣೆಗಾರಿಕೆಯನ್ನು ಸದರಿ ನಿಯಮಗಳಂತೆ ಪಾಲನೆ ಮಾಡಲಾಗುತ್ತಿದೆ ಎಂಬುದಾಗಿ ಉತ್ತರಿಸಿದ್ದಾರೆ.

ಕೇಂದ್ರ ಸರಕಾರವು 15ನೇ ಹಣಕಾಸು ಆಯೋಗ ಮತ್ತು ಕೇಂದ್ರ ಪ್ರಾಯೋಜಿತ ಯೋಜನೆಗಳಡಿ ಎಲ್ಲಾ ರಾಜ್ಯಗಳಿಗೆ ಅನುದಾನ ಬಿಡುಗಡೆ ಮಾಡುವಾಗ ಸದರಿ ಅನುದಾನದ ಬಳಕೆ ಮತ್ತು ಒಟ್ಟು ಹಂಚಿಕೆಯಾದ ಅನುದಾನ ಪಡೆಯಲು ಆಯೋಗದ ಶಿಫಾರಸು ಮತ್ತು ಕೆಲವು ಮಾನದಂಡದಡಿ ನಿರ್ದಿಷ್ಟ ಮಾರ್ಗಸೂಚಿಯನ್ನು ಹೊರಡಿಸುತ್ತದೆ. ಅದನ್ನು ಸರಿಯಾಗಿ ಪಾಲನೆ ಮಾಡಿದಲ್ಲಿ ಹಂಚಿಕೆಯಾದ ಸಂಪೂರ್ಣ ಅನುದಾನವನ್ನು ಪಡೆಯಬಹುದು ಎಂದು ಅವರು ತಿಳಿಸಿದರು. ಎಲ್ಲದಕ್ಕೂ ಕೇಂದ್ರ ಸರ್ಕಾರವನ್ನು ದೂರುವ ಹೊಣೆಗೇಡಿತನ ತೋರುತ್ತಿದೆ ಎಂದು ಕಿಶೋರ್ ಕುಮಾರ್ ಪುತ್ತೂರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ರಾಜ್ಯ ಮಟ್ಟದ 'ಎಸ್‌ಡಿಎಂ ಉದ್ಯೋಗಂ-2026' ಗೆ ಚಾಲನೆ । ಎರಡು ದಿನ ನಡೆಯಲಿರುವ ಬೃಹತ್ ಉದ್ಯೋಗಮೇಳ

ಗ್ರಾಮೀಣ ಉದ್ಯೋಗಾಕಾಂಕ್ಷಿಗಳಿಗೆ ದೊಡ್ಡ ವೇದಿಕೆ

ಬೆಳ್ತಂಗಡಿ : ಉಜಿರೆಯ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಶಿಕ್ಷಣ ಸಂಸ್ಥೆಯ ಆಶ್ರಯದಲ್ಲಿ ಎಸ್.ಡಿ.ಎಂ ಸ್ವಾಯತ್ತ ಕಾಲೇಜಿನಲ್ಲಿ ಆಯೋಜಿಸಲಾದ ಎರಡು ದಿನಗಳ 'ಎಸ್.ಡಿ.ಎಂ ಉದ್ಯೋಗಂ-2026' ಬೃಹತ್ ಉದ್ಯೋಗ ಮೇಳಕ್ಕೆ ಚಾಲನೆ ನೀಡಲಾಯಿತು. ರಾಜ್ಯ ಮಟ್ಟದ ಉದ್ಯೋಗ ಮೇಳಕ್ಕೆ ಎಸ್.ಡಿ.ಎಂ ಶಿಕ್ಷಣ ಸಂಸ್ಥೆಗಳ ಕಾರ್ಯದರ್ಶಿ ಡಾ. ಸತೀಶ್ಚಂದ್ರ ಎಸ್. ಚಾಲನೆ ನೀಡಿ ಮಾತನಾಡಿ, ಶೈಕ್ಷಣಿಕ ಕ್ಷೇತ್ರದ ಎಲ್ಲಾ ವಲಯಗಳಲ್ಲಿನ ಬಹುದೊಡ್ಡ ಸವಾಲು ಎಂದರೆ ಉದ್ಯೋಗದ ಅವಕಾಶಗಳು. ಅನೇಕ ಉದ್ಯೋಗಾಕಾಂಕ್ಷಿಗಳು ಸಮರ್ಥರಾಗಿದ್ದರೂ ನುರಿತ ಅವಕಾಶಗಳಿಂದ ವಂಚಿತಾರಾಗಿರುತ್ತಾರೆ. ಇದಕ್ಕೆ ಕಾರಣ ಹಲವು ಆಯಾಮಗಳಲ್ಲಿ ಗುರುತಿಸಬವುದು ಆದರೆ ಪ್ರಮುಖ ಕಾರಣವೆಂದರೆ ಉದ್ಯೋಗ ದಾತರು ಮತ್ತು ಉದ್ಯೋಗಾಕಾಂಕ್ಷಿಗಳ ನಡುವಿನ ಅಂತರ. ಇದಕ್ಕೆ ಪರಿಹಾರೋಪಾಯ ಮಾರ್ಗವಾಗಿ ಉಜಿರೆಯಂತಹ ಗ್ರಾಮೀಣ ಪ್ರದೇಶಕ್ಕೆ ದೇಶದ ನೂರಕ್ಕೂ ಅಧಿಕ ಸಂಸ್ಥೆಗಳನ್ನು ಕರೆಸಿ ಎರಡು ದಿನಗಳ ಬೃಹತ್ ಉದ್ಯೋಗ ಮೇಳವನ್ನು ಆಯೋಜಿಸಲಾಗಿದೆ. ವಿಶೇಷವಾಗಿ ಇದು ಎಸ್. ಡಿ.ಎಂ ಸಂಸ್ಥೆಯ ವಿದ್ಯಾರ್ಥಿಗಳಿಗೆ ಮಾತ್ರವಲ್ಲದೇ ಈ ಭಾಗದ ಎಲ್ಲಾ ಉದ್ಯೋಗ ಆಕಾಂಕ್ಷಿಗಳಿಗೆ ಸಂದರ್ಶನಕ್ಕಾಗಿ ಅನುವು ಮಾಡಿಕೊಡಲಾಗಿದೆ ಎಂದರು.

ಸಂಸ್ಥೆಯ ಅಧ್ಯಕ್ಷರಾದ ಡಾ.ಡಿ. ವಿರೇಂದ್ರ ಹೆಗ್ಗಡೆಯವರ ಆಶಯದಂತೆ ಗ್ರಾಮೀಣ ಭಾಗದ ವಿದ್ಯಾರ್ಥಿಗಳು ಯಾವುದೇ ರೀತಿಯ ಅವಕಾಶ ಮತ್ತು ಸವಲತ್ತುಗಳಿಂದ ವಂಚಿತರಾಗಬಾರದು ಎಂಬ ಸದಾಶಯ ದಂತೆ ಇದನ್ನು ಆಯೋಜಿಸಲಾಗಿದೆ. ಇದು ಬೃಹತ್ ಸಂಖ್ಯೆಯ ಗ್ರಾಮೀಣ ಭಾಗಗಳ ವಿದ್ಯಾರ್ಥಿ ಸಮೂಹಕ್ಕೆ ಅವಕಾಶ ಮತ್ತು ಹೊಸ ಅನುಭವವನ್ನು ನೀಡಲಿದೆ ಎಂದು ಶುಭ ಹಾರೈಸಿದರು.





ಉದ್ಘಾಟನಾ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಉಪಸ್ಥಿತರಿದ್ದ ಅಗ್ರಿಲೀಫ್ ಸಂಸ್ಥೆಯ ಸಂಸ್ಥಾಪಕರು ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾಗಿರುವ ಅವಿನಾಶ್ ರಾವ್ ಮಾತನಾಡಿ, ಹಿಂದೆ ಒಂದು ಪೀಳಿಗೆಗೊಮ್ಮೆ ಬದಲಾವಣೆ ಕಾಣುತ್ತಿದ್ದ ಬಹುತೇಕ ಕ್ಷೇತ್ರಗಳು ಇಂದು ಆಧುನಿಕ ಬೆಳವಣಿಗೆಯಿಂದಾಗಿ ಬಹುಬೇಗ ಬದಲಾವಣೆಯನ್ನು ಕಾಣುತ್ತಿದೆ. ಈ ಬದಲಾವಣೆಗೆ ವಿದ್ಯಾರ್ಥಿ ಸಮೂಹ ಒಗ್ಗಿಕೊಳ್ಳಬೇಕು. ಕೃತಕ ಬುದ್ಧಿಮತ್ತೆಯಂತ ತಂತ್ರಜ್ಞಾನ ಇಂದು ಎಲ್ಲೆಡೆ ಆವರಿಸಿದೆ. ಈ ನಡುವೆ ಯುವಕರು ಕೌಶಲ್ಯವಂತರಾಗಿ ಸುಸ್ಥಿರ ಸಾಧನೆಯತ್ತ ಸಾಗಬೇಕು ಎಂದರು.

ಉದ್ಯೋಗಾಕಾಂಕ್ಷಿಗಳಿಗೆ ತಮ್ಮ ಕ್ಷೇತ್ರದಲ್ಲಾಗುತಿರುವ ಬದಲಾವಣೆ ಮತ್ತು ಆ ಕುರಿತಾದ ಸಮಗ್ರ ಜ್ಞಾನದ ಅರಿವಿರಬೇಕು. ಸಾವಿರಾರು ಸಂಖ್ಯೆಯ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡಿದ ಶಿಕ್ಷಣ ಸಂಸ್ಥೆಗಳಿಗೆ ತಂದೆ ತಾಯಿಯಂತೆ ಒಂದು ಉದ್ಯೋಗ ಪಡೆದು ಬದುಕು ಕಟ್ಟಿಕೊಳ್ಳಲು ಅನುವು ಮಾಡಿ ಕೊಡುವ ಜವಾಬ್ದಾರಿ ಇರುತ್ತದೆ. ಇಂತಹ ಮಹತ್ವದ ಕಾರ್ಯವನ್ನು ಎಸ್.ಡಿ.ಎಂ ಶಿಕ್ಷಣ ಸಂಸ್ಥೆ ಬೃಹತ್ ಉದ್ಯೋಗ ಮೇಳವನ್ನು ಆಯೋಜಿಸುವ ಮೂಲಕ ವಿದ್ಯಾರ್ಥಿಗಳಿಗೆ ಅವಕಾಶವನ್ನು ನೀಡುತ್ತಿದೆ ಎಂದರು.

ಕಾರ್ಯಕ್ರಮದ ವೇದಿಕೆಯಲ್ಲಿ ಅತಿಥಿಗಳಾದ ಅಗ್ರಿಲೀಫ್ ಸಂಸ್ಥೆಯ ಸಂಸ್ಥಾಪಕರು ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾಗಿರುವ ಅವಿನಾಶ್ ರಾವ್ ರವರನ್ನು ಎಸ್.ಡಿ.ಎಂ ಶಿಕ್ಷಣ ಸಂಸ್ಥೆಗಳ ವತಿಯಿಂದ ಗೌರವಿಸಿ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ವೇದಿಕೆಯಲ್ಲಿ ಎಸ್.ಡಿ.ಎಂ ಸ್ವಾಯತ್ತ ಪದವಿ ಕಾಲೇಜಿನ ಪ್ರಾಚಾರ್ಯ ಪ್ರೊ. ವಿಶ್ವನಾಥ್ ಪಿ, ಎಸ್ ಡಿ ಎಂ ಐಟಿ ಕಾಲೇಜು ಪ್ರಾಚಾರ್ಯ ಡಾ. ಅಶೋಕ್ ಕುಮಾರ್ ಟಿ, ಎಸ್ ಡಿ ಎಂ ಪಾಲಿಟೆಕ್ನಿಕ್ ಕಾಲೇಜು ಪ್ರಾಚಾರ್ಯ ಸಂತೋಷ್, ಉದ್ಯೋಗ ಮೇಳದ ಆಯೋಜಕ ಸಮಿತಿಯ ಕಾರ್ಯದರ್ಶಿಗಳಾದ ಡಾ.ನಾಗರಾಜ್ ಪೂಜಾರಿ, ಡಾ.ಸುಬ್ರಹ್ಮಣ್ಯ ಮತ್ತು ಅಮರೇಶ್ ಹೆಬ್ಬಾರ್ ಉಪಸ್ಥಿತರಿದ್ದರು.

ಉದ್ಘಾಟನಾ ಸಮಾರಂಭದಲ್ಲಿ ಎಸ್.ಡಿ.ಎಂ ಶಿಕ್ಷಣ ಸಂಸ್ಥೆಗಳ ವಿವಿಧ ಕಾಲೇಜುಗಳ ಮುಖ್ಯಸ್ಥರು, ಆಡಳಿತ ಕುಲಸಚಿವರು, ಉಪನ್ಯಾಸಕರು, ಸಿಬ್ಬಂದಿ ವರ್ಗದವರು ಸೇರಿದಂತೆ ನೂರಾರು ಸಂಖ್ಯೆಯ ಉದ್ಯೋಗಾಕಾಂಕ್ಷಿಗಳು ಭಾಗಿಯಾಗಿದ್ದರು. ಉದ್ಘಾಟನಾ ಸಮಾರಂಭದಲ್ಲಿ ಕಾಲೇಜಿನ ವೈದೇಹಿ ಮತ್ತು ತಂಡದವರು ಪ್ರಾರ್ಥನೆಯನ್ನು ಹಾಡಿದರು. ಕಾರ್ಯಕ್ರಮವನ್ನು ಎಸ್.ಡಿ.ಎಂ ಸ್ವಾಯತ್ತ ಕಾಲೇಜಿನ ಸಹಾಯಕ ಪ್ರಾಧ್ಯಾಪಕರಾದ ಡಾ. ಮಹೇಶ್ ಕುಮಾರ್ ಶೆಟ್ಟಿ ನಿರೂಪಿಸಿ, ವಂದಿಸಿದರು.

ಉದ್ಯೋಗ ಮೇಳಕ್ಕೂ ಮೊದಲು ಗೂಗಲ್ ಫಾರ್ಮ್ ಲಿಂಕ್, ಕ್ಯುಆರ್ ಕೋಡ್ ಸೃಷ್ಟಿಸಿ, ಉಚಿತ ನೋಂದಣಿ ವ್ಯವಸ್ಥೆ ಮಾಡಲಾಗಿತ್ತು. ನೋಂದಣಿ ಪ್ರಕ್ರಿಯೆ ಬಳಿಕ ದೊರೆತ ಕ್ಯು ಆರ್ ಕೋಡನ್ನು ಅಭ್ಯರ್ಥಿಗಳು ಉದ್ಯೋಗ ಮೇಳದ ದಿನ ಕಾಲೇಜು ಒಳಾಂಗಣದಲ್ಲಿ ನೋಂದಣಿ ಕೌಂಟರ್ ನಲ್ಲಿ ಸ್ಕ್ಯಾನ್ ಮಾಡಿದಾಗ ಹಾಜರಾತಿ ದಾಖಲಾಗುವುದರೊಂದಿಗೆ ಸಂಪೂರ್ಣ ಪ್ರಕ್ರಿಯೆ ಪ್ರತ್ಯೇಕ ಆ್ಯಪ್ ಮೂಲಕ ಕಾಗದರಹಿತವಾಗಿ ನಡೆಯುವಂತೆ ವ್ಯವಸ್ಥೆ ಮಾಡಲಾಗಿತ್ತು. ತರಗತಿ ಕೊಠಡಿಗಳಲ್ಲಿ ಸಂದರ್ಶನ ಪ್ರಕ್ರಿಯೆ ನಡೆಯಿತು. ನೂರಕ್ಕೂ ಅಧಿಕ ಕಂಪೆನಿಗಳು ಪಾಲ್ಗೊಂಡಿದ್ದು, ಮೊದಲ ದಿನ 1,500ಕ್ಕೂ ಮಿಕ್ಕಿ ಉದ್ಯೋಗಾಕಾಂಕ್ಷಿಗಳು ಭಾಗವಹಿಸಿದ್ದರು.

> **ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಸದುಪಯೋಗ**
>
> **'ಎಸ್.ಡಿ.ಎಂ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಡಾ. ಡಿ ವೀರೇಂದ್ರ ಹೆಗ್ಗಡೆಯವರ ಮಾರ್ಗದರ್ಶನದಲ್ಲಿ ಶಿಕ್ಷಣ ಸಂಸ್ಥೆಯ ವತಿಯಿಂದ ಇದೊಂದು ಪ್ರಥಮ ಬಾರಿಗೆ ಆಯೋಜಿಸುತ್ತಿರುವ ಮಹತ್ವಾಕಾಂಕ್ಷೆಯ ಮತ್ತು ಅತ್ಯಂತ ಹೆಮ್ಮೆಯ ಕಾರ್ಯಕ್ರಮ. ಇದು ಸಾವಿರಾರು ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಸದುಪಯೋಗವಾಗುವುದರ ಜೊತೆಗೆ ಹೊಸ ಅವಕಾಶಗಳನ್ನು ಕಲ್ಪಿಸಿಕೊಡಲಿದೆ. ಭಾಗವಹಿಸುತ್ತಿರುವ ಎಲ್ಲಾ ಉದ್ಯೋಗಾಕಾಂಕ್ಷಿಗಳಿಗೆ ಶುಭಕೋರುತ್ತಾ, ಎಸ್.ಡಿ.ಎಂ ಉದ್ಯೋಗ ಮೇಳಕ್ಕೆ ಆಗಮಿಸಿದ ರಾಜ್ಯದ ಎಲ್ಲಾ ಪ್ರತಿಷ್ಠಿತ ಕಂಪೆನಿ ಮತ್ತು ಸಂಸ್ಥೆಗಳಿಗೆ ಎಸ್.ಡಿ.ಎಂ ಶಿಕ್ಷಣ ಸಂಸ್ಥೆಯ ವತಿಯಿಂದ ಧನ್ಯವಾದಗಳನ್ನು ತಿಳಿಸುತ್ತೇನೆ.'**
>
> ■ ಡಾ. ಸತೀಶ್ಚಂದ್ರ ಎಸ್, ಕಾರ್ಯದರ್ಶಿ, ಎಸ್.ಡಿ.ಎಂ ಶಿಕ್ಷಣ ಸಂಸ್ಥೆ ಉಜಿರೆ.

ವಿವೇಕಾನಂದ ಕಾಲೇಜಿನಲ್ಲಿ 'ಹನುಮಾನ್ ಚಾಲೀಸಾ ಪಠಣ ಸಪ್ತಾಹ' ಉದ್ಘಾಟನೆ

ಪುತ್ತೂರು: ರಾಮಾಯಣ, ಮಹಾಭಾರತದಂತಹ ಪವಿತ್ರ ಗ್ರಂಥಗಳ ಮೌಲ್ಯಗಳನ್ನು ಮೈಗೂಡಿಸಿಕೊಂಡಿರುವ ನಮ್ಮ ದೇಶದಲ್ಲಿ, ಹನುಮಂತನ ಆದರ್ಶಗಳು ಅತ್ಯಂತ ಪ್ರೇರಣಾದಾಯಿಯಾಗಿದೆ. ವಿಶೇಷವಾಗಿ ವಿದ್ಯಾರ್ಥಿಗಳಲ್ಲಿ ಏಕಾಗ್ರತೆ ಹಾಗೂ ಸುತ್ತಲಿನ ಪರಿಸರದಲ್ಲಿ ಸಕಾರಾತ್ಮಕತೆಯನ್ನು ಹೆಚ್ಚಿಸುವಲ್ಲಿ ಹನುಮಾನ್ ಚಾಲೀಸಾ ಪಠಣ ಮಹತ್ವದ ಪಾತ್ರ ವಹಿಸುತ್ತಿದೆ. ಇದು ನಮ್ಮ ಉನ್ನತ ಪರಂಪರೆ ಮತ್ತು ಸಂಸ್ಕಾರಕ್ಕೆ ಸಾಕ್ಷಿಯಾಗಿದೆ ಎಂದು ವಿವೇಕಾನಂದ ಕಾಲೇಜಿನ ಆಡಳಿತ ಮಂಡಳಿ ಸದಸ್ಯ ಜಗನ್ನಾಥ್ ಎ. ಹೇಳಿದರು.



ನಗರದ ವಿವೇಕಾನಂದ ಕಲಾ, ವಿಜ್ಞಾನ ಮತ್ತು ವಾಣಿಜ್ಯ(ಸ್ವಾಯತ್ತ) ಕಾಲೇಜಿನ ಹಿಂದಿ ವಿಭಾಗ, ಹಿಂದಿ ಸಂಘ ಮತ್ತು ಐಕ್ಯೂಎಸಿ ಸಹಯೋಗದೊಂದಿಗೆ ನಡೆದ 'ಹನುಮಾನ್ ಚಾಲೀಸಾ ಪಠಣ ಸಪ್ತಾಹ' ಉದ್ಘಾಟನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಋಷಿ ಮುನಿಗಳ ತಪಸ್ಸು ಹಾಗೂ ಹಿರಿಯರ ದಿವ್ಯ ಸಂಸ್ಕಾರದ ಬುನಾದಿಯ ಮೇಲೆ ಬೆಳೆದಿರುವ ಭಾರತವು, ಜಗತ್ತಿನಾದ್ಯಂತ ಅಶಾಂತಿಯ ಕರಿಮೋಡ ಕವಿದಿದ್ದರೂ ತನ್ನ ಶಾಂತತೆಯನ್ನು ಕಾಪಾಡಿಕೊಳ್ಳುವ ಮೂಲಕ ಜಗತ್ತಿಗೆ ಮಾದರಿಯಾಗಿದೆ ಎಂದು ಅವರು ತಿಳಿಸಿದರು.

ಕಾರ್ಯಕ್ರಮದಲ್ಲಿ ಹಿಂದಿ ವಿಭಾಗದಲ್ಲಿ ಸಾಧನೆಗೈದ ವಿದ್ಯಾರ್ಥಿಗಳಿಗೆ ಪ್ರಶಸ್ತಿಪತ್ರ ವಿತರಿಸಲಾಯಿತು.

ಈ ಸಂದರ್ಭ ಕಾಲೇಜಿನ ಪ್ರಾಂಶುಪಾಲ ಪ್ರೊ. ಶ್ರೀಕೃಷ್ಣ ಗಣರಾಜ ಭಟ್, ಹಿಂದಿ ವಿಭಾಗದ ಮುಖ್ಯಸ್ಥೆ ಡಾ. ದುರ್ಗಾರತ್ನ, ಉಪನ್ಯಾಸಕಿ ಪೂಜಾ ವೈ.ಡಿ. ಮತ್ತು ಸ್ನಾತಕೋತ್ತರ ವಾಣಿಜ್ಯ ವಿಭಾಗದ ಉಪನ್ಯಾಸಕಿ ಲಕ್ಷ್ಮಿ ಭಟ್ ಉಪಸ್ಥಿತರಿದ್ದರು.

ವಿದ್ಯಾರ್ಥಿನಿ ಅಮೃತಲಕ್ಷ್ಮಿ ಹನುಮಾನ್ ಚಾಲೀಸಾ ಪಠಿಸಿದರು. ವಿದ್ಯಾರ್ಥಿನಿಯರಾದ ಧನಲಕ್ಷ್ಮಿ ಸ್ವಾಗತಿಸಿ, ದೀಪ್ತಿ ಪ್ರಭು ವಂದಿಸಿದರು. ಚೈತ್ರ ಪೂಜಾರಿ ಕಾರ್ಯಕ್ರಮ ನಿರ್ವಹಿಸಿದರು.

ಕಾವೂರು ಕುಲ ಫ್ರೆಂಡ್ಸ್ ಕ್ಲಬ್‌ನ 25ನೇ ವರ್ಷದ ಸಂಭ್ರಮ

ಏ.24-26: ಕಾವೂರು ಉತ್ಸವ

ಮಂಗಳೂರು: ಕಾವೂರು ಕುಲ ಫ್ರೆಂಡ್ಸ್ ಕ್ಲಬ್‌ನ 25ನೇ ವರ್ಷದ ಸಂಭ್ರಮದ ಪ್ರಯುಕ್ತ ಅಸ್ತ್ರ ಗ್ರೂಪ್ ಸಹಕಾರದೊಂದಿಗೆ ಏ. 24ರಿಂದ 26ರತನಕ ಕಾವೂರು ಉತ್ಸವ-2026 ನಡೆಯಲಿದ್ದು, ಈ ಪ್ರಯುಕ್ತ ಆಮಂತ್ರಣ ಪ್ರತಿಕೆ ಬಿಡುಗಡೆ ಕಾರ್ಯಕ್ರಮ ಕಾವೂರು ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ಸೋಮವಾರ ನಡೆಯಿತು.



ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಕರ್ನಾಟಕ ದಕ್ಷಿಣ ಪ್ರಾಂತ ಸಹ ಕಾರ್ಯವಾಹ ಪಿ.ಎಸ್. ಪ್ರಕಾಶ್ ಮಾತನಾಡಿ, ಉತ್ಸಾಹಿ ಯುವಕರ ತಂಡವೊಂದು ಕಾವೂರು ಪರಿಸರದಲ್ಲಿ ಉತ್ತಮವಾದ ಕಾರ್ಯಕ್ರಮವನ್ನು ನಡೆಸಲು ಮುಂದಾಗಿದೆ. ಕಾವೂರು ಉತ್ಸವ ಗುಂಪು, ಪಂಗಡ ಅಥವಾ ಜಾತಿಯ ಉತ್ಸವವಲ್ಲ , ಬದಲಾಗಿ ಕಾವೂರು ಪರಿಸರದ ಸರ್ವ ಜನರ ಉತ್ಸವ ಆಗಬೇಕೆಂಬ ಅಭಿಲಾಷೆಯನ್ನು ಇರಿಸಿಕೊಂಡಿದ್ದಾರೆ. ಕಾವೂರು ಉತ್ಸವ ಯಶಸ್ವಿಯಾಗಿ ನೆರವೇರಲಿ ಎಂದರು.

ಕಾವೂರು ಕುಲ ಫ್ರೆಂಡ್ಸ್ ಕ್ಲಬ್‌ನ ಸದಸ್ಯ ಹಾಗೂ ನಟ ಸ್ವರಾಜ್ ಶೆಟ್ಟಿ ಮಾತನಾಡಿ, ಮೂರು ದಿನಗಳ ಕಾಲ ನಿರಂತರವಾಗಿ ಕಾರ್ಯಕ್ರಮ ನಡೆಯಲಿದೆ. ನೃತ್ಯ ವೈಭವ, ಶ್ರೀ ಶರಭಿ ಚೆಂಡೆ ವತಿಯಿಂದ ಫ್ಯೂಶನ್, ಮ್ಯೂಸಿಕಲ್ ನೈಟ್ ಕಾರ್ಯಕ್ರಮ ನಡೆಯಲಿದೆ. ಕಾರ್ಯಕ್ರಮದಲ್ಲಿ ಹಲವು ಮಂದಿ ಚಿತ್ರ ನಟರು ಭಾಗವಹಿಸಲಿದ್ದಾರೆ ಎಂದು ಹೇಳಿದರು.

ಕಾವೂರು ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಅರ್ಚಕ ಶೈಲೇಶ್ ಭಟ್ ಶುಭ ಹಾರೈಸಿದರು.

ಬಿಜೆಪಿ ಯುವ ಮೋರ್ಚಾ ಜಿಲ್ಲಾ ಉಪಾಧ್ಯಕ್ಷ ಆಶ್ರಿತ್ ನೋಂಡ, ವಿಶ್ವ ಹಿಂದೂ ಪರಿಷತ್ ಕಾವೂರು ಪ್ರಖಂಡ ಕಾರ್ಯದರ್ಶಿ ವಿಕೇಶ್ ಶಾಂತಿನಗರ, ಉದ್ಯಮಿ ಪ್ರತೀಕ್ ಪೂಜಾರಿ, ಬಿಜೆಪಿ 18ನೇ ವಾರ್ಡ್ ಪ್ರಧಾನ ಕಾರ್ಯದರ್ಶಿ ಜಗದೀಶ್ ಆಂಚನ್, ನವ ಶಕ್ತಿ ಮಹಿಳಾ ಮಂಡಲ ಅಧ್ಯಕ್ಷೆ ಹಸ್ಮಿತಾ ಶೈಲೇಶ್, ಸೀರಜ್ ಕುಮಾರ್ ಆಕಾಶಭವನ, ಸಾಕ್ಷತ್ ಶೆಟ್ಟಿ ಕಾವೂರು, ಜಗದೀಶ್ ಶೆಟ್ಟಿ, ಪ್ರಜ್ವಲ್ ಶೆಟ್ಟಿ ಮೊದಲಾದವರು ಉಪಸ್ಥಿತರಿದ್ದರು.

ಕಾವೂರು ಕುಲ ಫ್ರೆಂಡ್ಸ್ ಕ್ಲಬ್‌ನ ಸದಸ್ಯ ನಿತೇಶ್ ಪೂಜಾರಿ ಕಾರ್ಯಕ್ರಮ ನಿರೂಪಿಸಿ, ವಂದಿಸಿದರು.

ಮಂಜೇಶ್ವರ, ಕಾಸರಗೋಡು : ಈ ಬಾರಿ ನಿಮ್ಮ ಮತ ಅಭಿವೃದ್ಧಿಯ ಪರವಾಗಿರಲಿ

ಅಭಿವೃದ್ಧಿ ಎನ್ನುವುದು ಮೂಲತಃ ನಾಗರಿಕತೆಯ ಸಮೃದ್ಧಿ ಎಂದೇ ಭಾವಿಸಲಾಗಿದೆ. ಅದರೊಂದಿಗೆ ಕೆಲವೊಮ್ಮೆ ಸಂಸ್ಕೃತಿಯ ಅಂಶಗಳೂ ಸೇರಿಕೊಳ್ಳಬಹುದು. ಉದಾಹರಣೆಗೆ ಶಿಕ್ಷಣ ಕ್ಷೇತ್ರ ಎರಡಕ್ಕೂ ಸಂಬಂಧಿಸಿದುದು. ಇಲ್ಲಿಯೇ ಒಂದು ಮಾತು ಹೇಳಿಬಿಡುತ್ತೇನೆ. ಅಭಿವೃದ್ಧಿಯೇ ಆಗಿಲ್ಲ ಎನ್ನುವುದು ನನ್ನ ಅಭಿಪ್ರಾಯವಲ್ಲ. ಅಖಿಲ ಕೇರಳ ರಾಜ್ಯಕ್ಕೆ ಹೋಲಿಸಿದರೆ ಸಮ ಪ್ರಮಾಣದ ಅಭಿವೃದ್ಧಿ ನಡೆದಿಲ್ಲ. ಕೆಲವು ಅಭಿವೃದ್ಧಿಗಳು ನಡೆದಿವೆ. ಆದರೆ ಇವು ಸಹಜವಾಗಿ ನಡೆದಂತಹವುಗಳು. ಇಂತಹ ಅಭಿವೃದ್ಧಿಗಳಿಗೆ ನಾವು ಕಾರಣರೆಂದು ತಮ್ಮ ಬೆನ್ನನ್ನು ತಾವೇ ತಟ್ಟಿಕೊಳ್ಳುವುದು ಸರಿಯಲ್ಲ.

ಇಡೀ ಕಾಸರಗೋಡಿಗೆ ಎಷ್ಟೋ ವರ್ಷಗಳ ತನಕ ಇದ್ದದ್ದು ಒಂದೇ ಒಂದು ಕಾಲೇಜು ಮಾತ್ರ. ನಂತರ ಕಳ್ಳಿಗೆ ಮಹಾಬಲ ಭಂಡಾರಿ , ಯು.ಪಿ. ಕುಣಿಕುಳ್ಳರಾಯರಂತಹ ಕನ್ನಡಿಗ ಶಾಸಕರು ಪಟ್ಟ ಪರಿಶ್ರಮದಿಂದ ಮತ್ತು ಸಚಿವರಾಗಿದ್ದ ಡಾ. ಎ. ಸುಬ್ಬ ರಾವ್ ಅವರ ಇಚ್ಛಾ ಶಕ್ತಿಯೇ ಮುಖ್ಯ ಕಾರಣವಾಗಿ ಮಂಜೇಶ್ವರಕ್ಕೆ ಕಾಲೇಜು ಬಂತು. ಅದೂ ರಾಷ್ಟ್ರಕವಿ ಮಂಜೇಶ್ವರ ಗೋವಿಂದ ಪೈ ಅವರ ಹೆಸರಿನಲ್ಲಿ. ಆ ಸಮಯದಲ್ಲಿ ಸ್ಥಳೀಯರಾದ ನಾವೆಲ್ಲ ಮನೆ ಮನೇಗೆ ತಿರುಗಿ ಪಟ್ಟ ಪಾಡು ಎಷ್ಟೆಂಬುದನ್ನು ಬರೆಯುತ್ತಾ ಹೋದರೆ ಅದೇ ಒಂದು ಕಾದಂಬರಿಯಾದೀತು. ತಾತ್ಕಾಲಿಕವಾದ ಕಟ್ಟಡವನ್ನು ಒದಗಿಸುವಲ್ಲಿ ಶ್ರೀ ಮಧೂರು ಮದನಂತೇಶ್ವರ ದೇವಸ್ಥಾನದ ಕೊಡುಗೆಯೂ ಇತ್ತು. ಅಂತೂ ಇಂತೂ ಕಾಲೇಜು ಬಂತು. ಆದರೆ ಅದು ಇನ್ನೂ ಪೂರ್ಣ ಪ್ರಮಾಣದಲ್ಲಿ ಬೆಳೆಯಲಿಲ್ಲ. ಕಾಲೇಜಿನಿಂದ 2 ಕಿ.ಮೀ. ದೂರದಲ್ಲಿರುವ ಗಿಳಿವಿಂಡು ಸ್ಮಾರಕಕ್ಕೆ ನೇರವಾದ ಸಂಪರ್ಕವನ್ನು ಸಾಧಿಸಲು ಇನ್ನೂ ಸಾಧ್ಯವಾಗಿಲ್ಲ. ಮಾತ್ರವಲ್ಲ ರಾಷ್ಟ್ರಕವಿಯ ಸ್ವಗೃಹವನ್ನು ಭವ್ಯ ಸ್ಮಾರಕವಾಗಿ ನಿರ್ಮಾಣ ಮಾಡುವ ಕನಸು ನನಸಾಗಿರಲಿಲ್ಲ. ಪೈ ಯವರ ಉತ್ತರಾಧಿಕಾರಿಯವರು ಉಚಿತವಾಗಿ ಬಿಟ್ಟುಕೊಟ್ಟ ನಿವೇಶನದಲ್ಲಿರುವ ಗಿಳಿವಿಂಡನ್ನು ಸುಸ್ಥಿತಿಯಲ್ಲಿ ಉಳಿಸಿಕೊಳ್ಳುವುದಕ್ಕೂ ಕನಿಷ್ಠ ಸಿಬ್ಬಂದಿಯನ್ನು ನೇಮಿಸಿ ಸಾರ್ವಜನಿಕರಿಗೆ ಮುಕ್ತವಾಗಿ ತೆರೆದಿರಿಸುವುದಕ್ಕೆ ಇನ್ನೂ ಯೋಗ ಕೂಡಿಬಂದಿಲ್ಲ. ಈ ಅವಗಣನೆ ಸಮಗ್ರ ಕಾಸರಗೋಡಿನ ಅಭಿವೃದ್ಧಿ ಯಲ್ಲಾದ ಅವಗಣನೆಗೆ ಜ್ವಲಂತ ಸಾಕ್ಷಿಯಾಗಿದೆ. ಇದು ಅಮಾನವೀಯ. ಇದೇ ಮಾತು ಆರೋಗ್ಯ ಕ್ಷೇತ್ರಕ್ಕೂ ಅನ್ವಯಿಸುತ್ತದೆ. ಎಷ್ಟೋ ವರ್ಷಗಳಿಂದ ಕಾಸರಗೋಡಿನಲ್ಲಿದ್ದುದು ಒಂದೇ ಒಂದು ಸರಕಾರಿ ಆಸ್ಪತ್ರೆ ಮತ್ತು ಉಳಿದ ಭಾಗಗಳಲ್ಲಿ ಆರೋಗ್ಯ ಸ್ಥಾಪನೆಗಳು ಅಭಿವೃದ್ಧಿಯನ್ನು ಸಾಧಿಸಲಿಲ್ಲ.

> **ಮತದಾನ ಪ್ರಜಾಪ್ರಭುತ್ವದಲ್ಲಿ ಪ್ರಜೆಗಳ ಭಾಗಕ್ಕಿರುವ ವರದಾನ. ನಮ್ಮ ಅಭಿಪ್ರಾಯವನ್ನು ತಿಳಿಸುವ ಹಕ್ಕನ್ನು ಚಲಾಯಿಸಲಿಕ್ಕಿರುವ ಏಕೈಕ ಈ ಅವಕಾಶ. ಇದು ಪೂರ್ಣ ರಹಸ್ಯವಾಗಿ ನಡೆಯುವುದರಿಂದ ಯಾವುದೇ ಅಂಜಿಕೆಯಿಲ್ಲದೆ ಅಳುಕಿಲ್ಲದೆ ಆತ್ಮಸಾಕ್ಷಿಗೆ ಅನುಗುಣವಾಗಿ ಮತದಾನವನ್ನು ಮಾಡುವುದಕ್ಕೆ ಎಲ್ಲರೂ ಸ್ವತಂತ್ರರಿದ್ದಾರೆ. ಆಮಿಷಗಳಿಗೆ ಬೆದರಿಕೆಗಳಿಗೊಳಗಾಗಿ ಈ ಅವಕಾಶವನ್ನು ಕಳೆದುಕೊಂಡರೂ ಮುಂದೆ ಪಶ್ಚಾತ್ತಾಪ ಪಡಬೇಕಾದೀತು.**



ವರ್ಷಗಳ ಹಿಂದೆ ನಾನು ಮೆಡಿಕಲ್ ಆಫೀಸರ್ ಆಗಿದ್ದಾಗಲೇ ಪೋಸ್ಟ್ ಮಾರ್ಟಂ ಇತ್ಯಾದಿ ಸೌಲಭ್ಯಗಳನ್ನು ಹೊಂದಿದ್ದ ಸರಕಾರಿ ಆಸ್ಪತ್ರೆ ಎನ್ನುವ ಮೊದಲ ಶ್ರೇಣಿಯ ಗುರುತಿಸುವಿಕೆಗೆ ಪಾತ್ರವಾಗಿದ್ದ ಮಂಜೇಶ್ವರ ಆಸ್ಪತ್ರೆ ತಾಲೂಕು ಕೇಂದ್ರದ ಕುರಿತಾದ ಈ ವರೆಗಿನ ಜನಪ್ರತಿನಿಧಿಗಳ ಅವಗಣನೆಯ ಪರಿಣಾಮವಾಗಿ ಕಾಸರಗೋಡು ಆರೋಗ್ಯ ಸೌಲಭ್ಯಗಳಿಂದ ವಂಚಿತವಾದವು. ಜನ ಖಾಸಗಿ ಆಸ್ಪತ್ರೆಗಳನ್ನು ಅವಲಂಬಿಸಬೇಕಾಗಿ ಬಂತು. ಮತ್ತು ಹೆಚ್ಚಿನ ಚಿಕಿತ್ಸೆಗೆ ಮಂಗಳೂರಿಗೆ ಹೋಗಬೇಕಾಗಿ ಬಂತು.

ಇದೀಗ ಸರಕಾರಿ ವೈದ್ಯಕೀಯ ಕಾಲೇಜು ಉಕ್ಕಿನಡ್ಕದಲ್ಲಿ ಪ್ರಾರಂಭಿಸುವುದಕ್ಕೆ ಹಸಿರು ನಿಶಾನೆ ತೋರಿಸಿದ್ದರೂ ಅಲ್ಲಿಯೂ ಬೆಳವಣಿಗೆ ಕುಂಠಿತವಾಗಿ ನಡೆಯುತ್ತದೆ. ಇನ್ನು ಕನ್ನಡಿಗರ (ಕಾಸರಗೋಡಿನ) ಹೃದಯ ಪ್ರದೇಶದಂತಿರುವ ನೀರ್ಚಾಲು, ಪೆರಡಾಲ, ಪೆರ್ಲ, ಮುಳ್ಳೇರಿಯ, ಕುಂಬಳೆ ಮೊದಲಾದ ಕೇಂದ್ರಗಳಲ್ಲಿ ಎದ್ದು ತೋರುವ ಅಭಿವೃದ್ಧಿಗಳಾಗಿಲ್ಲ.

ಗಿಳಿವಿಂಡು ಸೇರಿದಂತೆ ಶಿಕ್ಷಣ ಸಂಸ್ಥೆಗಳು. ಧಾರ್ಮಿಕ ಕೇಂದ್ರಗಳು ಪ್ರವರ್ಧಮಾನಕ್ಕೆ ಬಂದಿದ್ದ ರೈಲ್ವೆ ಗೇಟಿನ ಒಳಗಿರುವ ಹಳೆಯ ಮಂಜೇಶ್ವರ ಸಂಪೂರ್ಣ ನಿರ್ಲಕ್ಷ್ಯಕ್ಕೆ ಒಳಗಾಯಿತು. ಅನೇಕ ಸರಕಾರಿ ಸ್ಥಾಪನೆಗಳನ್ನು, ಬ್ಯಾಂಕುಗಳನ್ನು ಅಲ್ಲಿಂದ ಎತ್ತಂಗಡಿ ಮಾಡಲಾಯಿತು. ಸ್ಥಳೀಯ ಮುಖಂಡರ ಪ್ರಯತ್ನದ ಸಹಿತವಾಗಿಯೂ ರಿಜಿಸ್ಟ್ರಾರ್ ಆಫೀಸನ್ನು ಮಾತ್ರ ಅಲ್ಲಿಯೇ ಉಳಿಸಿಕೊಳ್ಳುವುದಕ್ಕೆ ಸಾಧ್ಯವಾಯಿತು. ಬಂದರು ಇತ್ಯಾದಿ ಸೌಲಭ್ಯಗಳು ಬಂದರು ಹೋದರು ಎಂಬಂತೆ ಮಾಯವಾಯಿತು. ಸಾರಿಗೆ ಸಂಪರ್ಕವನ್ನು ಬಿಟ್ಟರೆ ಉಳಿದ ಕ್ಷೇತ್ರಗಳಲ್ಲಿ ಅಖಿಲ ಕೇರಳ ರಾಜ್ಯದೊಂದಿಗೆ ಬೇರೆ ಬೇರೆಯಾಗಿ ನಿಲ್ಲಬಲ್ಲ ಅಭಿವೃದ್ಧಿ ಈ ಪ್ರದೇಶದಲ್ಲಿ ನಡೆದಿಲ್ಲ. ಹಲವಾರು ಬೇಡಿಕೆಗಳ ಕುರಿತಾದ ಹಕ್ಕೊತ್ತಾಯವನ್ನು ಈಗಾಗಲೇ ಸರಕಾರದ ಮುಂದೆ ಮಂಡಿಸಲಾಗಿದೆ.

ಹಲವು ಸರಕಾರಿ ಕಟ್ಟಡಗಳು ಪಾಳು ಬಿದ್ದಿವೆ. ಅಭಿವೃದ್ಧಿಯ ಅವಗಣನೆಯ ಅವಶೇಷಗಳಂತೆ ಉಳಿದು ಕೊಂಡಿವೆ. ಉದಾ ಪಾರ್ತಿಸುಬ್ಬ ಸ್ಮಾರಕ ಭವನ.

ಕಾಸರಗೋಡಿಗೆ ಸಂಬಂಧಿಸಿ ಒಂದು ಮಾತು ಹೇಳಲೇಬೇಕು. ಕೇರಳ ರಾಜ್ಯದ ಆಶ್ರಯದಲ್ಲಿ ನಾವು ಅಭಿವೃದ್ಧಿ ಸಾಧಿಸಬೇಕಾದರೆ ಕೇಂದ್ರ ಸರಕಾರದ ಪೂರ್ಣ ಸಹಕಾರ ಬೇಕೇ ಬೇಕು. ರಾಜಕೀಯವಾದ ಒಂದು ಉದಾಹರಣೆಯನ್ನು ಕೊಡುವುದಾದರೆ ಶಶಿ ತರೂರು ಈ ನಿಟ್ಟಿನಲ್ಲಿ ತೋರಿಸಿದ ಒಲವನ್ನು ಒಂದು ಉದಾಹರಣೆಯಾಗಿ ಸ್ಮರಿಸಿಕೊಳ್ಳಬಹುದು.

ಕನ್ನಡಕ್ಕೆ ಜಯವಾಗಲಿ.

■ ಡಾ.ರಮಾನಂದ ಬನಾರಿ,
ಹಿರಿಯ ವೈದ್ಯರು, ಹಿರಿಯ ಕವಿ, ಸಾಹಿತಿ

ಕರ್ನಾಟಕ ಸರಕಾರ

ಕಾರ್ಯನಿರ್ವಾಹಕ ಇಂಜಿನಿಯರರ ಕಛೇರಿ, ಲೋಕೋಪಯೋಗಿ ಇಲಾಖೆ ಮಂಗಳೂರು ವಿಭಾಗ, ಮಂಗಳೂರು

ಸಂಖ್ಯೆ:ಲೋ.ಇ:ಮಂವಿ :ಟಿ.ಎನ್‌ಡಿ:(01ಇ)ಜೆಇ-1:2026-27 ದಿನಾಂಕ: 04.04.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

(ಸಾರ್ವಜನಿಕ ಪ್ರೊಕ್ಯೂರ್‌ಮೆಂಟ್ ಮೂಲಕ)

ಲೆಕ್ಕಶೀರ್ಷಿಕೆ: 8443– ಠೇವಣಿ ಕೊಡುಗೆ (ಸ್ವಚ್ಛ ಭಾರತ್ ಮಿಷನ್) ಯಡಿ ಇಂಡೆಂಟ್ ನಂ: 35443 ಈ ಕಾಮಗಾರಿಗೆ ಕೆ.ಪಿ.ಪಿ. ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದ್ದು, ಟೆಂಡರನ್ನು ಸಲ್ಲಿಸುವ ಕೊನೆಯ **ದಿನಾಂಕ: 13.04.2026 (ಅಪರಾಹ್ನ 5.00 ಗಂಟೆಯವರೆಗೆ ಮಾತ್ರ)** ನಿಗದಿಪಡಿಸಲಾಗಿರುತ್ತದೆ.

ಕೆ,ಡಬ್ಲ್ಯೂ– 1 ಬಿಡ್ ಡೊಕ್ಯೂಮೆಂಟ್ ಪ್ರಕಾರ ಟೆಂಡರ್ ಕರೆಯಲಾಗಿದ್ದು, ಈ ಕಾಮಗಾರಿಯ ಕನಿಷ್ಠ ಅಂದಾಜು ಮೊತ್ತ ರೂ.10.00 ಲಕ್ಷ, ಆಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಇಲಾಖೆಯ ವೆಬ್‌ಸೈಟ್ **https://kppp.karnataka.gov.in** ನ್ನು ಸಂಪರ್ಕಿಸಲು ಕೋರಲಾಗಿದೆ.

ಸಹಿ/– ಕಾರ್ಯನಿರ್ವಾಹಕ ಇಂಜಿನಿಯರ್

DIPR/DK/KSMCA/29/26-27 dt.06.04.2026

ಪ್ರಕಟಣೆ

ಪುತ್ತೂರು ತಾಲೂಕು ಕುರಿಯಾ ಗ್ರಾಮದ ಸ ನಂ 65/1ಎಫ್1ಎ1ಸಿ ರ ಆಸ್ತಿಯು ನನಗೆ ಪುತ್ತೂರು ತಹಶೀಲ್ದಾರರು ಇವರ NCRSR380/1991-92ನೇ ವ್ಯವಹರಣೆಯಲ್ಲಿ ದಿನಾಂಕ: 28.12.1995ರಂತೆ ನೀಡಿದ ಸಾಗುವಳಿ ಚೀಟಿ ಪ್ರಕಾರ ಮೂಲಕ ಬಂದಿರುತ್ತದೆ ಮೂಲ ಸಾಗುವಳಿ ಚೀಟಿನನ್ನಲ್ಲಿ ಆಕಸ್ಮಿಕವಾಗಿ ನಮ್ಮ ಮನೆಯಿಂದ ಪುತ್ತೂರು ತಾಲೂಕು ಕಚೇರಿ ಮಾರ್ಗ ಮಧ್ಯೆ 31.03.2026ರಂದು ಕಳೆದು ಹೋಗಿರುತ್ತದೆ.ಅದನ್ನು ಎಲ್ಲಿಯೂ ಅಡಮಾನ ಮಾಡಿ ಸಾಲ ಪಡಕೊಂಡಿರುವುದಿಲ್ಲ, ಸದ್ರಿದಾಖಲೆಯು ಯಾರಿಗಾದರೂ ಸಿಕ್ಕಿದಲ್ಲಿ ಒಂದು ವಾರದೊಳಗಾಗಿ ಕೆಳಗಿನ ವಿಳಾಸಕ್ಕೆ ತಂದು ನೀಡುವರೇ ಈ ಮೂಲಕ ವಿನಂತಿಸುತ್ತೇನೆ. ಸದ್ರಿ ದಾಖಲೆ ಕಳೆದು ಹೋದ ಬಗ್ಗೆ ಈಗಾಗಲೇ ದೂರನ್ನು ಕೂಡ ನೀಡಲಾಗಿರುತ್ತದೆ ಎಂದು ಈ ಮೂಲಕ ತಿಳಿಸುತ್ತೇನೆ.

ಸಹಿ/- ನಾರಾಯಣ ಮಣಿಯಾಣಿ
ಬಿನ್:ದಿ.ಅಪ್ಪು ಮಣಿಯಾಣಿ
ಇಡಬೆಟ್ಟು ಮನೆ, ಕುರಿಯಾಗ್ರಾಮ,
ಪುತ್ತೂರು ತಾಲೂಕು, ದ.ಕ.

ದಿನಾಂಕ: 06–04–2026

IN THE COURT OF THE IV ADDL. DISTRICTS AND SESSIONS JUDGE, AND COMMERCIAL COURT MANGALORE D.K.

Ex Case No. 292/2025
(In Com. O.S.No. 21/2023)

Between :
Sri. Dayananda Rai M--Petitioner/DHR
And
Mr. Biju T.J -Respondents/JDR

TO WHOMSOEVER IT MAY CONCERN

NOTICE

Mr. Biju T.J
Aged about 45 years,
S/o Mr. Joseph T.V,
R/at Sowmya Wood, Naguri
Manngalore-575002

Take notice that the petitioner named above, has filed above petition, seeking recovery of the total arrears of rent along with possession of the suit schedule premises as per decree dated 14.08.2025 passed in Com.O.S No. 21/2023 before this Honible court and such other relief.

Notice is hereby given to you to appear before this Court on 27.04.2026 at 11.00 a.m. either in person or through your pleader. If you fail to appear, the suit will be heard in your absence.

Given under my hand and seal of the court on this 04th day of April 2026.

(By order of the Court)

Sd/-
Advocate for Petitioner
M Chidananda Kedilaya
Mangalore

Sd/-
**Chief Administrative Officer,
District & Sessions Court
Mangalore**

ಕರ್ನಾಟಕ ಸರ್ಕಾರ

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಪುತ್ತೂರು ಉಪ ವಿಭಾಗ,

ಪುತ್ತೂರು, ಕೆ.ಎಸ್.ಆರ್.ಟಿ.ಸಿ ಬಸ್ ಸ್ಟಾಂಡ್ ಎದುರು, ನೆಲ್ಲಿಕಟ್ಟೆ, ಪುತ್ತೂರು–574201

ಸಂಖ್ಯೆ: ಸಅಸಂಪುತ್ತೂರು:ವಿವ–01/ಇ–ಟೆಂಡರ್/2026–27 ದಿನಾಂಕ: 01.04.2026

ಇ–ಟೆಂಡರ್ ಪ್ರಕಟಣೆ

2026–27ನೇ ಸಾಲಿನಲ್ಲಿ ಪುತ್ತೂರು ಉಪ ವಿಭಾಗದ ವ್ಯಾಪ್ತಿಗೊಳಪಡುವ ವಿವಿಧ ವಲಯಗಳಲ್ಲಿ ವಿವಿಧ ಯೋಜನೆಯಡಿ ನೆಡುತೋಪು ನಿರ್ಮಾಣ, ನೆಡುತೋಪು ಪೋಷಣೆ ಇತ್ಯಾದಿ ಕಾಮಗಾರಿಗಳನ್ನು ಕೈಗೊಳ್ಳಲು ಅರ್ಹ ನೊಂದಾಯಿತ ಅರಣ್ಯ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಇ–ಟೆಂಡರ್‌ನ್ನು ಅಹ್ವಾನಿಸಲಾಗಿದೆ. ಟೆಂಡರ್ ನಮೂನೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ನಲ್ಲಿ ಪಡೆದು ಇ–ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 16–04–2026 ಅಪರಾಹ್ನ 5.00 ಗಂಟೆಗೆ, ತಾಂತ್ರಿಕ ಬಿಡ್‌ನ್ನು ಮತ್ತು ಆರ್ಥಿಕ ಬಿಡ್‌ನ್ನು ತೆರೆಯುವ ಸಮಯ ದಿನಾಂಕ: 18–04–2026 ರಂದು ಪೂರ್ವಾಹ್ನ 11.00 ಗಂಟೆಗೆ ಒಂದು ವೇಳೆ ಮೇಲೆ ಹೇಳಿದ ದಿನಾಂಕದಂದು ಯಾವುದೇ ಗುತ್ತಿಗೆದಾರರು ಟೆಂಡರ್ ಹಾಕದಿದ್ದಲ್ಲಿ ಇದೇ ಇ–ಟೆಂಡರ್ ಪ್ರಕ್ರಿಯೆಯನ್ನು ಮುಂದುವರಿಸಿ ಮರು ಇ–ಟೆಂಡರನ್ನು ಆಹ್ವಾನಿಸಲಾಗಿದ್ದು, ಮರು ಟೆಂಡರನ್ನು ಇ–ಪೋರ್ಟಲ್‌ನಲ್ಲಿ ಸಲ್ಲಿಸಲು ಕೊನೆಯ ದಿನಾಂಕ: 27–04–2026 ರಂದು ಅಪರಾಹ್ನ 5.00 ಗಂಟೆಗೆ, ತಾಂತ್ರಿಕ ಬಿಡ್‌ನ್ನು ಮತ್ತು ಆರ್ಥಿಕ ಬಿಡ್‌ನ್ನು ತೆರೆಯುವ ಸಮಯ ದಿನಾಂಕ: 29–04–2026 ರಂದು ಪೂರ್ವಾಹ್ನ 11.00 ಗಂಟೆಗೆ ಹೆಚ್ಚಿನ ವಿವರಗಳನ್ನು ವಿಭಾಗೀಯ ಕಛೇರಿಯಿಂದ ಪಡೆದುಕೊಳ್ಳಬಹುದು .

ಸಹಿ/– ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ,
ಪುತ್ತೂರು ಉಪವಿಭಾಗ, ಪುತ್ತೂರು

DIPR/DK/KSMCA/28/26-27 dt. 06.04.2026

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ಶಿರಸಿ ವಿಭಾಗ, ಶಿರಸಿ

ಕ್ರಸಂ: ಪಿಬಿ/4059CMIDP/ಅಧಿಸೂಚನೆ: 2025–26/4016 ದಿನಾಂಕ: 31.03.2026

ಇ–ಟೆಂಡರ್ ಅಧಿಸೂಚನೆ IFT-KW-4

ಇ–ಪ್ರೋಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ (ಸ್ಟ್ಯಾಂಡರ್ಡ್ ಡಾಕ್ಯುಮೆಂಟ್ ದ್ವಿ ಲಕೋಟೆ ಪದ್ಧತಿಯಲ್ಲಿ)(ಅಲ್ಪಾವಧಿ)

ಕರ್ನಾಟಕ ರಾಜ್ಯಪಾಲರ ಪರವಾಗಿ ಲೋಕೋಪಯೋಗಿ, ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಗಿನ ಕಾಮಗಾರಿಗಳಿಗಾಗಿ ಇ–ಪ್ರೋಕ್ ಸ್ಟ್ಯಾಂಡರ್ಡ್ ಡಾಕ್ಯುಮೆಂಟ್ ಮುಖಾಂತರ ಟೆಂಡರನ್ನು ದ್ವಿ ಲಕೋಟೆ ಪದ್ಧತಿಯಲ್ಲಿ ಈ ಕೆಳಕಾಣಿಸಿದಂತೆ ಇ–ಪ್ರೋಕ್‌ನಲ್ಲಿ ಅಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ಇ–ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ kppp.karnataka.gov.in ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರಿಗಾಗಿ ಭಾಗವಹಿಸಬಹುದು. ಹೆಚ್ಚಿನ ವಿವರಗಳಿಗೆ ಈ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಮಾಹಿತಿ ಪಡೆಯಬಹುದು. ಕಾಮಗಾರಿಗಳ ಇನ್ನುಳಿದ ವಿವರಗಳು ಈ ಕೆಳಗಿನಂತಿವೆ. ಒಟ್ಟು 1 ಕಾಮಗಾರಿ

(1) ಟೆಂಡರ್ ಮಾಹಿತಿ ವಿಚಾರಣೆಗೆ ಕೊನೆಯ ದಿನಾಂಕ: 08–04–2026 (16.00 ಗಂಟೆವರೆಗೆ) (2) ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ: 09–04–2026 (16.00 ಗಂಟೆವರೆಗೆ) (3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 10–04–2026 (16.30 ಗಂಟೆಗೆ) (4) ಆರ್ಥಿಕ ಬಿಡ್ ತೆರೆಯುವ ದಿನಾಂಕ: 13–04–2026 (16.00 ಗಂಟೆಗೆ)

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ ವಿಭಾಗ
ಶಿರಸಿ (ಉತ್ತರ ಕನ್ನಡ ಜಿಲ್ಲೆ)

DIPR/KWR/KSMCA/17/26-27 dt. 04.04.2026

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ,

ಕಂಟೋನ್‌ಮೆಂಟ್, ಬಳ್ಳಾರಿ ದೂರವಾಣಿ: 08392–200293

ಸಂ: ಕಾನಿಇಂ/ಸನೀ&ಅಂ.ಅ.ವಿ/ಬ/ಸ.ಇಂ–2/2026–27/04 ದಿ:01.04.2026

ಅಲ್ಪಾವಧಿ ಟೆಂಡರ್ ಪ್ರಕಟಣೆ
("KPPP" ಪೋರ್ಟಲ್ ಕೆ.ಡಬ್ಲ್ಯೂ–4 ಮುಖಾಂತರ)

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಲೆಕ್ಕಶೀರ್ಷಿಕೆ 4702 ಎ ನೀ ಯೋ –ಪ್ರಧಾನ ಕಾಮಗಾರಿಯಡಿ ವಿಜಯನಗರ ಜಿಲ್ಲೆಯ ಹೊಸಪೇಟೆ ತಾಲ್ಲೂಕಿನ 01 ಕಾಮಗಾರಿಗಾಗಿ ದ್ವಿಲಕೋಟೆ ಪದ್ಧತಿಯಲ್ಲಿ ಕಾರ್ಯನಿರ್ವಾಹಕ ಇಂಜಿನೀಯರವರಿಂದ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಯ ಟೆಂಡರಿಗಿಟ್ಟ ಅಂದಾಜು ಮೊತ್ತ ರೂ. 105.27 ಲಕ್ಷಗಳಿರುತ್ತದೆ. ಟೆಂಡರ್‌ನ್ನು ದಿನಾಂಕ: 01.04.2026 ರಿಂದ ದಿನಾಂಕ: 09.04.2026 ರ ಸಂಜೆ 5.30 ಗಂಟೆಯವರಗೆ ಸಲ್ಲಿಸಬಹುದು. ಕಾಮಗಾರಿಯ ತಾಂತ್ರಿಕ ಬಿಡ್‌ಗಳನ್ನು ದಿನಾಂಕ: 13.04.2026 ರ ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು ಹಾಗೂ ಕಾಮಗಾರಿಯ ಆರ್ಥಿಕ ಬಿಡ್‌ಗಳನ್ನು ದಿನಾಂಕ: 15.04.2026 ರ ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಳನ್ನು "KPPP" ವೆಬ್‌ಸೈಟ್ http://kppp.karnataka.gov.in ನಲ್ಲಿ ಪಡೆಯಬಹುದು.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ. ಬಳ್ಳಾರಿ

ವಾ.ಸಾ.ಸಂ.ಇ/ಬಳ್ಳಾರಿ/2026–27/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/22

ಬಜಪೆ ಪಟ್ಟಣ ಪಂಚಾಯತ್ ಕಾರ್ಯಾಲಯ, ಬಜಪೆ, ದ.ಕ.

ಸಂ: ಬಪಪಂ/ಜೆಇ/ಟೆಂಡರ್/01/2026–27 ದಿನಾಂಕ: 06–04–2026

ಟೆಂಡರ್ ಪ್ರಕಟಣೆ (ಇ–ಟೆಂಡರಿಂಗ್ ಮುಖಾಂತರ)

ಬಜಪೆ ಪಟ್ಟಣ ಪಂಚಾಯತ್‌ನ 2026–27ನೇ ಸಾಲಿನ ಪಟ್ಟಣ ಪಂಚಾಯತ್ ನಿಧಿ ಅನುದಾನದಡಿ 03 ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ನಿರ್ದಿಷ್ಟ ಟೆಂಡರು ದಸ್ತಾವೇಜಿನಲ್ಲಿ (Standard tender document) ಇ–ಟೆಂಡರಿಂಗ್ ಮುಖಾಂತರ ಐಟಂವಾರು ಟೆಂಡರುಗಳನ್ನು ಆಹ್ವಾನಿಸಲಾಗಿದೆ. ಟೆಂಡರ್ ಬಗ್ಗೆ ಮಾಹಿತಿಯನ್ನು www.kppp.karnataka.gov.in ನಲ್ಲಿ ವೀಕ್ಷಿಸಬಹುದು/ ಪಡೆಯಬಹುದು.

Indent No.: (1) DMA/2026-27/OW/WORK_INDENT57065 (2) DMA/2026-27/OW/WORK_INDENT57067 (3) DMA/2026-27/EL/WORK_INDENT56967

(1) ಟೆಂಡರ್ ಸಲ್ಲಿಸಲು ಪ್ರಾರಂಭ ದಿನಾಂಕ: 06–04–2026 (2) ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ: 21–04–2026 ಸಂಜೆ 04:00 ಗಂಟೆಗೆ (3) ಸ್ವೀಕೃತವಾದ ಟೆಂಡರು ತೆರೆಯುವ ದಿನಾಂಕ ಮತ್ತು ವೇಳೆ: 22–04–2026 ಸಂಜೆ 05.00 ಗಂಟೆಗೆ

ಸಹಿ/– ಆಡಳಿತಾಧಿಕಾರಿ
ಬಜಪೆ ಪಟ್ಟಣ ಪಂಚಾಯತ್

ಸಹಿ/– ಮುಖ್ಯಾಧಿಕಾರಿ,
ಬಜಪೆ ಪಟ್ಟಣ ಪಂಚಾಯತ್

DIPR/DK/KSMCA/32/26-27 dt: 06.04.2026

ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ

ಕೇಂದ್ರ ಕಛೇರಿ, ಹುಬ್ಬಳ್ಳಿ.

ಸಂಖ್ಯೆ: ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂ.01/2026–27 ದಿನಾಂಕ: 06–04–2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ವೇದಿಕೆ (ಕೆಪಿಪಿಪಿ) ಯ ಮೂಲಕ ಆಸಕ್ತ ಬಿಡ್‌ದಾರರಿಂದ ಈ ಕೆಳಗೆ ತೋರಿಸಿದಂತೆ ಸಾಮಗ್ರಿಗಳ ಸರಬರಾಜಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕ್ರ.ಸಂ.	ಟೆಂಡರ್ ವಿವರಣೆ	ಅಂದಾಜು ಮೌಲ್ಯ
01	ಟಾಟಾ ಬಿಎಸ್-VI ವಾಹನಗಳಿಗೆ ಆಟೋಮೊಟಿವ್ ಲ್ಯೂಬ್ರಿಕಂಟ್ಸ್, ಕೂಲಂಟ್ ಮತ್ತು ಆಡ್‌ಬ್ಲೂ (ಲಿಕ್ವಿಡ್ ಯೂರಿಯಾ) (ಅಲ್ಪಾವಧಿ ಟೆಂಡರ್).	ರೂ. 438 ಲಕ್ಷ
02	ಕ್ಲಚ್ ಮತ್ತು ಕ್ಲಚ್ ಬಿಡಿಭಾಗಗಳು.	ರೂ. 342 ಲಕ್ಷ
03	ರೇಡಿಯೇಟರ್ ಅಸೆಂಬ್ಲಿ ಮತ್ತು ರೇಡಿಯೇಟರ್ ಬಿಡಿಭಾಗಗಳು.	ರೂ. 177 ಲಕ್ಷ
04	ಬಸ್ ಸೀಟ್ ಅಸೆಂಬ್ಲಿಗಳು.	ರೂ. 165 ಲಕ್ಷ
05	ಲೇಲ್ಯಾಂಡ್ ಬಿಎಸ್-VI ವಾಹನಗಳಿಗೆ ಆಟೋಮೊಟಿವ್ ಲ್ಯೂಬ್ರಿಕಂಟ್ಸ್ ಮತ್ತು ಕೂಲಂಟ್.	ರೂ. 86 ಲಕ್ಷ
06	ಎಲ್‌ಇಡಿ ರೂಫ್ ಲ್ಯಾಂಪ್ ಅಸೆಂಬ್ಲಿಗಳು.	ರೂ. 81 ಲಕ್ಷ
07	ಕ್ಯೂರಿಂಗ್ ಬ್ಯಾಗ್ ಮತ್ತು ಕ್ಯೂರಿಂಗ್ ಎನ್ವೇಲೋಪ್‌ಗಳು.	ರೂ. 56 ಲಕ್ಷ

ಬಿಡ್ ಸಲ್ಲಿಕೆಯ ಕೊನೆಯ ದಿನಾಂಕ ಮತ್ತು ಸಮಯ : ಟೆಂಡರ್ ಕ್ರ. ಸಂ. 1, 4, 5, 6 ಮತ್ತು 7 ರ ಟೆಂಡರ್‌ಗಳಿಗೆ 21–04–2026 ಮತ್ತು ಕ್ರ. ಸಂ. 2 ಮತ್ತು 3 ರ ಟೆಂಡರ್‌ಗಳಿಗೆ ದಿನಾಂಕ : 21–05–2026 ಘಂಟೆ, 17:30 ವರೆಗೆ.

ವಿವರಗಳಿಗಾಗಿ ವೆಬ್‌ಸೈಟ್ : **http://kppp.karnataka.gov.in** ಅಥವಾ ಮೊಬೈಲ್ ಫೋನ್ ಸಂಖ್ಯೆ : 70220 09113 ಗೆ ಸಂಪರ್ಕಿಸಿ.

ಸಹಿ/– ಉಗ್ರಾಣ ಮತ್ತು ಖರೀದಿ ನಿಯಂತ್ರಕರು,
(ಟೆಂಡರ್ ಕರೆಯುವ ಪ್ರಾಧಿಕಾರ).

ಡಿಐಪಿಆರ್/ಧಾರವಾಡ/21/ಮಣಿಪಾಲ್/2026–27

ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಬಾಗಲಕೋಟ

ಆಸ್ತಿ ಅಧಿಕಾರಿಗಳ ಕಛೇರಿ, ಸೀಮಿಕೇರಿ ಕ್ರಾಸ್ ಹತ್ತಿರ, ಹುಬ್ಬಳ್ಳಿ ಬೈಪಾಸ್ ರಸ್ತೆ, ಉದ್ಯಾನಗಿರಿ ಬಾಗಲಕೋಟ – 587104.

ಸಂ : ಆ.ಅ./ತೋವಿವಿಬಾ/ಸಖಿಕ/ಟೆ.ಸಂ–218/2026–27 ದಿನಾಂಕ : 06–04–2026

ಮರುಟೆಂಡರ ಪ್ರಕಟಣೆ

ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದಡಿಯಲ್ಲಿ ಬರುವ ತೋ.ಮ.ವಿ., ಬೀದರಗೆ Establishment of Common Incubation Centre for processing of fruits, vegetables at:COH, Bidar (including of Construction Works) ಕೆ.ಕೆ.ಆರ್.ಡಿ.ಬಿ. ಯೋಜನೆಯಡಿಯಲ್ಲಿ ಖರೀದಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಮರುಟೆಂಡರನ್ನು ಆಹ್ವಾನಿಸಲಾಗಿದ್ದು, ಆಸಕ್ತ ಬಿಡ್‌ದಾರರು ಟೆಂಡರ ಪ್ರಕಟಣೆ, ವಿವರಣೆ ಮತ್ತು ಷರತ್ತುಗಳಿಗಾಗಿ ವೆಬ್‌ಸೈಟ್ https://kppp.karnataka.gov.in ಮೂಲಕ ಪಡೆದುಕೊಂಡು ಟೆಂಡರನ್ನು ಸಲ್ಲಿಸುವುದು.

ಟೆಂಡರನ ಘಟನಾವಳಿಗಳು (ವೇಳಾಪಟ್ಟಿ)

1	ಟೆಂಡರ ಅಂಶಗಳ ಸ್ಪಷ್ಟೀಕರಣಕ್ಕಾಗಿ ಕೊನೆಯ ದಿನಾಂಕ	16–04–2026	@	14.00 ಘಂ
2	ಪೂರ್ವ ಬಿಡ್ ಸಭೆಯ ದಿನಾಂಕ	17–04–2026	@	11.00 ಘಂ
3	ಟೆಂಡರ ಸಲ್ಲಿಸುವ ಕೊನೆಯ ದಿನಾಂಕ	06–05–2026	@	16.00 ಘಂ
4	ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ	08–05–2026	@	11.00 ಘಂ
5	ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ (ಸಾಧ್ಯವಾದಲ್ಲಿ)	12–05–2026	@	12.00 ಘಂ

ಬಿಡ್‌ದಾರರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ಗೆ ಕಾಲಕಾಲಕ್ಕೆ ಭೇಟಿ ನೀಡಿ ಯಾವುದಾದರೂ ತಿದ್ದುಪಡಿ corrigendum/ addendum ಬಗ್ಗೆ ಮಾಹಿತಿ ಪಡೆಯಬೇಕು.. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ ಫೋ : 08354–230258.

ಸಹಿ/–ಆಸ್ತಿ ಅಧಿಕಾರಿಗಳು
ತೋ.ವಿ.ವಿ, ಬಾಗಲಕೋಟ

DIPR/BGK/RO-NO-02/KSMCA/2026-27

ಕರ್ನಾಟಕ ಸರ್ಕಾರ

ಯೋಜನಾ ವ್ಯವಸ್ಥಾಪಕರು, ಜಿಲ್ಲಾ ನಿರ್ಮಿತಿ ಕೇಂದ್ರ ಗದಗ

ಜಿ.ಡಿ.ಜಿ/ಎನ್.ಕೆ.ಜಿ./2026–27/ ದಿನಾಂಕ : 06.04.2026

ಪ್ರಕಟಣೆ

ನಿರ್ಮಿತಿ ಕೇಂದ್ರ ಗದಗ ಇವರಿಂದ ಶಿರಹಟ್ಟಿ ತಾಲೂಕ ಬೆಳ್ಳಟ್ಟಿ ಗ್ರಾಮದಲ್ಲಿ ವಸ್ತು ಪುನರ್ ಸಂಪಾದನಾ ಸೌಲಭ್ಯ ಘಟಕದ ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣೆಗಾಗಿ ಬೇಕಾಗುವ ಈ ಕೆಳಗೆ ನಮೂದಿಸಿದ ಯಂತ್ರೋಪಕರಣಗಳನ್ನು ಪೂರೈಕೆ ಹಾಗೂ ಅಳವಡಿಸುವದಕ್ಕಾಗಿ ದರಗಳನ್ನು ಸಲ್ಲಿಸಲು ಆಸಕ್ತ ಪೂರೈಕೆದಾರರು ಈ ಕೆಳಗಿನ ಯಂತ್ರೋಪಕರಣಗಳ ದರಗಳನ್ನು ಈ ಕಾರ್ಯಾಲಯಕ್ಕೆ ದಿನಾಂಕ : **16.04.2026** ರಂದು ಸಂಜೆ 5.30 ಗಂಟೆಯ ಒಳಗಾಗಿ ಈ ಕೆಳಗೆ ಸಹಿ ಮಾಡಿದ ಯೋಜನಾ ವ್ಯವಸ್ಥಾಪಕರು ನಿರ್ಮಿತಿ ಕೇಂದ್ರ ಗದಗ ಇವರ ಹೆಸರಿನಲ್ಲಿ ಸಲ್ಲಿಸಲು ಪ್ರಕಟಣೆ ನೀಡಿದೆ. ದಿನಾಂಕ : **18.04.2026** ರಂದು ಬೆಳಿಗ್ಗೆ 11.00 ಘಂಟೆಗೆ ಕೋಟೇಶನ್ ಬಿಡ್‌ಗಳನ್ನು ಜಿಲ್ಲಾ ನಿರ್ಮಿತಿ ಕೇಂದ್ರ ಗದಗ ಕಛೇರಿಯಲ್ಲಿ ತೆರೆಯಲಾಗುವದು. ಕಾರಣ ನೀಡದೇ ಯಾವುದೇ ಅಥವಾ ಎಲ್ಲಾ ಕೋಟೇಶನ್ ಬಿಡ್‌ಗಳನ್ನು ತಿರಸ್ಕರಿಸುವ ಮತ್ತು ಅಂಗೀಕರಿಸುವ ಅಧಿಕಾರವನ್ನು ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು ನಿರ್ಮಿತಿ ಕೇಂದ್ರ ಗದಗ ಇವರಿಗೆ ಕಾಯ್ದಿರಿಸಲಾಗಿದೆ.

ಷರತ್ತುಗಳನ್ನು ಅಳವಡಿಸಲಾಗಿದ್ದು, ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : **9632396473** ಹಾಗೂ ಕೆಳಗೆ ಸಹಿ ಮಾಡಿದ ಕಛೇರಿ ಸಂಪರ್ಕಿಸಬಹುದು.

SL.NO	Machines	Quantity
1	Vertical Single Box Bailing Machine-50MT	1
2	PVC Flat Belt Conveyor	2
3	Pallet Truck	2
4	Semi-Electric Stacker	1
5	Shredding Machine	1
6	Professional Blower	1
7	Weighing Scale	2
8	E-kart Vechicle	1

ಸಹಿ/– ಯೋಜನಾ ವ್ಯವಸ್ಥಾಪಕರು
ವಾಸಾಸಂಇ/ಗದಗ/ಕೆಎಸ್‌ಎಂಸಿಎ/08/2026–27 ನಿರ್ಮಿತಿ ಕೇಂದ್ರ ಗದಗ

ನಗರಸಭಾ ಕಾರ್ಯಾಲಯ, ಉಡುಪಿ

ಸಂಖ್ಯೆ:ಉನಸ ಬಿ2.ಸಿಆರ್:2026-27 ದಿನಾಂಕ: 06.04.2026

ಟೆಂಡರು ಪ್ರಕಟಣೆ

2022–23ನೇ & 2023–24ನೇ ಸಾಲಿನ ಎಸ್.ಎಫ್.ಸಿ. ಮುಕ್ತನಿಧಿ ಅನುದಾನ (ಉಳಿಕೆ ಮೊತ್ತ), 2022–23ನೇ ಸಾಲಿನ ಎಸ್.ಎಫ್.ಸಿ. ಮುಕ್ತನಿಧಿ, ಶೇ. 7.25ರ ಇತರೆ ಹಿಂದುಳಿದ ಬಡ ವರ್ಗದವರ ಕಲ್ಯಾಣ ಕಾರ್ಯಕ್ರಮದಡಿ (ಉಳಿಕೆ ಮೊತ್ತ), 2025–26ನೇ ಸಾಲಿನ ನಗರಸಭಾ ನಿಧಿ (ಮರು ಟೆಂಡರು) ಮತ್ತು 2025–26ನೇ ಸಾಲಿನ ನೀರು ಸರಬರಾಜು ಮತ್ತು ಒಳಚರಂಡಿ ನಿಧಿಯಡಿ (ಮರು ಟೆಂಡರು) ಈ ಕೆಳಗಿನ ಕಾಮಗಾರಿಯನ್ನು ಕೈಗೊಳ್ಳಲು ಅರ್ಹ ಗುತ್ತಿಗೆದಾರರಿಂದ Standart Bid Document K.W.-1 ರ ನಿಯಮ ನಿಬಂಧನೆಗೊಳಪಟ್ಟು (ವೆಬ್‌ಸೈಟ್‌ನಲ್ಲಿ ಅಪಲೋಡ್ ಮಾಡಿರುವಂತೆ) e-procurement ಮೂಲಕ ಟೆಂಡರನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳನ್ನು ಕಚೇರಿ ವೇಳೆಯಲ್ಲಿ ಸಂಬಂಧಿಸಿದವರಿಂದ ಮತ್ತು ವೆಬ್‌ಸೈಟ್ https://kppp.karnataka.gov.in ನಿಂದ ಪಡೆದುಕೊಳ್ಳಬಹುದು.

1) ತುಂಬಿದ ಟೆಂಡರುಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: 21.04.2026 ಸಂಜೆ 5.00 ಗಂಟೆಗೆ
2) ಸ್ವೀಕರಿಸಲಾದ ಟೆಂಡರುಗಳನ್ನು ತೆರೆಯುವ ದಿನಾಂಕ: 22.04.2026 ಸಂಜೆ 5.01 ಗಂಟೆಗೆ

ಕ್ರ.ಸಂ.	ಕಾಮಗಾರಿಗಳ ವಿವರ	ಅಂದಾಜು ಮೊತ್ತ	ಇ.ಎಂ.ಡಿ	ಕಾಮಗಾರಿ ಪೂರ್ತಿಗೊಳಿಸುವ ಅವಧಿ
	2022–23ನೇ ಸಾಲಿನ ಎಸ್.ಎಫ್.ಸಿ. ಮುಕ್ತ ನಿಧಿ ಅನುದಾನ (ಉಳಿಕೆ ಮೊತ್ತ)			
1.	DMA/2026-27/RD/WORK_ INDENT57101	250000.00	6250.00	1 ತಿಂಗಳು
	2022–23ನೇ ಸಾಲಿನ ಎಸ್.ಎಫ್.ಸಿ. ಮುಕ್ತನಿಧಿ ಶೇ. 7.25ರ ಇತರೆ ಹಿಂದುಳಿದ ಬಡ ವರ್ಗದವರ ಕಲ್ಯಾಣ ಕಾರ್ಯಕ್ರಮದಡಿ (ಉಳಿಕೆ ಮೊತ್ತ)			
2.	DMA/2026-27/RD/WORK_ INDENT57105	400000.00	10000.00	1 ತಿಂಗಳು
	2023–24ನೇ ಸಾಲಿನ ಎಸ್.ಎಫ್.ಸಿ. ಮುಕ್ತ ನಿಧಿ (ಉಳಿಕೆ ಮೊತ್ತ)			
3.	DMA/2026-27/RD/WORK_ INDENT57107	150000.00	3750.00	1 ತಿಂಗಳು
	2025–26ನೇ ಸಾಲಿನ ನಗರಸಭಾ ನಿಧಿ (ಮರು ಟೆಂಡರು)			
4.	DMA/2025-26/OW/WORK_ INDENT56308/CALL-2	1600000.00	40000.00	2 ತಿಂಗಳು
	2025–26ನೇ ಸಾಲಿನ ನೀರು ಸರಬರಾಜು ಮತ್ತು ಒಳಚರಂಡಿ ನಿಧಿಯಡಿ (ಮರು ಟೆಂಡರು)			
	DMA/2025-26/OW/WORK_ INDENT56423/CALL-2	480000.00	12000.00	2 ತಿಂಗಳು

ಸಹಿ/– ಪೌರಾಯುಕ್ತರು, ಉಡುಪಿ ನಗರಸಭೆ

ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ

ಕಾರ್ಯನಿರ್ವಾಹಕ ಅಭಿಯಂತರರು (ಉತ್ತರ)

ಪತ್ರ ಸಂಖ್ಯೆ ನಂ. ಎಚ್‌ಡಿಎಮ್‌ಸಿ/61/12/2025–26 ದಿನಾಂಕ: 06–04–2026

ಅಲ್ಪಾವಧಿ / ಇ-ಟೆಂಡರ್ ಅಧಿಸೂಚನೆ

ಉಲ್ಲೇಖ : ಜಾಹಿರಾತು ನಂ: 1267 ದಿನಾಂಕ: 20–02–2026

ಹುಬ್ಬಳ್ಳಿ–ಧಾರವಾಡ ಮಹಾನಗರ ಸನ್ 2026–27ನೇ ಸಾಲಿನ ವಾರ್ಡ್‌ವಾರು ಅನುದಾನ ಹಾಗೂ ಸನ್–2026–27ನೇ **ಅಮೃತ 2.0 ಅನುದಾನ ಅಡಿಯಲ್ಲಿ** ಮಂಜೂರಾದ ಈ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಆದೇಶ 1999–2000ರ ಪ್ರಕಾರ ಆ್ಯಕ್ಟ್ 2000 ನಿಯಮದನ್ವಯ ಪಿಡಬ್ಲ್ಯೂಡಿ ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರು ಕರ್ನಾಟಕ ಪಬ್ಲಿಕ್ ಪೋರ್ಟಲ್ ಮುಖಾಂತರ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಒಂದು ವೇಳೆ ತಾಂತ್ರಿಕ ಕಾರಣಗಳಿಂದ ಸದರಿ ಯಾವುದಾದರೂ ಬದಲಾವಣೆಯಾದಲ್ಲಿ, ಸದರಿ ಬದಲಾವಣೆಯ ವಿವರಗಳನ್ನು ಕರ್ನಾಟಕ ಪಬ್ಲಿಕ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಪರಿಶಿಷ್ಟ ಜಾತಿ (SC) ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ

1) ಇಂಡೆಂಟ್ ನಂ. 57113 ರೂ. 2.00 ಲಕ್ಷ 2) ಇಂಡೆಂಟ್ ನಂ. 57126 ರೂ. 5.00 ಲಕ್ಷ 3) ಇಂಡೆಂಟ್ ನಂ. 57114 ರೂ. 5.00 ಲಕ್ಷ 4) ಇಂಡೆಂಟ್ ನಂ. 57071 ರೂ. 7.00 ಲಕ್ಷ 5) ಇಂಡೆಂಟ್ ನಂ. 57068 ರೂ. 8.00 ಲಕ್ಷ 6) ಇಂಡೆಂಟ್ ನಂ. 57099 ರೂ. 20.00 ಲಕ್ಷ 7) ಇಂಡೆಂಟ್ ನಂ– 57149 ರೂ. 6.60 ಲಕ್ಷ

ಪರಿಶಿಷ್ಟ ಪಂಗಡದ (ST) ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ

8) ಇಂಡೆಂಟ್ ನಂ. 56993 ರೂ. 3.36 ಲಕ್ಷ 9) ಇಂಡೆಂಟ್ ನಂ. 57124 ರೂ. 3.00 ಲಕ್ಷ 10) ಇಂಡೆಂಟ್ ನಂ. 57130 ರೂ. 2.00 ಲಕ್ಷ

(CAT-1) ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ 11) ಇಂಡೆಂಟ್ ನಂ. 57095 ರೂ. 6.20 ಲಕ್ಷ

(CAT-2A) ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ

12) ಇಂಡೆಂಟ್ ನಂ. 57123 ರೂ. 5.00 ಲಕ್ಷ 13) ಇಂಡೆಂಟ್ ನಂ. 57112 ರೂ. 10.00 ಲಕ್ಷ 14) ಇಂಡೆಂಟ್ ನಂ. 57116 ರೂ. 5.00 ಲಕ್ಷ 15) ಇಂಡೆಂಟ್ ನಂ. 56533 ರೂ. 10.00 ಲಕ್ಷ 16) ಇಂಡೆಂಟ್ ನಂ. 57117 ರೂ. 5.00 ಲಕ್ಷ 17) ಇಂಡೆಂಟ್ ನಂ. 57150 ರೂ. 7.00 ಲಕ್ಷ 18) ಇಂಡೆಂಟ್ ನಂ. 57147 ರೂ. 15.00 ಲಕ್ಷ

ಸಾಮಾನ್ಯ ವರ್ಗದ ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ

19) ಇಂಡೆಂಟ್ ನಂ. 57115 ರೂ. 5.00 ಲಕ್ಷ 20) ಇಂಡೆಂಟ್ ನಂ. 57109 ರೂ. 3.00 ಲಕ್ಷ 21) ಇಂಡೆಂಟ್ ನಂ. 57072 ರೂ. 3.00 ಲಕ್ಷ 22) ಇಂಡೆಂಟ್ ನಂ. 57137 ರೂ. 7.50 ಲಕ್ಷ 23) ಇಂಡೆಂಟ್ ನಂ. 57125 ರೂ. 6.50 ಲಕ್ಷ 24) ಇಂಡೆಂಟ್ ನಂ. 57121 ರೂ. 8.00 ಲಕ್ಷ 25) ಇಂಡೆಂಟ್ ನಂ. 57122 ರೂ. 5.00 ಲಕ್ಷ 26) ಇಂಡೆಂಟ್ ನಂ. 57129 ರೂ. 3.00 ಲಕ್ಷ 27) ಇಂಡೆಂಟ್ ನಂ. 57128 ರೂ. 5.00 ಲಕ್ಷ 28) ಇಂಡೆಂಟ್ ನಂ. 57127 ರೂ. 5.00 ಲಕ್ಷ 29) ಇಂಡೆಂಟ್ ನಂ. 57096 ರೂ. 7.73 ಲಕ್ಷ 30) ಇಂಡೆಂಟ್ ನಂ. 57069 ರೂ. 5.00 ಲಕ್ಷ 31) ಇಂಡೆಂಟ್ ನಂ. 57070 ರೂ. 8.00 ಲಕ್ಷ 32) ಇಂಡೆಂಟ್ ನಂ. 57066 ರೂ. 7.50 ಲಕ್ಷ 33) ಇಂಡೆಂಟ್ ನಂ. 57093 ರೂ. 5.07 ಲಕ್ಷ 34) ಇಂಡೆಂಟ್ ನಂ. 56802 ರೂ. 30.00 ಲಕ್ಷ 35) ಇಂಡೆಂಟ್ ನಂ. 57153 ರೂ. 10.00 ಲಕ್ಷ 36) ಇಂಡೆಂಟ್ ನಂ. 55682 ರೂ. 35.64 ಲಕ್ಷ 37) ಇಂಡೆಂಟ್ ನಂ. 56803 ರೂ. 38.23 ಲಕ್ಷ 38) ಇಂಡೆಂಟ್ ನಂ. 57148 ರೂ. 3.50 ಲಕ್ಷ 39) ಇಂಡೆಂಟ್ ನಂ. 57151 ರೂ. 3.93 ಲಕ್ಷ 40) ಇಂಡೆಂಟ್ ನಂ. 55557 ರೂ. 28.00 ಲಕ್ಷ 41) ಇಂಡೆಂಟ್ ನಂ. 57142 ರೂ. 363.00 ಲಕ್ಷ 42) ಇಂಡೆಂಟ್ ನಂ. 57140 ರೂ. 313.00 ಲಕ್ಷ 43) ಇಂಡೆಂಟ್ ನಂ. 57120 ರೂ. 309.00 ಲಕ್ಷ

ಮರು ಕರೆ ಕಾಮಗಾರಿಗಳು

ಪರಿಶಿಷ್ಟ ಜಾತಿ (SC) ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ

44) ಇಂಡೆಂಟ್ ನಂ. 55552 ರೂ. 6.10 ಲಕ್ಷ (2ನೇ ಕರೆ) 45) ಇಂಡೆಂಟ್ ನಂ. 56542 ರೂ. 35.00 ಲಕ್ಷ (2ನೇ ಕರೆ)
46) ಇಂಡೆಂಟ್ ನಂ. 53181 ರೂ. 11.09 ಲಕ್ಷ (2ನೇ ಕರೆ) 47) ಇಂಡೆಂಟ್ ನಂ. 55465 ರೂ. 5.75 ಲಕ್ಷ (2ನೇ ಕರೆ)

ಪರಿಶಿಷ್ಟ ಪಂಗಡದ (ST) ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ

48) ಇಂಡೆಂಟ್ ನಂ. 55562 ರೂ. 30.00 ಲಕ್ಷ (2ನೇ ಕರೆ) 49) ಇಂಡೆಂಟ್ ನಂ. 55548 ರೂ. 4.00 ಲಕ್ಷ (2ನೇ ಕರೆ)

(CAT-1) ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ 50) ಇಂಡೆಂಟ್ ನಂ. 55546 ರೂ. 25.00 ಲಕ್ಷ (2ನೇ ಕರೆ)

(CAT-2A) ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ

51) ಇಂಡೆಂಟ್ ನಂ. 53182 ರೂ. 4.00 ಲಕ್ಷ (2ನೇ ಕರೆ) 52) ಇಂಡೆಂಟ್ ನಂ. 53629 ರೂ. 39.00 ಲಕ್ಷ (2ನೇ ಕರೆ)

ಸಾಮಾನ್ಯ ವರ್ಗದ ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ

53) ಇಂಡೆಂಟ್ ನಂ. 55394 ರೂ. 20.00ಲಕ್ಷ (3ನೇ ಕರೆ) 54) ಇಂಡೆಂಟ್ ನಂ. 51420 ರೂ. 10.00 ಲಕ್ಷ (3ನೇ ಕರೆ)
55) ಇಂಡೆಂಟ್ ನಂ. 49898 ರೂ. 26.10ಲಕ್ಷ (4ನೇ ಕರೆ) 56) ಇಂಡೆಂಟ್ ನಂ. 44547 ರೂ. 11.00 ಲಕ್ಷ (5ನೇ ಕರೆ)
57) ಇಂಡೆಂಟ್ ನಂ. 54368 ರೂ. 21.00ಲಕ್ಷ (2ನೇ ಕರೆ) 58) ಇಂಡೆಂಟ್ ನಂ. 55559 ರೂ. 19.00 ಲಕ್ಷ (2ನೇ ಕರೆ)
59) ಇಂಡೆಂಟ್ ನಂ. 55403 ರೂ. 10.00ಲಕ್ಷ (2ನೇ ಕರೆ) 60) ಇಂಡೆಂಟ್ ನಂ. 55932 ರೂ. 19.80 ಲಕ್ಷ (2ನೇ ಕರೆ)
61) ಇಂಡೆಂಟ್ ನಂ. 53402 ರೂ. 10.00ಲಕ್ಷ (3ನೇ ಕರೆ) 62) ಇಂಡೆಂಟ್ ನಂ. 54130 ರೂ. 8.20 ಲಕ್ಷ (3ನೇ ಕರೆ)
63) ಇಂಡೆಂಟ್ ನಂ. 54128 ರೂ. 11.80ಲಕ್ಷ (3ನೇ ಕರೆ) 64) ಇಂಡೆಂಟ್ ನಂ. 53711 ರೂ. 20.00 ಲಕ್ಷ (3ನೇ ಕರೆ)
65) ಇಂಡೆಂಟ್ ನಂ. 53263 ರೂ. 16.00ಲಕ್ಷ (3ನೇ ಕರೆ) 66) ಇಂಡೆಂಟ್ ನಂ. 52222 ರೂ. 10.15 ಲಕ್ಷ (4ನೇ ಕರೆ)
67) ಇಂಡೆಂಟ್ ನಂ. 51425 ರೂ. 4.90ಲಕ್ಷ (4ನೇ ಕರೆ) 68) ಇಂಡೆಂಟ್ ನಂ. 52224 ರೂ. 10.00 ಲಕ್ಷ (4ನೇ ಕರೆ)
69) ಇಂಡೆಂಟ್ ನಂ. 44165 ರೂ. 5.00ಲಕ್ಷ (6ನೇ ಕರೆ) 70) ಇಂಡೆಂಟ್ ನಂ. 39194 ರೂ. 6.00 ಲಕ್ಷ (6ನೇ ಕರೆ)
71) ಇಂಡೆಂಟ್ ನಂ. 43491 ರೂ. 5.40ಲಕ್ಷ (6ನೇ ಕರೆ) 72) ಇಂಡೆಂಟ್ ನಂ. 44540 ರೂ. 6.45 ಲಕ್ಷ (8ನೇ ಕರೆ)
73) ಇಂಡೆಂಟ್ ನಂ. 44538 ರೂ. 6.45ಲಕ್ಷ (8ನೇ ಕರೆ) 74) ಇಂಡೆಂಟ್ ನಂ. 3920 ರೂ. 17.00 ಲಕ್ಷ (4ನೇ ಕರೆ)
75) ಇಂಡೆಂಟ್ ನಂ. 41453 ರೂ. 18.03 ಲಕ್ಷ (5ನೇ ಕರೆ)

ಇ.ಎಂ.ಡಿ, ಕಾಮಗಾರಿ ಅವಧಿ ಹಾಗೂ ಇತರ ವಿವರಗಳನ್ನು ವೆಬ್‌ಸೈಟ್ ಮೂಲಕ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಗುತ್ತಿಗೆದಾರರು **ಕಾರ್ಯನಿರ್ವಾಹಕ ಅಭಿಯಂತರರು (ಉತ್ತರ)** ಇವರ ಕಚೇರಿಯ ಕೆಲಸದ ವೇಳೆಯಲ್ಲಿ ಮಾಹಿತಿಯನ್ನು ಪಡೆಯಬಹುದಾಗಿದೆ. ಕಚೇರಿಯ **ದೂರವಾಣಿ ಸಂಖ್ಯೆ: 0836:2213834**ನ್ನು ಸಂಪರ್ಕಿಸಬಹುದಾಗಿದೆ ಮತ್ತು ಅಂತರ್‌ಜಾಲದ ವೆಬ್‌ಸೈಟ್ ವಿಳಾಸ: kppp.karnataka.gov.in ರಲ್ಲಿ ಪಡೆಯಬಹುದು. ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ **ದಿನಾಂಕ: 08–04–2026 ಪಡೆಯಬಹುದಾಗಿದೆ.**

ಕ್ರ. ಸಂ 01 ರಿಂದ 06, 09 ರಿಂದ 15 19 ರಿಂದ 35, 44 ರಿಂದ 46 49, 51 ರಿಂದ 56ರ ಟೆಂಡರ್ ಸಲ್ಲಿಸುವ ಕೊನೆಯ **ದಿನಾಂಕ: 18–04–2026 ರಂದು ಸಾಯಂಕಾಲ 4.00 ಗಂಟೆಯವರೆಗೆ**

ಕ್ರ. ಸಂ 01 ರಿಂದ 06, 09 ರಿಂದ 15 19 ರಿಂದ 35, 44 ರಿಂದ 46 49, 51 ರಿಂದ 56ರ ಟೆಂಡರ್ ತೆರೆಯುವ **ದಿನಾಂಕ: 21–04–2026 ಸಾಯಂಕಾಲ 4.30 ಗಂಟೆಯ ನಂತರ ತೆರೆಯಲಾಗುವುದು**

ಕ್ರ. ಸಂ 07, 16 ರಿಂದ 18, 36 ರಿಂದ 40 47 ರಿಂದ 48 50, 57 ರಿಂದ 75ರ ಟೆಂಡರ್ ಸಲ್ಲಿಸುವ ಕೊನೆಯ **ದಿನಾಂಕ:23–04–2026 ರಂದು ಸಾಯಂಕಾಲ 4.00 ಗಂಟೆಯವರೆಗೆ**

ಕ್ರ. ಸಂ 07, 16 ರಿಂದ 18, 36 ರಿಂದ 40 47 ರಿಂದ 48 50, 57 ರಿಂದ 75ರ ಟೆಂಡರ್ ತೆರೆಯುವ **ದಿನಾಂಕ:24–04–2026 ಸಾಯಂಕಾಲ 4.30 ಗಂಟೆಯ ನಂತರ ತೆರೆಯಲಾಗುವುದು**

ಕ್ರ. ಸಂ 41 ರಿಂದ 43ರ ಟೆಂಡರ ಸಲ್ಲಿಸುವ ಕೊನೆಯ **ದಿನಾಂಕ: 09–05–2026 ರಂದು ಸಾಯಂಕಾಲ 4.00 ಗಂಟೆಯವರೆಗೆ**

ಕ್ರ. ಸಂ 41 ರಿಂದ 43ರ ಕಾಮಗಾರಿಯ ಆರ್ಥಿಕ ಬಿಡ್ ತೆರೆಯುವ **ದಿನಾಂಕ: 11–05–2026 ರಂದು ತೆರೆಯಲಾಗುವುದು.**

ಇಲ್ಲದಿದ್ದಲ್ಲಿ ನಂತರದ ಅನುಕೂಲಕರ ದಿನಗಳಲ್ಲಿ ತೆರೆಯಲಾಗುವುದು. ಕ್ರ. ಸಂ 41 ರಿಂದ 43ರ ಪೂರ್ವಬಾವಿ **ಸಭೆಯ ದಿನಾಂಕ: 13–04–2025**

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ಉತ್ತರ)
ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ ಹುಬ್ಬಳ್ಳಿ

ಡಿಐಪಿಆರ್/ಧಾರವಾಡ/25/ಮಣಿಪಾಲ್/2026–27

ಕರ್ನಾಟಕ ಸರಕಾರ

ತಾಲೂಕಾ ಆಸ್ಪತ್ರೆ, ಅಂಕೋಲಾ ಉತ್ತರ ಕನ್ನಡ (ಕಾರವಾರ)ಜಿಲ್ಲೆ

Email: thankola314@gmail.com Phone: 08388-230249

ಸಂಖ್ಯೆ : ತಾಆಅಂ/ಇ–ಟೆಂಡರ್/956/2025–26 ದಿನಾಂಕ : 06/04/2026

ಅಲ್ಪಾವಧಿ ಇ–ಟೆಂಡರ್ ಅಧಿಸೂಚನೆ

(ಇ–ಪ್ರೊಕ್ಯೂರ್‌ಮೆಂಟ್ ಮುಖಾಂತ -kppp.karnataka.gov.in)

ವಿಷಯ :– ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ, ತಾಲೂಕಾ ಆಸ್ಪತ್ರೆಗೆ ಜನರಿಕ್ ಔಷಧಿಗಳ ಸರಬರಾಜುಗಾಗಿ ಅಲ್ಪಾವಧಿ ಇ– ಟೆಂಡರ್ ಕರೆಯುವ ಬಗ್ಗೆ.

******

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ನಿಯಮ 2000 ರಂತೆ ನೊಂದಾಯಿತ ಸಂಸ್ಥೆಗಳಿಂದ 2026–27 ನೇ ಸಾಲಿಗೆ (31/03/2027 ರವರೆಗೆ) ಅಂಕೋಲಾ ತಾಲೂಕಾ ಆಸ್ಪತ್ರೆಗೆ ಜನರಿಕ್ ಔಷಧಿಗಳ ಸರಬರಾಜಿಗಾಗಿ ದ್ವಿ–ಬಿಡ್ ಪದ್ಧತಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಇ–ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್ ವಿವರಗಳು ಈ ಕೆಳ ಕಂಡಂತಿರುತ್ತವೆ.

ಕ್ರ.ಸಂ	ಸಂಸ್ಥೆಗಳ ಹೆಸರು	ಜನರಿಕ್ ಔಷಧಿಗಳ ಖರೀದಿ ಮೊತ್ತ (ಅಂದಾಜು)	ಇ.ಎಂ.ಡಿ. ಮೊತ್ತ (ಶೇ. 2.5%)	ಷರಾ
1	ತಾಲೂಕಾ ಆಸ್ಪತ್ರೆ, ಅಂಕೋಲಾ	10 ಲಕ್ಷ	25,000.00	

ಕ್ರ.ಸಂ	ವಿವರ	ದಿನಾಂಕ
1	ಟೆಂಡರ್ ಪ್ರಕಟಣೆಯ ಸಂಖ್ಯೆ & ದಿನಾಂಕ	ತಾಆಅಂ/ಇ–ಟೆಂಡರ್/956/ 2025–26 ದಿನಾಂಕ : 06/04/2026
2	e-portal ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಪ್ರಾರಂಭಿಸುವ ದಿನಾಂಕ	ದಿನಾಂಕ : 06/04/2026
3	e-portal ಟೆಂಡರ್ ಫಾರಂ ಅಪ್‌ಲೋಡ್ ಮಾಡುವ ಅಂತಿಮ ದಿನಾಂಕ & ಸಮಯ	ದಿನಾಂಕ: 21/04/2026 ರ ಅಪರಾಹ್ನ 4.00 ಗಂಟೆಯವರೆಗೆ
4	e-portal ಟೆಂಡರ್ ತಾಂತ್ರಿಕ ಲಕೋಟೆಗಳನ್ನು ತೆರೆಯುವ ದಿನಾಂಕ & ಸಮಯ	ದಿನಾಂಕ: 22/04/2026 ರ ಅಪರಾಹ್ನ4.30 ಗಂಟೆಗೆ
5	e-portal ನಲ್ಲಿ ಆರ್ಥಿಕ ಲಕೋಟೆಗಳನ್ನು ತೆರೆಯುವ ದಿನಾಂಕ & ಸಮಯ	ಟೆಂಡರ್ ಅಂಗೀಕಾರ ಸಮಿತಿಯ ಅನುಮೋದನೆಯ ನಂತರ

ಹೆಚ್ಚಿನ ವಿವರಗಳಿಗಾಗಿ ಇ–ಪ್ರೊಕ್ಯೂರ್‌ಮೆಂಟ್ (Website:https://kppp.karnataka.gov.in) ಸಂಪರ್ಕಿಸುವುದು.

ಕ್ರಮ ಸಂಖ್ಯೆ: 04 ಮತ್ತು 05 ರಲ್ಲಿ ನಮೂದಿಸಿದ ದಿನಾಂಕಗಳಂದು ಸಾರ್ವಜನಿಕ ರಜೆಯೆಂದು ಘೋಷಣೆ ಆದಲ್ಲಿ ಮುಂದಿನ ಕೆಲಸದ ದಿನಾಂಕವನ್ನು ಪರಿಗಣಿಸಲಾಗುವುದು.

ಸಹಿ/–
ಆಡಳಿತ ವೈದ್ಯಾಧಿಕಾರಿಗಳು
ತಾಲೂಕಾ ಆಸ್ಪತ್ರೆ, ಅಂಕೋಲಾ

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ರಾಯಚೂರು
Raichur Institute of Medical Sciences, Raichur

(ಸರ್ಕಾರದ ಸ್ವಾಯತ್ತ ಸಂಸ್ಥೆ) ಹೈದ್ರಾಬಾದ್ ರೋಡ್, ರಾಯಚೂರು –584102
Phone /Fax-08532-238488/89
www.rims-raichur.karnataka.gov.in info@rims-raichur.com

ಸಂ. ರಿಮ್ಸ್/ಸರಬರಾಜು/ಟೆಂಡರ್/2025–26 ದಿನಾಂಕ:04.04.2026

ಟೆಂಡರ್ ಪ್ರಕಟಣೆ

2024–25ನೇ ಸಾಲಿನ ಕ.ಕ.ಪ್ರ.ಅ. ಮಂಡಳಿಯ ಮೈಕ್ರೋ ಯೋಜನೆಯಡಿ ದೇವದುರ್ಗ ತಾಲೂಕಿನ ಕ್ರಿಯಾ ಯೋಜನೆಯಲ್ಲಿ ಮಂಜೂರಾದ ಕಾಮಗಾರಿಗಳ ಅನುಷ್ಠಾನ ಮಾಡಲು ಅರ್ಹ ಟೆಂಡರ್‌ದಾರರಿಂದ ದ್ವಿಲಕೋಟೆ ಪದ್ಧತಿಯಲ್ಲಿ ಟೆಂಡರ್ಗಳನ್ನು ಆಹ್ವಾನಿಸಲಾಗಿದೆ.

ಕ್ರ. ಸಂ	ಟೆಂಡರ್‌ನ ವಿವರ	ಟೆಂಡರ್‌ನ ಸಂಖ್ಯೆ	ಅಂದಾಜು ವೆಚ್ಚ (ಲಕ್ಷಗಳಲ್ಲಿ)
1	ದೇವದುರ್ಗ ಸಾರ್ವಜನಿಕ ತಾಲೂಕು ಆಸ್ಪತ್ರೆಗೆ ಅವಶ್ಯವಿರುವ ವೈದ್ಯಕೀಯ ಉಪಕರಣಗಳು ಮತ್ತು ಪೀಠೋಪಕರಣಗಳನ್ನು ಸರಬರಾಜು ಮಾಡಿಸುವುದು ಹಾಗೂ ಅಳವಡಿಕೆ ಮಾಡಿಸುವ ಕುರಿತು	ರಿಮ್ಸ್/ಡಿಹೆಚ್ಓ/ ಸರಬರಾಜು/ ಟೆಂಡರ್/ ಉಪಕರಣ/15/2025–26/ಕಾಲ್–2 DME/2025-26/IND2213	125.00
2	ದೇವದುರ್ಗ ತಾಲೂಕಿನ ಸಮುದಾಯ ಆರೋಗ್ಯ ಕೇಂದ್ರ ಜಾಲಹಳ್ಳಿಗೆ ಅವಶ್ಯವಿರುವ ವೈದ್ಯಕೀಯ ಉಪಕರಣಗಳು ಮತ್ತು ಪೀಠೋಪಕರಣಗಳನ್ನು ಸರಬರಾಜು ಮಾಡಿಸುವುದು ಮತ್ತು ಅಳವಡಿಸಿಕೆ ಮಾಡಿಸುವ ಕುರಿತು	ರಿಮ್ಸ್/ಡಿಹೆಚ್ಓ/ ಸರಬರಾಜು/ ಟೆಂಡರ್/ ಉಪಕರಣ/16/2025–26/ಕಾಲ್–2 DME/2025-26/IND2214	30.00
3	ದೇವದುರ್ಗ ತಾಲೂಕಿನ ಪ್ರಾಥಮಿಕ ಆರೋಗ್ಯ ಕೇಂದ್ರ, ಗಾಣದಾಳ ಮತ್ತು ರಾಮದುರ್ಗ ಗಳಿಗೆ ಅವಶ್ಯವಿರುವ ವೈದ್ಯಕೀಯ ಉಪಕರಣಗಳು ಮತ್ತು ಪೀಠೋಪಕರಣಗಳನ್ನು ಪೀಠೋಪಕರಣಗಳನ್ನು ಸರಬರಾಜು ಮಾಡಿಸುವುದು ಮತ್ತು ಅಳವಡಿಸಿಕೆ ಮಾಡಿಸುವ ಕುರಿತು	ರಿಮ್ಸ್/ಡಿಹೆಚ್ಓ/ ಸರಬರಾಜು/ ಟೆಂಡರ್/ ಉಪಕರಣ/17/2025–26/ಕಾಲ್–2 DME/2025-26/IND2215	40.00

1) ಟೆಂಡರ್‌ಗಳನ್ನು ದಿನಾಂಕ : 06.04.2026 ರಿಂದ ಇ–ಪ್ರೋಕ್ಯೂರ್ಮೆಂಟ್ ಪೋರ್ಟಲ್ ಮುಖಾಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು.2) ಟೆಂಡರ್ ಫಾರ್ಮ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 21.04.2026 ರ ಸಾಯಂಕಾಲ 5.00 ಗಂಟೆಯ ವರೆಗೆ 3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 23.04.2026 ರ ಬೆಳಿಗ್ಗೆ 11.30 ಗಂಟೆಗೆ

ಆಸಕ್ತಿವುಳ್ಳ ಟೆಂಡರ್‌ದಾರರು ಹೆಚ್ಚಿನ ಮಾಹಿತಿಗಾಗಿ ಮತ್ತು ಟೆಂಡರ್‌ಗೆ ಸಂಬಂಧಪಟ್ಟ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಸಂಗ್ರಹಣಾ ಕೋಶದ ವೆಬ್‌ಸೈಟ್ https://kppp.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/– ನಿರ್ದೇಶಕರು
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ರಾಯಚೂರು

DIP/RCR/06/KSMC&A/08/2025-26

ಕುಂದಾಪುರ: ಮನೆಯೊಳಗೆ ಬೆಂಕಿ ಆಕಸ್ಮಿಕ



◆ **ಕುಂದಾಪುರ :** ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಮನೆ ಸಹಿತ ಒಳಗಿದ್ದ ಎಲ್ಲ ವಸ್ತುಗಳು ಸುಟ್ಟು ಕರಕಲಾದ ಘಟನೆ ಶನಿವಾರ ತಡರಾತ್ರಿ ಕರ್ಕುಂಜೆ ಗ್ರಾಮದ ನೇರಳಕಟ್ಟೆ ಸಮೀಪದ ಹಂದಕುಂದ ಎಂಬಲ್ಲಿ ಸಂಭವಿಸಿದೆ.

ಹಂದಕುಂದ ಆರೆಕಲ್ಲು ಮನೆಯ ಗಣಪು ಶೆಡ್ತಿ ಅವರ ಮನೆ ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಸಂಪೂರ್ಣ ಹಾನಿಯಾಗಿದೆ. ಮನೆಯ ಮಾಡು, ಗೋಡೆಗೂ ಹಾನಿಯಾಗಿದ್ದು, ಒಳಗಿದ್ದ ಸ್ವಲ್ಪ ಚಿನ್ನಾಭರಣ, ನಗದು, ಟಿವಿ, ಇನ್ನಿತರ ಎಲೆಕ್ಟ್ರಾನಿಕ್ ವಸ್ತುಗಳು, ಬಟ್ಟೆ, ಬರೆ, ಪಾತ್ರೆಗಳೆಲ್ಲವೂ ಸುಟ್ಟು ಕರಕರಲಾಗಿದೆ. 5 ಲಕ್ಷ ರೂ. ಗೂ ಮಿಕ್ಕಿ ನಷ್ಟ ಉಂಟಾಗಿದೆ ಎಂದು ಅಂದಾಜಿಸಲಾಗಿದೆ.

ಗಣಪು ಶೆಡ್ತಿ ಹಾಗೂ ಅವರ ಮೊಮ್ಮಗ ಮಾತ್ರ ಈ ಮನೆಯಲ್ಲಿದ್ದು, ಶನಿವಾರ ರಾತ್ರಿ ಮನೆಯ ಹತ್ತಿರದ ಮನೆಯೊಂದರಲ್ಲಿ ಭಜನಾ ಕಾರ್ಯಕ್ರಮ ಇದ್ದುದರಿಂದ ಬೀಗ ಹಾಕಿ ಅಲ್ಲಿಗೆ ತೆರಳಿದ್ದರು. ರಾತ್ರಿ 12 ಗಂಟೆ ನಂತರ ಬೆಂಕಿ ಕಾಣಿಸಿಕೊಂಡಿರಬಹುದು ಎನ್ನಲಾಗಿದ್ದು, 2 ಗಂಟೆಯ ಸುಮಾರಿಗೆ ಆ ಮನೆಯ ಹತ್ತಿರದ ದಾರಿಯಲ್ಲಿ ಹೋಗುತ್ತಿದ್ದವರೊಬ್ಬರು ನೋಡಿ, ಎಲ್ಲರಿಗೂ ವಿಷಯ ತಿಳಿಸಿದ್ದಾರೆ. ಅಷ್ಟರೊಳಗೆ ಮನೆಯ ಬಹುತೇಕ ಭಾಗ ಸುಟ್ಟು ಹೋಗಿತ್ತು. ಬಳಿಕ ಕುಂದಾಪುರದ ಅಗ್ನಿ ಶಾಮಕ ದಳದ ತಂಡದವರು, ಸ್ಥಳೀಯರೆಲ್ಲ ಸೇರಿ, ಹತ್ತಿರದಲ್ಲಿದ್ದ ದನದ ಕೊಟ್ಟಿಗೆಗೆ ಬೆಂಕಿ ಹರಡುವುದನ್ನು ತಪ್ಪಿಸಿದ್ದಾರೆ.

ಮಂಜೇಶ್ವರ ಪೊಲೀಸ್ ಠಾಣೆ ಸಮೀಪ 30ರಷ್ಟು ಕಸ್ಟಡಿ ವಾಹನಗಳು ಬೆಂಕಿಗಾಹುತಿ

ಮಂಜೇಶ್ವರ: ವಿವಿಧ ಪ್ರಕರಣಗಳಿಗೆ ಸಂಬಂಧಿಸಿ ಪೊಲೀಸರು ವಶಪಡಿಸಿ ಮಂಜೇಶ್ವರ ಠಾಣಾ ಸಮೀಪ ನಿಲ್ಲಿಸಿದ್ದ ಹಲವು ವಾಹನಗಳು ಬೆಂಕಿಗಾಹುತಿಯಾಗಿದೆ. ಭಾನುವಾರ ಘಟನೆ ನಡೆದಿದೆ. ಕಾರು, ಆಟೋರಿಕ್ಷಾ, ಗೂಡ್ಸ್ ಆಟೋ ಸೇರಿದಂತೆ ಸುಮಾರು 30ರಷ್ಟು ವಾಹನಗಳು ಬೆಂಕಿಗಾಹುತಿಯಾಗಿದೆ ಎಂದು ಅಂದಾಜಿಸಲಾಗಿದೆ. ಕಳೆದ ಹಲವು ಕಾಲದಿಂದ ವಿವಿಧ ಪ್ರಕರಣಗಳಿಗೆ ಸಂಬಂಧಿಸಿ ವಶಪಡಿಸಿದ ವಾಹನಗಳನ್ನು ಪೊಲೀಸ್ ಠಾಣೆಯ ಸುಮಾರು ನೂರು ಮೀಟರ್ ದೂರದಲ್ಲಿರುವ ಖಾಸಗಿ ಸ್ಥಳದಲ್ಲಿ ನಿಲ್ಲಿಸಲಾಗಿತ್ತು. ಭಾನುವಾರ ವಾಹನಗಳಿದ್ದ ಸ್ಥಳದಿಂದ ಹೊಗೆ ಕಾಣಿಸಿದ್ದು, ಪೊಲೀಸರು ಅಲ್ಲಿಗೆ ತೆರಳಿ ನೋಡಿದಾಗ ಬೆಂಕಿ ಕಾಣಿಸಿಕೊಂಡಿದೆ. ಕೂಡಲೇ ಎಸ್‌ಐ ವೈಷ್ಣವ್ ರಾಮಚಂದ್ರನ್ ನೇತೃತ್ವದ ಪೊಲೀಸರು ಹಾಗೂ ಉಪ್ಪಳದಿಂದ ಆಗಮಿಸಿದ ಅಗ್ನಿಶಾಮಕ ದಳ ಬೆಂಕಿ ಶಮನಗೊಳಿಸಿದ್ದಾರೆ. ಅಷ್ಟರೊಳಗೆ ವಾಹನಗಳು ಉರಿದು ನಾಶಗೊಂಡಿದೆ. ಬೆಂಕಿ ಅನಾಹುತಕ್ಕೆ ಕಾರಣ ತಿಳಿದುಬಂದಿಲ್ಲ ಎನ್ನಲಾಗಿದೆ.

ನಟ, ನಿರ್ದೇಶಕ ರಿಷಬ್ ಶೆಟ್ಟಿ ಶ್ರೀಕ್ಷೇತ್ರ ಧರ್ಮಸ್ಥಳಕ್ಕೆ ಭೇಟಿ



◆ **ಧರ್ಮಸ್ಥಳ:** ಕನ್ನಡ ಚಿತ್ರರಂಗದ ಖ್ಯಾತ ನಟ ಹಾಗೂ ಕಾಂತಾರ ಚಿತ್ರದ ಮೂಲಕ ಜನಪ್ರಿಯತೆ ಗಳಿಸಿರುವ ಡಿವೈನ್‌ಸ್ಟಾರ್ ರಿಷಬ್ ಶೆಟ್ಟಿ, ದಂಪತಿ ಸಮೇತ ಸೋಮವಾರ ಶ್ರೀ ಕ್ಷೇತ್ರ ಧರ್ಮಸ್ಥಳಕ್ಕೆ ಭೇಟಿ ನೀಡಿ ಶ್ರೀ ಮಂಜುನಾಥ ಸ್ವಾಮಿಯ ದರ್ಶನ ಪಡೆದರು. ಬಳಿಕ ಧರ್ಮಸ್ಥಳದ ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆ ಅವರನ್ನು ಭೇಟಿ ಮಾಡಿ ಆಶೀರ್ವಾದ ಪಡೆದರು.

ಈ ಸಂದರ್ಭದಲ್ಲಿ ಎಸ್.ಡಿ.ಎಮ್ ಶಿಕ್ಷಣ ಸಂಸ್ಥೆಗಳ ಉಪಾಧ್ಯಕ್ಷ ಡಿ. ಸುರೇಂದ್ರ ಕುಮಾರ್, ಬೆಂಗಳೂರು ಕ್ಷೇಮವನದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರದ್ಧಾ ಅಮಿತ್, ಆರ್ಯಮನ್ ಹಾಗೂ ಕಿಯಾಂಶ್ ಉಪಸ್ಥಿತರಿದ್ದರು.

ಅನಂತರ ರಿಷಬ್ ಶೆಟ್ಟಿ ಹಾಗೂ ಅವರ ಕುಟುಂಬಸ್ಥರಿಂದ ಶ್ರೀ ಮಂಜುನಾಥ ಸ್ವಾಮಿಗೆ ರಂಗಪೂಜೆ ಸೇವೆ ನೆರವೇರಿತು.

ದ.ಕ. ಜಿಲ್ಲಾ ಉಸ್ತುವಾರಿ ಸಚಿವರ ಪ್ರವಾಸ

◆ **ಮಂಗಳೂರು:** ದ.ಕ.ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಏ. 10 ರಂದು ಬೆಳಿಗ್ಗೆ 9ಕ್ಕೆ ಮಂಗಳೂರು ವಿಮಾನ ನಿಲ್ದಾಣಕ್ಕೆ ಆಗಮನ, 9.30ಕ್ಕೆ ಟಿ.ಎಂ.ಎ. ಪೈ ಸಭಾಂಗಣದಲ್ಲಿ ಮಂಗಳೂರು ಫಿಸಿಕಾನ್ –2026 ಉದ್ಘಾಟನಾ ಕಾರ್ಯಕ್ರಮ, 10.40ಕ್ಕೆ ಲೇಡಿಗೋಶನ್ ಆಸ್ಪತ್ರೆಯಲ್ಲಿ ಪವರ್ ಗ್ರಿಡ್ ಕಾರ್ಪೊರೇಶನ್ ವತಿಯಿಂದ ವೈದ್ಯಕೀಯ ಉಪಕರಣಗಳ ಹಸ್ತಾಂತರ ಕಾರ್ಯಕ್ರಮ, 11.15 ರಿಂದ ಮಧ್ಯಾಹ್ನ 3 ರವರೆಗೆ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ವಿವಿಧ ಸಭೆಗಳು, ಸಂಜೆ 4ಕ್ಕೆ ಶಕ್ತಿನಗರ ಕಲಾಂಗಣದಲ್ಲಿ ಪ್ರಥಮ ವಿಶ್ವಕೊಂಕಣಿ ಮಹಾ ಮಹಾ ಸಮಾವೇಶ ಮತ್ತು ಲಾಂಛನ ಬಿಡುಗಡೆ ಕಾರ್ಯಕ್ರಮ, 5.30ಕ್ಕೆ ಸರ್ಕ್ಯೂಟ್ ಹೌಸ್‌ನಲ್ಲಿ ಸಾರ್ವಜನಿಕರ ಭೇಟಿ.

ಪುತ್ತೂರು ಮಾರುಕಟ್ಟೆ ಧಾರಣೆ

06-04-2026 ಅಡಿಕೆ ಧಾರಣೆ ಕೆ.ಜಿ.ಗೆ

ಹೊಸ ಅಡಿಕೆ	260 - 500	ಹಳೆ ಕರಿಗೋಟು	235 - 265
ಚೋಲ್ ಅಡಿಕೆ	530 - 555	ಹಸಿ ಕೊಕ್ಕೋ	70 - 100
ಡಬಲ್ ಚೋಲ್	530 - 555	ಒಣ ಕೊಕ್ಕೋ	270 - 300
ಹೊಸ ಪಟೋರ	350 - 400	**ಕಾಳುಮೆಣಸು ಧಾರಣೆ**	
ಹಳೆ ಪಟೋರ	380 - 410	ಕಾಳುಮೆಣಸು	450 - 665
ಹೊಸ ಉಳ್ಳಿ	120 - 290	**ರಬ್ಬರ್ ಧಾರಣೆ : ಗ್ರೇಡ್**	
ಹಳೆ ಉಳ್ಳಿ	105 - 290	ಆರ್‌ಎಸ್‌ಎಸ್ 1	226.00
ಹೊಸ ಕೋಕಾ	325 - 345	ಆರ್‌ಎಸ್‌ಎಸ್ 2	196.00
ಹಳೆ ಕೋಕಾ	325 - 345	ಸ್ಕ್ರಾಪ್ 1	136.50
ಹೊಸ ಕರಿಗೋಟು	235 - 265	ಸ್ಕ್ರಾಪ್ 2	125.00

ರಶ್ಮಿಕಾಗೆ ಕೋಟ್ಯಂತರ ರೂ. ಮೌಲ್ಯದ ಮನೆ ಉಡುಗೊರೆ



◆ **ಮಡಿಕೇರಿ:** ನ್ಯಾಷನಲ್ ಕ್ರಶ್ ಖ್ಯಾತಿಯ, ಕೊಡಗು ಮೂಲದ ಬಹು ಭಾಷಾ ಚಲನಚಿತ್ರ ನಟಿ ರಶ್ಮಿಕಾ ಮಂದಣ್ಣ ಅವರಿಗೆ ಅವರ ತಂದೆ ಮಂದಣ್ಣ ಅವರು ಕೋಟ್ಯಂತರ ಮೌಲ್ಯದ ಮನೆಯನ್ನು ಮದುವೆಯ ಉಡುಗೊರೆಯಾಗಿ ನೀಡಿದ್ದಾರೆ.

ಮೂಲತಃ ವೀರಾಜಪೇಟೆ ಸಮೀಪದ ಚೆಂಬೆಳ್ಳೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕುಕ್ಲೂರು ಗ್ರಾಮದ ನಿವಾಸಿಯಾಗಿದ್ದು, ವೀರಾಜಪೇಟೆ ಪಟ್ಟಣ ಪಂಚಾಯಿತಿಯ ಮಾಜಿ ಸದಸ್ಯರಾಗಿದ್ದ ಮುಂಡಚಾಡಿರ ಮದನ್ ಮಂದಣ್ಣ ಮತ್ತು ಪತ್ನಿ ಸುಮನ್ ಮಂದಣ್ಣ ಅವರ ಹೆಸರಿನಲ್ಲಿದ್ದ ವೀರಾಜಪೇಟೆಯ ಐಷಾರಾಮಿ ಮನೆಯನ್ನು ವೀರಾಜಪೇಟೆ ಉಪ ನೋಂದಣಿ ಕಚೇರಿಯಲ್ಲಿ ತಮ್ಮ ಮಗಳಾದ ರಶ್ಮಿಕಾ ಮಂದಣ್ಣ ಅವರ ಹೆಸರಿಗೆ ಖಾತೆ ಬದಲಾವಣೆ ಮಾಡಿಕೊಡಲಾಯಿತು. ಖ್ಯಾತ ತೆಲುಗು ಚಿತ್ರನಟ ವಿಜಯ್ ದೇವರಕೊಂಡ ಅವರನ್ನು ಇತ್ತೀಚೆಗೆ ರಶ್ಮಿಕಾ ವಿವಾಹವಾಗಿದ್ದು, ವಿವಾಹದ ಉಡುಗೊರೆಯಾಗಿ ಮನೆಯನ್ನು ನೀಡಲಾಗಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮಂದಣ್ಣ ಕುಟುಂಬದ ವಕೀಲೆ ಪಟ್ಟಡ ರೀನಾ ಪ್ರಕಾಶ್ ಅವರು ಈ ಸಂದರ್ಭ ಹಾಜರಿದ್ದರು.

ಕಳೆದುಹೋದ ಮೊಬೈಲ್ ಪತ್ತೆಹಚ್ಚುವಲ್ಲಿ ಉಡುಪಿ ಪೊಲೀಸರ ಭರ್ಜರಿ ಯಶಸ್ಸು

241 ವಾರಸುದಾರರ ಮುಖದಲ್ಲಿ ಮಂದಹಾಸ

◆ **ಉಡುಪಿ:** ಜಿಲ್ಲೆಯ ವಿವಿಧ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಕಳೆದುಹೋಗಿದ್ದ ಅಥವಾ ಕಳುವಾಗಿದ್ದ ಒಟ್ಟು 241 ಮೊಬೈಲ್ ಫೋನ್‌ಗಳನ್ನು ವಿಶೇಷ ಕಾರ್ಯಾಚರಣೆಯ ಮೂಲಕ ಪತ್ತೆಹಚ್ಚಿರುವ ಉಡುಪಿ ಜಿಲ್ಲಾ ಪೊಲೀಸರು, ಅವುಗಳನ್ನು ವಾರಸುದಾರರಿಗೆ ಯಶಸ್ವಿಯಾಗಿ ಹಸ್ತಾಂತರಿಸಿದ್ದಾರೆ.

ಸಿ.ಇ.ಐ.ಆರ್ ಪೋರ್ಟಲ್ ವರದಾನ

ಸಾರ್ವಜನಿಕರು ತಮ್ಮ ಮೊಬೈಲ್ ಕಳೆದುಕೊಂಡ ತಕ್ಷಣ ಕೇಂದ್ರ ಸರ್ಕಾರದ ಸಿ.ಇ.ಐ.ಆರ್ ಪೋರ್ಟಲ್ ಮೂಲಕ ದೂರು ದಾಖಲಿಸಿದ್ದರು. ಈ ದೂರುಗಳನ್ನು ಗಂಭೀರವಾಗಿ ಪರಿಗಣಿಸಿದ ಜಿಲ್ಲಾ ಪೊಲೀಸ್ ಇಲಾಖೆ, ಕಳೆದ ಒಂದು ವಾರದಲ್ಲಿ ಜಿಲ್ಲೆಯಾದ್ಯಂತ ವಿಶೇಷ ಕಾರ್ಯಾಚರಣೆ ಹಮ್ಮಿಕೊಂಡಿತ್ತು. ತಾಂತ್ರಿಕ ವಿಶ್ಲೇಷಣೆ ಮತ್ತು ಸೈಬರ್ ವಿಭಾಗದ ಸಮನ್ವಯದೊಂದಿಗೆ ಅತೀ ಕಡಿಮೆ ಅವಧಿಯಲ್ಲಿ ಬರೋಬ್ಬರಿ 241 ಮೊಬೈಲ್‌ಗಳನ್ನು ಪತ್ತೆಹಚ್ಚುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ.

ಪೊಲೀಸ್ ಇಲಾಖೆಯ ಸಲಹೆ

ಮೊಬೈಲ್ ಫೋನ್‌ಗಳು ಕಳೆದುಹೋದ ತಕ್ಷಣ ಸಾರ್ವಜನಿಕರು ಹತ್ತಿರದ ಪೊಲೀಸ್ ಠಾಣೆಗೆ ಮಾಹಿತಿ ನೀಡುವುದರ ಜೊತೆಗೆ, ಸ್ವತಃ ಸಿ.ಇ.ಐ.ಆರ್ ಪೋರ್ಟಲ್‌ನಲ್ಲಿ ದೂರು ದಾಖಲಿಸಬೇಕು. ಇದರಿಂದ ಕಳೆದುಹೋದ ಮೊಬೈಲ್ ದುರ್ಬಳಕೆಯಾಗುವುದನ್ನು ತಡೆಯಬಹುದು ಹಾಗೂ ಪೊಲೀಸರಿಗೆ ಅದನ್ನು ಪತ್ತೆಹಚ್ಚುವುದು ಸುಲಭವಾಗುತ್ತದೆ ಎಂದು ಇಲಾಖೆ ತಿಳಿಸಿದೆ.



ಉಪ ವಿಭಾಗ ಮಟ್ಟದಲ್ಲಿ ಮೊಬೈಲ್ ಹಸ್ತಾಂತರ

ಜಿಲ್ಲೆಯ ಎಲ್ಲಾ ಉಪ ವಿಭಾಗದ ಪೊಲೀಸ್ ಉಪಾಧೀಕ್ಷಕರ ನೇತೃತ್ವದಲ್ಲಿ ವಿಶೇಷ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ತಿಂಗಳುಗಳ ಹಿಂದೆ ಮೊಬೈಲ್ ಕಳೆದುಕೊಂಡು, ಅದು ಮರಳಿ ಸಿಗುವ ನಿರೀಕ್ಷೆಯನ್ನೇ ಬಿಟ್ಟಿದ್ದ ನೂರಾರು ಜನರನ್ನು ಪೊಲೀಸ್ ಕಚೇರಿಗೆ ಆಹ್ವಾನಿಸಿ, ಅವರ ಸಮ್ಮುಖದಲ್ಲೇ ಮೂಲ ವಾರಸುದಾರರಿಗೆ ಮೊಬೈಲ್‌ಗಳನ್ನು ಹಸ್ತಾಂತರಿಸಲಾಯಿತು.

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಭಾಗ್ಯತಾರ (ನಂ.BT-48) ಡ್ರಾ ಏಪ್ರಿಲ್ 7ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]

PT 543637 (ALAPPUZHA)

Consolation Prize Rs.5,000/-

BN 543637 BO 543637 BP 543637 BR 543637
BS 543637 BU 543637 BV 543637 BW 543637
BX 543637 BY 543637 BZ 543637

2nd Prize Rs.30,00,000/- [30 Lakhs]

BO 252303 (ERNAKULAM)

3rd Prize Rs.5,00,000/- [5 Lakhs]

BS 529177 (ADIMALI)

FOR THE TICKETS ENDING WITH THE FOLLOWING NUMBERS

4th Prize Rs.5,000/-

0044 0343 0479 0847 1636 1731 1850 2124 2620 3602 4364 4591 4687 4721 4848 5694 6749 7150 9002

5th Prize Rs.2,000/-

1476 1750 2464 7146 7957 9816

6th Prize Rs.1,000/-

0495 0897 1363 1757 1877 2109 2671 2977 3646 3971 4599 5362 5567 5729 6434 6678 7494 8057 8226 8285 8732 8784 9513 9521 9790

7th Prize Rs.500/-

0110 0178 0454 0588 0625 0781 0932 1219 1465 1545 1752 1923 2128 2203 2232 2319 2371 2435 2518 2830 2907 2940 3002 3098 3108 3306 3401 4353 4524 4795 4821 4872 4969 5389 5419 5433 5435 5541 5603 5666 5707 5824 5975 6300 6462 6510 6561 6586 6994 7041 7258 7363 7391 7543 7568 7617 7812 7871 7998 8034 8120 8531 8630 8702 8888 8983 9220 9270 9457 9487 9560 9596 9757 9766 9844 9861

8th Prize Rs.200/-

0097 0147 0156 0269 0280 0557 0689 0829 0861 1110 1152 1196 1311 1461 1629 1941 2026 2030 2112 2119 2186 2422 2781 2851 2860 2946 3053 3103 3143 3157 3232 3482 3583 3600 3793 3818 3969 3974 4094 4158 4215 4245 4510 4512 4595 4704 4711 4713 4801 4906 4915 5012 5071 5162 5626 5700 5748 5919 6163 6199 6225 6442 6450 6486 6651 6679 6815 6842 7094 7201 7236 7463 7532 7908 7913 8136 8160 8431 8511 8660 8665 8680 8736 8938 9059 9302 9315 9322 9328 9351 9357 9422 9542 9715

9th Prize Rs.100/-

0038 0364 0553 0590 0608 0739 0793 0815 0984 1112 1175 1246 1281 1317 1480 1541 1559 1625 1652 1661 1730 1764 1869 1878 1887 2056 2204 2449 2467 2527 2547 2552 2572 2706 2785 2884 2896 2912 2930 2982 3003 3096 3147 3265 3287 3313 3329 3421 3472 3767 3789 3806 3926 4012 4039 4045 4066 4098 4179 4242 4281 4308 4366 4371 4385 4390 4538 4568 4659 4715 4731 4902 4977 5027 5054 5073 5204 5224 5229 5521 5534 5585 5624 5803 5805 6023 6102 6106 6143 6297 6332 6354 6357 6465 6574 6672 6691 6756 6840 6856 6942 7068 7093 7115 7381 7386 7390 7478 7613 7746 7848 8015 8021 8042 8109 8137 8196 8235 8294 8311 8341 8505 8697 8706 8722 8781 8823 8885 8908 8913 8955 8971 9146 9150 9233 9235 9278 9346 9462 9507 9528 9702 9736 9851

ಬೆಳ್ತಂಗಡಿ ಸಂಚಾರಿ ಪೊಲೀಸ್ ಠಾಣೆಗೆ ಬ್ಯಾರಿಕೇಡ್ ಕೊಡುಗೆ

◆ **ಮಂಗಳೂರು:** ಬೆಳ್ತಂಗಡಿಯ ಲಾಯಿಲದಲ್ಲಿರುವ ಜ್ಯೋತಿ ಆಸ್ಪತ್ರೆ ಮತ್ತು ಕೆಎಂಸಿ ಆಸ್ಪತ್ರೆಯ ತುರ್ತು ಚಿಕಿತ್ಸಾ ಕೇಂದ್ರದ ವತಿಯಿಂದ ಸಾಮಾಜಿಕ ಹೊಣೆಗಾರಿಕೆಯ ಅಂಗವಾಗಿ ಬೆಳ್ತಂಗಡಿ ಸಂಚಾರಿ ಪೊಲೀಸ್ ಠಾಣೆಗೆ ಬ್ಯಾರಿಕೇಡ್ ಗಳನ್ನು ಕೊಡುಗೆಯಾಗಿ ನೀಡಲಾಯಿತು.

ಬೆಳ್ತಂಗಡಿ ಸಂಚಾರಿ ಪೊಲೀಸ್ ಠಾಣೆಗೆ ನೀಡಲಾದ ಈ ಬ್ಯಾರಿಕೇಡ್ ಗಳನ್ನು ಕೆಎಂಸಿ ಆಸ್ಪತ್ರೆಯ ತುರ್ತು ಚಿಕಿತ್ಸಾ ಘಟಕದ ಮುಖ್ಯಸ್ಥ ಡಾ. ಜೀದು ರಾಧಾಕೃಷ್ಣನ್, ಕೆಎಂಸಿ ಆಸ್ಪತ್ರೆಯ ಸಾರ್ವಜನಿಕ ಸಂಪರ್ಕಧಿಕಾರಿ ಮನಮೋಹನ ದೇವ, ಜ್ಯೋತಿ ಆಸ್ಪತ್ರೆಯ ಆಡಳಿತಾಧಿಕಾರಿ ಸಿಸ್ಟರ್ ಮೆರಿಟ್ ಹಾಗೂ ಮೆಡಿಕಲ್ ಸೂಪರಿಂಟೆಂಡೆಂಟ್ ಡಾ. ಸಿಸ್ಟರ್ ಬೆಟ್ಟಿ ವರ್ಗೀಸ್ (ಡಾ. ಸಿಸ್ಟರ್ ಅನುಜಾ) ಅವರು ಬೆಳ್ತಂಗಡಿ ಸಂಚಾರಿ ಪೊಲೀಸ್ ಠಾಣೆಯ ಉಪನಿರೀಕ್ಷಕರಾದ ಕಿಶೋರ್ ಪಿ. ಮತ್ತು ನಿಂಗಪ್ಪ ಡಿ. ಜಕ್ಕಣ್ಣ ಅವರಿಗೆ ಹಸ್ತಾಂತರಿಸಿದರು.

ಡಾ. ಜೀದು ರಾಧಾಕೃಷ್ಣನ್ ಅವರು ಮೂಲ ಜೀವ ರಕ್ಷಣೆಯ ಮಹತ್ವದ ಕುರಿತು ಮಾತನಾಡಿ, ತುರ್ತು ಪರಿಸ್ಥಿತಿಗಳಲ್ಲಿ ಜೀವ ಉಳಿಸುವ ವಿಧಾನಗಳ ಬಗ್ಗೆ ಮಾಹಿತಿಯನ್ನು ನೀಡಿದರು. ಜೀವ ರಕ್ಷಣೆಯ ಕುರಿತು



ನಾವು ಹಲವಾರು ವರುಷಗಳಿಂದ ದಕ್ಷಿಣ ಕನ್ನಡ, ಉಡುಪಿ, ಚಿಕ್ಕಮಂಗಳೂರು, ಉತ್ತರ ಕನ್ನಡ, ಕಾಸರಗೋಡು ಮತ್ತು ಕಣ್ಣೂರ್ ಜಿಲ್ಲೆಗಳಲ್ಲಿ ಮಾಹಿತಿ ಮತ್ತು ತರಬೇತಿ ಕಾರ್ಯಕ್ರಮಗಳನ್ನು ನಡೆಸುತ್ತಾ ಬಂದಿದ್ದೇವೆ. ಇಂತಹ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಇಚ್ಛಿಸುವವರು ನಮ್ಮ ಬೆಳ್ತಂಗಡಿಯ ತುರ್ತು ಚಿಕಿತ್ಸಾ ಘಟಕದ ಮೊಬೈಲ್ ಸಂಖ್ಯೆ 8050416333ಗೆ ಸಂಪರ್ಕಿಸಬಹುದೆಂದು ತಿಳಿಸಿದರು.

ಕೆಎಂಸಿ ಆಸ್ಪತ್ರೆಯ ತುರ್ತುಚಿಕಿತ್ಸಾ ಘಟಕದ ವೈದ್ಯಕೀಯ ಸಿಬ್ಬಂದಿವರ್ಗ, ಜ್ಯೋತಿ ಆಸ್ಪತ್ರೆಯ ಸಿಬ್ಬಂದಿ ಹಾಗೂ ಬೆಳ್ತಂಗಡಿ ಸಂಚಾರಿ ಠಾಣೆಯ ಪೊಲೀಸ್ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ಶಾರದಾ ವಿದ್ಯಾನಿಕೇತನ ಪಬ್ಲಿಕ್ ಶಾಲೆಯಲ್ಲಿ ವಿಶಿಷ್ಟ ಮೇಳ

◆ **ಮಂಗಳೂರು:** ಶಾರದಾ ವಿದ್ಯಾನಿಕೇತನ ಪಬ್ಲಿಕ್ ಶಾಲೆಯಲ್ಲಿ ವಿದ್ಯಾರ್ಥಿಗಳು ಬೆಳೆದ ತರಕಾರಿಗಳನ್ನು ತಾವೇ ಮಾರುಕಟ್ಟೆ ಮಾಡುವ ವಿಶಿಷ್ಟ ಕಾರ್ಯಕ್ರಮ ನಡೆಯಿತು. ಶಾಲೆಯ ತರಕಾರಿ ತೋಟದಲ್ಲಿ ಬೆಳೆದ ಬೆಂಡೆಕಾಯಿ, ಬದನೆಕಾಯಿ, ಕಾಯಿ ಮೆಣಸು, ಸೌತೆಕಾಯಿ, ಬಸಳೆ, ತೊಂಡೆಕಾಯಿ, ಕುಂಬಳಕಾಯಿ, ಹಲಸಿನಕಾಯಿ ಗುಜ್ಜೆ, ಸೋರೆಕಾಯಿ ಮುಂತಾದ ತರಕಾರಿಗಳನ್ನು ಮಕ್ಕಳು ಸ್ವತಃ ಕಟಾವು ಮಾಡಿ ಮಾರಾಟಕ್ಕೆ ಸಿದ್ಧಪಡಿಸಿದರು.

ಶಿಕ್ಷಕರ ಮಾರ್ಗದರ್ಶನದಲ್ಲಿ ವಿದ್ಯಾರ್ಥಿಗಳು ತರಕಾರಿಗಳನ್ನು ತೂಕಮಾಡಿ ಪ್ಯಾಕ್ ಮಾಡಿ, ಸೂಕ್ತ ಬೆಲೆ ನಿಗದಿಪಡಿಸಿದರು. ನಂತರ ಶಾಲಾ ಆವರಣದಲ್ಲಿ ಮಾರುಕಟ್ಟೆ ವ್ಯವಸ್ಥೆ ಮಾಡಿ, ಶಿಕ್ಷಕ ಶಿಕ್ಷಕೇತರರಿಗೆ ಮಾರಾಟ ಮಾಡಿದರು.



ಈ ಕಾರ್ಯಕ್ರಮದ ಮೂಲಕ ಮಕ್ಕಳಿಗೆ ಕೃಷಿಯ ಮಹತ್ವ, ಹಣದ ನಿರ್ವಹಣೆ ಮತ್ತು ವ್ಯಾಪಾರ ಕೌಶಲ್ಯಗಳ ಬಗ್ಗೆ ಪ್ರಾಯೋಗಿಕ ಜ್ಞಾನ ಲಭಿಸಿತು. ಶಿಕ್ಷಕ-ಶಿಕ್ಷಕೇತರರು ವಿದ್ಯಾರ್ಥಿಗಳ ಪ್ರಯತ್ನವನ್ನು ಮೆಚ್ಚಿ ಹೆಚ್ಚಿನ ಸಂಖ್ಯೆಯಲ್ಲಿ ತರಕಾರಿಗಳನ್ನು ಖರೀದಿಸಿದರು.

ಶಾಲಾ ಆಡಳಿತವು ಇಂತಹ ಕಾರ್ಯಕ್ರಮಗಳು ವಿದ್ಯಾರ್ಥಿಗಳ ಸರ್ವಾಂಗೀಣ ಅಭಿವೃದ್ಧಿಗೆ ಸಹಾಯಕವಾಗುತ್ತವೆ ಎಂದು ತಿಳಿಸಿದೆ.

ಬೊಪ್ಪಂಡ ರಶ್ಮಿ ಅಯ್ಯಪ್ಪಗೆ ಉದ್ಯೋಗ್ ಯೋಗ್ ಧಾನ್ ಪ್ರಶಸ್ತಿ

◆ **ಮಡಿಕೇರಿ:** ಬೆಂಗಳೂರಿನಲ್ಲಿ ನೆಲಸಿರುವ ಬೊಪ್ಪಂಡ ರಶ್ಮಿ ಅಯ್ಯಪ್ಪ ಅವರಿಗೆ ಜೀವಮಾನ ಸಾಧನೆಗಾಗಿ ಪ್ರತಿಷ್ಠಿತ ಉದ್ಯೋಗ್ ಯೋಗ್ ಧಾನ್ – 2026 ಪ್ರಶಸ್ತಿ ಲಭಿಸಿದ್ದು, ಬೆಂಗಳೂರಿನಲ್ಲಿ ಆಯೋಜಿತ ಸಮಾರಂಭದಲ್ಲಿ ಖ್ಯಾತ ಚಿತ್ರ ನಟಿ ಶಿಲ್ಪಾ ಶೆಟ್ಟಿ ಅವರಿಂದ ಪ್ರಶಸ್ತಿಯನ್ನು ಸ್ವೀಕರಿಸಿದ್ದಾರೆ.

ಯೋಗ ಕ್ಷೇಮ, ಆರೋಗ್ಯ ಸ್ವಾಸ್ತ್ಯ, ಜೀವನೋಲ್ಲಾಸ ಕ್ಷೇತ್ರದಲ್ಲಿ




ಹೆಸರಾಗಿರುವ ಆಶ್ವಾಸನ್ ಸಂಸ್ಥೆಯ ಸಂಸ್ಥಾಪಕಿಯಾಗಿ ಮತ್ತು ಕಾರ್ಯನಿರ್ವಾಹಕಿ ಅಧ್ಯಕ್ಷೆಯಾಗಿರುವ ರಶ್ಮಿ ಅಯ್ಯಪ್ಪ ಎರಡು ದಶಕಗಳಿಂದ 30 ದೇಶಗಳಲ್ಲಿ ಆರೋಗ್ಯ ಸ್ವಾಸ್ತ್ಯ ಸಂಬಂಧಿತ 100 ಕ್ಕೂ ಹೆಚ್ಚು ಮಹತ್ವದ ಸಾಧನೆಗಳನ್ನು ನಡೆಸಿದ್ದು ಆರೋಗ್ಯ ಸ್ವಾಸ್ತ್ಯ ಕ್ಷೇತ್ರದಲ್ಲಿ ಇವರ ಸಾಧನೆಯನ್ನು ಪರಿಗಣಿಸಿ ಈ ಪ್ರಶಸ್ತಿ ನೀಡಲಾಗಿದೆ. ಯೋಗ ಕ್ಷೇಮ, ಆಧ್ಯಾತ್ಮದ ಮೂಲಕ ಜೀವನೋಲ್ಲಾಸ ಕುರಿತಾದ ರಶ್ಮಿ ಅಯ್ಯಪ್ಪ ಅವರ ಕಾರ್ಯಕ್ರಮಗಳು ಜಗತ್ತಿನಾದ್ಯಂತ ಮನ್ನಣೆ ಪಡೆದಿದೆ.

ನಿಧನ ಸುದ್ದಿ

ಚೆಲುವರಾಜ ಪೆರಂಪಳ್ಳಿ

ಉಡುಪಿ: ಹಿರಿಯ ಪತ್ರಕರ್ತ ಚೆಲುವರಾಜ ಪೆರಂಪಳ್ಳಿ (69) ಸ್ವಗೃಹದಲ್ಲಿ ಅಸೌಖ್ಯದಿಂದ ಏ.5ರಂದು ನಿಧನರಾದರು.

ಪೆರಂಪಳ್ಳಿ ಬ್ರಹ್ಮಶ್ರೀ ನಾರಾಯಣ ಗುರು ಸೇವಾ ಸಮಿತಿಯ ಗೌರವಾಧ್ಯಕ್ಷ, ಯುವಕ ಮಂಡಲದ



ಗೌರವಾಧ್ಯಕ್ಷ, ಬಿಲ್ಲಾಡಿ ಆತ್ಮಾನಂದ ಸರಸ್ವತಿ ಕೈಗಾರಿಕಾ ತರಬೇತಿ ಕೇಂದ್ರದ ಟ್ರಸ್ಟಿಯಾಗಿದ್ದ ಇವರು, ತರಂಗ ವಾರಪತ್ರಿಕೆಯ ಉಪ ಸಂಪಾದಕರಾಗಿ ಕಾರ್ಯನಿರ್ವಹಿಸಿದ್ದರು. ನಾಟಕ ರಚನೆಕಾರರು, ಸಾಹಿತಿ ಹಾಗೂ ಊರಿನ ಎಲ್ಲ ದೇವಸ್ಥಾನ ಮತ್ತು ದೈವಸ್ಥಾನಗಳ ಪದಾಧಿಕಾರಿಗಳಾಗಿ ಸೇವೆ ಸಲ್ಲಿಸಿದ್ದರು. ಆದಿಉಡುಪಿಯ ಬ್ರಹ್ಮ ಬೈದರ್ಕಳ ಸಾಂಸ್ಕೃತಿಕ ಅಧ್ಯಯನ ಕೇಂದ್ರ ಬೈದಶ್ರೀಯ ಉಪಾಧ್ಯಕ್ಷ ಮತ್ತು ವಕ್ತಾರರಾಗಿದ್ದರು. ಮೃತರು ಪತ್ನಿ, ಪುತ್ರ, ಪುತ್ರಿಯನ್ನು ಅಗಲಿದ್ದಾರೆ.

ಅಬೂಬಕ್ಕರ್ ಮಂಜೇಶ್ವರ

ಮಂಜೇಶ್ವರ: ಟಿಪ್ಪರ್ ಲಾರಿ ಚಾಲಕ ಹೃದಯಾಘಾತದಿಂದ ನಿಧನ ಹೊಂದಿದ ಘಟನೆ ನಡೆದಿದೆ. ಹೊಸಂಗಡಿ ಬಳಿಯ ಅಂಗಡಿಪದವು ನಿವಾಸಿ ಅಬೂಬಕ್ಕರ್ (58) ನಿಧನ ಹೊಂದಿದ್ದಾರೆ. ಶನಿವಾರ ಬೆಳಗ್ಗೆ ಮನೆಯಿಂದ ಬಾಡಿಗೆ ನಿಮಿತ್ತ ಕರ್ನಾಟಕದ



ಗುರುಪುರ ಕೈಕಂಬ ಗಂಜಿ ಮಠಕ್ಕೆ ತೆರಳಿದ್ದರು. ಮಧ್ಯಾಹ್ನ ವೇಳೆ ಮನೆಯೊಂದರಿಂದ ಸಾಮಗ್ರಿ ಲಾರಿಗೆ ಹಾಕುವ ಮಧ್ಯೆ ಹೃದಯಘಾತದಿಂದ ಕುಸಿದು ಬಿದ್ದರು. ಅವರನ್ನು ಕೂಡಲೇ ಆಸ್ಪತ್ರೆಗೆ ಸಾಗಿಸಿದರೂ ಅಷ್ಟರಲ್ಲಿ ನಿಧನ ಹೊಂದಿದ್ದರು. ಅವರು ಈ ಹಿಂದೆ ಹಲವು ವರ್ಷಗಳ ಕಾಲ ಖಾಸಗಿ ಬಸ್ ಚಾಲಕರಾಗಿದ್ದರು. ಮೃತರು ಪತ್ನಿ ಚೌರ, ಮಕ್ಕಳಾದ ಫೌಜಿಯಾ, ರುಕ್ಷಾನ, ಅಶ್ರಫ್, ಬಶೀರ್ ಅವರನ್ನು ಅಗಲಿದ್ದಾರೆ.

ರಾಧಾಕೃಷ್ಣ ಬಿ.

ಬದಿಯಡ್ಕ: ಚೆನ್ನಾರಕಟ್ಟೆ ನಿವಾಸಿ ರಾಧಾಕೃಷ್ಣ ಬಿ. (60) ನಿಧನ ಹೊಂದಿದರು. ಅಸೌಖ್ಯ ಬಾಧಿಸಿದ್ದ ಅವರು ಚಿಕಿತ್ಸೆ ಪಡೆಯುತ್ತಿದ್ದರು. ಮೃತರು ಪತ್ನಿ ಸೀತಾ ಸಿ.ಎಚ್., ಮಕ್ಕಳಾದ ವಿವೇಕ್, ರಾಜೇಶ್, ಜಯಶ್ರೀ ಅವರನ್ನು ಅಗಲಿದ್ದಾರೆ.

ಕಿರುಸುದ್ದಿ

ತಲಪಾಡಿ ರಾ.ಹೆದ್ದಾರಿಯಲ್ಲಿ ಕಾರು-ಸ್ಕೂಟರ್ ಮಧ್ಯೆ ಅಪಘಾತ: ಓರ್ವ ಮೃತ್ಯು

ಉಳ್ಳಾಲ: ತಲಪಾಡಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಶನಿವಾರ ರಾತ್ರಿ 8ಗಂಟೆಯ ವೇಳೆ ಕಾರು ಮತ್ತು ಸ್ಕೂಟರ್ ಮಧ್ಯೆ ಉಂಟಾದ ಅಪಘಾತದಲ್ಲಿ ಗೆಸ್ಟ್‌ಹೌಸ್ ಉದ್ಯೋಗಿ ಮೃತಪಟ್ಟ ಘಟನೆ ನಡೆದಿದೆ. ಕುಂಪಲ ಶಾಂತಿ ಪೂರ್ಣನಗರ ನಿವಾಸಿ ಸತೀಶ್ ಕೆ. (46) ಮೃತಪಟ್ಟವರು. ಅವರು ಕಳೆದ 7ವರ್ಷಗಳಿಂದ ಉಚ್ಚಿಲ ಬಳಿಯ ಮಣ್ಣಂಗುಳಿಯಲ್ಲಿರುವ ಪಿಡಬ್ಲ್ಯುಡಿ ಗೆಸ್ಟ್ ಹೌಸ್‌ನಲ್ಲಿ ಉದ್ಯೋಗಿಯಾಗಿದ್ದರು.



ಅವರು ಶನಿವಾರ ರಾತ್ರಿ ಸ್ನೇಹಿತನ ಸ್ಕೂಟರ್‌ನಲ್ಲಿ ಹಿಂಬದಿಯಲ್ಲಿ ಕುಳಿತು ಸಂಚರಿಸುತ್ತಿದ್ದರು. ಅಪಘಾತದಲ್ಲಿ ಸತೀಶ್ ಗಂಭೀರ ಗಾಯಗೊಂಡಿದ್ದ ಅವರನ್ನು ಮಂಗಳೂರಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಯಿತ್ತಾದರೂ ಭಾನುವಾರ ಮೃತಪಟ್ಟರು. ಸ್ಕೂಟರ್ ಸವಾರ ಮಂಗಲ್ಪಾಡಿ ಕೃಷ್ಣನಗರದ ಚಂದ್ರ ಎಂಬವರು ಗಾಯಗೊಂಡಿದ್ದು ಮಂಗಳೂರಿನ ಆಸ್ಪತ್ರೆಯಲ್ಲಿ ದಾಖಲಾಗಿದ್ದಾರೆ. ಮೃತ ಸತೀಶ್ ಅವರು ತಾಯಿ, ಪತ್ನಿ ಆಶಾ, ಮಕ್ಕಳಾದ ಅನುಶ್ರೀ, ಧ್ವನಿಶ್ರೀ ಅವರನ್ನು ಅಗಲಿದ್ದಾರೆ.

ಕಾರಿನಲ್ಲಿ ಸಾಗಿಸಿದ 160 ಲೀಟರ್ ಕರ್ನಾಟಕ ಮದ್ಯ ಸಹಿತ ಯುವಕನ ಬಂಧನ

ಕುಂಬಳೆ: ಕರ್ನಾಟಕದಿಂದ ಕುಂಬಳೆ ಭಾಗಕ್ಕೆ ಕಾರಿನಲ್ಲಿ ಸಾಗಿಸುತ್ತಿದ್ದ 160 ಲೀಟರ್ ಮದ್ಯ ಸಹಿತ ವ್ಯಕ್ತಿಯನ್ನು ಅಬಕಾರಿ ಅಧಿಕಾರಿಗಳು ಬಂಧಿಸಿದ್ದಾರೆ. ತಲಪಾಡಿ ಮಂಡೆಕಟ್ಟ ತಚ್ಚಾನಿ ನಿವಾಸಿ ನಿಖಿಲ್ (24) ಎಂಬಾತನನ್ನು ಕುಂಬಳೆ ಅಬಕಾರಿ ಅಧಿಕಾರಿಗಳು ಬಂಧಿಸಿದ್ದಾರೆ. ಭಾನುವಾರ ಬೆಳಗ್ಗೆ ಕರ್ನಾಟಕದಿಂದ ಮದ್ಯ ಸಾಗಾಟ ನಡೆಯುತ್ತಿದೆ ಎಂಬ ಮಾಹಿತಿ ಲಭಿಸಿದ ಹಿನ್ನೆಲೆಯಲ್ಲಿ ಅಬಕಾರಿ ತಂಡ ಕುಂಟಂಗೇರಡ್ಕದಲ್ಲಿ ಕಾರ್ಯಾಚರಣೆ ನಡೆಸಿದೆ. ಈ ವೇಳೆ ಮದ್ಯ ಸಾಗಾಟದ ಕಾರು ಹಲವು ಅಬಕಾರಿ ಪ್ರಕರಣಗಳಲ್ಲಿ ಆರೋಪಿಯಾದ ಕುಂಟಂಗೇರಡ್ಕದ ಪ್ರಭಾಕರ ಯಾನೆ ಅಣ್ಣಿ ಪ್ರಭಾಕರ (55) ಎಂಬಾತನ ಮನೆಯತ್ತ ತೆರಳಿತ್ತು. ಈ ವೇಳೆ ಕಾರನ್ನು ಮನೆಯ ಮುಂದೆ ತಡೆದು ನಿಲ್ಲಿಸಿ ನಿಖಿಲ್ ಹಾಗೂ ಮದ್ಯವನ್ನು ವಶಪಡಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಇದೇ ವೇಳೆ ಮನೆಯ ಟೆರೇಸ್‌ನ ಮೇಲೆ ಹತ್ತಿ ನಿಂತಿದ್ದ ಅಣ್ಣಿ ಪ್ರಭಾಕರ ಅಬಕಾರಿ ತಂಡ ಹಾಗೂ ಪಾದಚಾರಿಗಳ ಮುಂದೆ ನಗ್ನತೆ ಪ್ರದರ್ಶಿಸಿದ್ದಾನೆ. ಅಲ್ಲದೆ ಅವರ ಮೇಲೆ ಮಲ ಎಸೆದಿರುವುದಾಗಿ ಅಬಕಾರಿ ಅಧಿಕಾರಿಗಳು ತಿಳಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಮದ್ಯ ವಶ ಪ್ರಕರಣದಲ್ಲಿ ಅಣ್ಣಿ ಪ್ರಭಾಕರನನ್ನು ಆರೋಪಿಯಾಗಿ ಕೇಸು ದಾಖಲಿಸಲಾಗಿದೆ.

ಕಾಪುವಿನಲ್ಲಿ ವರದಕ್ಷಿಣೆ ಕಿರುಕುಳ; ಮಗುವಿನೊಂದಿಗೆ ರಸ್ತೆಗೆ ತಳ್ಳಿದ ಪತಿ ಕುಟುಂಬ

ಉಡುಪಿ: ಕಾಪು ತಾಲೂಕಿನ ನಡ್ಸಾಲು ಗ್ರಾಮದ ಶಬ್ರೀನ (25) ಎಂಬವರು ತನ್ನ ಪತಿ ಮತ್ತು ಕುಟುಂಬದ ವಿರುದ್ಧ ವರದಕ್ಷಿಣೆ ಕಿರುಕುಳ ಹಾಗೂ ಹಲ್ಲೆ ನಡೆಸಿದ ಬಗ್ಗೆ ಕಾಪು ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. 2024ರ ಮೇ ತಿಂಗಳಿನಲ್ಲಿ ಮೂಡಬೆಟ್ಟು ನಿವಾಸಿ ಯಾಸೀರ್ ಸಾಬನ್ ಅಲಿ ಎಂಬವರೊಂದಿಗೆ ಶಬ್ರೀನ ಅವರ ವಿವಾಹವಾಗಿತ್ತು. ಮದುವೆಯಾದ ಕೆಲವು ದಿನಗಳಲ್ಲೇ ಪತಿ ಯಾಸೀರ್, ಮಾವ ಸಾಬನ್ ಸಾಹೇಬ್ ಮತ್ತು ಅತ್ತೆ ಅವ್ವಮ್ಮ ಸೇರಿ ಹೆಚ್ಚಿನ ಹಣ ತರುವಂತೆ ಒತ್ತಾಯಿಸಿ ಮಾನಸಿಕ ಹಾಗೂ ದೈಹಿಕ ಕಿರುಕುಳ ನೀಡಲು ಆರಂಭಿಸಿದ್ದರು. ಪತಿ ಯಾಸೀರ್ ಅವಾಚ್ಯ ಶಬ್ದಗಳಿಂದ ಬೈದು ಜೀವ ಬೆದರಿಕೆ ಹಾಕಿದ್ದಲ್ಲದೆ, ಹಲ್ಲೆ ನಡೆಸಿದ್ದಾನೆ ಎಂದು ದೂರಿನಲ್ಲಿ ವಿವರಿಸಲಾಗಿದೆ. ಇತ್ತೀಚೆಗೆ ಆರೋಪಿಗಳೆಲ್ಲರೂ ಸೇರಿ ಶಬ್ರೀನ ಅವರನ್ನು ಹೊಡೆದು ಬಡಿದು, ಅವರ 5 ತಿಂಗಳ ಮಗುವಿನೊಂದಿಗೆ ಮನೆಯಿಂದ ಹೊರಹಾಕಿ ಪಡುಬಿದ್ರಿ ಮಾರ್ಗಮಧ್ಯೆ ಬಿಟ್ಟು ಹೋಗಿದ್ದಾರೆ ಎನ್ನಲಾಗಿದೆ. ಈ ಬಗ್ಗೆ ಕಾಪು ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಬಪ್ಪನಾಡು ಚೆಕ್ ಪೋಸ್ಟ್ ಬಳಿ ಸರಣಿ ಅಪಘಾತ

ಮುಲ್ಕಿ: ಅವಿಭಾಜಿತ ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಯ ಗಡಿಭಾಗದ ರಾಷ್ಟ್ರೀಯ ಹೆದ್ದಾರಿ 66ರ ಮುಲ್ಕಿ ಸಮೀಪದ ಬಪ್ಪನಾಡು ಚೆಕ್ ಪೋಸ್ಟ್ ಬಳಿ ವಾಹನಗಳ ನಡುವೆ ಸರಣಿ ಅಪಘಾತ ಸಂಭವಿಸಿದ್ದು, ಚಾಲಕರು ಅಲ್ಪಸ್ವಲ್ಪ ಗಾಯಗಳೊಂದಿಗೆ ಪಾರಾಗಿದ್ದಾರೆ. ಉಡುಪಿ ಕಡೆಯಿಂದ ಮಂಗಳೂರು ಕಡೆಗೆ ಹೋಗುತ್ತಿದ್ದ ಪಿಕಪ್ ಚಾಲಕ ಅಜೆಕಾರು ನಿವಾಸಿ ಪ್ರವೀಣ್ ಎಂಬವರು ಬಪ್ಪನಾಡು ಚೆಕ್ ಪೋಸ್ಟ್ ಬಳಿ ನಿಯಂತ್ರಣ ತಪ್ಪಿ ಪಿಕಪ್ ಸ್ಯಾಂಟ್ರೋ ಕಾರಿಗೆ ಡಿಕ್ಕಿ ಹೊಡೆದಿದೆ. ಈ ಸಂದರ್ಭ ಸ್ಯಾಂಟ್ರೋ ಕಾರ್‌ನ ಚಾಲಕ ಉದ್ಯಾವರ ನಿವಾಸಿ ಸುಧೇಶ್ ರವರು ನಿಯಂತ್ರಣ ತಪ್ಪಿ ಎದುರು ಭಾಗದಿಂದ ಮಂಗಳೂರು ಕಡೆಗೆ ಹೋಗುತ್ತಿದ್ದ ಬ್ರೆಸ್ಸಾ ಕಾರಿಗೆ ಡಿಕ್ಕಿ ಹೊಡೆದು ಅಪಘಾತ ಸಂಭವಿಸಿದೆ. ಸ್ಯಾಂಟ್ರೋ ಕಾರ್‌ನ ಎದುರು ಹಾಗೂ ಹಿಂಭಾಗ ಸಂಪೂರ್ಣ ಜಖಂಗೊಂಡಿದ್ದು, ಪಿಕಪ್ ಹಾಗೂ ಬ್ರೆಸ್ಸಾ ಕಾರಿಗೆ ಅಲ್ಪಸ್ವಲ್ಪ ಹಾನಿ ಉಂಟಾಗಿದೆ. ಅಪಘಾತದ ಸಂದರ್ಭ ಬ್ರೆಸ್ಸಾ ಕಾರಿನ ಚಾಲಕ ಚೇತನ್ ಅಪಾಯದಿಂದ ಪಾರಾಗಿದ್ದಾರೆ. ಸ್ಥಳಕ್ಕೆ ಮಂಗಳೂರು ಉತ್ತರ ಟ್ರಾಫಿಕ್ ಪೊಲೀಸರು ಭೇಟಿ ನೀಡಿದ್ದಾರೆ

ಒಂಟಿಯಾಗಿದ್ದ ವ್ಯಕ್ತಿ ಆತ್ಮಹತ್ಯೆ

ಬಂಟ್ವಾಳ: ತಾಲೂಕಿನ ಅಮ್ಟಾಡಿ ಗ್ರಾಮದ ಬೆದ್ರಗುಡ್ಡೆ ಎಂಬಲ್ಲಿನ ಮನೆಯೊಂದಲ್ಲಿ ಒಂಟಿಯಾಗಿ ವಾಸವಿದ್ದ ವ್ಯಕ್ತಿಯೋರ್ವರ ಮೃತದೇಹ ನೇಣುಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದೆ. ಮೃತರನ್ನು ಇಲ್ಲಿನ ಗ್ರೆಗರಿ ಪೆಡ್ರಿಕ್ ಮೊಂತೇರೋ (62) ಎಂದು ಗುರುತಿಸಲಾಗಿದೆ. ಇವರ ಪತ್ನಿ ಹಾಗೂ ಮಗ 25 ವರ್ಷದ ಹಿಂದೆ ತೊರೆದು ಮುಂಬೈಯ ಅಮರನಾಥದಲ್ಲಿ ನೆಲೆಸಿದ್ದು, ಬಳಿಕ ಗ್ರೆಗರಿ ಪೆಡ್ರಿಕ್ ಮೊಂತೇರೋ ಅವರು ಅಮ್ಟಾಡಿಯ ಬೆದ್ರಗುಡ್ಡೆಯಲ್ಲಿ ಒಬ್ಬಂಟಿಯಾಗಿ ವಾಸವಿದ್ದರೆಂದು ಹೇಳಲಾಗಿದೆ. ಇದರಿಂದಾಗಿ ಮಾನಸಿಕ ಖಿನ್ನತೆಗೆ ಒಳಗಾಗಿದ್ದ ಇವರು ಮದ್ಯ ಸೇವಿಸುವ ಚಟವನ್ನು ಕೂಡಾ ಹೊಂದಿದ್ದರೆನ್ನಲಾಗಿದೆ. ಶುಕ್ರವಾರ ಈಸ್ಟರ್ ಹಬ್ಬದ ಪ್ರಯುಕ್ತ ಶುಭಾಶಯ ಕೋರಲೆಂದು ಇವರ ಸಹೋದರಿ ವಿಯೋನಾ ಮೊಂತೇರೋಳು ಮನೆಗೆ ಬಂದಾಗ ಗ್ರೆಗರಿ ಪೆಡ್ರಿಕ್ ಮೊಂತೇರೋ ಮನೆಯ ಅಂಗಳದಲ್ಲಿ ಮಾಡಿನ ಕಬ್ಬಿಣದ ಅಡ್ಡಕ್ಕೆ ನೈಲಾನ್ ಹಗ್ಗದಲ್ಲಿ ನೇಣು ಬಿಗಿದುಕೊಂಡು ಕೊಳೆತ ಸ್ಥಿತಿಯಲ್ಲಿ ಸ್ಥಿತಿಯಲ್ಲಿ ಮೃತದೇಹ ಕಂಡು ಬಂದಿದೆ. ಈ ಬಗ್ಗೆ ವಿಲಿಯಮ್ ವಿಕ್ಟರ್ ಮೊಂತೇರೋಅವರ ದೂರಿನಂತೆ ಬಂಟ್ವಾಳ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರಂಗೇರಿದ ಚುನಾವಣಾ ಅಖಾಡ | ಎಲ್ಲೆಡೆ ಬಿರುಸಿನ ಮತ ಪ್ರಚಾರ ಭರಾಟೆ

ಕಾಸರಗೋಡು ಬಿಜೆಪಿ ಅಭ್ಯರ್ಥಿ ಅಶ್ವಿನಿ ಪರ ಶಾಸಕ, ಮಾಜಿ ಸಂಸದರಿಂದ ಮತಯಾಚನೆ

ಬಂಟ್ವಾಳ: ಕಾಸರಗೋಡು ವಿಧಾನ ಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಅಶ್ವಿನಿ ಎಂ.ಎಲ್.ಅವರ ಪರವಾಗಿ ಬಂಟ್ವಾಳ ಶಾಸಕ ರಾಜೇಶ್ ನಾಯ್ಕ್ ಉಳಿಪ್ಪಾಡಿಗುತ್ತು ಅವರು ಕಾಸರಗೋಡು ನಗರಪಾಲಿಕೆ ವ್ಯಾಪ್ತಿಯಲ್ಲಿ ಮತಯಾಚನೆಗೈದರು.

ಕಾಸರಗೋಡಿನ ಅಡ್ಕತ್‌ಬೈಲು ಗ್ರಾಮದ ಆರ್ಜಾಲ್ ಭಾಗದಲ್ಲಿ ಮನೆಮನೆಯನ್ನು ಅಭ್ಯರ್ಥಿ ಅಶ್ವಿನಿ ಪರ ಮತಯಾಚನೆಗೈದರು.

ಕಾಸರಗೋಡು ಕ್ಷೇತ್ರದಲ್ಲಿ ಜನತೆ ಬದಲಾವಣೆಯನ್ನು ಬಯಸಿದ್ದು, ಬಿಜೆಪಿ ಪರವಾದ ಅಲೆ ಇದೆ, ಬಿಜೆಪಿಯ ಸಮರ್ಥ ಅಭ್ಯರ್ಥಿಯಾದ ಅಶ್ವಿನಿಯವರ ಗೆಲುವು ನಿಶ್ಚಿತವಾಗಿದ್ದು, ಬಿಜೆಪಿಯಿಂದ ಮಾತ್ರ ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿ ಸಾಧ್ಯ, ಈ ನಿಟ್ಟಿನಲ್ಲಿ ಪಕ್ಷದ ಕಾರ್ಯಕರ್ತರು ಶ್ರಮಿಸುವಂತೆ ಕರೆ ನೀಡಿದರು.

ಇದೇ ವೇಳೆ ಕಾಸರಗೋಡು ಬಿಜೆಪಿ ಪಕ್ಷದ ಹಾಗೂ ಮಧೂರು ಗ್ರಾ.ಪಂ. ವ್ಯಾಪ್ತಿಯ ಬಿಜೆಪಿ ಪಕ್ಷದ ಕಚೇರಿಗೂ ಭೇಟಿಯಿತ್ತ ಶಾಸಕರು ಪಕ್ಷದ ಪ್ರಮುಖರ ಜೊತೆ ಚುನಾವಣಾ ಪ್ರಚಾರದ ಕುರಿತು ಸಮಾಲೋಚನೆ ನಡೆಸಿದರು.



ಮಧೂರು ಭಾಗದಲ್ಲಿ ಶಾಸಕರಿಗೆ ಮಾಜಿ ಸಂಸದ ನಳಿನ್ ಕುಮಾರ್ ಅವರು ಪ್ರಚಾರದಲ್ಲಿ ಸಾಥ್ ನೀಡಿದರು. ಬಳಿಕ ಅಲ್ಲಿ ಪಕ್ಷದ ಪ್ರಮುಖ ಕಾರ್ಯಕರ್ತರೊಂದಿಗೆ ಚರ್ಚಿಸಿದರು.

ಬಳಿಕ ಮಂಜೇಶ್ವರ ಕ್ಷೇತ್ರದ ಅಭ್ಯರ್ಥಿ ಕೆ.ಸುರೇಂದ್ರನ್ ಅವರ ಜೊತೆಯಲ್ಲಿ ಚುನಾವಣಾ ತಂತ್ರಗಾರಿಕೆಯ ಕುರಿತಾಗಿ ಕೆಲಹೊತ್ತು ಚರ್ಚೆ ನಡೆಸಿದರು.

ಈ ಸಂದರ್ಭದಲ್ಲಿ ಮುಂಬೈಯ ಪನ್ವೇಲ್ ಕಾರ್ಪೊರೇಟರ್ ಸಂತೋಷ್ ಶೆಟ್ಟಿ ದಳಂದಿಲ, ಸುಬ್ಬಣ್ಣ ಆಳ್ವ, ಪ್ರಮುಖರಾದ ಅಶೋಕ್ ನಾಯ್ಕ್, ಮಹಾಬಲ ರೈ, ರವೀಂದ್ರ ರೈ, ಧನುಷ್ ಶೆಟ್ಟಿ ದೇಲಿ ಹಾಗೂ ಪವನ್ ದೇಲಿ ಉಪಸ್ಥಿತರಿದ್ದರು.



ಕಾಸರಗೋಡಿನ ಅಭಿವೃದ್ಧಿಗೆ ಎನ್‌ಡಿಎ ಗೆಲುವು ಅನಿವಾರ್ಯ: ಲಕ್ಷ್ಮಿಪ್ರಿಯ

ಕಾಸರಗೋಡು: ಅಭಿವೃದ್ಧಿಗೆ ಎಲ್ಲಾ ಸಾಧ್ಯತೆಗಳಿದ್ದರೂ ಕಾಸರಗೋಡು ಜಿಲ್ಲೆ ಅಭಿವೃದ್ಧಿಯಲ್ಲಿ ಭಾರೀ ಹಿಂದುಳಿದಿದೆ. ಬಾಲ್ಯವನ್ನು ಇಲ್ಲಿ ಕಳೆದ ತನಗೆ ಈಗ ಇಲ್ಲಿನ ಪರಿಸ್ಥಿತಿ ಭಾರೀ ನೋವುಂಟುಮಾಡಿದೆ ಎಂದು ಸಿನಿಮಾ, ಸೀರಿಯಲ್ ನಟಿ ಲಕ್ಷ್ಮಿಪ್ರಿಯ ಹೇಳಿದ್ದಾರೆ.

ಮಾನ್ಯದಲ್ಲಿ ಸೋಮವಾರ ಬೆಳಗ್ಗೆ ನಡೆದ ಎನ್‌ಡಿಎ ಸಾರ್ವಜನಿಕ ಸಭೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು. ಎಂಡೋಸಲ್ಫಾನ್ ಸಂತ್ರಸ್ತರು ಸಹಿತ ಹಲವು ಮಂದಿ ಉತ್ತಮ ಚಿಕಿತ್ಸೆ, ಉದ್ಯೋಗ, ಶಿಕ್ಷಣ ಲಭಿಸದೆ ಹೆಚ್ಚಿನತೊಂದರೆ ಅನುಭವಿಸುತ್ತಿದ್ದಾರೆ. ಹೀಗಿರುವಾಗ ಇಲ್ಲಿನ ಅಭಿವೃದ್ಧಿಗಾಗಿ ಈ ಬಾರಿ ಮತದಾರರು ಕಾಸರಗೋಡಿನ ಎನ್‌ಡಿಎ ಅಭ್ಯರ್ಥಿ ಎಂ.ಎಲ್. ಅಶ್ವಿನಿ ಅವರಿಗೆ ಮತ ಚಲಾಯಿಸಿ ಗೆಲ್ಲಿಸಬೇಕೆಂದು ಅವರು ಕರೆ ನೀಡಿದರು.



ಕಾರ್ಯಕ್ರಮದಲ್ಲಿ ಬಿಜೆಪಿ ಮಂಡಲ ಅಧ್ಯಕ್ಷ ಗೋಪಾಲಕೃಷ್ಣ ಎಂ. ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಕಾರ್ಯದರ್ಶಿ, ಬದಿಯಡ್ಕ ಗ್ರಾಮ ಪಂಚಾಯತ್ ಉಪಾಧ್ಯಕ್ಷೆ ಅಶ್ವಿನಿ ಕೆ.ಎಂ., ಜಿಲ್ಲಾ ಸೆಲ್ ಕೋ-ಓರ್ಡಿನೇಟರ್ ಸುಕುಮಾರ ಕುದ್ರೆಪ್ಪಾಡಿ, ಜಿಲ್ಲಾ ಕೋಶಾಧಿಕಾರಿ ವೀಣಾ ಅರುಣ್ ಶೆಟ್ಟಿ , ಮಂಡಲ ಪ್ರಧಾನ ಕಾರ್ಯದರ್ಶಿಗಳಾದ ರವೀಂದ್ರ ರೈ ಗೋಸಾಡ, ಶ್ರೀಧರ ಬೆಳ್ಳೂರು, ಬದಿಯಡ್ಕ ವೆಸ್ಟ್ ಏರಿಯಾ ಅಧ್ಯಕ್ಷ ಮಹೇಶ್ ವಳಕ್ಕುಂಜ ಮೊದಲಾದವರು ಮಾತನಾಡಿದರು.

ಎನ್‌ಡಿಎ ಅಭ್ಯರ್ಥಿ ಪರ ಚುನಾವಣಾ ಪ್ರಚಾರದಲ್ಲಿ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಕಳವಳ

ಲವ್ ಜಿಹಾದ್ ಜೊತೆಗೆ ಲ್ಯಾಂಡ್ ಜಿಹಾದ್

ಕಾಸರಗೋಡು: ಕೇರಳದಲ್ಲಿ ಲವ್ ಜಿಹಾದ್ ಮಾತ್ರವಲ್ಲದೆ ಲ್ಯಾಂಡ್ ಜಿಹಾದ್ ಹಾಗೂ ಬಿಸ್‌ನೆಸ್ ಜಿಹಾದ್‌ಗಳು ಕೂಡಾ ನಡೆಯುತ್ತಿವೆ. ಇದೆಲ್ಲವೂ ಸಾಮಾಜಿಕ ಪಿಡುಗುಗಳಾಗಿದ್ದು, ರಾಜ್ಯದ ಆಂತರಿಕ ಭದ್ರತೆಗೆ ಅಪಾಯಕಾರಿಯಾಗಿವೆ ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಕಳವಳ ವ್ಯಕ್ತಪಡಿಸಿದ್ದಾರೆ.



ಇಂತಹಬೆಳವಣಿಗೆಗಳುಕೇರಳೀಯರ ಭವಿಷ್ಯದ ಮೇಲೆ ಪ್ರತಿಕೂಲ ಪರಿಣಾಮ ಬೀರಲಿವೆ. ಇದಕ್ಕೆ ಶಾಶ್ವತ ಹಾಗೂ ಸಮಗ್ರ ಪರಿಹಾರ ಕಂಡುಕೊಳ್ಳಲು ಕೇರಳದಲ್ಲಿ ಎನ್‌ಡಿಎ ಮೈತ್ರಿಕೂಟ ಅಧಿಕಾರಕ್ಕೆ ಬರಬೇಕು. ಎನ್‌ಡಿಎ ಆಡಳಿತಕ್ಕೆ ಬಂದಲ್ಲಿ ರಾಜ್ಯದ ಸಮಗ್ರ ವಿಕಸನ ಸಾಧ್ಯವಿದೆ. ಕೇಂದ್ರ ಸರಕಾರದ ಎಲ್ಲಾ ಅಭಿವೃದ್ಧಿ ಯೋಜನೆಗಳನ್ನು ಕೇರಳದಲ್ಲಿ ಜಾರಿಗೊಳಿಸಲಾಗುವುದು ಎಂದು ಅವರು ತಿಳಿಸಿದರು.

ಎರ್ನಾಕುಳಂ ವಿಧಾನಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಪಿ.ಆರ್.ಶಿವಶಂಕರ್ ಅವರ ಚುನಾವಣಾ ಪ್ರಚಾರ ರ್‍ಯಾಲಿಯಲ್ಲಿ ಪಾಲ್ಗೊಂಡ ಬಳಿಕ ಅವರು ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

ವಿದೇಶಿ ದೇಣಿಗೆ ನಿಯಂತ್ರಣ ತಿದ್ದುಪಡಿ ಮಸೂದೆ (ಎಫ್‌ಸಿಆರ್‌ಎ)ಯಡಿ ಕಾನೂನು ಪ್ರಕಾರವಾಗಿ ವಿದೇಶಗಳಿಂದ ಹಣ ಪಡೆಯುವವರಿಗೆ ಯಾವುದೇ ಸಮಸ್ಯೆಯಿಲ್ಲ. ಆದರೆ ಈ ಕಾನೂನಿಗೆ ತದ್ವಿರುದ್ಧವಾಗಿ ಕಾರ್ಯಾಚರಿಸುವವರ ಮೇಲೆ ಎಫ್‌ಸಿಆರ್‌ಎ ಕಾಯ್ದೆಯು ಪರಿಣಾಮ ಬೀರಲಿದೆ ಎಂದು ಅವರು ನುಡಿದರು.

ಕಾಂಗ್ರೆಸ್ ನೇತೃತ್ವದ ಇಂಡಿಯಾ ಒಕ್ಕೂಟದಲ್ಲಿ ವಾಮಪಕ್ಷಗಳು ಸೇರಿವೆ. ಆದರೆ ಕೇರಳದಲ್ಲಿ ಎಲ್‌ಡಿಎಫ್ ಮತ್ತು ಯುಡಿಎಫ್ ಒಕ್ಕೂಟಗಳು ಪ್ರತ್ಯೇಕವಾಗಿ ಸ್ಪರ್ಧಿಸಿ ಜನರ ಕಣ್ಣಿಗೆ ಮಣ್ಣೆರಚುವುದು ಯಾಕೆ ಎಂದು ಪ್ರಶ್ನಿಸಿದ ಅವರು ರಾಜ್ಯದಲ್ಲಿ ಈ ಎರಡೂ ಒಕ್ಕೂಟಗಳು ಧೂಳೀಪಟವಾದಾಗ ಸಮಗ್ರ ಅಭಿವೃದ್ಧಿ ಸಾಧ್ಯವಿದೆ ಎಂದರು.

ಕೇರಳದಲ್ಲಿ ಬಿಜೆಪಿ ಮತ್ತು ಸಿಪಿಎಂ ಒಳ ಒಪ್ಪಂದ ಮಾಡಿಕೊಂಡಿವೆ ಎಂದು ಹೇಳುತ್ತಿರುವ ಕಾಂಗ್ರೆಸ್ ಪಕ್ಷಕ್ಕೆ ತನ್ನ ಇಂಡಿಯಾ ಒಕ್ಕೂಟದಲ್ಲಿ ಸಿಪಿಎಂ ಸೇರಿದ್ದರೂ ಆ ರೀತಿಯಾಗಿ ಮಾತನಾಡಲು ನಾಚಿಕೆಯಾಗುವುದಿಲ್ಲವೇ ಎಂದು ಛೇಡಿಸಿದರು. ರಾಜ್ಯದಲ್ಲಿ ಸಿಪಿಎಂ, ಕಾಂಗ್ರೆಸ್ ಮತ್ತು ಮುಸ್ಲಿಂಲೀಗ್ ಪಕ್ಷಗಳು ಅಪವಿತ್ರ ಮಾಡಿಕೊಂಡು ಮತದಾರರಿಗೆ ವಂಚಿಸುವ ಷಡ್ಯಂತ್ರ ನಡೆಸುತ್ತಿವೆ ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ತಿಳಿಸಿದರು.



ಕಾಸರಗೋಡು ವಿಧಾನಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಎಂ.ಎಲ್.ಅಶ್ವಿನಿಯವರ ಗೆಲುವಿಗಾಗಿ ಕಾಸರಗೋಡಿನಲ್ಲಿ ಅಭಿಭಾಷಕ ಸಂಗಮ ಜರಗಿತು. ಬೆಳ್ತಂಗಡಿ ಶಾಸಕ ಹರೀಶ್ ಪೂಂಜ ಉದ್ಘಾಟಿಸಿ ಮಾತನಾಡಿದರು. ಅಭಿಭಾಷಕ ಪರಿಷತ್‌ನ ಜಿಲ್ಲಾಧ್ಯಕ್ಷ, ವಕೀಲ ಎ.ಸಿ.ಅಶೋಕ್ ಕುಮಾರ್ ಅಧ್ಯಕ್ಷತೆ ವಹಿಸಿದ್ದರು. ವಕೀಲರುಗಳಾದ ಬಿ.ರವೀಂದ್ರನ್, ಕೆ.ಕರುಣಾಕರನ್ ನಂಬ್ಯಾರ್, ಪಿ.ಮುರಳೀಧರನ್, ಅನಿಲ್ ಕೆ.ಜಿ., ಎ.ಮಣಿಕಂಠನ್ ಮಾತನಾಡಿದರು.

ಮಂಜೇಶ್ವರ ಕ್ಷೇತ್ರದಲ್ಲಿ ಕಿಶೋರ್ ಮತಯಾಚನೆ

ಪುತ್ತೂರು: ಕೇರಳದ ಮಂಜೇಶ್ವರ ವಿಧಾನಸಭಾ ಕ್ಷೇತ್ರ ಪ್ರತೀ ಚುನಾವಣೆಯಲ್ಲೂಕಠಿಣಸ್ಪರ್ಧೆನಡೆಯುವ'ಹಾಟ್ ಸೀಟ್' ಎಂದು ಪರಿಗಣಿಸಲಾಗುವ ಕ್ಷೇತ್ರ. ಪ್ರತೀ ಚುನಾವಣೆಯಲ್ಲಿ ಅತೀ ಕಡಿಮೆ ಅಂತರದಲ್ಲಿ ಸೋಲುವ ಬಿಜೆಪಿ ಈ ಬಾರಿ ಕಮಲ ಅರಳಿಸಲು ಶತಾಯಗತಾಯ ಪ್ರಯತ್ನ ಮಾಡಲಾಗುತ್ತಿದೆ.



ಈ ನಿಟ್ಟಿನಲ್ಲಿ ತುಳು ಕನ್ನಡ ಮಾತನಾಡುವ ಜನರೇ ಅಧಿಕವಾಗಿರುವ ಮಂಜೇಶ್ವರ ವಿಧಾನಸಭಾ ಕ್ಷೇತ್ರದ ಎಣ್ಮಕಜೆ ವ್ಯಾಪ್ತಿಯ ಕಂಡೇರಿ ಗ್ರಾಮ ಪಂಚಾಯತ್‌ನಲ್ಲಿ ಮಂಜೇಶ್ವರ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಕೆ. ಸುರೇಂದ್ರನ್ ಅವರ ಪರವಾಗಿ ವಿಧಾನ ಪರಿಷತ್ ಸದಸ್ಯ ಕಿಶೋರ್ ಕುಮಾರ್ ಪುತ್ತೂರು ಅವರು ಮನೆ ಮನೆಗೆ ತೆರಳಿ ಮತಯಾಚನೆ ಮಾಡಿದರು.

ಎಲ್‌ಡಿಎಫ್ ಹಾಗೂ ಯುಡಿಎಫ್‌ನ ಆಡಳಿತ ವೈಫಲ್ಯ ಕಾಸರಗೋಡಿನ ಜ್ವಲಂತ ಸಮಸ್ಯೆಗಳಿಂದ ಬೇಸತ್ತಿರುವ ಜೊತೆಗೆ ನವ ಕಾಸರಗೋಡಿನ ನಿರ್ಮಾಣಕ್ಕಾಗಿ ಕಾಸರಗೋಡಿನ ಜನತೆ ಬದಲಾವಣೆಯನ್ನು ಬಯಸಿದ್ದಾರೆ ಎಂದು ಕಿಶೋರ್ ಕುಮಾರ್ ಪುತ್ತೂರು ಈ ಸಂದರ್ಭದಲ್ಲಿ ಹೇಳಿದರು.

ಈ ಸಂದರ್ಭ ಪದ್ಮನಾಭ ಭಟ್ ಕಂಡೇರಿ, ಪ್ರದೀಪ್ ಭಟ್ ಕಂಡೇರಿ, ಸಾತ್ವಿಕ್ ಕಂಡೇರಿ, 4ನೇ ವಾರ್ಡಿನ ಪಂಚಾಯತ್ ಸದಸ್ಯೆ ಪುಷ್ಪಾವತಿ ವಿ. ರೈ, ಪಕ್ಷಕ್ಕೆ ಹೊಸದಾಗಿ ಸೇರ್ಪಡೆಗೊಂಡ ಸ್ವಸ್ತಿಕ್ ಕೆಂಗಣಾಜೆ, ಪ್ರಜ್ವಲ್ ಆರ್.ಕೆ. ದಂಬೆಕಾನ, ವಿನೋದ್ ಕೊಲ್ಯ, ಪ್ರಶಾಂತ್ ಮತ್ತು ಪಕ್ಷದ ಕಾರ್ಯಕರ್ತರು ಉಪಸ್ಥಿತರಿದ್ದರು.

ಮಂಜೇಶ್ವರ: 3ನೇ ಹಂತದ ಮನೆ ಸಂಪರ್ಕ ಪೂರ್ಣ

ಉಪ್ಪಳ: ಮಂಜೇಶ್ವರ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಕೆ.ಸುರೇಂದ್ರನ್ ಅವರ ವಿವಿಧ ರೀತಿಯಲ್ಲಿ ಪ್ರಚಾರ ಕಾರ್ಯ ಭರದಿಂದ ಸಾಗುತ್ತಿದ್ದು, ಮಂಜೇಶ್ವರ ಮಂಡಲದಲ್ಲಿ ಭಾನುವಾರ ಮೂರನೇ ಹಂತದ ಮನೆಗಳ ಸಂಪರ್ಕ ಪೂರ್ಣಗೊಂಡಿತು. ಮಾತೆಯರ ಸಹಿತ ನೂರಾರು ಕಾರ್ಯಕರ್ತರು ಬೆಳಗ್ಗಿನಿಂದಲೇ ಅತ್ಯಂತ ಉತ್ಸಾಹದಲ್ಲಿ ಪ್ರಚಾರ ಕಾರ್ಯದಲ್ಲಿ ತೊಡಗಿಕೊಂಡಿದ್ದಾರೆ.



ಅಭ್ಯರ್ಥಿ ಕೆ.ಸುರೇಂದ್ರನ್ ಅವರು ಭಾನುವಾರ ಪುತ್ತಿಗೆ ಪಂಚಾಯತ್ ಹಾಗೂ ವಿವಿಧ ಪ್ರದೇಶಗಳಲ್ಲಿ ಪರ್ಯಾಟನೆ ನಡೆಸಿದರು. ಕಾಲನಿ, ಹಿರಿಯ ಮತದಾರರ ಭೇಟಿ, ದೇವಸ್ಥಾನ, ದೈವಸ್ಥಾನ ಮೊದಲಾದೆಡೆಗಳಿಗೆ ಭೇಟಿ ನೀಡಿ ಮತ ಯಾಚಿಸಿದರು.

ಯುವ ಶಕ್ತಿ ಸಂಭ್ರಮ ಕಾರ್ಯಕ್ರಮದಲ್ಲಿ ಕೆ.ಸುರೇಂದ್ರನ್: ಐಲ ಶ್ರೀ ದುರ್ಗಾಪರಮೇಶ್ವರಿ ಕಲಾಭವನದಲ್ಲಿ ಕೂಟ ಮಹಾಜಗತ್ತು ಮಂಗಲ್ಪಾಡಿ ಅಂಗಸಂಸ್ಥೆಯು ಹಮ್ಮಿಕೊಂಡಿದ್ದ ಕೂಟ ಯುವ ಶಕ್ತಿ ಸಂಭ್ರಮ ಕಾರ್ಯಕ್ರಮದಲ್ಲಿ ಮಂಜೇಶ್ವರ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಕೆ.ಸುರೇಂದ್ರನ್ ಅವರು ಭಾಗವಹಿಸಿದರು.



ಕಾಸರಗೋಡು ವಿಧಾನಸಭಾ ಕ್ಷೇತ್ರದ ಯುಡಿಎಫ್ ಅಭ್ಯರ್ಥಿ ಕಲ್ಲಟ್ರ ಮಾಹಿನ್ ಅವರು ಪಾಡಿ ಬೆಳ್ಳೂರು ನಗರದ ಶ್ರೀ ಮಹಾವಿಷ್ಣು ದೇವಸ್ಥಾನದ ವಾರ್ಷಿಕ ಉತ್ಸವಕ್ಕೆ ಭೇಟಿ ನೀಡಿದರು.

ಎಲ್‌ಡಿಎಫ್ ಅಭ್ಯರ್ಥಿ ಜಯಾನಂದ ಪ್ರಚಾರ ಸಭೆಯಲ್ಲಿ ಸುಭಾಷಿಣಿ ಭಾಗಿ



ಮಂಜೇಶ್ವರ: ಮಂಜೇಶ್ವರ ವಿಧಾನ ಸಭಾ ಕ್ಷೇತ್ರದ ಎಲ್‌ಡಿಎಫ್ ಅಭ್ಯರ್ಥಿ ಕೆ.ಆರ್.ಜಯಾನಂದರವರ ಚುನಾವಣಾ ಪ್ರಚಾರದ ಹಿನ್ನೆಲೆಯಲ್ಲಿ ಪೈವಳಿಕೆಯಲ್ಲಿ ನಡೆದ ಮಂಡಲ ಸಮಿತಿ ನೇತೃತ್ವದ ಚುನಾವಣಾ ರ್‍ಯಾಲಿಯನ್ನು ಸಿಪಿಐಎಂ ಪೊಲಿಟ್ ಬ್ಯೂರೋ ಸದಸ್ಯೆ ಸುಭಾಷಿಣಿ ಉದ್ಘಾಟಿಸಿದರು. ಸಿಪಿಐ ಜಿಲ್ಲಾ ಸಮಿತಿ ಸದಸ್ಯ ಅಜಿತ್ ಎಂ.ಸಿ.ಲಾಲ್‌ಬಾಗ್ ಅಧ್ಯಕ್ಷತೆ ವಹಿಸಿದ್ದರು.

ಸಿಪಿಐಎಂ ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯರಾದ ಎಂ.ವಿ.ಜಯರಾಜನ್, ಶಾಸಕ ಇ.ಚಂದ್ರಶೇಖರನ್, ಶಾಸಕ ಎಂ.ರಾಜಗೋಪಾಲನ್ ಹಾಗೂ ಎಡರಂಗದ ವಿವಿಧ ನೇತಾರರು ಭಾಗವಹಿಸಿದರು. ಎಲ್.ಡಿ.ಎಫ್ ಮಂಡಲ ಕಾರ್ಯದರ್ಶಿ ಸಿಜಿ ಮ್ಯಾಥ್ಯು ಸ್ವಾಗತಿಸಿ, ಬಾಯಾರುಪದವಿನಿಂದ ರೋಡ್ ಶೋ ಮೂಲಕ ಸಾರ್ವಜನಿಕ ಸಭೆ ನಡೆಯುವ ಕೇಂದ್ರವಾದ ಪೈವಳಿಕೆಗೆ ಅಭ್ಯರ್ಥಿ ಕೆ.ಆರ್. ಜಯಾನಂದ ಭಾಗವಹಿಸಿದರು.

ಧಾರ್ಮಿಕ ವಿಧಿವಿಧಾನಗಳೊಂದಿಗೆ ಕರೋಪಾಡಿ ಪದ್ಯಾಣ ಶ್ರೀ ಮಹಾಲಿಂಗೇಶ್ವರನ ಸನ್ನಿಧಿಯಲ್ಲಿ ಬ್ರಹ್ಮಕಲಶೋತ್ಸವ ಸಂಪನ್ನ

ಇದು ಭಕ್ತರ ಪಾಲಿನ ಕೈಲಾಸ ಸದೃಶ ಸನ್ನಿಧಿ: ರಾಘವೇಶ್ವರ ಶ್ರೀ

ವಿಟ್ಲ: ದಕ್ಷಿಣ ಕನ್ನಡ ಜಿಲ್ಲೆಯ ಕರೋಪಾಡಿಯ ಪದ್ಯಾಣ ಶ್ರೀ ಮಹಾಲಿಂಗೇಶ್ವರನ ಸನ್ನಿಧಿಯಲ್ಲಿ ಮಾ.30ರಿಂದ ಏ.6ರವರೆಗೆ ಬ್ರಹ್ಮಕಲಶೋತ್ಸವ ಕಾರ್ಯಕ್ರಮಗಳು ಸಂಪನ್ನಗೊಂಡವು.

ಬೆಳಗ್ಗೆ 7ರಿಂದ ಗಣಪತಿ ಹೋಮ ಪಂಚಾಮೃತಾಭಿಷೇಕ, ಶಾಂತಿಹೋಮಾದಿಗಳ ಕಲಶಾಭಿಷೇಕ, ತತ್ವಕಲಶಾಭಿಷೇಕ, ಕುಂಭೇಶ ಕಲಶಾಭಿಷೇಕ, ಪರಿಕಲಶ ಸಹಿತ ದ್ರವ್ಯ ಕಲಶಾಭಿಷೇಕ, ಶತರುದ್ರ ಸಹಿತ ಬ್ರಹ್ಮ ಕುಂಭಾಭಿಷೇಕ, ಮಂತ್ರನ್ಯಾಸಾದಿಗಳು, ಮಹಾಬಲಿ ಪೀಠ ಪ್ರತಿಷ್ಠೆ, ಮಹಾಮಂಗಳಾರತಿ, ವೈದಿಕ ಮಂತ್ರಾಕ್ಷತೆ, ಸಂತರ್ಪಣೆ ನಡೆಯಿತು.

ಬಳಿಕ ನಡೆದ ಧಾರ್ಮಿಕ ಸಭೆಯಲ್ಲಿ ಶ್ರೀ ರಾಮಚಂದ್ರಾಪುರ ಮಠಾಧೀಶ ಶ್ರೀ ರಾಘವೇಶ್ವರ ಭಾರತಿ ಸ್ವಾಮೀಜಿ ಆಶೀರ್ವಚನ ನೀಡಿ, ಪದ್ಯಾಣ ಶ್ರೀ ಮಹಾಲಿಂಗೇಶ್ವರ ಸನ್ನಿಧಿ ಕೈಲಾಸ ಸದೃಶವಾದುದು. ಜೀವನವೆಂದರೆ ಕಳೆದುಕೊಳ್ಳಬೇಕಾದದ್ದನ್ನು ಕಳೆದುಕೊಳ್ಳುವುದು. ನಾವಿರುವಲ್ಲಿಂದ ಮೊದಲು ಸಿಗುವ ದೇವರು. ಯಾರೆಲ್ಲ ಬ್ರಹ್ಮಕಲಶೋತ್ಸವ ಸೇವೆಯಲ್ಲಿ ತೊಡಗಿಸಿಕೊಂಡಿದ್ದಾರೆ ಅವರಿಗೆಲ್ಲ ಶ್ರೇಯಸ್ಸಾಗಲಿ ಎಂದರು.





ಗೌರಿಗದ್ದೆ ಅವಧೂತ ವಿನಯ ಗುರೂಜಿ ಆಶೀರ್ವಚನ ನೀಡಿ, ಒಂದು ಮಠ ಗಟ್ಟಿ ಇದ್ರೆ ಊರು ಉಳಿಯುತ್ತದೆ. ನಾನು ಅನ್ನುವ ಅಹಂಕಾರ ಕಳೆದುಕೊಳ್ಳುವುದು ಸನ್ಯಾಸ. ಜಗತ್ತಿನ ಶಂಕೆಯನ್ನು ನಿವಾರಿಸಲು ಶಂಕರಾಚಾರ್ಯರು ಜನಿಸಿದರು ಎಂದರು. ಸಾಮೂಹಿಕ ವಿವಾಹಗಳನ್ನು ದೇವಸ್ಥಾನಗಳು ಏರ್ಪಡಿಸಿದರೆ ಬಹಳಷ್ಟು ಸಮಸ್ಯೆಗಳಿಗೆ ಪರಿಹಾರ ದೊರಕುತ್ತದೆ ಎಂದರು.

ಬೆಳ್ತಂಗಡಿ ಶಾಸಕ ಹರೀಶ್ ಪೂಂಜ, ಕೈರಂಗಳ ಶ್ರೀ ಶಾರದಾ ಗಣಪತಿ ವಿದ್ಯಾ ಕೇಂದ್ರದ ಅಧ್ಯಕ್ಷ ಟಿ.ಜಿ. ರಾಜಾರಾಮ ಭಟ್, ಶ್ರೀ ಷಣ್ಮುಖ ಸುಬ್ರಹ್ಮಣ್ಯ ದೇವಸ್ಥಾನ ಆಡಳಿತ ಮೊಕ್ತೇಸರ ಮುಳ್ಳುಂಜ ವೆಂಕಟೇಶ್ವರ ಭಟ್, ಮುಳಿಯ ಗೋಲ್ಡ್‌ನ ಕೇಶವ ಪ್ರಸಾದ್ ಮುಳಿಯ, ಹವ್ಯಕ ಮಹಾಮಂಡಲ ಅಧ್ಯಕ್ಷ ಹರಿಪ್ರಸಾದ್ ಪೆರಿಯಪ್ಪು, ಹಿರಿಯ ವಕೀಲ ಎಸ್.ಎಂ. ಭಟ್, ಉಪ್ಪಿನಂಗಡಿ ರಾಜ್ ಗ್ರೂಪ್ಸ್‌ನ ಕೃಷ್ಣರಾಜ್, ಕಾಕುಂಜೆ ಸಾಫ್ಟ್‌ವೇರ್‌ನ ಗೋಪಾಲಕೃಷ್ಣ ಭಟ್, ಉದ್ಯಮಿ ಉಜ್ವಲ್ ಪ್ರಭು ಅತಿಥಿಗಳಾಗಿದ್ದರು.

ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ಡಾ. ಅರುಣಶ್ಯಾಮ್, ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಅರವಿಂದ ಪದ್ಯಾಣ, ಆಡಳಿತ ಮೊಕ್ತೇಸರ ಸೇರಾಜೆ ಸತ್ಯನಾರಾಯಣ ಭಟ್, ಜೀರ್ಣೋದ್ಧಾರ ಸಮಿತಿ ಗೌರವಾಧ್ಯಕ್ಷರಾದ ಪದ್ಯಾಣ ತಿಮ್ಮಣ್ಣ ಭಟ್ಟ ಅಭಿರಾಮ, ಪದ್ಯಾಣ ರಘುರಾಮ ಕಾರಂತ, ಸಂಘಟನಾ ಕಾರ್ಯದರ್ಶಿ ಶಿವಪ್ರಸಾದ್ ಶೆಟ್ಟಿ ಅನೆಯಾಲಗುತ್ತು, ಕಾರ್ಯದರ್ಶಿ ಕೃಷ್ಣ ಎಂ.ಆರ್. ಕಡಬ, ಜೀರ್ಣೋದ್ಧಾರ ಸಮಿತಿ ಕಾರ್ಯದರ್ಶಿ ಈಶಾನ್ಯ ಪದ್ಯಾಣ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಬ್ರಹ್ಮಕಲಶೋತ್ಸವ ಸಮಿತಿ ಗೌರವಾಧ್ಯಕ್ಷ ಡಾ.ಟಿ. ಶ್ಯಾಮ ಭಟ್ ಸ್ವಾಗತಿಸಿ, ಡಾ.ಪ್ರವೀಣ ಪದ್ಯಾಣ ವಂದಿಸಿದರು. ಬ್ರಹ್ಮಕಲಶೋತ್ಸವ ಸಮಿತಿ ಕಾರ್ಯಾಧ್ಯಕ್ಷ ಶ್ಯಾಮ ಸುದರ್ಶನ ಹೊಸಮೂಲೆ ಮತ್ತು ನವ್ಯಕೃಷ್ಣ ಮಾಣಿಪ್ಪಾಡಿ ಕಾರ್ಯಕ್ರಮ ನಿರ್ವಹಿಸಿದರು.

ಐಪಿಎಲ್ ಹವಾ 19
ಚುಟುಕು ಕ್ರಿಕೆಟ್ ಹಬ್ಬ

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
ಮಂಗಳವಾರ, 7 ಏಪ್ರಿಲ್ 2026
ಮಂಗಳೂರು

ಡೇವಿಡ್ ಆರ್ಭಟಕ್ಕೆ ಸಿಎಸ್‌ಕೆ ಧೂಳಿಪಟ

- ಆರ್‌ಸಿಬಿಗೆ 43 ರನ್ ಭರ್ಜರಿ ಜಯ
- ಚೆನ್ನೈ ವಿರುದ್ಧ ತವರಿನಲ್ಲಿ ಸತತ 3ನೇ ಜಯ
- ಒಟ್ಟಾರೆ ಸಿಎಸ್‌ಕೆ ವಿರುದ್ಧ ಸತತ 4ನೇ ಜಯ
- ಭುವಿಗೆ 3 ವಿಕೆಟ್



ಬೆಂಗಳೂರು: ಟಿಮ್ ಡೇವಿಡ್ ಆರ್ಭಟಕ್ಕೆ ಬೆಚ್ಚಿಬಿದ್ದ ಐದು ಬಾರಿಯ ಚಾಂಪಿಯನ್ ಚೆನ್ನೈ ಸೂಪರ್ ಕಿಂಗ್ಸ್(ಸಿಎಸ್‌ಕೆ) ರಾಯಲ್ ಚಾಲೆಂಜರ್ಸ್ ಬೆಂಗಳೂರು(ಆರ್‌ಸಿಬಿ) ತವರಿನಲ್ಲಿ ಮಂಡಿಯೂರಿ ಸೋಲೊಪ್ಪಿದೆ. ಪಾಟಿದಾರ್ ಪಡೆ ನೀಡಿದ 251 ರನ್‌ಗಳ ಬೃಹತ್ ಸವಾಲನ್ನು ನೋಡಿ ದಂಗಾದ ಸಿಎಸ್‌ಕೆ 207ಕ್ಕೆ ಆಲೌಟಾಗಿ ಶರಣಾಯಿತು. ಚಿನ್ನಸ್ವಾಮಿಗೆ ಬಂದು ಆರ್‌ಸಿಬಿ ಮಣಿಸುವ ಕನಸು ಕಾಣುತ್ತಿದ್ದ ಚೆನ್ನೈ 43 ರನ್‌ಗಳ ಸೋಲುಂಡಿತು. ಈ ಆವೃತ್ತಿಯ ಮೊದಲೆರಡೂ ಪಂದ್ಯಗಳನ್ನು ಗೆದ್ದಿರುವ ಆರ್‌ಸಿಬಿ ಅಂಕಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿದೆ.

ಹಾಲಿ ಚಾಂಪಿಯನ್ ಆರ್‌ಸಿಬಿ ಭಾನುವಾರ ರಾತ್ರಿ ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ನೆಚ್ಚಿನ ಅಭಿಮಾನಿಗಳೆದುರು ಸಿಎಸ್‌ಕೆ ಬೌಲಿಂಗ್ ದಾಳಿಯನ್ನು ಪುಡಿಗಟ್ಟಿ ಹಲವು ದಾಖಲೆಗಳನ್ನು ಧ್ವಂಸಗೊಳಿಸಿದೆ. ಆರ್‌ಸಿಬಿ ಪರ ದೇವದತ್ ಪಡಿಕ್ಕಲ್, ನಾಯಕ ರಜತ್ ಪಾಟಿದಾರ್ ಮತ್ತು ಡೇವಿಡ್ ಸ್ಫೋಟಕ ಪ್ರದರ್ಶನ ನೀಡಿದ್ದರು. ಅದರಲ್ಲೂ ಪಡಿಕ್ಕಲ್-ಪಾಟಿದಾರ್, ಪಾಟಿದಾರ್-ಡೇವಿಡ್ ನಡುವಿನ ಜತೆಯಾಟಗಳು ಪಂದ್ಯ ಗೆಲ್ಲುವಲ್ಲಿ ಪ್ರಮುಖ ಪಾತ್ರ ವಹಿಸಿತ್ತು.

ನಿಧಾನಗತಿ ಔಟ್‌ಫೀಲ್ಡ್

ಆರಂಭದಲ್ಲಿ ಎಂ.ಚಿನ್ನಸ್ವಾಮಿ ಪಿಚ್ ಸ್ವಲ್ಪ ಅಂಟಿಕೊಳ್ಳುವಂತಿತ್ತು ಎಂದು 29 ಬಾಲ್‌ಗಳಲ್ಲಿ 50 ರನ್ ಗಳಿಸಿದ ಬೆಂಗಳೂರು ಹುಡುಗ ದೇವದತ್ ಪಡಿಕ್ಕಲ್ ಹೇಳಿದ್ದಾರೆ. ಔಟ್‌ಫೀಲ್ಡ್ ಸಹ ಅಸಾಮಾನ್ಯವಾಗಿ ನಿಧಾನವಾಗಿತ್ತು, ಹಲವಾರು ಬಲವಾದ ಹೊಡೆತಗಳು ಬೌಂಡರಿಯತ್ತ ಹೋಗದೆ ಔಟ್‌ಫೀಲ್ಡ್‌ನಲ್ಲೇ ನಿಂತವು. ಇನಿಂಗ್ಸ್ ಮುಂದುವರಿದಂತೆ ಪಿಚ್ ಸುಧಾರಿಸಿದರೂ, ಔಟ್‌ಫೀಲ್ಡ್ ನಿಧಾನವೇ ಉಳಿಯಿತು. ಟಿಮ್ ಡೇವಿಡ್ ಮತ್ತು ರಜತ್ ಪಾಟಿದಾರ್ ಔಟ್‌ಫೀಲ್ಡ್‌ಗೆ ಚೆಂಡನ್ನು ಹೊಡೆಯುವ ಅಗತ್ಯವೇ ಕಂಡುಕೊಳ್ಳಲಿಲ್ಲ. ಬದಲಿಗೆ ಅವರು ಚೆಂಡನ್ನು ಆಕಾಶಕ್ಕೆತ್ತಿ ಬೌಂಡರಿಗಳಾಚೆಗೆ ಕಳುಹಿಸುತ್ತಿದ್ದರು. ಆರಂಭದಲ್ಲಿ ಔಟ್‌ಫೀಲ್ಡ್ ನಿಧಾನವಾಗಿದ್ದರೂ ಫಿಲ್ ಸಾಲ್ಟ್ ಮತ್ತು ವಿರಾಟ್ ಕೊಹ್ಲಿ ಉತ್ತಮ ಅಡಿಪಾಯ ಹಾಕಿಕೊಟ್ಟಿದ್ದರು.

ಸಿಎಸ್‌ಕೆಗೆ ಸತತ 3ನೇ ಸೋಲು

ಆರ್‌ಸಿಬಿ ನೀಡಿದ 251 ರನ್ ಬೃಹತ್ ಸವಾಲನ್ನು ಬೆನ್ನತ್ತಲು ಆರಂಭಿಸಿದ ಸಿಎಸ್‌ಕೆ ಮೊದಲ 3 ಓವರ್‌ಗಳಲ್ಲೇ ಮೊದಲ 3 ವಿಕೆಟ್ ಕಳೆದುಕೊಂಡಿದ್ದು, ಕೊನೆಯಲ್ಲಿ ಈ ಆವೃತ್ತಿಯ ಸತತ 3ನೇ ಸೋಲುಂಡಿತು.

ಐಪಿಎಲ್-2026 ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ಅಂಕ	ನೆ.ರ.ರೇ.
ಆರ್‌ಸಿಬಿ	2	2	0	4	2.501
ಆರ್‌ಆರ್	2	2	0	4	2.233
ದಿಲ್ಲಿ	2	2	0	4	1.170
ಪಂಜಾಬ್	2	2	0	4	0.637
ಸನ್‌ರೈಸರ್ಸ್	3	1	2	2	0.275
ಮುಂಬೈ	2	1	1	2	−0.206
ಲಖನೌ	2	1	1	2	−0.542
ಗುಜರಾತ್	2	0	2	0	−0.424
ಕೆಕೆಆರ್	2	0	2	0	−1.964
ಸಿಎಸ್‌ಕೆ	3	0	3	0	−2.517



ಆರೆಂಜ್ ಕ್ಯಾಪ್
ರಿಜ್ವಿ
(ದಿಲ್ಲಿ ಕ್ಯಾಪಿಟಲ್)
160
ರನ್

ಪರ್ಪಲ್ ಕ್ಯಾಪ್
ರವಿ ಬಿಷ್ಣೋಯ್
(ರಾಜಸ್ಥಾನ್)
5
ವಿಕೆಟ್

ಅವಕಾಶ ಚೆನ್ನಾಗಿ ಬಳಸಿದ ಟಿಮ್!

18ನೇ ಓವರ್‌ನಲ್ಲಿ ವೇಗಿ ಅಂಶುಲ್ ಕಂಬೋಜ್ ಎಸೆದಿದ್ದ ಯಾರ್ಕರ್ ಟಿಮ್ ಡೇವಿಡ್ ಅವರ ಲೆಗ್ ಸ್ಟಂಪ್ ಉರುಳಿಸಿತ್ತು. ರೋಷಾವೇಷದಿಂದ ಸಂಭ್ರಮಿಸಿದ ಕಂಬೋಜ್ ಡೇವಿಡ್ ಸಮೀಪದಲ್ಲಿ ತೆರಳಿದ್ದರು. ಈ ವೇಳೆ ತಾಳ್ಮೆಯಲ್ಲಿದ್ದ ಟಿಮ್ ಕಂಬೋಜ್ ಅವರಿಗೆ ಸ್ನೇಹದಿಂದ ಫಿಸ್ಟ್ ಬಂಪ್ ನೀಡಿದ್ದರು. ಇದಾದ ನಂತರ ನೋಬಾಲ್ ಸೈರನ್ ಮೊಳಗಿದ್ದು, ಅಂಪೈರ್ ಫ್ರೀಹಿಟ್ ಸನ್ನೆ ಮಾಡಿದ್ದರು. ಆಡಲು ಸಿಕ್ಕ ಇನ್ನೊಂದು ಅವಕಾಶ ಮತ್ತು ಫ್ರೀಹಿಟ್‌ನ ಸಂಪೂರ್ಣ ಬಳಸಿಕೊಂಡ ಡೇವಿಡ್ ಮಿಡ್ ಆನ್ ಮೇಲೆ ಸಿಕ್ಸರ್ ಹೊಡೆದಿದ್ದರು. ಇಲ್ಲಿಂದಲೇ ಡೇವಿಡ್ ಆಕ್ರಮಣಕಾರಿ ಅವತಾರ ಅನ್‌ಲಾಕ್ ಆಗಿದ್ದು. ಮುಂದಿನ ಓವರ್‌ಟನ್ ಓವರ್‌ನಲ್ಲಿ 6, 2, 4, 6, 6, 6 ಸೇರಿ ಒಟ್ಟು 30 ರನ್ ಹೊಡೆದಿದ್ದರು. 25 ಎಸೆತಗಳಲ್ಲಿ ಔಟಾಗದೆ 70 ರನ್ ಚಚ್ಚಿದ್ದ ಡೇವಿಡ್ ಪಂದ್ಯಶ್ರೇಷ್ಠರಾದರು.

44 ಎಸೆತಗಳಲ್ಲಿ 14 ಸಿಕ್ಸರ್!

ಡೇವಿಡ್ ಮತ್ತು ಪಾಟಿದಾರ್ ಇಬ್ಬರೂ ಸೇರಿ ಒಟ್ಟು 44 ಬಾಲ್‌ಗಳನ್ನು ಎದುರಿಸಿ, ಅವುಗಳಲ್ಲಿ 14 ಎಸೆತಗಳನ್ನು ಸಿಕ್ಸರ್‌ಗಳನ್ನಾಗಿ ಪರಿವರ್ತಿಸಿದರು. ಇದರಲ್ಲಿ ಡೇವಿಡ್ 8 ಸಿಕ್ಸರ್ ಮತ್ತು ಪಾಟಿದಾರ್ 6 ಸಿಕ್ಸರ್ ಹೊಡೆದಿದ್ದರು. ಆದರೆ ಸಿಎಸ್‌ಕೆ ಬ್ಯಾಟಿಂಗ್ ಲೈನ್ ಅಪ್ ಒಟ್ಟು 11 ಸಿಕ್ಸರ್‌ಗಳಷ್ಟೇ ಹೊಡೆದಿತ್ತು. ಇವರಿಬ್ಬರ ಜೋಡಿ ಮುರಿಯದ ನಾಲ್ಕನೇ ವಿಕೆಟ್‌ಗೆ 35 ಎಸೆತಗಳಲ್ಲಿ 99 ರನ್ ಕಲೆಹಾಕಿದ್ದರು.

ಚೆನ್ನೈ 207ಕ್ಕೆ ಸರ್ವಪತನ

ಆರ್‌ಸಿಬಿ ಬ್ಯಾಟಿಂಗ್ ವೇಳೆ ಸಹ ಆಟಗಾರ ಟಿಮ್ ಡೇವಿಡ್ ನಿರಂತರ ಸಿಕ್ಸರ್‌ಗಳನ್ನು ಹೊಡೆಯುತ್ತಿದ್ದನ್ನು ನೋಡಿ, ನಾನು ಸಂತೋಷ ಪಡುವುದೋ, ದುಃಖ ಪಡಬೇಕೋ ಗೊತ್ತಾಗಲಿಲ್ಲ. ಯಾಕೆಂದರೆ ನಾನು ಬೌಲಿಂಗ್ ಮಾಡುವವನಿದ್ದೆ ಎಂದು ಆರ್‌ಸಿಬಿ ಅನುಭವಿ ವೇಗಿ ಭುವನೇಶ್ವರ ಕುಮಾರ್ ಪ್ರತಿಕ್ರಿಯಿಸಿದ್ದಾರೆ. ಜೋಶ್ ಹೇಜಲ್‌ವುಡ್ ಅನುಪಸ್ಥಿತಿಯ ಕೊರತೆ ಮತ್ತೊಮ್ಮೆ ಕಾಡದಂತೆ ಜವಾಬ್ದಾರಿ ವಹಿಸಿಕೊಂಡ ಜೇಕಬ್ ಡಫಿ, ಸಂಜು ಸ್ಯಾಮ್ಸನ್ ಮತ್ತು ಋತುರಾಜ್ ಗಾಯಕ್ವಾಡ್ ಅವರನ್ನು ವಿಕೆಟ್‌ಗಳನ್ನು ಕಬಳಿಸಿದರು. ಆರಂಭದ ಹಂತದಲ್ಲಿಯೇ 30ಕ್ಕೆ 3 ವಿಕೆಟ್ ಕಳೆದುಕೊಂಡ ಸಿಎಸ್‌ಕೆ ಕೊನೆಯವರೆಗೆ ಹೋರಾಡಿದರೂ, 19.4 ಓವರ್‌ಗಳಲ್ಲಿ ತನ್ನ ಹೋರಾಟವನ್ನು 207 ರನ್‌ಗಳಿಗೆ ನಿಲ್ಲಿಸಬೇಕಾಯಿತು.

ಸರ್ಫರಾಜ್ ಅರ್ಧ ಶತಕ ವ್ಯರ್ಥ

ಪವರ್‌ಪ್ಲೇ ಓವರ್‌ಗಳ ಮುಕ್ತಾಯದ ವೇಳೆ 77 ರನ್‌ಗಳಿಗೆ 3 ವಿಕೆಟ್ ಕಳೆದುಕೊಂಡು ಸಂಕಷ್ಟದಲ್ಲಿದ್ದ ಸಿಎಸ್‌ಕೆಗೆ ನೆರವಾಗಿದ್ದು 75 ಲಕ್ಷ ರೂ. ಬೆಲೆಗೆ ಖರೀದಿಸಲ್ಪಟ್ಟ ಬ್ಯಾಟರ್ ಸರ್ಫರಾಜ್ ಖಾನ್, ಅವರು 24 ಎಸೆತಗಳಲ್ಲಿ 50 ರನ್ ಪೇರಿಸಿದ್ದ ಸರ್ಫರಾಜ್ ಮುಂದಿನ ಎಸೆತದಲ್ಲಿ ಮುನ್ನುಗ್ಗಿ ಬಾರಿಸುವ ಯತ್ನದಲ್ಲಿ ಸ್ಟಂಪ್ ಆಗಿ ಕೃಣಾಲ್ ಪಾಂಡ್ಯರಿಗೆ ವಿಕೆಟ್ ಒಪ್ಪಿಸಿದರು. ಸರ್ಫರಾಜ್ ಬಿರುಸಿನ ಆಟದಲ್ಲಿ 8 ಬೌಂಡರಿ ಮತ್ತು 2 ಸಿಕ್ಸರ್ ಒಳಗೊಂಡಿದ್ದವು. ಪ್ರಶಾಂತ್ ವೀರ್ 29 ಬಾಲ್‌ಗಳಲ್ಲಿ 43 ರನ್ ಬಾರಿಸಿ ಗಮನಸೆಳೆದರು. ಕೃಣಾಲ್ ಬೌಲಿಂಗ್‌ಗೆ ಡೀಪ್ ಮಿಡ್‌ವಿಕೆಟ್ ಮತ್ತು ವೈಡ್ ಲಾಂಗ್-ಆನ್ ನಡುವೆ ಹೊಡೆದ ಫೋರ್ ಅವರ ಪ್ರತಿಭೆಯನ್ನು ತೋರಿಸಿತು. ಓವರ್‌ಟನ್ ಮತ್ತು ಅಂಶುಲ್ ಕಂಬೋಜ್ ಸಹ ಬ್ಯಾಟ್ ಬೀಸುವ ಮೂಲಕ ವೇಗದ ರನ್ ಗಳಿಸಿದರೂ, ಟಿಮ್ ಡೇವಿಡ್‌ಗೆ ನೀಡಿದ ಸಿಕ್ಸರ್‌ಗಳಿಂದ ಉಂಟಾದ ಹಾನಿಯನ್ನು ಅವರ ಬ್ಯಾಟಿಂಗ್ ಮೂಲಕ ಸರಿಪಡಿಸಲು ಸಾಧ್ಯವಾಗಲಿಲ್ಲ.

ಸಂಕ್ಷಿಪ್ತ ಸ್ಕೋರ್

- ಆರ್‌ಸಿಬಿ 250/3 (20): ಡೇವಿಡ್ 70★, ಪಡಿಕ್ಕಲ್ 50, ಪಾಟಿದಾರ್ 48★, ಸಾಲ್ಟ್ 46, ಕೊಹ್ಲಿ 28 (ದುಬೆ 30ಕ್ಕೆ 1)
- ಸಿಎಸ್‌ಕೆ 207/10 (19.4): ಸರ್ಫರಾಜ್ 50, ಪ್ರಶಾಂತ್ 43, ಓವರ್‌ಟನ್ 37 (ಭುವಿ 41ಕ್ಕೆ 3, ಅಭಿನಂದನ್ 30ಕ್ಕೆ 2, ಕುನಾಲ್ 36ಕ್ಕೆ 2, ಡಫಿ 58ಕ್ಕೆ 2)

- 457 ರನ್ - ಆರ್‌ಸಿಬಿ ಮತ್ತು ಸಿಎಸ್‌ಕೆ ನಡುವಿನ ಐಪಿಎಲ್ ಪಂದ್ಯವೊಂದರಲ್ಲಿ ದಾಖಲಾದ ಅತ್ಯಧಿಕ ರನ್
- ಐಪಿಎಲ್‌ನಲ್ಲಿ ಆರ್‌ಸಿಬಿಯ ತೃತೀಯ ಅತ್ಯಧಿಕ ಮೊತ್ತ 250/3
- ಸಿಎಸ್‌ಕೆ ವಿರುದ್ಧ ಯಾವುದೇ ತಂಡ ಹೊಡೆದ ಅತ್ಯಧಿಕ ಸ್ಕೋರ್
- ಪಂದ್ಯವೊಂದರಲ್ಲೇ ಅತ್ಯಧಿಕ 19 ಸಿಕ್ಸರ್

ಕಿರುಸುದ್ದಿ

ಇದು ಆರ್‌ಸಿಬಿ ಫ್ಯಾನ್ಸ್‌ಗಳು ಸಂಭ್ರಮಿಸುವ ಕಾಲ: ಶಾಸ್ತ್ರಿ

ಬೆಂಗಳೂರು: ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ ಆರ್‌ಸಿಬಿ 43 ರನ್‌ಗಳ ಜಯ ಸಾಧಿಸಿದ ವೇಳೆ ಕಾಮೆಂಟ್ರಿ ಬಾಕ್ಸ್‌ನಲ್ಲಿದ್ದ ವೀಕ್ಷಕ ವಿವರಣೆಕಾರ ಮತ್ತು ಮಾಜಿ ಕ್ರಿಕೆಟಿಗರಾದ ರವಿ ಶಾಸ್ತ್ರಿ, ಇದು ಆರ್‌ಸಿಬಿ ಅಭಿಮಾನಿಗಳ ಸಮಯ, ಇಂತಹ ಕ್ಷಣಗಳಿಗಾಗಿ ಕಳೆದ 17 ವರ್ಷಗಳಿಂದ ಕಾಯುತ್ತಿದ್ದರು ಎಂಬ ಹೇಳಿಕೆಯನ್ನು ನೀಡಿದ್ದಾರೆ. ಕಳೆದ 17 ವರ್ಷಗಳಿಂದ ಆರ್‌ಸಿಬಿ ಅಭಿಮಾನಿಗಳನ್ನು ಎಲ್ಲರೂ ಗೇಲಿ ಮಾಡುತ್ತಿದ್ದರು. ಆರ್‌ಸಿಬಿ ಫ್ಯಾನ್ಸ್ ಶಾಲಾ-ಕಾಲೇಜುಗಳಿಗೆ ಹೋದಾಗ ಸಹಪಾಠಿಗಳಿಂದ ಅಥವಾ ಕುಟುಂಬದ ಸದಸ್ಯರಿಂದ ಆರ್‌ಸಿಬಿ ಬೆಂಬಲಿಸುವ ಕಾರಣಕ್ಕಾಗಿ ಟ್ರೋಲ್‌ಗಳಿಗೆ ಆಹಾರವಾಗಿದ್ದರು. ಆದರೆ ಕಳೆದ ಆವೃತ್ತಿಯಿಂದ ಆರ್‌ಸಿಬಿ ಫ್ರಾಂಚೈಸಿಯ ಆಟ ಬದಲಾಗಿದೆ. ಇದು ಆರ್‌ಸಿಬಿಯ ಸಮಯ ಮತ್ತು ಅಭಿಮಾನಿಗಳು ಸಂಭ್ರಮಿಸುವ ಸಮಯ ಎಂದು ರವಿಶಾಸ್ತ್ರಿ ಹೇಳಿದ್ದಾರೆ.

ಸಿಎಸ್‌ಕೆಯಲ್ಲಿ ಮನ ನೊಂದು ಐಪಿಎಲ್‌ನಿಂದ ನಿವೃತ್ತಿ: ಅಶ್ವಿನ್!

ಬೆಂಗಳೂರು: ಚೆನ್ನೈ ಸೂಪರ್ ಕಿಂಗ್ಸ್ ಪರ 2025ರಲ್ಲಿ ಕೊನೆಯದಾಗಿ ಕಾಣಿಸಿಕೊಂಡಿದ್ದ ಸ್ಪಿನ್ನರ್ ರವಿಚಂದ್ರನ್ ಅಶ್ವಿನ್ ಅವರು, ನನಗಿನ್ನೂ ಹೆಚ್ಚು ಆಡಬಹುದೆಂಬ ಮನಸ್ಥಿತಿಯಿತ್ತು. ಆದರೆ ಸಿಎಸ್‌ಕೆ ತಂಡದಲ್ಲಿನ ತಮ್ಮ ಪಾತ್ರವೇನೆಂಬ ಸ್ಪಷ್ಟತೆಯಿಲ್ಲದ ಕಾರಣ ಮನ ನೊಂದು ಐಪಿಎಲ್ ನಿವೃತ್ತಿ ನೀಡಿರುವುದಾಗಿ ಅಶ್ವಿನ್ ಬಹಿರಂಗಗೊಳಿಸಿದ್ದಾರೆ. ತಮ್ಮಲ್ಲಿನ್ನೂ ಆಟವಾಡುವ ಸಾಮರ್ಥ್ಯವಿದ್ದರೂ 2025ರ ಆವೃತ್ತಿಯಲ್ಲಿ ಅಶ್ವಿನ್‌ರನ್ನು ಸಿಎಸ್‌ಕೆ ಸರಿಯಾಗಿ ಬಳಸಿಕೊಂಡಿರಲಿಲ್ಲ. ಅವರೇ ಹೇಳಿದಂತೆ ಒಟ್ಟು 14 ಪಂದ್ಯಗಳಲ್ಲಿ 9 ಪಂದ್ಯಗಳಲ್ಲಷ್ಟೇ ಅಶ್ವಿನ್‌ರನ್ನು ಆಡಿಸಿ ಉಳಿದ ಕಾಲ ಬೆಂಚ್‌ನಲ್ಲಿ ಕಳೆದಿದ್ದರು. ಋತುರಾಜ್ ಗಾಯಕ್ವಾಡ್ ನಾಯಕರಾದ ಬಳಿಕ ಚೆನ್ನೈನಲ್ಲಿ ಅಶ್ವಿನ್‌ಗೆ ಅವಕಾಶ ಕಡಿಮೆಯಾಗಿತ್ತು. ಸಿಎಸ್‌ಕೆ ಟೀಮ್ ಮ್ಯಾನೇಜ್‌ಮೆಂಟ್ ಜತೆ ಚರ್ಚಿಸಿದ ಬಳಿಕ ಅಶ್ವಿನ್ ನಿವೃತ್ತಿ ಘೋಷಿಸಿದ್ದಾಗಿ ತಮ್ಮ ಯೂಟ್ಯೂಬ್ ಚಾನೆಲ್‌ನ ಆ್ಯಶ್ ಕಿ ಬಾತ್ ಶೋನಲ್ಲಿ ಹೇಳಿಕೊಂಡಿದ್ದಾರೆ.

ಟಿಸಿಎಸ್ ವರ್ಲ್ಡ್ 10ಕೆ ಓಟಕ್ಕೆ ಬ್ಲಾಂಕಾ ವ್ಲಾಸಿಕ್ ರಾಯಭಾರಿ

ಬೆಂಗಳೂರು: ಕ್ರೊವೇಶಿಯಾದ ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತೆ ಮತ್ತು ಎರಡು ಬಾರಿಯ ವಿಶ್ವ ಚಾಂಪಿಯನ್ ಹೈಜಂಪ್‌ಪಟು ಬ್ಲಾಂಕಾ ವ್ಲಾಸಿಕ್ ಟಿಸಿಎಸ್ ವರ್ಲ್ಡ್ 10ಕೆ ಬೆಂಗಳೂರು ಮ್ಯಾರಥಾನ್‌ನ ರಾಯಭಾರಿಯಾಗಿ ಆಯ್ಕೆಯಾಗಿದ್ದಾರೆ. ಕ್ರೀಡೆಯು ಕಂಡ ಅತ್ಯುತ್ತಮ ಹೈ ಜಂಪರ್‌ಗಳಲ್ಲಿ ಒಬ್ಬರಾದ ವ್ಲಾಸಿಕ್ ತನ್ನೊಂದಿಗೆ ದೀರ್ಘಾಯುಷ್ಯ ಮತ್ತು ಯಶಸ್ಸಿನ ಮೇಲೆ ಅತ್ಯುನ್ನತ ಮಟ್ಟದ ವೃತ್ತಿಜೀವನವನ್ನು ಹೊಂದಿದ್ದರು. ಕ್ರೊವೇಶಿಯನ್ ತಾರೆ ಬೀಜಿಂಗ್ 2008ರಲ್ಲಿ ಒಲಿಂಪಿಕ್ ರಜತ ಗೆದ್ದಿದ್ದರು. 2016ರ ರಿಯೊ ಒಲಿಂಪಿಕ್ಸ್‌ನಲ್ಲಿ ಕಂಚು ಗೆದ್ದಿದ್ದಲ್ಲದೆ, ಅನೇಕ ವಿಶ್ವ ಚಾಂಪಿಯನ್‌ಶಿಪ್ ಮತ್ತು ವಿಶ್ವ ಒಳಾಂಗಣ ಪ್ರಶಸ್ತಿಗಳನ್ನು ಬಾಚಿಕೊಂಡಿದ್ದರು.



ಟಿಸಿಎಸ್ ವರ್ಲ್ಡ್ 10ಕೆ ಬೆಂಗಳೂರಿನ 18ನೇ ಆವೃತ್ತಿಯ ಭಾಗವಾಗಲು ನನಗೆ ಹೆಮ್ಮೆ ಇದೆ. ಓಟದ ಮೂಲಕ ಸಾವಿರಾರು ಜನರನ್ನು ಒಟ್ಟುಗೂಡಿಸುವ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವುದು ನಿಜವಾಗಿಯೂ ಸ್ಫೂರ್ತಿದಾಯಕ. ಓಟವು ನಮ್ಮನ್ನು ದೈಹಿಕವಾಗಿ ಸಕ್ರಿಯವಾಗಿರಿಸುವ ಮತ್ತು ಮಾನಸಿಕವಾಗಿ ಬಲವಾಗಿರಿಸುವ ಕ್ರೀಡೆಯಾಗಿದೆ. ಇದು ಅಥ್ಲೆಟಿಕ್ಸ್ ಸಮುದಾಯವನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಪ್ರತಿಯೊಬ್ಬ ಸ್ಪರ್ಧಿಯೂ ನಿಮ್ಮ ಅತ್ಯುತ್ತಮ ಪ್ರದರ್ಶನ ನೀಡಿ, ಚೆನ್ನಾಗಿ ತಯಾರಿ ಮಾಡಿ ಎಂದು ಸಂದೇಶ ನೀಡಿದ್ದಾರೆ. ವರ್ಲ್ಡ್ 10ಕೆ ಬೆಂಗಳೂರಿನ ಅಂತಾರಾಷ್ಟ್ರೀಯ ಕೂಟದ ಅಂಬಾಸಿಡರ್ ಆಗಿ ಬ್ಲಾಂಕಾ ವ್ಲಾಸಿಕ್ ಅವರನ್ನು ಸ್ವಾಗತಿಸಲು ನಾವು ಖುಷಿಪಡುತ್ತೇವೆ. ಅವರ ಅಸಾಧಾರಣ ಸಾಧನೆಗಳು, ಜಾಗತಿಕ ಕ್ರೀಡಾ ಸಮುದಾಯಕ್ಕೆ ಅವರ ನಿರಂತರ ಕೊಡುಗೆ ಅವರನ್ನು ಸ್ಫೂರ್ತಿದಾಯಕ ವ್ಯಕ್ತಿಯನ್ನಾಗಿ ಮಾಡಿದೆ ಎಂದು ಪ್ರೊಕ್ಯಾಮ್ ಇಂಟರ್‌ನ್ಯಾಷನಲ್ ಜಂಟಿ ವ್ಯವಸ್ಥಾಪಕ ನಿರ್ದೇಶಕ ವಿವೇಕ್ ಸಿಂಗ್ ಹೇಳಿದರು.

ಐಪಿಎಲ್‌ನಲ್ಲಿ 200 ವಿಕೆಟ್ ಪಡೆದ ಮೊದಲ ವೇಗಿ ಭುವಿ

ಬೆಂಗಳೂರು: ಐಪಿಎಲ್‌ನಲ್ಲಿ 200 ವಿಕೆಟ್‌ಗಳನ್ನು ಕಬಳಿಸಿದ ಮೊದಲ ವೇಗಿಯೆಂಬ ಮೈಲಿಗಲ್ಲನ್ನು ಭುವನೇಶ್ವರ್ ಕುಮಾರ್ ಬರೆದಿದ್ದಾರೆ. ಎಲ್ಲಿ ಐಪಿಎಲ್ ಪಯಣವನ್ನು ಆರಂಭಿಸಿದ್ದರೋ ಅದೇ ಮೈದಾನದಲ್ಲಿ ಭುವನೇಶ್ವರ್ ಈ ಮೈಲಿಗಲ್ಲನ್ನು ಬರೆದಿದ್ದು, ತಮ್ಮ ಕ್ರಿಕೆಟ್ ವೃತ್ತಿಜೀವನದ ವಿಶೇಷ ಕ್ಷಣವನ್ನು ಆನಂದಿಸಿದರು. 2009ರಲ್ಲಿ ಅವರು ಆರ್‌ಸಿಬಿ ತಂಡದ ಮೂಲಕವೇ ಐಪಿಎಲ್ ಪದಾರ್ಪಣೆ ಮಾಡಿದ್ದ ಭುವನೇಶ್ವರ್, 2026ರಲ್ಲಿ ಮತ್ತದೇ ಆರ್‌ಸಿಬಿಯಲ್ಲಿದ್ದೇ ಈ ಮೈಲಿಗಲ್ಲು ಬರೆದಿದ್ದಾರೆ. 2025ರಲ್ಲೂ ಆರ್‌ಸಿಬಿ ಪರ ಭುವಿ 17 ವಿಕೆಟ್‌ಗಳನ್ನು ಕಬಳಿಸಿದ್ದರು.

ಮಹತ್ವದ ಸೂಪರ್ ಕಿಂಗ್ಸ್ ವಿರುದ್ಧದ ಪಂದ್ಯದಲ್ಲಿ ಭುವಿ 41ಕ್ಕೆ 3 ವಿಕೆಟ್ ಕಬಳಿಸಿ ಆರ್‌ಸಿಬಿ ತಂಡದ 41 ರನ್‌ಗಳ ಜಯದಲ್ಲಿ ಕೊಡುಗೆ ನೀಡಿದ್ದಾರೆ. ಈ ಮೂಲಕ ಭುವಿ ತಮ್ಮ ಬೌಲಿಂಗ್ ಪ್ರಭಾವವನ್ನು ಮತ್ತೆ ಸಾಬೀತುಪಡಿಸಿದರು.

ಇಲ್ಲಿಯವರೆಗೆ ಒಟ್ಟು 192 ಇನ್ನಿಂಗ್ಸ್‌ಗಳಲ್ಲಿ 7.7ರ ಆರೋಗ್ಯಕರ ಇಕಾನಮಿ ರೇಟ್‌ನೊಂದಿಗೆ 202 ವಿಕೆಟ್‌ಗಳನ್ನು ಕಬಳಿಸಿರುವ ಭುವನೇಶ್ವರ್, ಐಪಿಎಲ್‌ನ ಸಾರ್ವಕಾಲಿಕ ಅತ್ಯಧಿಕ ವಿಕೆಟ್ ಕಬಳಿಸಿದ ಬೌಲರ್‌ಗಳ ಪಟ್ಟಿಯಲ್ಲಿ ಎರಡನೇ ಸ್ಥಾನ ಅಲಂಕರಿಸಿದ್ದಾರೆ. ಅವರು ಯುಜ್ವೇಂದ್ರ ಚಹಲ್ (205) ನಂತರದ ಸ್ಥಾನ ಪಡೆದಿದ್ದಾರೆ. ತಮ್ಮ ಸುದೀರ್ಘ ಐಪಿಎಲ್ ವೃತ್ತಿಜೀವನದಲ್ಲಿ, 2016 ಮತ್ತು 2017ರಲ್ಲಿ ಸತತ ಎರಡು ಬಾರಿ ಪರ್ಪಲ್ ಕ್ಯಾಪ್ ಗೆದ್ದ

- 2009ರಲ್ಲಿ ಆರ್‌ಸಿಬಿಯಿಂದಲೇ ಸ್ವಿಂಗ್ ಕಿಂಗ್ ಪದಾರ್ಪಣೆ



ಏಕೈಕ ಬೌಲರ್ ಎಂಬ ಹೆಗ್ಗಳಿಕೆಯನ್ನು ಕೂಡ ಹೊಂದಿದ್ದಾರೆ. ಇದು ಬೌಲರ್‌ಗಳಿಗೆ ಕಠಿಣವಾಗಿರುವ ಟಿ20 ಫ್ರಾಂಚೈಸಿ ಕ್ರಿಕೆಟ್‌ನಲ್ಲಿ ಅವರ ಸ್ಥಿರತೆಯನ್ನು ತೋರಿಸುತ್ತದೆ.

ತಮ್ಮ ಸಾಧನೆಯ ಬಗ್ಗೆ ಮಾತನಾಡಿದ ಭುವನೇಶ್ವರ್, ವರ್ಷಗಳಿಂದ ಮಾಡುತ್ತಿರುವ ಪರಿಶ್ರಮಕ್ಕೆ ಪ್ರತಿಫಲ ಸಿಗುವುದು ಸಂತೋಷದ ಸಂಗತಿ. ಐಪಿಎಲ್ ನನ್ನ ವೃತ್ತಿಜೀವನದ ಮಹತ್ವದ ಭಾಗವಾಗಿದೆ, ಮತ್ತು 200 ವಿಕೆಟ್‌ಗಳನ್ನು ತಲುಪುವುದು ವಿಶೇಷ ಮೈಲುಗಲ್ಲು. ನನ್ನ ಐಪಿಎಲ್ ಪಯಣವೇ ಆರ್‌ಸಿಬಿಯೊಂದಿಗೆ ಆರಂಭವಾಗಿದ್ದು, ಇಲ್ಲಿಗೆ ಮತ್ತೆ ಬಂದು ಸಾಧನೆ ಮಾಡುವುದು ಫುಲ್-ಸರ್ಕಲ್ ಅನುಭವ ನೀಡಿದೆ ಎಂದು ಹೇಳಿದರು.

ಇಂದು ರಾಜಸ್ಥಾನ- ಮುಂಬೈ ಫೈಟ್

ಗುವಾಹಟಿ: ಐಪಿಎಲ್ 2026ರಲ್ಲಿ ಮಂಗಳವಾರ ರಾಜಸ್ಥಾನ ರಾಯಲ್ಸ್ ಮತ್ತು ಮುಂಬೈ ಇಂಡಿಯನ್ಸ್ ತಂಡಗಳು ಎದುರಾಗಲಿವೆ. ಪಂದ್ಯದಲ್ಲಿ ರಾಜಸ್ಥಾನ ತಂಡದ ಯುವ ಎಡಗೈ ಬ್ಯಾಟರ್ ವೈಭವ್ ಸೂರ್ಯವಂಶಿ ಮತ್ತು ಮುಂಬೈ ವೇಗಿ ಜಸ್‌ಪ್ರೀತ್ ಬೂಮ್ರಾ ಅವರ ನಡುವಿನ ಸ್ಪರ್ಧೆ ಪ್ರಮುಖ ಆಕರ್ಷಣೆಯಾಗುವ ಸಾಧ್ಯತೆಯಿದೆ. ನಾಯಕ ಹಾರ್ದಿಕ್ ಪಾಂಡ್ಯ ಗಾಯದಿಂದ ಗುಣಮುಖರಾಗಿ ಆಡುವ ಸಾಧ್ಯತೆಯಿದೆ. ಅವರು ದಿಲ್ಲಿ ಕ್ಯಾಪಿಟಲ್ಸ್ ವಿರುದ್ಧ ಆಡಿರಲಿಲ್ಲ. ಸೂರ್ಯ ತಂಡವನ್ನು ಮುನ್ನಡೆಸಿದ್ದರು.

ರಾಯಲ್ಸ್ ಸೂರ್ಯವಂಶಿ ಮತ್ತು ಯಶಸ್ವಿ ಜೈಸ್ವಾಲ್ ಅವರ ಹಿಟ್ ಆರಂಭಿಕ ಜೋಡಿಯನ್ನು ಹೊಂದಿದ್ದು, ಗೆಲುವಿನ ಲಯದಲ್ಲಿ



ಕಾಣಿಸಿಕೊಂಡಿದೆ. ಈಗಾಗಲೇ ಎರಡು ಪಂದ್ಯಗಳನ್ನು ಗೆದ್ದ ರಾಯಲ್ಸ್ ಅಂಕಪಟ್ಟಿಯಲ್ಲಿ ದ್ವಿತೀಯ ಸ್ಥಾನದಲ್ಲಿದೆ. ಗುಜರಾತ್ ವಿರುದ್ಧ ರಾಯಲ್ಸ್ 210 ರನ್ ಪೇರಿಸಿತ್ತು. ಮುಂಬೈ ಗೆಲ್ಲಬೇಕಾದರೆ ತಮ್ಮ ಬೌಲಿಂಗ್ ಪ್ರದರ್ಶನ ಸುಧಾರಿಸುವ ಅಗತ್ಯವಿದೆ. ಗುವಾಹಟಿ ವೇಗಿಗಳಿಗೆ ನೆರವಾಗುವ ಪಿಚ್ ಇರಲಿದೆ. ಹಿಂದಿನ ಪಂದ್ಯದಲ್ಲಿ ಇಲ್ಲಿ ಸಿಎಸ್‌ಕೆ 127 ರನ್‌ಗಳಿಗೆ ಆಲೌಟಾಗಿತ್ತು. ರಾಜಸ್ಥಾನದಲ್ಲಿ ಸುಲಭವಾಗಿ ಚೇಸ್ ಮಾಡಿ ಗೆದ್ದಿತ್ತು.

ಕೆಕೆಆರ್-ಪಂಜಾಬ್ ಪಂದ್ಯಕ್ಕೆ ಮಳೆ ಅಡ್ಡಿ

ಕೋಲ್ಕತ್ತಾ: ಈಡನ್ ಗಾರ್ಡನ್ಸ್‌ನಲ್ಲಿ ಸೋಮವಾರ ನಡೆಯುತ್ತಿದ್ದ ಕೋಲ್ಕತ್ತಾ ನೈಟ್‌ರೈಡರ್ಸ್ (ಕೆಕೆಆರ್) ಹಾಗೂ ಪಂಜಾಬ್ ಕಿಂಗ್ಸ್ ನಡುವಿನ ಐಪಿಎಲ್ ಪಂದ್ಯಕ್ಕೆ ಮಳೆ ಅಡ್ಡಿಪಡಿಸಿದೆ. ಟಾಸ್ ಗೆದ್ದು ಮೊದಲ ಬ್ಯಾಟಿಂಗ್ ಆಯ್ದುಕೊಂಡ ಕೆಕೆಆರ್ 3.4 ಓವರ್‌ಗಳಲ್ಲಿ 2 ವಿಕೆಟ್‌ಗಳನ್ನು ಕಳೆದುಕೊಂಡು 25 ರನ್ ಗಳಿಸಿ ಸಂಕಷ್ಟದ ಸ್ಥಿತಿಯಲ್ಲಿ ಇದ್ದಾಗ ಮಳೆ ಸುರಿಯಲು ಆರಂಭಿಸಿತ್ತು. ಕೆಕೆಆರ್‌ನ ಮೊದಲೆರಡು ವಿಕೆಟ್‌ಗಳನ್ನೂ



ವೇಗಿ ಸೇವಿಯರ್ ಬಾರ್ಟ್‌ಲೆಟ್ ಅವರ ಕಬಳಿಸಿದ್ದು, ಸ್ಫೋಟಕ ಆರಂಭಿಕ ಫಿನ್ ಅಲೆನ್ (6) ಹಾಗೂ ದುಬಾರಿ ಬ್ಯಾಟಿಂಗ್ ಆಲ್‌ರೌಂಡರ್ ಕ್ಯಾಮರೂನ್ ಗ್ರೀನ್ (4) ವಿಕೆಟ್‌ಗಳನ್ನು ಕೆಕೆಆರ್ ಕಳೆದುಕೊಂಡಿದೆ. ಕೆಕೆಆರ್ ಪರ ನಾಯಕ ಅಜಿಂಕ್ಯಾ ರಹಾನೆ (8) ಮತ್ತು ಅಂಗ್‌ಕ್ರಿಶ್ ರಘುವಂಶಿ (7) ಅಜೇಯರಾಗಿದ್ದು, ಮಳೆ ನಿಂತರೆ ಕ್ರೀಸ್‌ಗಿಳಿಯಲು ಕಾಯುತ್ತಿದ್ದಾರೆ. ವೇಗಿ ಅರ್ಷದೀಪ್ 2 ಓವರ್ ಎಸೆದಿದ್ದರು. ಮಳೆ ಸುರಿಯುತ್ತಿರುವ ಕಾರಣ ಮೈದಾನದಲ್ಲಿ ಕವರ್ಸ್ ಹಾಕಲಾಗಿದ್ದು, ಪಿಚ್ ಒದ್ದೆಯಾಗದಂತೆ ನೋಡಿಕೊಳ್ಳಲಾಗಿದೆ. ಪಂದ್ಯ ಮುಕ್ತಾಯಗೊಳ್ಳುವ ಸಮಯ ರಾತ್ರಿ 11.40 ಆಗಿರುವುದರಿಂದ ಮಳೆ ನಿಂತರೆ 5 ಓವರ್‌ಗಳ ಪಂದ್ಯ ಆಡಲಾಗುವುದು ಅಥವಾ ಪಂದ್ಯ ರದ್ದು ಆಗಲಿದೆ.

ವಿಶ್ವ ನಂ.1 ಮಣಿಸಿದ ಪಾಯಲ್‌ಗೆ ಸ್ವರ್ಣ



ಬ್ಯಾಂಕಾಕ್: ವಿಶ್ವ ಆರ್ಚರಿ ಪ್ಯಾರಾ ಸರಣಿಯಲ್ಲಿ ಭಾರತೀಯ ಆರ್ಚರಿಪಟು ಪಾಯಲ್ ನಾಗ್ ವಿಶ್ವ ನಂ.1 ಭಾರತದವರೇ ಆದ ಶೀತಲ್ ದೇವಿ ಅವರನ್ನು 139–136 ಅಂಕಗಳ ಅಂತರದಿಂದ ಸೋಲಿಸಿ ಕಂಪೌಂಡ್ ಮಹಿಳೆಯರ ಸಿಂಗಲ್ಸ್ ವಿಭಾಗದಲ್ಲಿ ಸ್ವರ್ಣ ಪದಕವನ್ನು ಗೆದ್ದುಕೊಂಡಿದ್ದಾರೆ. ಉಳಿದಂತೆ ಪುರುಷರ ವಿಭಾಗದಲ್ಲಿ ತೋಮನ್ ಕುಮಾರ್ ಸ್ವರ್ಣ ಮತ್ತು ಮಹಿಳೆಯರ ರಿಕರ್ವ್‌ನಲ್ಲಿ ಭಾವನಾ ಸ್ವರ್ಣ ಗೆದ್ದಿದ್ದಾರೆ.

ಇದರೊಂದಿಗೆ ವಿಶ್ವ ಆರ್ಚರಿ ಪ್ಯಾರಾ ಕೂಟದಲ್ಲಿ ಭಾರತ 7 ಸ್ವರ್ಣ, 5 ರಜತ ಮತ್ತು 4 ಕಂಚಿನ ಪದಕಗಳೊಂದಿಗೆ ಒಟ್ಟು 16 ಪದಕಗಳನ್ನು ಗೆದ್ದುಕೊಂಡಿದೆ. ಕೇವಲ 18ರ ಹರೆಯದ ಪಾಯಲ್ ಅವರಿಗೆ ಇದು ಟೂರ್ನಿಯಲ್ಲಿ ಎರಡನೇ ಪ್ರಶಸ್ತಿಯಾಗಿದೆ. ಅವರು ಮಹಿಳೆಯರ ಡಬಲ್ಸ್ ವಿಭಾಗದಲ್ಲಿ ಶೀತಲ್ ದೇವಿ ಅವರ ಜತೆಗೂಡಿಯೇ ಪದಾರ್ಪಣಾ ಸ್ವರ್ಣ ಪದಕವನ್ನು ಗೆದ್ದಿದ್ದರು. ತಮ್ಮ 7ನೇ ವಯಸ್ಸಿನಲ್ಲಿ ಸಂಭವಿಸಿದ್ದ ವಿದ್ಯುತ್ ಅಪಘಾತದಲ್ಲಿ ಪಾಯಲ್ ಎರಡೂ ಕೈಗಳನ್ನು ಕಳೆದುಕೊಂಡಿದ್ದರು. ತಮ್ಮ ಎರಡೂ ಕೈಗಳನ್ನು ಕಳೆದುಕೊಂಡರೂ ಪಾಯಲ್ ಕ್ರೀಡಾಸ್ಫೂರ್ತಿ ಎಂತಹವರಿಗೂ ಪ್ರೇರಣಾದಾಯಿ ಉದಾಹರಣೆಯಾಗಿದೆ.

ಹವ್ಯಕ ಲೆದರ್ ಬಾಲ್ ಕ್ರಿಕೆಟ್ ಪಂದ್ಯಾವಳಿ 2026

ಟೀಮ್ ಜಿ ಹವ್ಯಕರ ಚಾಂಪಿಯನ್



ಬೆಂಗಳೂರು: ನಗರದ ಕಿಣಿ ಸ್ಪೋರ್ಟ್ಸ್ ಅರೇನಾದಲ್ಲಿ ಧಾರ್ಮಿಕ್ ಸಂಸ್ಥೆ ಮತ್ತು ಹವ್ಯಕ ಕ್ರಿಕೆಟ್ ಅಸೋಸಿಯೇಷನ್ ಸಹಯೋಗದಲ್ಲಿ ಏ.3, 4 ಮತ್ತು 5ರಂದು ಯಶಸ್ವಿಯಾಗಿ ಆಯೋಜಿಸಲಾಯಿತು. ಟೂರ್ನಿಯ ಅದ್ಭುತ ಸಮಾರೋಪದಲ್ಲಿ ಟೀಮ್ ಜಿ ತಂಡವು ವಿಜೇತರಾಗಿ ಹೊರಹೊಮ್ಮಿದ್ದು, ಗೋರೆ ರಾಕರ್ಸ್ ತಂಡವು ರನ್ನರ್ ಅಪ್ ಸ್ಥಾನವನ್ನು ಪಡೆದುಕೊಂಡಿದೆ.

ಟೀಮ್ ಜಿ ತಂಡದ ಮಾಲೀಕರಾದ ಸಿ.ಎ. ಗಿರಿಧರ್ ಅವರ ಮಾರ್ಗದರ್ಶನದಲ್ಲಿ ತಂಡವು ಶ್ರೇಷ್ಠ ಪ್ರದರ್ಶನ ನೀಡಿತು. ಅದೇ ರೀತಿ, ಗೋರೆ ರಾಕರ್ಸ್ ತಂಡದ ಮಾಲೀಕರಾದ ಗೌತಮ್ ಜಿ ಅವರ ಮಾರ್ಗದರ್ಶನದಲ್ಲಿ ತಂಡವು ಕಠಿಣ ಸ್ಪರ್ಧೆಯನ್ನು ನೀಡಿತು. ಈ ಟೂರ್ನಿಯಲ್ಲಿನ ತಮ್ಮ ಅದ್ಭುತ ಆಟದ ಮೂಲಕ ಎಲ್ಲರ ಮೆಚ್ಚುಗೆಗೆ ಪಾತ್ರರಾದ ಆದಿತ್ಯ ಎಸ್ ಅವರು ಸರಣಿ ಶ್ರೇಷ್ಠ ಪ್ರಶಸ್ತಿಯನ್ನು ಪಡೆದರು. ಹವ್ಯಕ ಕ್ರಿಕೆಟ್ ಪಂದ್ಯಾವಳಿಯ ಗೌರವಾನ್ವಿತ ಪ್ರಾಯೋಜಕರಿಗೆ, ಅತಿಥಿಗಳಿಗೆ ಮತ್ತು ಎಲ್ಲಾ ತಂಡಗಳ ಆಟಗಾರರಿಗೆ ಹಾಗೂ ಸಹಕರಿಸಿದ ಎಲ್ಲರಿಗೂ ಹೃತ್ಪೂರ್ವಕ ಧನ್ಯವಾದಗಳು.

ಹೊಸಪೇಟೆ ಹುಡುಗರ ಕೈಗೆ ಸಿಕ್ಕ ಐಪಿಎಲ್ ಚೆಂಡು

ಬೆಂಗಳೂರು: ಆರ್‌ಸಿಬಿ ಬ್ಯಾಟರ್ ಟಿಮ್ ಡೇವಿಡ್ 106 ಮೀ. ಸಿಕ್ಸರ್ ಹೊಡೆದಿದ್ದಾಗ ಚೆಂಡು ಸ್ಟೇಡಿಯಂ ಹೊರಗಡೆ ಬಿದ್ದಿತ್ತು. ಚೆಂಡು ಕಬ್ಬನ್ ಪಾರ್ಕ್ ತಲುಪಿತೆಂದು ರವಿ ಶಾಸ್ತ್ರಿ ವೀಕ್ಷಕ ವಿವರಣೆಯಲ್ಲಿ ಬಣ್ಣಿಸಿದ್ದರು. ಇದೇ ವೇಳೆ ಪಂದ್ಯದ ಟಿಕೆಟ್ ಸಿಗದ ಕಾರಣ ಸ್ಟೇಡಿಯಂ ಹೊರಗಡೆ ರಸ್ತೆಯಲ್ಲಿದ್ದ ಹೊಸಪೇಟೆ ಜಿಲ್ಲೆಯ ಆರ್‌ಸಿಬಿ ಅಭಿಮಾನಿಗಳಿಗೆ ಸಿಕ್ಕಿದೆ. ಪಂದ್ಯದ ಟಿಕೆಟ್ ಸಿಗದೆ ನಿರಾಶರಾಗಿದ್ದ ಅಭಿಮಾನಿಗಳಿಗೆ ಚೆಂಡು ಸಿಕ್ಕಿದ್ದು, ಇದು ಕೊಕೊಬುರಾ ಕಂಪನಿಯ ಅಂದಾಜು 24 ಸಾವಿರ ರೂ. ಮೌಲ್ಯದ ಐಪಿಎಲ್ ಮ್ಯಾಚ್ ಬಾಲ್ ಎಂಬುದು ತಿಳಿದುಬಂದಿದೆ.

ಪದಬಂಧ

ರಾಜಾ ಸಂಗಮೇಶ ಹಿರೇಮಠ



5946

ಎಡದಿಂದ ಬಲಕ್ಕೆ
1.ಸಾಲದ ನಡುವೆ ಸಂಜೆಯಡಗಿದೆ (4)
3.ಹಾಲಿನಿಂದ ಮಾಡುವ ಸಿಹಿತಿಂಡಿ (4)
5.ವೇಷ ಧರಿಸಿ ಉದ್ವೇಗಕ್ಕೊಳಗಾಗು (3)
7.ಆಸೆ ಈಡೇರಿಸುತ್ತೇನೆಂದು ನೀಡಿದ ಆಶ್ವಾಸನೆ (4)
9.ದೇಹ ದಂಡಿಸಿ ಮಾಡುವ ವ್ಯಾಯಾಮ (4)
11.ಗಾಂಧಾರಿಯ ಹುಟ್ಟೂರು ತಿರುಗಿದೆ (4)
14.ಸೆಣಬಿನಿಂದಾದ ಜಾಳುಬಟ್ಟೆ (4)
16.ಸರ ಮೊದಲಿರುವ ಲೋಹದ ಕಂಬಿ (3)
17.ಸೌಖ್ಯ-ನೆಮ್ಮದಿಯ ಸಮಾನಪದ (4)
18.ಇದು ನಮ್ಮ ಕರುನಾಡು (4)

ಮೇಲಿನಿಂದ ಕೆಳಕ್ಕೆ
2.ಕಾರ್ಖಾನೆಯನ್ನು ಹೀಗೂ ಕರೆಯಬಹುದು (4)
4.ಪಾಕಿಸ್ತಾನದ ಪ್ರಾಚೀನ ಐತಿಹಾಸಿಕ ನಗರ (4)
5.ಕಾಮನೆಯ ಸಮಾನಪದ (2)
6.ಶತಕದೊಳಗಡಗಿದ ಕಾಲಗಣನೆಯ ಹೆಸರು (2)
8.ದರವನ್ನು ಕೇಳಿ ಅನುಗ್ರಹಿಸುವವನು (3)
10.ಕ್ರಮಾನುಗತವನ್ನು ಹೀಗೂ ಹೇಳುತ್ತೇವೆ (3)
12.ಹಾವಿನ ಆಟ ತೋರಿಸುವವನು (4)
13.ಆವರಣದೊಳಗಿರುವ ಕೃಷ್ಣನ ಮಾವ (2)
14.ಅಳು-ಸಂಕಟ ಎಂಬರ್ಥದ ಶಬ್ದ (2)
15.ಕಲಾ ನಡುವೆ ಇರುವ ಒಳಸಂಘರ್ಷ (4)

5945 ಉತ್ತರ

ಎಡದಿಂದ ಬಲಕ್ಕೆ:
2.ತೇಲಿಸು 5.ಮಹಜರು
6.ಕಸರತ್ತು 7.ದೇಶ
8.ತಿದಿ 10.ಬಕ 12.ರತಿ
13.ಹವಾಲ್ದಾರ
15.ಗೊತ್ತುಗುರಿ
16.ನೆನಸು

ಮೇಲಿನಿಂದ ಕೆಳಕ್ಕೆ :
1.ಮೋಹಪಾಶ
2.ತೇರು 3.ಸುತ್ತು
4.ಮೋಸಗಾತಿ 7.ದೇಶಿಕ
9.ದಿಕ್ಪತಿ 11.ಬನವಾಸಿ
12.ರಜೋಗುಣ 14.ಸುರ
15.ಗೊನೆ

ಕಿರುಸುದ್ದಿ

ಜೀಪು ಹಿಂದಕ್ಕೆ ಚಲಿಸಿ ಕಾರ್ಮಿಕ ಮೃತ್ಯು

ಕಾಸರಗೋಡು: ನಿಲ್ಲಿಸಲಾಗಿದ್ದ ಜೀಪಿನಿಂದ ಸಾಮಗ್ರಿಗಳನ್ನು ತೆಗೆಯುತ್ತಿದ್ದ ವೇಳೆ ಜೀಪು ಹಿಂದಕ್ಕೆ ಚಲಿಸಿ ಕಾರ್ಮಿಕ ಮೃತಪಟ್ಟ ಘಟನೆ ವೆಸ್ಟ್ ಎಳೇರಿ ಪಂಚಾಯತ್‌ನ ಮಣಾಟ್ಟಿವಯಲ್‌ನಲ್ಲಿ ನಡೆದಿದೆ. ತಮಿಳುನಾಡು ತಿರುಚ್ಚಿಕೋಡ್ ನಿವಾಸಿ ಮುರಳಿ ರಾಜಗೋಪಾಲನ್ (40) ಮೃತಪಟ್ಟವರು. ಗಂಭೀರಾವಸ್ಥೆಯಲ್ಲಿದ್ದ ಅವರನ್ನು ಕೂಡಲೇ ಆಸ್ಪತ್ರೆಗೆ ಕರೆದೊಯ್ಯಲಾಯಿತಾದರೂ ಪ್ರಾಣ ಉಳಿಸಲು ಸಾಧ್ಯವಾಗಲಿಲ್ಲ. ಜೀಪು ಮಾಲಕ ಥೋಮಸ್ ಜೇಮ್ಸ್ ಎಂಬಾತನ ವಿರುದ್ಧ ಪೊಲೀಸರು ಕೇಸು ದಾಖಲಿಸಿದ್ದಾರೆ.

ಮಾದಕ ವಸ್ತು ಮಾರಾಟ: ಆರೋಪಿಯ ಬಂಧನ

ಕಾರ್ಕಳ: ಇಲ್ಲಿನ ಬಂಗ್ಲೆಗುಡ್ಡೆ ನಿವಾಸಿ ಫೈಜಲ್ ಎಂಬಾತನನ್ನು ಕಾರ್ಕಳ ಪೊಲೀಸರು ಅಕ್ರಮ ಮಾದಕ ವಸ್ತು ಪ್ರಕರಣದಲ್ಲಿ ವಶಕ್ಕೆ ಪಡೆದಿದ್ದಾರೆ. ಹಲವಾರು ಪ್ರಕರಣಗಳಲ್ಲಿ ಪಾಲ್ಗೊಂಡಿದ್ದ ಈತನನ್ನು ಹೊರಜಿಲ್ಲೆಗೆ ಗಡಿಪಾರು ಮಾಡಿ ಆದೇಶಿಸಲಾಗಿತ್ತು. ಈ ಆದೇಶವನ್ನು ಜಾರಿ ಮಾಡಲು ಹೋದ ಪೊಲೀಸರ ಮೇಲೆ ಕಾರನ್ನು ಹಿಮ್ಮುಖ ವಾಗಿ ಚಲಾಯಿಸಿ ತೆಂಗಿನಮರಕ್ಕೆ ಡಿಕ್ಕಿ ಹೊಡೆದು ಓಡಿಹೋಗಿದ್ದ. ಈ ಸಂದರ್ಭದಲ್ಲಿ ಕಾರನ್ನು ಪರಿಶೀಲಿಸಿದ ಪೊಲೀಸರಿಗೆ ಅದರಲ್ಲಿ ಮಾದಕ ವಸ್ತುವಾದ ಗಾಂಜಾ ಪತ್ತೆಯಾಗಿತ್ತು. ಈ ಆರೋಪಿ ಜೊತೆಗೆ ಇನ್ನೊಬ್ಬ ಆರೋಪಿ ಸೇರಿ ಇವರು ಮಾದಕ ವಸ್ತು ಮಾರಾಟ ಮಾಡಲು ಕಾಯುತ್ತಿದ್ದರು. ಈ ಫೈಜಲ್ ಎಂಬಾತ ಕಾರ್ಕಳದಲ್ಲಿ ರೌಡಿಯಾಗಿ ಹತ್ಯೆಗೀಡಾಗಿದ್ದ ಸುಲೇಮಾನ್ ಎಂಬಾತನ ಪುತ್ರ ಎಂದು ತಿಳಿದುಬಂದಿದೆ.



ದ್ವಿಚಕ್ರ ವಾಹನ ಕಳವು: ಬಂಧನ

ಬಂಟ್ವಾಳ: ಬಿ.ಸಿ.ರೋಡಿನ ಪರ್ಲಿಯಾ ಬಳಿಯಿರುವ ವಸತಿ ಗೃಹವೊಂದರ ಮುಂಭಾಗದಲ್ಲಿ ನಿಲುಗಡೆಗೊಳಿಸಲಾಗಿದ್ದ ದ್ವಿಚಕ್ರ ವಾಹನವೊಂದನ್ನು ಕಳವುಗೈದ ಪ್ರಕರಣಕ್ಕೆ ಸಂಬಂಧಿಸಿ ಆರೋಪಿಗಳಿಬ್ಬರನ್ನು ಬಂಟ್ವಾಳ ನಗರ ಠಾಣಾ ಪೊಲೀಸರು ಬಂಧಿಸಿದ್ದಾರೆಂದು ತಿಳಿದು ಬಂದಿದೆ. ಬಂಟ್ವಾಳ ತಾಲೂಕಿನ ಸಜೀಪ ಮುನ್ನೂರು ಗ್ರಾಮದ ನಿವಾಸಿ ಹಸನ್ ಬಾವ (55) ಹಾಗೂ ಬಿ. ಮೂಡಗ್ರಾಮದ ನಿವಾಸಿ ಮೊಹಮ್ಮದ್ ಇರ್ಷಾದ್ (37) ಬಂಧಿತ ಆರೋಪಿಗಳಾಗಿದ್ದಾರೆ ಎಂದು ಹೇಳಲಾಗಿದೆ. 2026 ರ ಮಾ.21 ರಂದು ಬಿ.ಸಿ.ರೋಡಿಗೆ ಸಮೀಪದ ಪರ್ಲಿಯಾ ಬಳಿಯಿರುವ ವಸತಿಗೃಹದ ಶೆಡ್ ನಲ್ಲಿ ನಿಲುಗಡೆಗೊಳಿಸಲಾಗಿದ್ದ ದ್ವಿಚಕ್ರ ವಾಹನವನ್ನು ಕಳವುಗೈಯಲಾಗಿದ್ದು,ಈ ಸಂಬಂಧ ಬಂಟ್ವಾಳ ನಗರ ಠಾಣೆಯಲ್ಲಿ ಕೇಸು ದಾಖಲಾಗಿತ್ತು. ಬಂಧಿತರಿಬ್ಬರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದೆ.




ತಾಳಮೇಳ ಕೂಡಿಬರದ ಶರಣ್ಯಾ ಹೇಳಿಕೆ । ಘಟನೆಯ ಹಿಂದೆ ರಾಜಕೀಯ ಗಿಮಿಕ್?

ನಾಪತ್ತೆ ಸುತ್ತ ಈಗ ಸಂಶಯದ ಹುತ್ತ!

ಮಡಿಕೇರಿ: ಕೊಡಗಿನ ಅತ್ಯಂತ ಎತ್ತರದ ತಡಿಯಂಡಮೋಳ್ ಬೆಟ್ಟಕ್ಕೆ ಚಾರಣಕ್ಕೆ ಬಂದಿದ್ದ ಕೇರಳದ ಟೆಕ್ಕಿ ಶರಣ್ಯಾ ನಾಪತ್ತೆ ಪ್ರಕರಣ ಕೊನೆಗೂ ಸುಖಾಂತ್ಯ ಕಂಡಿದೆ.

ಆದರೆ ಆಕೆಯ ನಾಪತ್ತೆ ಪ್ರಕರಣ ಹಿಂದೆ ಹಲವು ಸಂಶಯಗಳು ಕೊಡಗಿನ ಜನರನ್ನು ಕಾಡುತ್ತಿದ್ದು, ಅದಕ್ಕೆ ಸೂಕ್ತ ಉತ್ತರವನ್ನು ಜಿಲ್ಲಾಡಳಿತ ನೀಡಬೇಕು ಎಂಬ ಆಗ್ರಹವೂ ಕೇಳಿ ಬಂದಿದೆ.

ಕೇರಳದ ಕೊಯಿಕ್ಕೋಡು ಜಿಲ್ಲೆಯ ನಾದಾಪುರಂ ನಿವಾಸಿ ಶರಣ್ಯ (36) ಚಾರಣಕ್ಕೆಂದು ಏ.2ರಂದು ಆನ್‌ಲೈನ್‌ನಲ್ಲಿ ಹೆಸರನ್ನು ನೋಂದಾಯಿಸಿಕೊಂಡಿದ್ದರು. ಆದರೆ, ಕಾಡಾನೆ ಸೇರಿದಂತೆ ವನ್ಯಪ್ರಾಣಿಗಳ ಓಡಾಟವಿರುವ ಆ ಪ್ರದೇಶಕ್ಕೆ ಅರಣ್ಯ ಇಲಾಖೆ ಅವರೊಬ್ಬರನ್ನೇ ಕಳುಹಿಸದೇ ಬೇರೊಂದು ಗುಂಪಿನ ಜೊತೆ ಮಾಡಿ ಕಳುಹಿಸಿತ್ತು. ಆದರೆ ಚಾರಣಕ್ಕೆ ಹೋದ ಗುಂಪು ವಾಪಸ್ ಬಂದಿದ್ದರೂ, ಅವರ ಜೊತೆ ಶರಣ್ಯ ಹಿಂತಿರುಗಿರಲಿಲ್ಲ.



ಚಾರಣಕ್ಕೆ ತೆರಳುವ ಸಂದರ್ಭ ಕೇವಲ 500 ಎಂಎಲ್ ನೀರಿನ ಬಾಟಲಿ ಒಯ್ದಿದ್ದ ಶರಣ್ಯ ನಾಲ್ಕು ದಿನಗಳ ಅನ್ನ, ಆಹಾರವಿಲ್ಲದೆ ಕಾಡಿನಲ್ಲಿ ಒಂಟಿಯಾಗಿ ಕಳೆದಿದ್ದರೂ, ಆಕೆ ಪತ್ತೆಯಾದಾಗ ಒಂದಿಷ್ಟೂ ನಿತ್ರಾಣಗೊಳ್ಳದಿರುವುದು ಹಾಗೂ ಆಕೆ ಧರಿಸಿದ್ದ ಬಟ್ಟೆಗಳು ಒಂದಿಷ್ಟೂ ಮಾಸದೇ ಇದ್ದುದೇ ಆಕೆಯ ನಾಪತ್ತೆ ಪ್ರಕರಣದ ಬಗ್ಗೆ ಸಂಶಯ ಮೂಡಲು ಕಾರಣವಾಗಿದೆ.

ಚಾರಣದ ಸಂದರ್ಭದಲ್ಲಿ ನಾನು ದಾರಿ ತಪ್ಪಿರುವುದಾಗಿ ಅರಣ್ಯ ಇಲಾಖೆಯ ಸಿಬ್ಬಂದಿಗೆ ತಿಳಿಸುವಂತೆ ತಾನು ಉಳಿದುಕೊಂಡಿದ್ದ ಹೋಂ ಸ್ಟೇ ಮಾಲಕರಿಗೆ ಫೋನ್ ಮೂಲಕ ಹೇಳಿದ್ದರು ಎನ್ನಲಾಗಿದೆ. ಆದಾದ ನಂತರ ಆಕೆಯ ಮೊಬೈಲ್ ಚಾರ್ಜ್ ಇಲ್ಲದೇ ಸ್ವಿಚ್ ಆಫ್ ಆಗಿತ್ತು. ಹೀಗಾಗಿ, ಅವರು ಮೂರು ದಿನಗಳ ಕಾಲ ಕಾಡಿನಲ್ಲಿ ಉಳಿಯುವಂತಾಯಿತು ಎಂದು ಆಕೆಯೇ ಹೇಳಿದ್ದಾರೆ.

ಚಾರಣಕ್ಕೆ ಕಳುಹಿಸುವ ಸಂದರ್ಭದಲ್ಲೇ ಆಕೆಯನ್ನು ಬೇರೊಂದು ಗುಂಪಿನ ಜೊತೆಗೆ ಕಳುಹಿಸಿರುವಾಗ ಆಕೆ, ದಾರಿ ತಪ್ಪುವ ಪ್ರಮೇಯ ಇಲ್ಲವೇ ಇಲ್ಲ. ಅದಲ್ಲದೆ ತಡಿಯಂಡಮೋಳ್ ಬೆಟ್ಟಕ್ಕೆ ಪತ್ರಿನಿತ್ಯ ಚಾರಣಕ್ಕೆ ತೆರಳುವವರಿದ್ದು, ಅಲ್ಲಿರುವ ದಾರಿಗಳೆಲ್ಲವೂ ಸ್ಪಷ್ಟವಾಗಿ ಗೋಚರಿಸುತ್ತಿರುತ್ತವೆ.




ಕಾಂಗ್ರೆಸ್ ಮುಖಂಡರೊಂದಿಗೆ ಮಾತು

ಶರಣ್ಯ ನಾಪತ್ತೆಯಾದ ಬಳಿಕ ಎಐಸಿಸಿ ಮುಖಂಡ, ಕೇರಳದ ವೇಣುಗೋಪಾಲ್ ಅವರು ಕರ್ನಾಟಕ ಸರಕಾರದ ಮುಖ್ಯಮಂತ್ರಿಯವರೊಂದಿಗೆ ನಿರಂತರ ಸಂಪರ್ಕದಲ್ಲಿದ್ದು, ಆಕೆಯ ಪತ್ತೆಗಾಗಿ ಒತ್ತಡ ಹೇರಿದ್ದಾರೆ. ಅಲ್ಲದೆ ಕೇರಳದಲ್ಲಿ ಚುನಾವಣಾ ಪ್ರಚಾರ ಕಾರ್ಯದಲ್ಲಿ ಬಿಝಿಯಾಗಿದ್ದ ವೀರಾಜಪೇಟೆ ಶಾಸಕ ಎ.ಎಸ್.ಪೊನ್ನಣ್ಣ ಅವರು ತಮ್ಮ ಕೆಲಸ ಕಾರ್ಯ ಮೊಟಕುಗೊಳಿಸಿ ಕಕ್ಕಬ್ಬೆಗೆ ಭೇಟಿ ನೀಡಿದ್ದಾರೆ. ಶರಣ್ಯ ಪತ್ತೆಯಾದ ಬಳಿಕ ಆಕೆಯನ್ನು ವೇಣುಗೋಪಾಲ್ ಅವರೊಂದಿಗೆ ದೂರವಾಣಿ ಮೂಲಕ ಮಾತನಾಡಿಸಿದ್ದಾರೆ. ಇದೆಲ್ಲವನ್ನು ಗಮನಿಸಿದಾಗ, ಶರಣ್ಯ ನಾಪತ್ತೆ ಪ್ರಕರಣದ ಹಿಂದೆ ಕೇರಳದ ಚುನಾವಣಾ ರಾಜಕೀಯದಲ್ಲಿ ಕಾಂಗ್ರೆಸ್ ಮೈಲೇಜ್ ಪಡೆಯಲು ಯತ್ನಿಸುತ್ತಿರುವ ಶಂಕೆಯೂ ವ್ಯಕ್ತವಾಗಿದೆ.

ಆಕೆಯ ಮೊಬೈಲ್ ಸ್ವಿಚ್ ಆಫ್ ಆದ ಬಳಿಕ ಆಕೆ ಇದ್ದ ಜಾಗದಿಂದ ಹಿಂದಕ್ಕೆ ಬರುವ ಅಥವಾ ಅಲ್ಲಿಯೇ ನಿಲ್ಲುವ ಬದಲು ಇಳಿಜಾರಿನಲ್ಲಿ ಸುಮಾರು ಮೂರು ಕಿ.ಮೀ.ನಷ್ಟು ಮುಂದಕ್ಕೆ ಸಾಗಿರುವುದೇಕೆ ಎಂಬ ಪ್ರಶ್ನೆಯೂ ಕಾಡುತ್ತಿದೆ.

ಸಾಮಾನ್ಯವಾಗಿ ಚಾರಣಿಗರು ತೆರಳುವ ಮಾರ್ಗದ ಸುತ್ತಮುತ್ತಲ ಪ್ರದೇಶದಲ್ಲಿ ಮೂರು ದಿನಗಳ ಕಾಲ ಪೊಲೀಸರು, ಅರಣ್ಯ ಇಲಾಖೆ ಸಿಬ್ಬಂದಿಗಳು ಹಾಗೂ ಸ್ಥಳೀಯ ಕುಡಿಯ ಜನಾಂಗದ ಯುವಕರು ಶೋಧ ನಡೆಸಿದ್ದಾರೆ. ಸಾಲದೆಂಬಂತೆ ಡ್ರೋಣ್, ಶ್ವಾನದಳವನ್ನೂ ಬಳಸಲಾಗಿದೆ. ಆದರೂ ಆಕೆಯ ಸುಳಿವು ಪತ್ತೆ ಮಾಡಲು ಸಾಧ್ಯವಾಗಿರಲಿಲ್ಲ ಎಂದಾದರೆ, ನಮ್ಮ ಪೊಲೀಸ್ ವ್ಯವಸ್ಥೆಯ ಬಗ್ಗೆಯೂ ಜನ ವಿಶ್ವಾಸ ಕಳೆದುಕೊಳ್ಳುವ ಸಂಭವ ಹೆಚ್ಚಿದೆ.

ಸ್ಥಳೀಯ ಕುಡಿಯ ಜನಾಂಗದ ಯುವಕರ ತಂಡವೊಂದು ಭಾನುವಾರ ಆಕೆಯನ್ನು ಪತ್ತೆ ಮಾಡುವಲ್ಲಿ ಯಶಸ್ವಿಯಾಗಿದೆ. ತಡಿಯಂಡಮೋಳ್ ಬೆಟ್ಟದಲ್ಲಿರಬೇಕಿದ್ದ ಶರಣ್ಯ ದೂರದ ಪಾಂಡನಮಲೆಯಲ್ಲಿ ಪತ್ತೆಯಾಗಿದ್ದಾರೆ. ಆಕೆಯೇ ಹೇಳುವಂತೆ, ಕಾಡಿನಲ್ಲಿ ಚಾರಣ ಮಾಡುವಾಗ ದಾರಿ ತಪ್ಪಿದ ನನಗೆ ನಾಲ್ಕು ಹಗಲು, ರಾತ್ರಿಗಳನ್ನು ಕಳೆಯಲು ಇದ್ದ ಏಕೈಕ ಶಕ್ತಿಯೆಂದರೆ ನನ್ನಲ್ಲಿದ್ದ ಧೈರ್ಯ.

'ನಾನು ಕಾಡಿನಲ್ಲಿ ಹೊಳೆ ಹರಿಯುವ ಮಾರ್ಗವನ್ನು ಹುಡುಕುತ್ತಾ ನಡೆದೆ. ಹಗಲಿನಲ್ಲಿ ಪ್ರಯಾಣಿಸುವ ಮೂಲಕ ಮತ್ತು ರಾತ್ರಿಯಲ್ಲಿ ಬಂಡೆಗಳ ಮೇಲೆ ಮಲಗುವ ಮೂಲಕ ದಟ್ಟವಾದ ಕಾಡಿನಲ್ಲಿ ಏಕಾಂಗಿಯಾಗಿ ದಿನಗಳನ್ನು ಕಳೆದೆ. ನನ್ನ ಕೈಯಲ್ಲಿದ್ದ ಟ್ರೆಕ್ಕಿಂಗ್ ಗೈಡ್ ನೋಡುವ ಮೂಲಕ ಅಂದಾಜಿಸಿ ದಾರಿಯಲ್ಲಿ ಸಾಗುತ್ತಿದ್ದೆ. ಸೂರ್ಯ ಮುಳುಗುವ ಮೊದಲು ನಾನು ಸುರಕ್ಷಿತವಾದ ಸ್ಥಳವನ್ನು ತಲುಪುತ್ತಿದ್ದೆ. ಪ್ರಯಾಣದ ಸಮಯದಲ್ಲಿ ನನ್ನ ಫೋನ್ ಮತ್ತು ಕ್ಯಾಮೆರಾ ಇದ್ದ ಚೀಲವೂ ಕಳೆದುಹೋಯಿತು. ನಾನು ದಟ್ಟವಾದ ಕಾಡಿನ ಮಧ್ಯದಲ್ಲಿದ್ದರೂ ಯಾವುದೇ ಕಾಡು ಪ್ರಾಣಿಗಳು ಕಾಣಿಸಲಿಲ್ಲ. ಕಾಡಿನಲ್ಲಿ ಆಹಾರಕ್ಕಾಗಿ ಯಾವುದೇ ಹಣ್ಣುಗಳು ಇಲ್ಲದ ಕಾರಣ ನಾನು ಹೊಳೆಯ ನೀರನ್ನೇ ಕುಡಿದು ಬದುಕುಳಿದೆ. ಪ್ರತಿದಿನ ಮೂರು ಲೀಟರ್‌ಗಿಂತ ಹೆಚ್ಚು ನೀರು ಕುಡಿಯುತ್ತಿದ್ದೆ ಎಂದಿದ್ದಾರೆ. ಮಧ್ಯರಾತ್ರಿಯ ನಂತರ ಯಾವುದಾದರೂ ಶಬ್ದ ಕೇಳಿಸಿದರೆ ನಾನು ನನ್ನ ಕೈಯಲ್ಲಿದ್ದ ಕೋಲನ್ನು ಹಿಡಿದು ಸ್ವಯಂ ರಕ್ಷಣೆಗಾಗಿ ಸಿದ್ಧಳಾಗಿ ನಿಲ್ಲುತ್ತಿದ್ದೆ. ಆದರೆ, ಯಾವುದೇ ಪ್ರಾಣಿಗಳೂ ದಾಳಿ ನಡೆಸಲಿಲ್ಲ. ಕಾಡು ತುಂಬಾ ಶಾಂತವಾಗಿತ್ತು. ಇದು ತನ್ನ ಜೀವನದಲ್ಲಿ ಮರೆಯಲಾಗದ ಅನುಭವ. ಬೇಸಿಗೆಯ ನಂತರ ನಾನು ಮತ್ತೆ ಇದೇ ರೀತಿಯ ಪ್ರವಾಸಗಳಿಗೆ ಹೋಗುತ್ತೇನೆ' ಎಂದು ಅವರು ಆತ್ಮವಿಶ್ವಾಸದಿಂದ ಹೇಳಿದ್ದಾರೆ.

ಹುಡುಕಿದವರಿಗಿಲ್ಲ ಸನ್ಮಾನ

ಶರಣ್ಯ ನಾಪತ್ತೆಯಾದಂದಿನಿಂದ ಭಾನುವಾರ ಸಂಜೆಯವರೆಗೂ ಪೊಲೀಸರು, ಅರಣ್ಯ ಇಲಾಖೆ ಸಿಬ್ಬಂದಿಗಳು, ಸ್ಥಳೀಯರು ಆಕೆಯ ಪತ್ತೆಗಾಗಿ ಅವಿರತವಾಗಿ ಶ್ರಮಿಸಿದ್ದಾರೆ. ಅವರಿಗೆ ಕ್ಷೇತ್ರದ ಶಾಸಕರು ಕೃತಜ್ಞತೆಯನ್ನಷ್ಟೇ ಹೇಳಿ ಕಳುಹಿಸಿದ್ದಾರೆ. ಆದರೆ ವೀರಾಜಪೇಟೆಯಲ್ಲಿ ಶರಣ್ಯಳಿಗೆ ಶಾಲು ಹೊದಿಸಿ, ಹಾರ ಹಾಕಿ ಬೀಳ್ಕೊಡಲಾಗಿದೆ. ಮೂರು ದಿನಗಳ ಕಾಲ ಜಿಲ್ಲಾಡಳಿತದ ನಿದ್ದೆಗೆಡಿಸಿ, ಸರಕಾರದ ಲಕ್ಷಾಂತರ ರೂ.ವೆಚ್ಚಕ್ಕೆ ಕಾರಣಳಾದ ಶರಣ್ಯಳ ಹುಚ್ಚಾಟಕ್ಕೆ ಅವಳನ್ನು ಗೌರವಿಸಿ ಕಳುಹಿಸುವ ಬದಲು ಪೊಲೀಸ್ ಇಲಾಖೆ ಆಕೆಯನ್ನು ಸಮಗ್ರವಾದ ತನಿಖೆಗೆ ಒಳಪಡಿಸಬೇಕಿತ್ತು ಎಂಬ ಅಭಿಪ್ರಾಯವೂ ಸಾರ್ವಜನಿಕ ವಲಯದಲ್ಲಿ ಕೇಳಿ ಬಂದಿದೆ. ಅಲ್ಲದೆ ಸರಕಾರಕ್ಕೆ ಆಗಿರುವ ನಷ್ಟವನ್ನು ಆಕೆಯ ಕುಟುಂಬದವರಿಂದ ವಸೂಲು ಮಾಡಬೇಕು ಎಂಬ ಒತ್ತಾಯವೂ ಕೇಳಿಬಂದಿದೆ.

ಅರಣ್ಯ ಜೀವನದ ತರಬೇತಿ ಶಂಕೆ

ಶರಣ್ಯ ಅವರ ಧೈರ್ಯಕ್ಕೆ ಹ್ಯಾಟ್ಸ್ ಅಫ್ ಹೇಳಲೇಬೇಕು. ಆದರೆ ತನಗೆ ಪರಿಚಯವೇ ಇಲ್ಲದ, ಅದರಲ್ಲೂ ಅರಣ್ಯ ಪ್ರದೇಶದಲ್ಲಿ ಒಬ್ಬಂಟಿಯಾಗಿ ಮೂರು ರಾತ್ರಿಗಳನ್ನು ಆಕೆ ಕಳೆದಿದ್ದಾರೆಂದರೆ ಇದು ಸಂಶಯಕ್ಕೆ ಎಡೆ ಮಾಡುತ್ತಿದೆ. ಅದರಲ್ಲೂ ಆಕೆ ಮೂರು ದಿನವೂ ಕೇವಲ ನೀರನ್ನೇ ಕುಡಿದು ಅಷ್ಟೊಂದು ಶಕ್ತಿ ಪಡೆದಿದ್ದಾರೆಂಬುದನ್ನು ನಂಬುವುದು ಕೂಡಾ ಸ್ವಲ್ಪ ಕಷ್ಟ! ಹಾಗಾಗಿ ಆಕೆ ಈ ರೀತಿಯ ಜೀವನ ನಡೆಸಲು ತರಬೇತಿ ಪಡೆದಿರುವ ಬಗ್ಗೆಯೂ ಸಂಶಯ ಕಾಡುತ್ತಿದೆ.

ಮೂರು ದಿನಗಳ ಬಳಿಕ ಅರಣ್ಯದಲ್ಲಿ ಪತ್ತೆಯಾದ ಆಕೆ ಲವಲವಿಕೆಯಿಂದಲೇ ಬೆಟ್ಟ ಹತ್ತಿ ಇಳಿದು ಬಂದಿರುವುದನ್ನು ಗಮನಿಸಿದರೆ, ಆಕೆ ಅರಣ್ಯದಲ್ಲಿಷ್ಟು ದಿನವೂ ಆಹಾರ ಸೇವಿಸಿರುವ ಬಗ್ಗೆಯೂ ಸಂಶಯಗಳು ಮೂಡಿದೆ.

ಅರಣ್ಯದಿಂದ ಕರೆತಂದ ಬಳಿಕ ಆಕೆಯ ಆರೋಗ್ಯ ತಪಾಸಣೆ ಮಾಡಲಾಗಿದೆ. ಆ ಸಂದರ್ಭದಲ್ಲೂ ಆಕೆ ಆರೋಗ್ಯವಾಗಿಯೇ ಇದ್ದುದು ಈ ಸಂಶಯ ಮತ್ತಷ್ಟು ಗಟ್ಟಿಯಾಗುವಂತೆ ಮಾಡಿದೆ.

ಒಟ್ಟಿನಲ್ಲಿ ಚಾರಣಕ್ಕೆ ಬಂದು ನಾಪತ್ತೆಯಾಗಿ ನಾಲ್ಕು ದಿನಗಳ ಕಾಲ ರಾಜ್ಯ, ರಾಷ್ಟ್ರಮಟ್ಟದಲ್ಲಿ ಸುದ್ದಿಯಾದ ಶರಣ್ಯಳ ಹಿಂದಿರುವ 'ಶಕ್ತಿ'ಯ ಗುಟ್ಟೇನು ಎಂಬುದು ಮಾತ್ರ ಇನ್ನೂ ನಿಗೂಢವಾಗಿದೆ.

ಪೊಳಲಿಯಲ್ಲಿ ಕೊಡಿಚೆಂಡಿಗೆ ಚಾಲನೆ

ಬಂಟ್ವಾಳ: ಸಪ್ತ ದುರ್ಗೆಯರ ಕ್ಷೇತ್ರಗಳಲ್ಲಿ ಒಂದಾಗಿರುವ ಇತಿಹಾಸ ಪ್ರಸಿದ್ಧವಾದ ಪೊಳಲಿ ರಾಜರಾಜೇಶ್ವರಿ ಕ್ಷೇತ್ರದಲ್ಲಿ ಈ ಬಾರಿ 29 ದಿನಗಳ ಜಾತ್ರೋತ್ಸವದ ಸಂಭ್ರಮ, ಪೊಳಲಿಯ ಜಾತ್ರೋತ್ಸವದ ಪ್ರಯುಕ್ತ ಐದು ದಿನಗಳ ನಡೆಯುವ 'ಚೆಂಡು ಉತ್ಸವ' ಅತ್ಯಂತ ಮಹತ್ವವನ್ನುಪಡೆದಿದೆ.

ವಾರ್ಷಿಕ ಜಾತ್ರಾ ಮಹೋತ್ಸವದ ಹಿನ್ನಲೆಯಲ್ಲಿ ಕೊಡಿ ಚೆಂಡು ಉತ್ಸವಕ್ಕೆ (ಮೊದಲ ದಿನದ) ಸೋಮವಾರ ದೇವಳದ ಮುಂಭಾಗದಲ್ಲಿರುವ ಗದ್ದೆಯಲ್ಲಿ ಚಾಲನೆ ನೀಡಲಾಯಿತು.ಕೊಡಿ ಚೆಂಡಿ ಉತ್ಸವದ ಬಳಿಕ ರಾತ್ರಿ ದೇವಳದಲ್ಲಿ 'ಕುಮಾರ ತೇರು' ಉತ್ಸವವು ನೆರವೇರಿತು.

ಈ ಸಂದರ್ಭ ದೇವಳದ ಪ್ರಧಾನ ಅರ್ಚಕರಾದ ಮಾಧವ ಭಟ್, ಹಿರಿಯ ಪ್ರಧಾನ ಅರ್ಚಕರಾದ ಕೆ. ರಾಮ್ ಭಟ್, ಪರಮೇಶ್ವರ ಭಟ್, ಅರ್ಚಕರಾದ ಪದ್ಮನಾಭ ಭಟ್, ಅನಂತಪದ್ಮನಾಭ ಭಟ್, ಆದರ್ಶಭಟ್, ದೇವಳದ ಆಡಳಿತ ಮೊಕ್ತೇಸರರಾದ ಡಾ. ಮಂಜಯ್ಯ ಶೆಟ್ಟಿ ಅಮ್ಮುಂಜೆಗುತ್ತು, ಮೊಕ್ತೇಸರರಾದ ಚೇರಾ ಸೂರ್ಯ ನಾರಾಯಣ ರಾವ್, ವಿವಿಧ ಗುತ್ತಿನವರು, ಕಾರ್ಯನಿರ್ವಹಣಾಧಿಕಾರಿ ಕೆ.ಪಿ.ಚಂದ್ರಮೋಹನ್ ಹಾಗೂ ದೇವಳದ ಪ್ರಮುಖರು ಸಾವಿರ ಸೀಮೆಯ ಭಕ್ತಾದಿಗಳು ಉಪಸ್ಥಿತರಿದ್ದರು.



ಏ.10 ರಂದು ಕಡೇಚೆಂಡು ನಡೆಯಲಿದೆ.

ಚೆಂಡಿನ ಉತ್ಸವಕ್ಕೆ ಮೊದಲು ಪರಂಪರಾಗತವಾಗಿ ಚೆಂಡು ಕಟ್ಟುವ ಕಾಯಕವನ್ನು ಮಿಜಾರಿನ ಸಮಗಾರ ಮನೆತನದವರು ಮಾಡಿ ಶ್ರೀ ದೇವಳಕ್ಕೆ ಒಪ್ಪಿಸುತ್ತಾರೆ. ದೇವಿಗೆ ಪೂಜೆ ಆದ ಬಳಿಕ ಚೆಂಡನ್ನು ಹಿಡಿದು ಸರ್ವ ವಾದ್ಯಗಳೊಂದಿಗೆ ಪ್ರದಕ್ಷಿಣೆ ಬಂದು ಚೆಂಡಿನ ಗದ್ದೆಗೆ ತರಲಾಗುತ್ತಿದೆ.

ದೇವಳದಿಂದ ಚೆಂಡನ್ನು ಗಾಣಿಗ ಮನೆತನದವರು ಹಿಡಿದುಕೊಂಡು ಬಂದು ಗದ್ದೆಯಲ್ಲಿ ಸಾಂಪ್ರದಾಯಿಕವಾಗಿ ಪ್ರಾರ್ಥಿಸಿ ಘರ್ದ ಖಂಡದವರಿಗೆ ನೀಡಿ ಚೆಂಡನ್ನು ಹಾರಿಸಲಾಗುತ್ತದೆ.

ಬಳಿಕ ಅಮ್ಮುಂಜೆ, ಮಳಲಿ ಪರಿಸರದ ಮಕ್ಕಳು ಚೆಂಡನ್ನು ಆಡುತ್ತಾರೆ. ಮೂರು ಬಾರಿ ಚೆಂಡನ್ನು ಆಡಲಾಗುತ್ತಿದ್ದು, ನಂತರ ಚೆಂಡನ್ನು ತಂದು ದೇವಳಕ್ಕೆ ಒಂದು ಸುತ್ತು ಹಾಕುವ ಮೂಲಕ ಸಂಪನ್ನಗೊಳ್ಳುತ್ತದೆ.

ಚಂಡ, ಮುಂಡರನ್ನು ಸಂಹರಿಸಿದ ಪ್ರತೀಕವಾಗಿ ಕ್ಷೇತ್ರದಲ್ಲಿ ಚೆಂಡಿನ ಉತ್ಸವ ನಡೆಸಲಾಗುತ್ತಿದೆ ಎಂಬ ಪ್ರತೀತಿ ಇದೆ. ಪೊಳಲಿ ಕ್ಷೇತ್ರದ ಒಂದು ತಿಂಗಳ ಜಾತ್ರೆಯಲ್ಲಿ ಐದು ದಿನಗಳ ಚೆಂಡಿನ ಉತ್ಸವ ಜನಪ್ರಿಯವಾಗಿದ್ದು, ನೂರಾರು ಮಂದಿ ಭಕ್ತರು ಇದರಲ್ಲಿ ಉತ್ಸಾಹದಿಂದ ಪಾಲ್ಗೊಂಡು ಪುನೀತರಾಗುತ್ತಾರೆ.

ಯುದ್ಧ ಭೀತಿ ನಡುವೆ ದುಬೈಯತ್ತ ಹಾರಲು ಸಜ್ಜಾಗಿವೆ ವಿಮಾನಗಳು!

ಮಧ್ಯಪ್ರಾಚ್ಯ ರಾಷ್ಟ್ರಗಳಲ್ಲಿ ಮುಗಿಯದ ಯುದ್ಧ ಭೀತಿ

ಮಂಗಳೂರು: ಮಧ್ಯಪ್ರಾಚ್ಯ ರಾಷ್ಟ್ರಗಳಲ್ಲಿನ ಯುದ್ಧ ಭೀತಿ ಇನ್ನೂ ಕೊನೆಯಾಗಿಲ್ಲ. ಯುದ್ಧ ಭೀತಿಯಿಂದಾಗಿ ಈ ರಾಷ್ಟ್ರಗಳ ನಡುವೆ ವಿಮಾನ ಹಾರಾಟವೂ ಸ್ಥಗಿತವಾಗಿತ್ತು. ಇದೀಗ ಬಾನಂಗಳದಲ್ಲಿ ಮತ್ತೆ ವಿಮಾನಗಳ ಹಾರಾಟ ಶುರುಗುವ ಲಕ್ಷಣಗಳು ಗೋಚರಿಸಿವೆ.

ಇಂದು ದುಬೈ-ಅಬುದಾಬಿ ವಿಮಾನ

ಮಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಿಂದ ದುಬೈ ಮತ್ತು ಅಬುಧಾಬಿಗೆ ಏರ್ ಇಂಡಿಯಾ ಎಕ್ಸ್‌ಪ್ರೆಸ್ ಮಂಗಳವಾರ ವಿಮಾನ ಸಂಚಾರವನ್ನು ನಿಗದಿಪಡಿಸಿದೆ.



ಮಂಗಳೂರು- ದುಬೈ- ಮಂಗಳೂರು (ಐಎಕ್ಸ್ 6040 / 6041) ಮತ್ತು ಮಂಗಳೂರು- ಅಬುಧಾಬಿ- ಮಂಗಳೂರು (ಐಎಕ್ಸ್ 6083 / 6084) ವಿಮಾನ ಸಂಚಾರ ನಡೆಸಲಿದೆ ಎಂದು ಏರ್‌ಪೋರ್ಟ್ ಪ್ರಕಟಣೆ ತಿಳಿಸಿದೆ.

ಕುವೈಟ್‌ಗೆ ವಿಶೇಷ ವಿಮಾನ

ಮಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ- ಕುವೈಟ್ ನಡುವೆ ಜಝೀರಾ ಏರ್ ವೇಸ್ ಏಪ್ರಿಲ್ 8ರಿಂದ ಬೈ-ವೀಕ್ಲಿ ಚಾರ್ಟರ್ ವಿಮಾನ ಸಂಚಾರ ಆರಂಭಿಸಲಿದೆ. ಈ ವಿಮಾನಗಳು ಬುಧವಾರ ಮತ್ತು ಭಾನುವಾರ ಸಂಚಾರ ನಡೆಸಲಿವೆ.

ವಿಮಾನವು ಕುವೈತ್‌ನಿಂದ ದಮ್ಮಾಮ್ ಮೂಲಕ ಮಂಗಳೂರಿಗೆ ಆಗಮಿಸಲಿದೆ. ಪ್ರಯಾಣಿಕರು ದಮ್ಮಾಮ್‌ನಲ್ಲಿ ಸೌದಿ ಗಡಿ ಪರಿಶೀಲನೆಗೆ ಒಳಗಾಗುತ್ತಾರೆ.



ಯಾವೆಲ್ಲಾ ವಿಮಾನ ರದ್ದಾಗಿತ್ತು?

ಮಂಗಳೂರು ದುಬೈ ನಡುವೆ ಸಂಚರಿಸುತ್ತಿದ್ದ ಐಎಕ್ಸ್ 831 ವಿಮಾನ, ಮಂಗಳೂರು- ದೋಹಾ ನಡುವಿನ ಐಎಕ್ಸ್ 821 ವಿಮಾನ, ದೋಹಾ- ಮಂಗಳೂರು ನಡುವಿನ ಐಎಕ್ಸ್ 822 ಸಂಖ್ಯೆಯ ವಿಮಾನ, ದುಬೈ- ಮಂಗಳೂರು ನಡುವಿನ ಐಎಕ್ಸ್ 832, ಮಂಗಳೂರು-ದಮ್ಮಾಮ್ ನಡುವೆ ಸಂಚರಿಸುತ್ತಿದ್ದ ಐಎಕ್ಸ್ 847 ವಿಮಾನ, ಮಂಗಳೂರು- ಕುವೈಟ್ ನಡುವಿನ ಐಎಕ್ಸ್ 851 ವಿಮಾನ, ಮಂಗಳೂರು- ಅಬುಧಾಬಿ ನಡುವೆ ಸಂಚರಿಸುತ್ತಿದ್ದ ಐಎಕ್ಸ್ 815 ಸಂಖ್ಯೆಯ ವಿಮಾನ ಸೇರಿದಂತೆ ಹಲವು ವಿಮಾನಗಳ ಸೇವೆಯಲ್ಲಿ ವ್ಯತ್ಯಯವಾಗಿತ್ತು. ಇದೀಗ ಒಂದೊಂದೇ ವಿಮಾನಗಳು ಮತ್ತೆ ಆರಂಭವಾಗುವ ಲಕ್ಷಣಗಳು ಗೋಚರಿಸಿವೆ.

ವಿಮಾನದ ವೇಳಾಪಟ್ಟಿ

ಜೆ 9 3417 ವಿಮಾನ ಕುವೈಟ್‌ನಿಂದ ಬೆಳಗ್ಗೆ 8.40ಕ್ಕೆ ನಿರ್ಗಮನ, ಮಂಗಳೂರಿಗೆ ಸಂಜೆ 4.10ಕ್ಕೆ ಆಗಮನ. ಎ 9 3418 ವಿಮಾನ ಮಂಗಳೂರಿನಿಂದ ಸಂಜೆ 4.55ಕ್ಕೆ ನಿರ್ಗಮನ, ಕುವೈಟ್‌ಗೆ ರಾತ್ರಿ 7.40ಕ್ಕೆ ಆಗಮನ. ಅಧಿಕಾರಿಗಳ ಅನುಮತಿ ದೊರೆತರೆ ಈ ವಿಮಾನಗಳ ಸಂಖ್ಯೆಯನ್ನು 2ರಿಂದ 4ಕ್ಕೆ ಹೆಚ್ಚಿಸುವ ಯೋಜನೆ ಇದೆ ಎನ್ನಲಾಗಿದೆ.

ಗಲ್ಫ್ ರಾಷ್ಟ್ರಗಳಲ್ಲಿದ್ದಾರೆ ಸಾವಿರಾರು ಮಂದಿ ಕರಾವಳಿಗರು

ಇಸ್ರೇಲ್-ಇರಾನ್ ನಡುವಿನ ಯುದ್ಧದ ಆರಂಭವಾದಾಗ ಕರಾವಳಿಯ ಮಂದಿ ಸಾಕಷ್ಟು ಸಂಕಷ್ಟಕ್ಕೆ ಸಿಲುಕಿದ್ದರು. ಈ ಭಾಗದ ಸಾವಿರಾರು ಮಂದಿ ಗಲ್ಫ್ ರಾಷ್ಟ್ರಗಳಲ್ಲಿ ಉದ್ಯೋಗ ಕಂಡುಕೊಂಡಿದ್ದು, ಯಾವಾಗ ಯುದ್ಧ ಮುಗಿಯುವುದೋ ಎಂದು ಕಾಯುವಂತಾಗಿತ್ತು. ಈ ನಡುವೆ ವಿಮಾನ ಹಾರಾಟವೂ ಸ್ಥಗಿತವಾಗಿದ್ದರಿಂದ ಹುಟ್ಟೂರಿಗೆ ಹೊರಟು ನಿಂತಿದ್ದ ಮಂದಿ ಅಲ್ಲಿಯೇ ನೆಲೆ ನಿಲ್ಲುವಂತಾಗಿತ್ತು. ಇದೀಗ ದುಬೈ, ಅಬುದಾಬಿ ನಡುವೆಯಾದರೂ ವಿಮಾನ ಹಾರಾಟ ಆರಂಭವಾಗಿದೆಯಲ್ಲ ಎಂದು ಇಲ್ಲಿ ನೆಲೆಸಿರುವ ಕರಾವಳಿಗರು ಹರ್ಷಿತರಾಗಿದ್ದಾರೆ.

ಮಧ್ಯಪ್ರಾಚ್ಯದ ಕಡೆಗೆ ಹೋಗುವ ವಿಮಾನಗಳಿಗೆ ಮಂಗಳೂರಿನಿಂದ ನೇರ ಮಾರ್ಗವಿಲ್ಲ. ಆದ ಕಾರಣ ಗಲ್ಫ್ ರಾಷ್ಟ್ರಗಳಿಗೆ ತೆರಳಿ ನಂತರ ಸಂಚಾರ ಮುಂದುವರಿಸಬೇಕಿತ್ತು. ಮತ್ತೆ ವಿಮಾನ ಹಾರಾಟವಾಗುವುದರಿಂದ ಗಲ್ಫ್‌ನಲ್ಲಿರುವ ಕರಾವಳಿಯ ಮಂದಿ ಮತ್ತೆ ತಮ್ಮೂರಿಗೆ ಹೊರಟು ನಿಲ್ಲುವ ಸಾಧ್ಯತೆ ಇದೆ. ಬಹುತೇಕ ಮಂದಿ ಗಲ್ಫ್ ಉದ್ಯೋಗ ತೊರೆದು ಹುಟ್ಟೂರಿನಲ್ಲಿಯೇ ಸ್ವ ಉದ್ಯೋಗಕ್ಕೆ ಮುಂದಾದರೂ ಅಚ್ಚರಿಪಡಬೇಕಿಲ್ಲ. ಏಕೆಂದರೆ ಇರಾನ್ -ಇಸ್ರೇಲ್ ಯುದ್ಧ ಅಷ್ಟು ಭಯಾತಂಕವನ್ನು ಸೃಷ್ಟಿಸಿದೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78, Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.



ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ

ಸಂಗಮ

ದಕ್ಷಿಣ ಕನ್ನಡ । ಉಡುಪಿ । ಕೊಡಗು । ಕಾಸರಗೋಡು



ಬದಲಾವಣೆಯತ್ತ ಕೇರಳ: ಅಭಿವೃದ್ಧಿ ಪರ ಮೋದಿ ಆಡಳಿತಕ್ಕೆ ಮೆಚ್ಚುಗೆ



ಬದಲಾವಣೆಗಾಗಿ ಎನ್‌ಡಿಎಗೆ ಮತ ನೀಡಿ

ಮತದಾರರಿಗೆ ಬಿಜೆಪಿ ಅಭ್ಯರ್ಥಿ ಕೆ. ಸುರೇಂದ್ರನ್

ಏ.9ರಂದು ನಡೆಯಲಿರುವ ಕೇರಳ ವಿಧಾನಸಭಾ ಚುನಾವಣೆ ಈ ಬಾರಿ ಹೊಸ ಕುತೂಹಲ ಸೃಷ್ಟಿಸಿದೆ. ಕೇರಳದ ಉತ್ತರದ ತುತ್ತ ತುದಿಯ ಕ್ಷೇತ್ರ ಮಂಜೇಶ್ವರ. ಕರ್ನಾಟಕ ಗಡಿಗೆ ತಾಗಿಕೊಂಡಿರುವ ಮಂಜೇಶ್ವರ ವಿಧಾನಸಭಾ ಕ್ಷೇತ್ರದಲ್ಲಿ ಈ ಬಾರಿ ಬಿಜೆಪಿಯ ಮಾಜಿ ಕೇರಳ ರಾಜ್ಯಾಧ್ಯಕ್ಷ ಹಾಗೂ ಕೇರಳಿಗರ ಮನಗೆದ್ದ ರಾಜಕೀಯ ನೇತಾರರಲ್ಲಿ ಒಬ್ಬರಾದ ಕೆ.ಸುರೇಂದ್ರನ್ ಈ ಬಾರಿ ಬಿಜೆಪಿ ನೇತೃತ್ವದ ಎನ್‌ಡಿಎಯ ಅಭ್ಯರ್ಥಿಯಾಗಿ ಮತ್ತೆ ಸ್ಪರ್ಧೆಗಿಳಿದಿದ್ದಾರೆ.

ಪ್ರಧಾನಿ ನರೇಂದ್ರ ಮೋದಿಯವರ ಅಭಿವೃದ್ಧಿಪರ ಆಡಳಿತ ಮತ್ತು ಸ್ಪಂದನಶೀಲ ಆಡಳಿತವೀಗ ಕೇರಳಿಗರ ಮನಗೆದ್ದಿದೆ.ಅದು ಕೇರಳಕ್ಕೆ ನೀಡಿರುವ ಹೆದ್ದಾರಿ ಯೋಜನೆ ಇರಬಹುದು, ವಂದೇಭಾರತ್ ರೈಲು ಯೋಜನೆಗಳಿರಬಹುದು, ಅಮೃತ ಯೋಜನೆಯಡಿ ಕೇರಳದ ರೈಲ್ವೆ ನಿಲ್ದಾಣಗಳನ್ನು ಅತ್ಯಾಧುನಿಕ ರೀತಿಯಲ್ಲಿ ಅಭಿವೃದ್ಧಿಪಡಿಸಿದ ಹೆಜ್ಜೆಗಳಿರಬಹುದು, ಕೊಲ್ಲಿ ದೇಶಗಳು ಸೇರಿದಂತೆ ವಿದೇಶಗಳಲ್ಲಿ ಸಿಲುಕಿರುವ ಭಾರತೀಯರು ಆಪತ್ತಿಗೆ ಸಿಲುಕಿದಾಗ ಅವರನ್ನು ಸುರಕ್ಷಿತವಾಗಿ ಭಾರತಕ್ಕೆ ಮರಳಿ ಕರೆತರುವ ಅದ್ಭುತ ಕಾರ್ಯಾಚರಣೆಗಳಿರಬಹುದು... ಹೀಗೆ ಕೇರಳಿಗರು ಪ್ರಧಾನಿ ಮೋದಿ ನೇತೃತ್ವದ ಕೇಂದ್ರ ಸರಕಾರ ವಿರೋಧಿಗಳು ಹೇಳುವಂತೆ ಕೋಮುವಾದಿ ಸರಕಾರ ಅಲ್ಲ, ಬದಲಿಗೆ ಭಾರತೀಯರನ್ನು ಜಾತಿ, ಮತ ಭೇದ ನೋಡದೆ 'ಭಾರತೀಯರು'ಎಂಬ ಒಂದೇ ದೃಷ್ಟಿಯಡಿ ಅವರ ಹಿತಕ್ಕಾಗಿ ಶ್ರಮಿಸುವ ಸರಕಾರ ಎಂಬುದೀಗ ನಿಧಾನವಾಗಿ ಕೇರಳಿಗರ ಅನುಭವಕ್ಕೆ ಬರಲಾರಂಭಿಸಿದೆ.

ಈ ಹಿಂದೆ ಕೋವಿಡ್ ಸಮಯ ಅಥವಾ ವಿದೇಶಗಳಲ್ಲಿನ ಬಿಕ್ಕಟ್ಟು ಸಂದರ್ಭ ಮತ್ತು ಈಗ ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಸಂಘರ್ಷಗಳಲ್ಲಿ ಸಿಲುಕಿದ ಭಾರತೀರನ್ನು ಹೇಗೆ ಕಾಳಜಿಯಿಂದ ರಕ್ಷಿಸಿ ಕರೆತರಲಾಗುತ್ತಿದೆ ಎಂಬುದನ್ನು ಕೇರಳಿಗರು ಎಲ್ಲರಿಗಿಂತ ಹೆಚ್ಚಾಗಿ ಬಲ್ಲರು. ಇತ್ತೀಚೆಗೆ ಹೀಗೆ ರಕ್ಷಿಸಲ್ಪಟ್ಟು ತಾಯ್ನಾಡಿಗೆ ಮರಳಿ ಕರೆತರಲ್ಪಟ್ಟ ಅನೇಕ ಅಲ್ಪಸಂಖ್ಯಾತ ಯುವಕರು ಮೋದಿಯವರು ತಮ್ಮ ರಕ್ಷಕ ಎಂಬುದನ್ನು ಯಾವುದೇ ಹಿಂಜರಿಕೆ ಇಲ್ಲದೆ ಅಭಿಮಾನದಿಂದ ಹೇಳಿರುವುದಿಲ್ಲಿ ಉಲ್ಲೇಖನೀಯ.

ಈ ನಿಟ್ಟಿನಲ್ಲಿ ಅಭಿವೃದ್ಧಿಯಲ್ಲಿ ಹಿಂದೆ ಬಿದ್ದಿರುವ ಮಂಜೇಶ್ವರದಲ್ಲಿ ಈ ಬಾರಿಯಾದರೂ ಅಭಿವೃದ್ಧಿಗಾಗಿ ಮತ ನೀಡಬೇಕೆಂಬ ಮಾತು ಮತದಾರರಿಂದ ವ್ಯಕ್ತವಾಗುತ್ತಿರುವುದು ಗಮನಾರ್ಹ.ಸುರೇಂದ್ರನ್ ಅವರಿಗೆ ಅಲ್ಪಸಂಖ್ಯಾತ ಸಮುದಾಯದ ಅನೇಕರು ಬೆಂಬಲ ವ್ಯಕ್ತಪಡಿಸುತ್ತಿರುವುದು ಗಮನ ಸೆಳೆದಿದೆ.

ಮಂಜೇಶ್ವರ ಕ್ಷೇತ್ರ ಶಿಕ್ಷಣ, ಆರೋಗ್ಯ, ಆಡಳಿತ, ಮೂಲಸೌಕರ್ಯ ಸೇರಿದಂತೆ ಎಲ್ಲ ಕ್ಷೇತ್ರಗಳಲ್ಲೂ ಹಿಂದೆ ಬೀಳುವಂತಾಗಿರುವುದು ಈ ವರೆಗೆ ಕ್ಷೇತ್ರವನ್ನು ಪ್ರತಿನಿಧಿಸಿದ ಜನಪ್ರತಿನಿಧಿಗಳು ಈ ಬಗ್ಗೆ ಕಾಳಜಿ ವಹಿಸದಿರುವುದರಿಂದಲೇ ಎಂಬುದಾಗಿ ಸುರೇಂದ್ರನ್ ಹೇಳುತ್ತಿದ್ದು, ಇದಕ್ಕೆ ಜನತೆಯಿಂದಲೂ ಸಹಮತ ವ್ಯಕ್ತವಾಗುತ್ತಿರುವುದು ಕಂಡುಬಂದಿದೆ.ಕೇವಲ 'ಬಿಜೆಪಿ ಗುಮ್ಮ'ನನ್ನು ತೋರಿಸಿ ಮತ ಸೆಳೆಯುತ್ತಿದ್ದ ಎಲ್‌ಡಿಎಫ್ ಮತ್ತು ಯುಡಿಎಫ್‌ಗಳ ತಂತ್ರವನ್ನು ನೋಡಿದ ಮತದಾರರು ಮಂಜೇಶ್ವರ, ಕಾಸರಗೋಡು ಸೇರಿದಂತೆ ಕೇರಳದಾದ್ಯಂತ ಬದಲಾವಣೆಯೊಂದರತ್ತ ತುಡಿತ ವ್ಯಕ್ತಪಡಿಸುತ್ತಿರುವುದು ರಾಜಕೀಯ ವೀಕ್ಷಕರ ಗಮನ ಸೆಳೆದಿದೆ.ಈ ಹಿನ್ನೆಲೆಯಲ್ಲಿ '**ಹೊಸದಿಗಂತ**' ಸುರೇಂದ್ರನ್ ಅವರ ಜೊತೆ ನಡೆಸಿದ ಮಾತುಕತೆ ಇಲ್ಲಿದೆ.



ದಿಗಂತ ಸಂದರ್ಶನ

ಮಂಜೇಶ್ವರ ಕ್ಷೇತ್ರದಲ್ಲಿ ಮತ್ತೆ ಸ್ಪರ್ಧಿಸು ತ್ತಿದ್ದೀರಿ. ಯಾವ ವಿಶ್ವಾಸದಿಂದ ಈ ಸ್ಪರ್ಧೆ?

ಈ ಬಾರಿ ಮಂಜೇಶ್ವರದ ಜನತೆ ನನ್ನನ್ನು ಆಶೀರ್ವದಿಸುವರೆಂಬ ಪೂರ್ಣ ವಿಶ್ವಾಸದೊಂದಿಗೆ ಸ್ಪರ್ಧಿಸುತ್ತಿದ್ದೇನೆ.ಕಳೆದ ಬಾರಿ ಸಣ್ಣ ಅಂತರದಲ್ಲಿ ಸೋತಿದ್ದೇನೆ. ಆದರೆ ಈ ಚುನಾವಣೆಯಲ್ಲಿ ಏನು ನಡೆದಿತ್ತು ಎಂಬುದು ಸರ್ವವಿದಿತ. ಆದರೆ ಈ ಬಾರಿ ಮತದಾರರು ಬದಲಾವಣೆ ತರಲು ಸಂಕಲ್ಪ ಮಾಡಿದ್ದಾರೆ. ಆದ ಕಾರಣ ಶೇ.100ರಷ್ಟು ಗೆಲುವಿನ ಭರವಸೆ ಇದೆ.


ಈ ವಿಶ್ವಾಸಕ್ಕೆ ಆಧಾರವೇನು?

ಮಂಜೇಶ್ವರ ಕ್ಷೇತ್ರ ಎಲ್ಲ ಕ್ಷೇತ್ರಗಳಲ್ಲೂ ಹಿಂದುಳಿದಿದ್ದು, ಇಂದು ಉನ್ನತ ಶಿಕ್ಷಣಕ್ಕಾಗಿ ಇಲ್ಲಿನ ಮಕ್ಕಳು ಹೊರರಾಜ್ಯಕ್ಕೆ ಹೋಗಬೇಕಾದ ದುಸ್ಥಿತಿ ಇದೆ. ಇಲ್ಲಿ ಉತ್ತಮ ಆಸ್ಪತ್ರೆಗಳಿಲ್ಲದೆ ಅನಾರೋಗ್ಯಕ್ಕೆ ತುತ್ತಾದವರನ್ನು ನೆರೆಯ ಮಂಗಳೂರಿಗೆ ಕರೆದೊಯ್ಯಬೇಕಾದ ಶೋಚನೀಯ ಪರಿಸ್ಥಿತಿ ಇನ್ನೆಷ್ಟು ದಿನ ಇರಬೇಕು?ಒಂದು ಸುಸಜ್ಜಿತ ಆಡಳಿತ ಕಚೇರಿ ನಿರ್ಮಿಸಲೂ ಇಲ್ಲಿನ ಜನಪ್ರತಿನಿಧಿಗಳಿಗೆ ಸಾಧ್ಯವಾಗದೆ ಜನ ಪಡಬಾರದ ಸಂಕಷ್ಟ ಪಡುತ್ತಿರುವುದು ಇನ್ನೂ ಮುಂದುವರಿಯಬೇಕೇ? ಜನರಿಗೆ ಅಗತ್ಯ ಮೂಲಸೌಕರ್ಯಗಳನ್ನು ಒದಗಿಸಲೂ ಶ್ರಮಿಸದ ಜನಪ್ರತಿನಿಧಿ ನಮಗೆ ಬೇಕೇ? ಈ ಪ್ರಶ್ನೆಗಳನ್ನು ಇಲ್ಲಿನ ಮತದಾರರು ಕೇಳುತ್ತಿದ್ದಾರೆ. ಆಯುಷ್ಮಾನ್ ಭಾರತ್, ಕೃಷಿ ಸಮ್ಮಾನ್, ಜಲಜೀವನ್ ಮಿಷನ್ ಸೇರಿದಂತೆ ಕೇಂದ್ರದ ನರೇಂದ್ರ ಮೋದಿ ಸರಕಾರದ ಅನೇಕ ಜನಪರ ಯೋಜನೆಗಳು ನೆರೆಯ ಕರ್ನಾಟಕ ಸೇರಿದಂತೆ ದೇಶಾದ್ಯಂತ ಜನರಿಗೆ ಲಭಿಸುತ್ತಿದೆ.ಆದರೆ ಕೇರಳದಲ್ಲಿರುವ ನಮಗೆ ಮಾತ್ರ ಯಾಕೆ ಲಭಿಸುತ್ತಿಲ್ಲ ? ಬಿಜೆಪಿ ಕೋಮುವಾದಿ ಎಂದು ಪ್ರಚಾರ ನಡೆಸುತ್ತಾ ಎಷ್ಟು ದಿನ ನಮ್ಮನ್ನು ಮೋಸಗೊಳಿಸುತ್ತಾರೆ? ಇದಕ್ಕೆ ಪರಿಹಾರ ಬೇಡವೇ? ಮಂಜೇಶ್ವರದ ಮತದಾರರು ಈ ಬಗ್ಗೆ ನನ್ನಲ್ಲಿ ಕೇಳುತ್ತಿದ್ದಾರೆ. ಈ ಬಾರಿ ಅಭಿವೃದ್ಧಿಯ ಅಜೆಂಡಾ ಹೊಂದಿ ಎನ್‌ಡಿಎ ಅಭ್ಯರ್ಥಿಯಾಗಿ ಸ್ಪರ್ಧಿಸುತ್ತಿರುವ ನಿಮಗೆ ನಮ್ಮ ಬೆಂಬಲ ಎನ್ನುತ್ತಿದ್ದಾರೆ ಇಲ್ಲಿನ ಮತದಾರರು. ಮತದಾರರ ಈ ನಿಲುವಿನ ಆಧಾರದ ಮೇಲೆ ನನ್ನ ವಿಶ್ವಾಸ.

ಮಂಜೇಶ್ವರ ಕ್ಷೇತ್ರದ ಸಮಸ್ಯೆಗಳನ್ನು ನೀವು ಹೇಗೆ ಗುರುತಿಸುತ್ತೀರಿ?

ಉ:ನೆರೆಯ ಕರ್ನಾಟಕದ ಮಂಗಳೂರು ಅಭಿವೃದ್ಧಿಯಲ್ಲಿ ದಾಪುಗಾಲಿಟ್ಟಿದ್ದು ಅಲ್ಲಿ ಆಸ್ಪತ್ರೆಗಳು, ಉತ್ತಮ ಶಿಕ್ಷಣ ಸಂಸ್ಥೆಗಳು,ಆಡಳಿತ ಮೂಲಸೌಕರ್ಯಗಳು ಅಭಿವೃದ್ಧಿ ಹೊಂದಿರುವಾಗ ಮಂಜೇಶ್ವರ ಕ್ಷೇತ್ರದಲ್ಲಿ ಇಂತಹ ಸೌಲಭ್ಯಗಳನ್ನು ನೀಡದೆ ಇರಲು ಮಂಜೇಶ್ವರದ ಜನತೆ ಮಾಡಿದ ತಪ್ಪಾದರೂ ಏನು? ಅವರಿಗೆ ಇಂತಹ ಮೂಲಸೌಕರ್ಯಗಳನ್ನು ಹೊಂದಲು ಹಕ್ಕಿಲ್ಲವೇ? ಇದು ನನ್ನ ಪ್ರಶ್ನೆ.ಬಿಜೆಪಿ ನೇತೃತ್ವದ ಎನ್‌ಡಿಎ ಅಭಿವೃದ್ಧಿಯ ಮೂಲಕ ನವಕೇರಳ ನಿರ್ಮಾಣದ ಸಂಕಲ್ಪ ಮಾಡಿದೆ. ನನ್ನನ್ನು ಇಲ್ಲಿನ ಜನತೆ ಆಯ್ಕೆ ಮಾಡಿದ್ದೇ ಆದರೆ ಈ ನಿಟ್ಟಿನಲ್ಲಿ ನನ್ನ ಪ್ರಾಮಾಣಿಕ ಪ್ರಯತ್ನಗಳು ನಡೆಯಲಿವೆ.ಜನತೆಗೆ ನ್ಯಾಯಕೊಡಿಸುವಲ್ಲಿ ಬದ್ಧತೆಯಿಂದ ಕೆಲಸ ಮಾಡುವ ಭರವಸೆಯನ್ನು ನಾನು ಇಲ್ಲಿನ ಜನತೆಗೆ ನೀಡುತ್ತಿದ್ದೇನೆ.





ಕನ್ನಡಿಗರ ಸಮಸ್ಯೆಗಳ ಪರಿಹಾರ ಬಗ್ಗೆ ನಿಮ್ಮ ನಿಲುವೇನು?

ಕೇರಳ ಸರಕಾರ ಮಲೆಯಾಳ ಕಡ್ಡಾಯ ಮಾಡಿದೆ .ರಾಜ್ಯ ಭಾಷೆಯಾಗಿ ಮಾಡಲಿ. ಆದರೆ ಗಡಿನಾಡ ಭಾಷಾ ಅಲ್ಪಸಂಖ್ಯಾತರಾದ ಕನ್ನಡಿಗರಿಗೆ ಅವರ ಮೂಲಭೂತ ಹಕ್ಕುಗಳನ್ನು ಹೇಗೆ ನಿರಾಕರಿಸಲಾಗುತ್ತಿದೆ? ಅವರಿಗೆ ➡8

ನಿಮ್ಮ ಮಕ್ಕಳ ಭವಿಷ್ಯ ಯೋಚಿಸಿ ಮತನೀಡಿ

ಮತದಾರರಿಗೆ ಮಂಜೇಶ್ವರ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ **ಕೆ. ಸುರೇಂದ್ರನ್** ಮನವಿ











ಸುತ್ತಮುತ್ತ

ಕುಕ್ಕೆಗೆ ನಟ, ನಿರ್ದೇಶಕ ರಿಷಬ್ ಶೆಟ್ಟಿ ಭೇಟಿ



ಸುಬ್ರಹ್ಮಣ್ಯ: ಕಾಂತರ ಖ್ಯಾತಿಯ ನಿರ್ದೇಶಕ ಮತ್ತು ನಟ ರಿಷಬ್ ಶೆಟ್ಟಿ ಸೋಮವಾರ ಕುಟುಂಬ ಸಮೇತರಾಗಿ ಮಹತೋಭಾರ ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನಕ್ಕೆ ಭೇಟಿ ನೀಡಿದರು. ಅವರೊಂದಿಗೆ ಅವರ ಪತ್ನಿ ಪ್ರಗತಿ ಶೆಟ್ಟಿ ತಾಯಿ ರತ್ನಾವತಿ ಹಾಗೂ ಮಕ್ಕಳು ಆಗಮಿಸಿದ್ದರು. ಶ್ರೀ ದೇವಳಕ್ಕೆ ಆಗಮಿಸಿದ ಅವರು ದೇವರ ದರುಶನ ಪಡೆದು ಮಧ್ಯಾಹ್ನದ ಮಹಾಪೂಜೆ ವೀಕ್ಷಿಸಿದರು. ಬಳಿಕ ದೇವಳದ ಅರ್ಚಕರು ಅವರಿಗೆ ಶಾಲು ಹೊದಿಸಿ ಮಹಾಪ್ರಸಾದ ಸ್ವೀಕರಿಸಿದರು. ನಂತರ ಹೊಸಳಿಗಮ್ಮನ ದರುಶನ ಪಡೆದರು. ಈ ಸಂದರ್ಭ ಶಿಷ್ಟಾಚಾರ ಅಧಿಕಾರಿ ಜಯರಾಮ ರಾವ್, ಶ್ರೀ ದೇವಳದ ಹರೀಶ್ ಉಪಸ್ಥಿತರಿದ್ದರು.

ಇಂದು ಸುಳ್ಯದಲ್ಲಿ ವಿದ್ಯುತ್ ವ್ಯತ್ಯಯ

ಸುಳ್ಯ: ಸುಳ್ಯ ಉಪ ವಿಭಾಗದ ವಿವಿಧ ಭಾಗಗಳಲ್ಲಿ ಇಂದು (ಏ.7) ವಿದ್ಯುತ್ ವ್ಯತ್ಯಯವಾಗಲಿದೆ. ಮೆಸ್ಕಾಂ ಸುಳ್ಯ ಉಪವಿಭಾಗ ವ್ಯಾಪ್ತಿಯ 33/11 ಕೆ.ವಿ. ಸುಳ್ಯ ವಿದ್ಯುತ್ ವಿತರಣಾ ಕೇಂದ್ರದಿಂದ ಹೊರಡುವ ಎಲ್ಲಾ 11 ಕೆ.ವಿ. ಫೀಡರ್‌ಗಳಲ್ಲಿ ತುರ್ತು ನಿಯತಕಾಲಿಕ ನಿರ್ವಹಣಾ ಕೆಲಸವನ್ನು ಹಮ್ಮಿಕೊಂಡಿರುವುದರಿಂದ 11ಕೆ.ವಿ ಸುಳ್ಯ-1 ಕೇರ್ಪಳ, ಸುಳ್ಯ-2 ಶ್ರೀರಾಂಪೇಟೆ, ಜಬಳೆ ಡಿಪ್ಪೋ, ಸಂಪಾಜೆ, ಕೊಲ್ಲಾರ್, ಕಾವು, ಅಜ್ಜಾವರ, ಕೇನ್ಯ, ಆರಂತೋಡು, ಮಂಡೆಕೋಲು ಫೀಡರುಗಳಲ್ಲಿ ಬೆಳಗ್ಗೆ 10 ರಿಂದ ಸಂಜೆ 6ರ ತನಕ ವಿದ್ಯುತ್ ವ್ಯತ್ಯಯ ಉಂಟಾಗಲಿದೆ ಎಂದು ಮೆಸ್ಕಾಂ ಪ್ರಕಟಣೆ ತಿಳಿಸಿದೆ.

ಇಂದು ವಿದ್ಯುತ್ ನಿಲುಗಡೆ

ಬೆಳ್ತಂಗಡಿ: ಉಜಿರೆ ಮೆಸ್ಕಾಂ ಉಪ ವಿಭಾಗದ ಕಕ್ಕಿಂಜೆ ಹಾಗೂ ಪಿಲಿಕ್ಕಳ 33 ಕೆವಿ ವಿದ್ಯುತ್ ಮಾರ್ಗದಲ್ಲಿ ತುರ್ತು ಕಾಮಗಾರಿ ಪ್ರಯುಕ್ತ ಏ.7ರಂದು ವಿದ್ಯುತ್ ನಿಲುಗಡೆಗೊಳ್ಳಲಿದೆ. ಬೆಳಗ್ಗೆ 10 ರಿಂದ ಸಂಜೆ 4ರವರೆಗೆ ಪಿಲಿಕಳ, ಚಾರ್ಮಾಡಿ, ಮುಂಡಾಜೆ ದಿಡುಪೆ ಫೀಡರ್ ಗಳಿಂದ ವಿದ್ಯುತ್ ಸರಬರಾಜಾಗುವ ಎಲ್ಲಾ ಪ್ರದೇಶಗಳಲ್ಲಿ ವಿದ್ಯುತ್ ನಿಲುಗಡೆಗೊಳ್ಳಲಿದೆ ಎಂದು ಮೆಸ್ಕಾಂ ಪ್ರಕಟಣೆ ತಿಳಿಸಿದೆ.

ಜೂಜು ರಹಿತ ಕೋಳಿ ಅಂಕಕ್ಕೆ ಅವಕಾಶ ನೀಡಿ: ಸಚಿವರಿಗೆ ಪ್ರಭು ಮನವಿ

ಬಂಟ್ವಾಳ: ತುಳುನಾಡಿನ ದ.ಕ.ಮತ್ತು ಉಡುಪಿಜಿಲ್ಲೆಯಲ್ಲಿ ಧಾರ್ಮಿಕತೆಯೊಂದಿಗೆ ವಿಶೇಷ ನಂಟು ಹೊಂದಿರುವ ಜೂಜು ರಹಿತ ಸಾಂಪ್ರದಾಯಿಕ ಕೋಳಿ ಅಂಕ ನಡೆಸಲು




ಕಾನೂನಾತ್ಮಕವಾಗಿ ಅನುಮತಿ ನೀಡುವಂತೆ ಆಗ್ರಹಿಸಿ ಬಂಟ್ವಾಳ ತಾ.ಪಂ. ಮಾಜಿ ಸದಸ್ಯ ಪ್ರಭಾಕರ ಪ್ರಭು ಅವರು ರಾಜ್ಯ ಗೃಹ ಸಚಿವ ಡಾ.ಪರಮೇಶ್ವರ್ ಅವರಿಗೆ ಲಿಖಿತ ಮನವಿ ಸಲ್ಲಿಸಿದ್ದಾರೆ.

ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿನ ಬಹುತೇಕ ದೇವಸ್ಥಾನ ಹಾಗೂ ದೈವಸ್ಥಾನಗಳಲ್ಲಿ ನಡೆಯುವ ಜಾತ್ರಾ ಮಹೋತ್ಸವಗಳು ಕೋಳಿ ಕುಂಟ ಹಾಕುವ ಮೂಲಕ ಪ್ರಾರಂಭವಾಗುವುದು ತುಳುನಾಡಿನ ಧಾರ್ಮಿಕ ರೂಢಿ. ಈ ಹಿನ್ನೆಲೆಯಲ್ಲಿ ಸಾಂಪ್ರದಾಯಿಕವಾಗಿ ಕೋಳಿ ಅಂಕ ತುಳುನಾಡ ಜಿಲ್ಲೆಯ ಭಕ್ತರ ಧಾರ್ಮಿಕ ಕಟ್ಟು ಪಾಡಗಿರುತ್ತದೆ. ಕಾನೂನುನಲ್ಲಿ ಇದಕ್ಕೆ ಅವಕಾಶ ಇಲ್ಲದಿದ್ದರೂ ಧಾರ್ಮಿಕ ನಂಬಿಕೆಯ ವಿಚಾರದಲ್ಲಿ ಯಥಾವತ್ತಾಗಿ ಇಷ್ಟರವರೆಗೂ ನಡೆದುಕೊಂಡು ಬಂದಿರುವ ಕೋಳಿ ಅಂಕಗಳಿಗೆ ಇದೀಗ ದ. ಕನ್ನಡ ಜಿಲ್ಲೆಯ ಹಿರಿಯ ಪೊಲೀಸ್ ಅಧಿಕಾರಿಗಳಿಂದ ತಡೆಯಾಗಿದ್ದು ಪರಿಣಾಮ ಕಳೆದೊಂದು ವರ್ಷದಿಂದ ಕೋಳಿ ಅಂಕಗಳು ಸ್ಥಗಿತವಾಗಿರುವುದರಿಂದ ಜಿಲ್ಲೆಯ ಧಾರ್ಮಿಕ ನಂಬಿಕೆಯುಳ್ಳ ಬಹುತೇಕ ಜನರ ಭಾವನೆಗಳಿಗೆ ಧಕ್ಕೆಯಾಗಿದೆ ಎಂದು ಅವರು ಮನವಿಯಲ್ಲಿ ತಿಳಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಜಿಲ್ಲೆಯ ಜನರ ವಿಶೇಷವಾದ ಧಾರ್ಮಿಕತೆಯ ನಂಟು ಹೊಂದಿರುವ ಕೋಳಿ ಅಂಕಗಳನ್ನು ಜೂಜುರಹಿತವಾಗಿ ನಡೆಸಲು ಕಾನೂನು ರೂಪಿಸಿಕೊಂಡು ವಿಶೇಷ ಆದೇಶ ಹೊರಡಿಸುವಂತೆ ಪ್ರಭಾಕರ ಪ್ರಭು ಅವರು ಗೃಹಸಚಿವರಲ್ಲಿ ಮನವಿ ಮೂಲಕ ಆಗ್ರಹಿಸಿದ್ದಾರೆ.

ಮೊಗ್ರು ಗ್ರಾಮದ ಅರಣ್ಯದಲ್ಲಿ ಬೆಂಕಿ

ಬೆಳ್ತಂಗಡಿ: ಮೊಗ್ರು ಗ್ರಾಮ ಬರುಂಗುಡೇಲು ಸಮೀಪ ಅರಣ್ಯದಲ್ಲಿ ಬೆಂಕಿ ಕಾಣಿಸಿಕೊಂಡಿದ್ದು, ಅದರ ಪರಿಣಾಮ ಪಕ್ಕದಲ್ಲಿರುವ ಅರಣ್ಯ ಪ್ರದೇಶಕ್ಕೂ



ಬೆಂಕಿ ಹಬ್ಬಿದ್ದು ಇದರಿಂದಾಗಿ ಇನ್ನಷ್ಟು ಅರಣ್ಯ ಪ್ರದೇಶಕ್ಕೆ ಬೆಂಕಿ ವ್ಯಾಪಿಸುವ ಸಾಧ್ಯತೆ ಇರುವುದರಿಂದ ಆತಂಕ ಸೃಷ್ಟಿಯಾಗಿದೆ. ಬೆಂಕಿಯಿಂದಾಗಿ ಅಪಾರ ನಷ್ಟ ಉಂಟಾಗಿದೆ. ಘಟನೆ ಗಮನಿಸಿದ ತಕ್ಷಣ ಅರಣ್ಯ ಇಲಾಖೆ ಹಾಗೂ ನೆರೆಯವರಿಗೆ ಸಹ ಮಾಹಿತಿ ನೀಡಿ, ಬೆಂಕಿ ನಂದಿಸುವ ಕಾರ್ಯದಲ್ಲಿ ಸಹಕರಿಸುವಂತೆ ಮನವಿ ಮಾಡಲಾಗಿದೆ. ಸ್ಥಳೀಯರು ಹಾಗೂ ಸಂಬಂಧಪಟ್ಟ ಅರಣ್ಯ ಇಲಾಖೆಯ ಅಧಿಕಾರಿಗಳ ತಂಡ ತಕ್ಷಣ ಕ್ರಮ ಕೈಗೊಂಡು ಬೆಂಕಿ ನಂದಿಸಿ ನಿಯಂತ್ರಣಕ್ಕೆ ತರಲು ಪ್ರಯತ್ನಿಸುತ್ತಿದ್ದಾರೆ.

ಉಪ್ಪಿನಂಗಡಿಯಲ್ಲಿ ನಾಗಮಂಡಲೋತ್ಸವ | ಧಾರ್ಮಿಕ ಸಭಾ ಕಾರ್ಯಕ್ರಮದಲ್ಲಿ ಒಡಿಯೂರು ಶ್ರೀ ಸಂದೇಶ

ಸತ್ ಕಾರ್ಯಕ್ಕೆ ಅಡೆತಡೆಯಿದ್ದರೂ ದೇವರ ಕೃಪೆ ಇರಲಿದೆ

ಉಪ್ಪಿನಂಗಡಿ: ಕಣ್ಣಿಗೆ ಕಾಣುವ ದೇವರೆಂದರೆ ಅದು ನಾಗ ದೇವರು. ಲೋಕ ಕಲ್ಯಾಣಾರ್ಥ ನಡೆಸುವ ನಾಗಮಂಡಲದಿಂದ ನಾಡಿಗೆ ಮಂಗಳಕರವಾಗಲಿದೆ. ಮೈ ಮನಸ್ಸು ಶುದ್ಧತೆಯಿಂದ ನಡೆಸುವ ಸತ್ ಕಾರ್ಯಕ್ಕೆ ಅದೆಷ್ಟೇ ಅಡೆತಡೆ ಬಂದರೂ ಭಗವಂತನ ಕೃಪೆ ಒದಗಲಿದೆ ಎಂದು ಒಡಿಯೂರಿನ ಶ್ರೀ ಗುರುದೇವದತ್ತ ಸಂಸ್ಥಾನಂನ ಶ್ರೀ ಗುರುದೇವಾನಂದ ಸ್ವಾಮೀಜಿ ತಿಳಿಸಿದರು.

ಅವರು ಭಾನುವಾರ ರಾತ್ರಿ ಉಪ್ಪಿನಂಗಡಿ ಶ್ರೀ ಸಹಸ್ರಲಿಂಗೇಶ್ವರ-ಮಹಾಕಾಳಿ ದೇವಸ್ಥಾನದಲ್ಲಿ ಪುತ್ತೂರಿನ ಪುತ್ತಿಲ ಪರಿವಾರ ಸೇವಾ ಟ್ರಸ್ಟ್ ಹಾಗೂ ನಾಗಮಂಡಲೋತ್ಸವ ಸಮಿತಿ ಆಶ್ರಯದಲ್ಲಿ ಆಯೋಜಿಸಲಾದ ಚತುಃಪವಿತ್ರ ನಾಗಮಂಡ ಸೇವೆಯ ಧಾರ್ಮಿಕ ಸಭೆಯಲ್ಲಿ ಸ್ವಾಮೀಜಿ ಆಶೀರ್ವಚನ ನೀಡಿದರು.

ಶ್ರೀ ಕ್ಷೇತ್ರ ಕೇಮಾರಿನ ಈಶ ವಿಠಲದಾಸ ಸ್ವಾಮೀಜಿ ಮಾತನಾಡಿ, ನಮ್ಮ ಸಮಾಜವಿಂದು ವಿಚಿತ್ರ ದಿಕ್ಕಿನಲ್ಲಿ ಸಾಗುತ್ತಿದೆ. ಮಕ್ಕಳು ಹಾಸ್ಟೆಲ್‌ನಲ್ಲಿ ತಂದೆ-ತಾಯಿಗಳು ವೃದ್ಧಾಶ್ರಮದಲ್ಲಿ ಎನ್ನುವಂತಹ ಸ್ಥಿತಿಯಲ್ಲಿ, ಮನೆ ಯಜಮಾನ ನಾಯಿಯೊಂದಿಗೆ



ವಾಕಿಂಗ್ ಹೋಗುವ ದೃಶ್ಯಗಳನ್ನು ಕಾಣುತ್ತಿದ್ದೇವೆ. ಮೊದಲು ಒಳ್ಳೆಯವನಾಗು ಬಳಿಕ ಸಂಪಾದನೆ ಮಾಡು ಎಂದಿದ್ದ ಕಾಲವೀಗ ಸಂಪಾದನೆಯ ಮೂಲಕ ಸಮಾಜದಲ್ಲಿ ಒಳ್ಳೆಯವನಾಗಿ ಗುರುತಿಸಿಕೋ ಎನ್ನುವಷ್ಟು ಬದಲಾಗಿದೆ. ಇಂತಹ ಸೂಕ್ಷ್ಮ ಸ್ಥಿತಿಯಲ್ಲಿ ಸಂಸ್ಕಾರಯುತವಾದ ಬದುಕನ್ನು ನಾವು ಎಳೆಯ ಮಕ್ಕಳಿಗೆ ನೀಡಬೇಕಾಗಿದೆ ಎಂದರು.

ರಾಜ್ಯ ಕನ್ನಡ ಸಾಹಿತ್ಯ ಪರಿಷತ್‌ನ ಪೂರ್ವಾಧ್ಯಕ್ಷ ಡಾ. ಹರಿಕೃಷ್ಣ ಪುನರೂರು ಮಾತನಾಡಿದರು.

ಅಧ್ಯಕ್ಷತೆ ವಹಿಸಿದ್ದ ನಾಗಮಂಡಲೋತ್ಸವ ಸಮಿತಿಯ ಅಧ್ಯಕ್ಷ ಚಂದಪ್ಪ ಮೂಲ್ಯ ಮಾತನಾಡಿ, ಇಲ್ಲಿ ನಾಗಮಂಡಲ ಆಯೋಜನೆ ಮಾಡಿದಾಗ ರಾಜಕೀಯವಾಗಿ ಹಲವು ತೊಂದರೆ ಎದುರಿಸಬೇಕಾಯಿತು. ರಾಜಕಾರಣವನ್ನು ಮುಂದಿಟ್ಟುಕೊಂಡು ಧಾರ್ಮಿಕ ಕಾರ್ಯಗಳಿಗೆ ತಡೆಯಾಗಬಾರದು. ಧರ್ಮ ರಕ್ಷಣೆ ಮಾಡುವವನಾರೋ ಅವನೇ ನಿಜವಾದ ಹಿಂದೂ ಎಂಬುದನ್ನು ಪ್ರತಿಯೋರ್ವ ತೋರಿಸಿ ಕೊಡಬೇಕು ಎಂದರು.

ಭೀಮ ಗೋಲ್ಡ್ ಪ್ರೈವೆಟ್ ಲಿ. ವ್ಯವಸ್ಥಾಪಕ ರಾಘವೇಂದ್ರ ಭಟ್, ಸೂರ್ಯ ಆಸ್ಪತ್ರೆಯ ಆಡಳಿತ ನಿರ್ದೇಶಕ ಡಾ. ರಾಜೇಶ್ ಎಸ್. ಭಟ್ ಸಭೆಯನ್ನುದ್ದೇಶಿಸಿ ಮಾತನಾಡಿದರು.

ಸಂಗಮ ಕ್ಷೇತ್ರದಲ್ಲಿ ಭಕ್ತರ ಸಂಗಮ

ಬೆಳಗ್ಗೆಯಿಂದಲೇ ಉಪ್ಪಿನಂಗಡಿಯ ಸಂಗಮ ಕ್ಷೇತ್ರದಲ್ಲಿ ಆಶ್ಲೇಷ ಬಲಿ ಪೂಜೆ, ನವಗ್ರಹ ಕಲಶ, ನಾಗತಂಬಿಲ, ಪಂಚಾಮೃತ ಅಭಿಷೇಕ ಮುಂತಾದ ಧಾರ್ಮಿಕ ವಿಧಿ-ವಿಧಾನಗಳನ್ನು ಜರುಗಿತು. ರಾತ್ರಿಯಾಗುತ್ತಲೇ ಸಾಗರೋಪದಿಯಾಗಿ ಭಕ್ತರ ಸಂಖ್ಯೆ ಶ್ರೀ ಕ್ಷೇತ್ರಕ್ಕೆ ಹರಿದು ಬಂದಿದ್ದು, ವಿಶೇಷವಾದ ಹಾಗೂ ಈ ಭಾಗದಲ್ಲಿ ಪ್ರಪ್ರಥಮವಾಗಿ ನಡೆಯುವ ಚತುಃಪವಿತ್ರ ನಾಗಮಂಡಲ ಸೇವೆಯನ್ನು ನೋಡಲು ಜನರು ತಂಡೋಪತಂಡವಾಗಿ ಆಗಮಿಸುತ್ತಿದ್ದರು. ಆಗಮಿಸಿದ ಭಕ್ತರಿಗೆ ಸಮಿತಿ ವತಿಯಿಂದ ಸಂಜೆಯಿಂದ ರಾತ್ರಿವರೆಗೆ ಸೆಟ್ ದೋಸೆ, ರಾತ್ರಿ ಅನ್ನಪ್ರಸಾದವನ್ನು ಅಚ್ಚುಕಟ್ಟಾದ ವ್ಯವಸ್ಥೆಯೊಂದಿಗೆ ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ಆ್ಯಂಬುಲೆನ್ಸ್ ದಾನವಾಗಿ ನೀಡಿದ ಉದ್ಯಮಿ ಸುಜೀರ್ ಗಣಪತಿ ನಾಯಕ್ ಹಾಗೂ ಭೀಮ ಗೋಲ್ಡ್ ಸಂಸ್ಥೆಯ ಪರವಾಗಿ ಅದರ ವ್ಯವಸ್ಥಾಪಕ ರಾಘವೇಂದ್ರ ಭಟ್ ಅವರನ್ನು ಹಾಗೂ ಕ್ರೀಡಾ ಪ್ರತಿಭೆ ಅನಘಾ, ಪಾಕಶಾಸ್ತ್ರಜ್ಞ ರವಿ ಕುಂಟಿನಿ ಅವರನ್ನು ಸನ್ಮಾನಿಸಲಾಯಿತು. ಶ್ರೀಕ್ಷೇತ್ರ ಧರ್ಮಸ್ಥಳದ ಭಜನಾ ಪರಿಷತ್‌ನ ಧನ್ಯ ಕುಮಾರ್ ರೈ, ಉದ್ಯಮಿ ಗಣಪತಿ ನಾಯಕ್, ನಾಗಮಂಡಲೋತ್ಸವ ಸಮಿತಿಯ ಗೌರವಾಧ್ಯಕ್ಷ ಪ್ರತಾಪ್ ಪೆರಿಯಡ್ಕ, ಕಾರ್ಯಾಧ್ಯಕ್ಷ ಹರಿಪ್ರಸಾದ್ ಶೆಟ್ಟಿ ಬೊಳ್ಳಾವು, ಪ್ರಧಾನ ಕಾರ್ಯದರ್ಶಿ ನವೀನ್ ಕುಮಾರ್ ಕಲ್ಮಾಟೆ, ಕೋಶಾಧಿಕಾರಿ ಯತೀಶ್ ಶೆಟ್ಟಿ ಸಹ ಸಂಚಾಲಕ ಉಮೇಶ್ ಕೋಡಿಬೈಲು, ಸಹ ಸಂಚಾಲಕ ಅನಿತ್ ತೆಂಕಿಲ ಇದ್ದರು. ಪುತ್ತಿಲ ಟ್ರಸ್ಟ್‌ನ ಅಧ್ಯಕ್ಷ ಶ್ರೀರಾಮ ಭಟ್ ಪಾತಾಳ ಸ್ವಾಗತಿಸಿ, ಪ್ರಧಾನ ಕಾರ್ಯದರ್ಶಿ ಪ್ರಶಾಂತ್ ನೆಕ್ಕಿಲಾಡಿ ವಂದಿಸಿದರು. ರವಿಕುಮಾರ್ ರೈ ಕೆದಂಬಾಡಿಮಠ ನಿರ್ವಹಿಸಿದರು. ಪುತ್ತಿಲ ಪರಿವಾರ ಸೇವಾ ಟ್ರಸ್ಟ್‌ನ ಸಂಚಾಲಕ ಅರುಣ್ ಕುಮಾರ್ ಪುತ್ತಿಲ ಪ್ರಾಸ್ತಾವಿಕ ನುಡಿಗಳನ್ನಾಡಿದರು.

ಪುತ್ತೂರು ಎಲ್‌ಪಿಜಿ ಗ್ಯಾಸ್ ಸ್ಟೇಷನ್‌ಗಲ್ಲಿ ಆಟೋ ಗ್ಯಾಸ್ ದರ ದಿಢೀರ್ ಏರಿಕೆ

ಖುದ್ದು ಪರಿಶೀಲನೆಗೆ ಅಧಿಕಾರಿಗಳಿಗೆ ಶಾಸಕರ ಸೂಚನೆ

ಪುತ್ತೂರು: ಗ್ಯಾಸ್ ಇಲ್ಲದೆ ಆಟೋ ಚಾಲಕರು ಸಂಕಷ್ಟದಲ್ಲಿದ್ದು, ಗ್ಯಾಸ್ ಇರುವ ಪಂಪ್‌ಗಳಲ್ಲಿ ದರ ಹೆಚ್ಚು ಮಾಡಿ ಮಾರಾಟ ಮಾಡುತ್ತಿದ್ದಾರೆ ಎಂದು ಆರೋಪಿಸಿ ಆಟೋ ಚಾಲಕರು ಪ್ರತಿಭಟನೆ ನಡೆಸಿ ಶಾಸಕರಿಗೆ ಮನವಿ ಮಾಡಿದ್ದರು. ಈ ಹಿನ್ನೆಲೆಯಲ್ಲಿ ಶಾಸಕ ಅಶೋಕ್ ಕುಮಾರ್ ರೈ ಅವರು ಅಧಿಕಾರಿಗಳ ಜತೆ ಸಭೆ ನಡೆಸಿದರು.

ಮಿನಿ ವಿಧಾನಸೌಧದ ಸಹಾಯಕ ಆಯುಕ್ತರ ಸಭಾಂಗಣದಲ್ಲಿ ನಡೆದ ಸಭೆಯಲ್ಲಿ ಅಧಿಕಾರಿಗಳು ಹಾಗೂ ಗ್ಯಾಸ್ ವಿತರಕರು ಪಾಲ್ಗೊಂಡರು. ಸಹಾಯಕ ಆಯುಕ್ತೆ ಸ್ಟೆಲ್ಲಾ ವರ್ಗೀಸ್, ತಹಶೀಲ್ದಾರ್ ಎಸ್.ಬಿ. ಕೂಡಲಗಿ ಉಪಸ್ಥಿತರಿದ್ದರು.

ಆಟೋ ಗ್ಯಾಸ್ ದರ ಏರಿಕೆಯಿಂದ ಆಟೋ ಚಾಲಕರು ಸಂಕಷ್ಟಕ್ಕೀಡಾಗಿರುವ ಜತೆಗೆ ಆಟೋ ಗ್ಯಾಸ್ ಸ್ಟೇಷನ್‌ಗಳಲ್ಲಿ ವಿವಿಧ ರೀತಿಯ ದರ ವಸೂಲಿ ಮಾಡಲಾಗುತ್ತಿದ್ದು ಏಕರೂಪದ ದರ ನಿಗದಿ ಮಾಡುವ ಜತೆಗೆ ಆಟೋಗಳ ಬಾಡಿಗೆ ದರದ ಏರಿಕೆಗೂ ಅವಕಾಶ ನೀಡಬೇಕು ಎಂದು ಒತ್ತಾಯಿಸಿ ಆಟೋ ಚಾಲಕರು ಶಾಸಕರನ್ನು ಅವರ ಕಚೇರಿ ಬಳಿ ಭೇಟಿಯಾಗಿ ಮನವಿ ನೀಡಿದ್ದರು.

ಸಭೆಯಲ್ಲಿ ಪುತ್ತೂರು ಸಹಾಯಕ ಕಮೀಷನರ್ ಹಾಗೂ ತಹಶೀಲ್ದಾರ್ ಅವರಿಗೆ ಸೂಚನೆ ನೀಡಿರುವ ಶಾಸಕ



ಹಣ ವಸೂಲಿ

ಎಲ್.ಪಿ.ಜಿ. ಗ್ಯಾಸ್ ಸ್ಟೇಷನ್‌ಗಳಲ್ಲಿ ಆಟೋ ರಿಕ್ಷಾ ಚಾಲಕರು ಮೊದಲಿಗಿಂತ ಹೆಚ್ಚು ಹಣ ಕೊಡಬೇಕಿದೆ. ಅಲ್ಲದೇ ಸಮಯಕ್ಕೆ ಸರಿಯಾಗಿ ಸಿಗುತ್ತಿಲ್ಲ ಎಂಬ ದೂರು ಕೇಳಿ ಬಂದಿದೆ. ಈ ಬಗ್ಗೆ ಪರಿಶೀಲನೆಗೆ ಸೂಚಿಸಲಾಗಿದೆ.

● **ಅಶೋಕ್ ಕುಮಾರ್ ರೈ**

ಅಶೋಕ್ ರೈ, ಎಲ್.ಪಿ.ಜಿ. ಗ್ಯಾಸ್ ಸ್ಟೇಷನ್‌ಗಳಿಗೆ ಭೇಟಿ ನೀಡಿ ಪರಿಶೀಲನೆ ಮಾಡುವ ಜತೆಗೆ ಎಲ್ಲರನ್ನೂ ಕರೆದು ಸಭೆ ನಡೆಸಿ ನಿಗದಿತ ದರಕ್ಕಿಂತ ಹೆಚ್ಚಿನ ದರ ಪಡೆದರೆ ಕಾನೂನು ಕ್ರಮದ ಕುರಿತು ಕಟ್ಟುನಿಟ್ಟಿನ ಸೂಚನೆ ನೀಡಬೇಕು ಎಂದು ತಿಳಿಸಿದರು.

ಬಳಿಕ ಶಾಸಕರು ಪತ್ರಕರ್ತರ ಜತೆ ಮಾತನಾಡಿ, ಗ್ಯಾಸ್ ವಿಚಾರ ಕೇಂದ್ರ ಸರಕಾರದ ಅಧೀನಕ್ಕೆ ಬರುತ್ತದೆ. ಖಾಸಗಿಯವರು ಗ್ಯಾಸ್ ಖರೀದಿ ಮಾಡಿ ಅದನ್ನು ವಿತರಣೆ ಮಾಡುವ ಕಾರ್ಯ ಮಾಡುತ್ತಾರೆ. ಹೀಗಾಗಿ ದರನಿಯಂತ್ರಣದ ರಾಜ್ಯ ಸರಕಾರದ ಹಿಡಿತದಲ್ಲಿರುವುದಿಲ್ಲ. ಆದರೆ ಲೈಸನ್ಸ್ ನೀಡಿ ಕಾನೂನಾತ್ಮಕವಾಗಿ ನಡೆಸುವುದನ್ನು ಮಾತ್ರ ರಾಜ್ಯ ಸರಕಾರ ನೋಡುತ್ತದೆ. ಆಟೋ ಚಾಲಕರ ಮನವಿಗೆ ಸ್ಪಂದಿಸಿ ಎಸಿ ಹಾಗೂ ತಹಶೀಲ್ದಾರ್ ಬಳಿ ಮಾತನಾಡಿ, ದರದ ಕುರಿತು ಚರ್ಚಿಸಿ ಪರಿಹಾರ ಕಂಡುಕೊಳ್ಳಲು ಸೂಚನೆ ನೀಡಿದ್ದೇನೆ. ಪ್ರಸ್ತುತ ಅಡುಗೆ ಅನಿಲ ಕೂಡ ಸಂರ್ಪೂ ಸಿಗುತ್ತಿಲ್ಲ. ವಾಣಿಜ್ಯ ಸಿಲಿಂಡರ್ ಕೊರತೆಯಿಂದಲೂ ಎಲ್ಲರಿಗೂ ತೊಂದರೆಯಾಗಿದೆ. ಆದರೆ ಕೇಂದ್ರ ಸರಕಾರ ಎಲ್ಲಿಯೂ ಗ್ಯಾಸ್ ಕೊರತೆ ಇಲ್ಲ ಎಂಬ ಹೇಳಿಕೆ ನೀಡುತ್ತಿದೆ. ಹೀಗಾಗಿ ಸಂಬಂಧಪಟ್ಟವರು ಈ ಕುರಿತು ಪರಿಶೀಲನೆ ಮಾಡಿ ಕೊರತೆಯನ್ನು ಗಮನಿಸಬೇಕು ಎಂದು ಹೇಳಿದ್ದಾರೆ.

ಬಪ್ಪನಾಡು ರಥೋತ್ಸವ ಪೂರ್ವಭಾವಿಯಾಗಿ ವಾಸ್ತು ಪೂಜೆ, ವಾಸ್ತು ಬಲಿ

ಇಂದು ಹಗಲು ರಥೋತ್ಸವ, ಶಯನೋತ್ಸವ

ಮುಲ್ಕಿ: ಸೀಮೆಯ ಒಂಬತ್ತು ಮಾಗಣೆಯ ಬಪ್ಪನಾಡು ಶ್ರೀ ದುರ್ಗಾ ಪರಮೇಶ್ವರೀ ದೇವಸ್ಥಾನದ ಹಗಲು ಹಾಗೂ ಮಹಾ ರಥೋತ್ಸವ ಏ.7 ಹಾಗೂ 8 ರಂದು ನಡೆಯಲಿದ್ದು ಪೂರ್ವಭಾವಿಯಾಗಿ ಕ್ಷೇತ್ರದ ತಂತ್ರಿಗಳಾದ ಶಿಬರೂರು ಗೋಪಾಲಕೃಷ್ಣ ತಂತ್ರಿ ಹಾಗೂ ಅರ್ಚಕ ನರಸಿಂಹ ಭಟ್ ಹಾಗೂ ಶ್ರೀಪತಿ ಉಪಾಧ್ಯಾಯ ನೇತೃತ್ವದಲ್ಲಿ ವಾಸ್ತು ಹೋಮ ವಾಸ್ತು ಪೂಜೆ ವಾಸ್ತು ಬಲಿ, ಪ್ರಾಕಾರ ಬಲಿ ಪ್ರಸನ್ನ ಪೂಜೆ, ಪ್ರಸಾದ ವಿತರಣೆ ನಡೆಯಿತು. ಈ ಸಂದರ್ಭ ಕ್ಷೇತ್ರದ ಆನುವಂಶಿಕ ಮೊಕ್ತೇಸರ ದುಗ್ಗಣ್ಣ ಸಾವಂತ ಅರಸರು, ಶಾಸಕ ಉಮಾನಾಥ ಕೋಟ್ಯಾನ್, ಕಾರ್ಯನಿರ್ವಹಣಾಧಿಕಾರಿ ಶ್ವೇತಾ ಪಳ್ಳಿ, ಚಂದ್ರಶೇಖರ ಕಾಸಪ್ಪಯ್ಯನವರ ಮನೆ, ಅಭಿವೃದ್ಧಿ ಸಮಿತಿಯ ಸುನಿಲ್ ಆಳ್ವ, ಅತುಲ್ ಕುಡ್ವ ರಾಮಚಂದ್ರ ನಾಯಕ್, ಸಂಜೀವ ದೇವಾಡಿಗ, ಸತೀಶ್ ಭಂಡಾರಿ, ಪುರಂದರ ಶೆಟ್ಟಿಗಾರ್, ಸುಜಿತ್ ಸಾಲ್ಯಾನ್, ಮುಲ್ಕಿ ನಾಲ್ಕು ಪಟ್ನಾ ಮೊಗವೀರ ಸಭಾ ಅಧ್ಯಕ್ಷ ಚಂದ್ರಕಾಂತ ಶ್ರೀಯಾನ್, ಭಾಸ್ಕರ್ ಸಾಲ್ಯಾನ್ ಹಳೆಯಂಗಡಿ, ಸುರೇಶ್ ಗುರಿಕಾರ ಒಡೆಯರಬೆಟ್ಟು, ರಂಗನಾಥ ಶೆಟ್ಟಿ ಪುರುಷೋತ್ತಮ ಬಡಗಹಿತ್ಲು, ಚಂದ್ರಶೇಖರ ಸುವರ್ಣ, ಅಶೋಕ್ ಜನನಿ, ವಿಠಲ್ ಎನ್ ಎಂ., ಶೈಲೇಶ್ ಕುಮಾರ್, ದೇವಿ ಪ್ರಸಾದ್ ಕೆಂಪುಗುಡ್ಡೆ, ವಕೀಲ ರವೀಶ್ ಕಾಮತ್, ನಾಗೇಶ್ ಬಪ್ಪನಾಡು, ಶಿವಶಂಕರ್ ವರ್ಮ ಮತ್ತಿತರರಿದ್ದರು.



ಇಂದಿನ ವಿವಿಧ ಕಾರ್ಯಕ್ರಮ

ಶ್ರೀ ಕ್ಷೇತ್ರ ಬಪ್ಪನಾಡಿನಲ್ಲಿ ಜಾತ್ರಾ ಮಹೋತ್ಸವದ ಅಂಗವಾಗಿ ಏ.7ರಂದು ಹಗಲು ರಥೋತ್ಸವ,ಮಧ್ಯಾಹ್ನ ಪಲ್ಲಪೂಜೆ ಮಹಾ ಅನ್ನಸಂತರ್ಪಣೆ ಮಲ್ಲಿಗೆ ಪ್ರಿಯೆ ಬಪ್ಪನಾಡು ಶ್ರೀ ದೇವಿಗೆ ರಾತ್ರಿ ಶಯನೋತ್ಸವ, ಏ.8ರಂದು ಬೆಳಗ್ಗೆ ಕವಾಟೋದ್ಘಾಟನೆ, ಭಕ್ತರಿಗೆ ಮಲ್ಲಿಗೆ ಪ್ರಸಾದ ವಿತರಣೆ, ರಾತ್ರಿ ಬ್ರಹ್ಮರಥೋತ್ಸವ ನಡೆಯಲಿದೆ.

ಶ್ರೀ ದೇವರ ಉತ್ಸವ ಬಲಿ

ಜಾತ್ರೆ ಅಂಗವಾಗಿ ಪಟೇಲ್ ಶ್ರೀನಿವಾಸ ಕಾಮತರ ಮೌಲ್ಯದ ಬಲಿ ಉತ್ಸವ, ಬೊಂಬೆ ರಥೋತ್ಸವ, ಪಲ್ಲಕ್ಕಿ ಉತ್ಸವ, ಅಭಿವೃದ್ಧಿ ಸಮಿತಿಯ ಅತುಲ್ ಕುಡ್ವ ಹಾಗೂ ಶಿವಾನಂದ ಪ್ರಭು,ಸುಭಾಷ್ ಚಂದ್ರ ಪ್ರಭು, ಬಾಬುರಾಯ ಪ್ರಭು ರವರಿಂದ ಭಕ್ತರಿಗೆ ಉಚಿತ ಹಲಸಿನ ಹಣ್ಣು ಹಾಗೂ ಚರುಮುರಿ ವಿತರಣೆ ನಡೆಯಿತು. ಈ ಸಂದರ್ಭ ದೇವಸ್ಥಾನದ ತಂತ್ರಿಗಳಾದ ಶಿಬರೂರು ಗೋಪಾಲಕೃಷ್ಣ ತಂತ್ರಿ, ಅರ್ಚಕ ಶ್ರೀಪತಿ ಉಪಾಧ್ಯಾಯ, ನರಸಿಂಹ ಭಟ್, ದೇವಸ್ಥಾನದ ಆನುವಂಶಿಕ ಮೊಕ್ತೇಸರ ದುಗ್ಗಣ್ಣ ಸಾವಂತ ಅರಸರು, ಕಾರ್ಯನಿರ್ವಹಣಾಧಿಕಾರಿ ಶ್ವೇತಾ ಪಳ್ಳಿ, ಡಾ. ಹರಿಕೃಷ್ಣ ಪುನರೂರು, ಗೋಪಾಲಕೃಷ್ಣ ಭಟ್ ಹಾಗೂ ಪ್ರಸಾದ್ ಭಟ್, ಚಂದ್ರಶೇಖರ ಕಾಸಪ್ಪಯ್ಯನವರ ಮನೆ, ಮತ್ತಿತರರು ಉಪಸ್ಥಿತರಿದ್ದರು

ಧಾರ್ಮಿಕ ವಿಚಾರ ಅಧ್ಯಯನದಿಂದ ಶಿಸ್ತಿನ ಜೀವನ: ಶಿವಶ್ರೀ ಸ್ಕಂದಪ್ರಸಾದ್



ಪದ್ಯಾಣ ಶ್ರೀ ಮಹಾಲಿಂಗೇಶ್ವರ ದೇವಸ್ಥಾನಕ್ಕೆ ರಾಘವೇಶ್ವರ ಶ್ರೀಗಳ ಭೇಟಿ.

ವಿಟ್ಲ: ಯುವ ಪೀಳಿಗೆಗೆ ಧಾರ್ಮಿಕ ವಿಚಾರ ಮೈಗೂಡಿಸಿ, ದೇವರ ಭಜನೆ, ಜಪಗಳಲ್ಲಿ ಮಗ್ನರಾಗಬೇಕು. ಇದರಿಂದ ಶಿಸ್ತಿನ ಜೀವನ ನಮ್ಮದಾಗಲಿದೆ ಎಂದು ಗಾಯಕಿ ಶಿವಶ್ರೀ ಸ್ಕಂದಪ್ರಸಾದ್ ಹೇಳಿದರು.

ಪದ್ಯಾಣ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ನಡೆಯುತ್ತಿರುವ ಬ್ರಹ್ಮಕಲಶೋತ್ಸವ ಸಮಾರಂಭದ ಧಾರ್ಮಿಕ ಸಭೆಯಲ್ಲಿ ಮಾತನಾಡಿದರು

ಎಂದು ಗುರುಪುರ ವಜ್ರದೇಹಿ ಮಠದ ರಾಜಶೇಖರಾನಂದ ಸ್ವಾಮೀಜಿ ಆಶೀರ್ವಚನ ನೀಡಿ ಹಿಂದು ಸಮಾಜ ಒಟ್ಟಾಗಬೇಕಾದ ಅಗತ್ಯವಿದೆ ಎಂದರು.

ಅಧ್ಯಕ್ಷತೆಯನ್ನು ಜೀರ್ಣೋದ್ಧಾರ ಸಮಿತಿ ಗೌರವಾಧ್ಯಕ್ಷ ರಘುರಾಮ ಕಾರಂತ ವಹಿಸಿದ್ದರು. ಹಟ್ಟಿಯಂಗಡಿ ಕ್ಷೇತ್ರದ ಪ್ರಧಾನ ಅರ್ಚಕರು ಬಾಲಚಂದ್ರ ಭಟ್ ಉದ್ಘಾಟಿಸಿ ಮಾತನಾಡಿ, ದೇವಳದ ಕಾರ್ಯಕ್ರಮಗಳಿಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಬಿಜೆಪಿ ಜಿಲ್ಲಾಧ್ಯಕ್ಷ ಸತೀಶ್ ಕುಂಪಲ, ಯುವ ಮೋರ್ಚಾ ಜಿಲ್ಲಾಧ್ಯಕ್ಷ ನಂದನ್ ಮಲ್ಯ, ಬಿಜೆಪಿ ಜಿಲ್ಲಾ ಯುವ ಮೋರ್ಚಾ ಉಪಾಧ್ಯಕ್ಷ ಅವಿನಾಶ್ ಸುವರ್ಣ, ಉದ್ಯಮಿ ರಘುನಾಥ ಸೋಮಯಾಜಿ, ಪುತ್ತೂರಿನ ಹಿಂದು ಸಂಘಟನೆ ಮುಖಂಡ ಮುರಳೀಕೃಷ್ಣ ಹಸಂತಡ್ಕ ಗೋಳ್ತಮಜಲು ಗುರುಶಿವ ಕ್ಷೇತ್ರದ ಮುಖ್ಯಸ್ಥರಾದ ಡಾ. ರಾಮಕೃಷ್ಣ ಶೆಟ್ಟಿ ಉಮಾಮಹೇಶ್ವರ ಕ್ಷೇತ್ರ ಕಾಟಿಕಾಡ್ ಆಡಳಿತ ಮೊಕ್ತೇಸರ ಎ.ಜೆ. ಶೇಖರ್, ಯಕ್ಷಗಾನ ಹಿರಿಯ ಹಿಮ್ಮೇಳ ಕಲಾವಿದ ಪದ್ಯಾಣ ಶಂಕರನಾರಾಯಣ ಭಟ್, ಬ್ರಹ್ಮಕಲಶೋತ್ಸವ ಸಮಿತಿ ಸಂಘಟನಾ ಕಾರ್ಯದರ್ಶಿ ಅನೆಯಾಲ ಗುತ್ತು ಶಿವಪ್ರಸಾದ್ ಶೆಟ್ಟಿ ಸಂಚಾಲಕ ಗೋಪಾಲಕೃಷ್ಣ ಭಟ್ ಸೇರಾಜೆ, ಉಷಾ ಸತ್ಯನಾರಾಯಣ ಭಟ್ ಸೇರಾಜೆ ಇದ್ದರು. ಬ್ರಹ್ಮಕಲಶೋತ್ಸವ ಸಮಿತಿ ಕಾರ್ಯಾಧ್ಯಕ್ಷ ಶ್ಯಾಮಸುದರ್ಶನ ಹೊಸಮೂಲೆ ಸ್ವಾಗತಿಸಿದರು. ವಿಜೆ ವಿಖ್ಯಾತ್ ಮತ್ತು ಶರತ್ ಭಟ್ ಸೇರಾಜೆ ನಿರ್ವಹಿಸಿದರು.

ಏ.8-11: ಉರ್ವ ಶ್ರೀರಾಮ ಭಜನಾ ಮಂದಿರದಲ್ಲಿ 'ಏಕಾಹ ಭಜನೋತ್ಸವ'

ಮಂಗಳೂರು: ಉರ್ವ ಬೋಳೂರು ಶ್ರೀರಾಮ ಭಜನಾ ಮಂದಿರ, ಶ್ರೀ ಕೊರಗಜ್ಜ ಕ್ಷೇತ್ರದಲ್ಲಿ ಏ.8ರಿಂದ ಏ.11ರವರೆಗೆ ಏಕಾಹ ಭಜನೋತ್ಸವ ಹಾಗೂ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.



ಏ.8ರಂದು ಶ್ರೀ ವೆಂಕಟರಮಣ ಶನಿವಾರ ದೇವಸ್ಥಾನ ಮಠದಕಣಿ ಇಲ್ಲಿನ ವೇ.ಮೂ. ಕೆ. ಪುರುಷೋತ್ತಮ ಭಟ್ ಅವರ ಪೌರೋಹಿತ್ಯದಲ್ಲಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿದ್ದು, ಬೆಳಗ್ಗೆ 8ಕ್ಕೆ ದೇವತಾ ಪ್ರಾರ್ಥನೆ, ತೋರಣ ಮುಹೂರ್ತ, ಪುಣ್ಯಾಹ, ಗಣಯಾಗ, ಕೊರಗಜ್ಜ ಶ್ರೀ ಕ್ಷೇತ್ರದಲ್ಲಿ ಪರ್ವ ಸೇವೆ, ಪ್ರಾರ್ಥನೆ ನಡೆಯಲಿದೆ. ಬೆಳಗ್ಗೆ 11ಕ್ಕೆ ನವಕ ಕಲಶ ಸ್ಥಾಪನೆ, ರಾಮ ತಾರಕ ಮಂತ್ರ ಹವನ, ಪಂಚಾಮೃತ ಫಲಾಭಿಷೇಕ, ಕಲಶಾಭಿಷೇಕ, ಅಲಂಕಾರ ಪೂಜೆ ನಡೆಯಲಿದೆ.

ಏ.9ರಂದು ಚಾಲನೆ

ಏ.9ರಂದು ಬೆಳಗ್ಗೆ 6.23ರಿಂದ 30ನೇ ಏಕಾಹ ಭಜನೋತ್ಸವ ನಡೆಯಲಿದ್ದು ವಾಮಂಜೂರು ಶ್ರೀ ದುರ್ಗಾಪರಮೇಶ್ವರಿ ಭಜನಾ ಮಂದಿರದ ನಾಗೇಶ್ ವಾಮಂಜೂರು ಇವರು ಭಜನೋತ್ಸವಕ್ಕೆ ಚಾಲನೆ ನೀಡಲಿದ್ದಾರೆ. ಪಡು ಪಣಂಬೂರು ಸುವರ್ಣ ಮೂಲಸ್ಥಾನದ ಸುಚೇಂದ್ರ ವಿ. ಅಮೀನ್ ದಿವ್ಯ ಉಪಸ್ಥಿತಿ ವಹಿಸಲಿದ್ದಾರೆ. ಅಂದು ಮಧ್ಯಾಹ್ನ 12ಕ್ಕೆ ಪಲ್ಲಪೂಜೆ ನಡೆಯಲಿದೆ. ಬಳಿಕ 1ಕ್ಕೆ ಸಾರ್ವಜನಿಕ ಅನ್ನಸಂತರ್ಪಣೆ ನಡೆಯಲಿದೆ.

ಏ.10ರಂದು ಪ್ರಾತಃಕಾಲ 6.22ಕ್ಕೆ ಭಜನೋತ್ಸವದ ಮಹಾ ಮಂಗಳಾರತಿ, ಭಜನಾ ಮಂಗಳ ನಡೆಯಲಿದ್ದು, ಅಖಂಡ ದೀಪ ವಿಸರ್ಜನೆ, ಪ್ರಸಾದ ವಿತರಣೆ ನಡೆಯಲಿದೆ. ಸಂಜೆ 4ಕ್ಕೆ ನೃತ್ಯ ಬಲಿ ಸೇವೆ, ಬಳಿಕ ಶ್ರೀ ದೇವರ ಪೇಟೆ ಸವಾರಿ, ಕಟ್ಟೆಪೂಜೆ ನಡೆಯಲಿದೆ. ಏ.11ರಂದು ಸಂಪ್ರೋಕ್ಷಣೆ, ಪಂಚಗವ್ಯ, ಪುಣ್ಯಾಹ, ಸಾಮೂಹಿಕ ವಿಷ್ಣು ಸಹಸ್ರನಾಮ ಪಠಣ, ತುಳಸಿ ಅರ್ಚನೆ ನಡೆಯಲಿದೆ. ಸಂಜೆ 4ಕ್ಕೆ ರಂಗಪೂಜೆ, ಪ್ರಸಾದ ವಿತರಣೆ ನಡೆಯಲಿದೆ. ಸಂಜೆ 6ರಿಂದ ಪಾವಂಜೆ ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ಸ್ವಾಮಿ ಕೃಪಾಪೋಷಿತ ಯಕ್ಷಗಾನ ಮಂಡಳಿಯಿಂದ ದೇವಿ ಮಹಾತ್ಮೆ ಯಕ್ಷಗಾನ ಬಯಲಾಟ ಪ್ರದರ್ಶನಗೊಳ್ಳಲಿದೆ. ಅಲ್ಲದೇ ನೀರುಮಾರ್ಗ ವಿಘ್ನೇಶ್ವರ ನೃತ್ಯ ಭಜನಾ ಮಂಡಳಿ ಇವರಿಂದ ಕುಣಿತ ಭಜನೆ ನಡೆಯಲಿದೆ ಎಂದು ಶ್ರೀರಾಮ ಭಜನಾ ಮಂದಿರದ ಪ್ರಮುಖರು ತಿಳಿಸಿದ್ದಾರೆ.

'ಪೈನ್ ಕಿಲ್ಲರ್ ತ್ಯಜಿಸಿ, ಕಿಡ್ನಿ ರಕ್ಷಿಸಿ ಜೀವ ಉಳಿಸಿ' ಜಾಗೃತಿ ಜಾಥಾ



ಪುತ್ತೂರು: ಯುವ ಜನತೆಗೆ ಅರಿವು ಮೂಡಿಸುವ ನಿಟ್ಟಿನಲ್ಲಿ 'ಪೈನ್ ಕಿಲ್ಲರ್ ತ್ಯಜಿಸಿ... ಕಿಡ್ನಿ ರಕ್ಷಿಸಿ ಜೀವ ಉಳಿಸಿ' ಜಾಗೃತಿ ಜಾಥಾ ಹಮ್ಮಿಕೊಳ್ಳಲಾಗಿದೆ.

ರಾಜ್ಯದಲ್ಲಿಯೇ ಮೊದಲ ಬಾರಿಗೆ ಇಂತಹ ಜಾಥಾವೊಂದನ್ನು ಪುತ್ತೂರಿನಲ್ಲಿ ಆರಂಭಿಸಲಾಗಿದೆ. ಈ ಹೋರಾಟ ನಿರಂತರವಾಗಿ ಸಾಗಲಿದ್ದು ಪ್ರತೀ 6 ತಿಂಗಳಿಗೊಮ್ಮೆ ಜಾಗೃತಿ ಕ್ಯಾಂಪ್ ಗಳನ್ನು ನಡೆಸಲಾಗುವುದು ಎಂದು ಶಾಸಕ ಅಶೋಕ್ ರೈ ಹೇಳಿದರು.

ಸೋಮವಾರ ಪುತ್ತೂರಿನ ದರ್ಬೆ ವೃತ್ತದ ಬಳಿಯಲ್ಲಿ ಜಾಗೃತಿ ಜಾಥಾಕ್ಕೆ ಚಾಲನೆ ನೀಡಿದ ಅವರು, ಪುತ್ತೂರಿನಲ್ಲಿ 180 ಮಂದಿ ಕಿಡ್ನಿ ವೈಫಲ್ಯ ಉಂಟಾಗಿ ಡಯಾಲಿಸ್‌ಗಾಗಿ ಸರಕಾರಿ ಆಸ್ಪತ್ರೆಗೆ ಬರುತ್ತಿದ್ದರು. ಆದರೆ, ಈಗ ಈ ಸಂಖ್ಯೆ 208ಕ್ಕೆ ತಲುಪಿದೆ. ಬಹುತೇಕ ಈ ಕಿಡ್ನಿ ವೈಫಲ್ಯತೆಗೆ ಪೈನ್ ಕಿಲ್ಲರ್ ಕಾರಣವಾಗುತ್ತಿದೆ. ಈ ಪೈನ್ ಕಿಲ್ಲರ್ ಅನಾಯಾಸವಾಗಿ ಜನತೆಗೆ ದೊರಕುತ್ತಿದ್ದು ಜನತೆಯ ಆರೋಗ್ಯವನ್ನು ನಾಶ ಮಾಡುತ್ತಿದೆ. ವೈದ್ಯರ ಅನುಮತಿ ರಹಿತವಾಗಿ ಯಾರೂ ಇದನ್ನು ಬಳಕೆ ಮಾಡಬಾರದು. ಎಂದರು.

ಪುತ್ತೂರಿನ ದರ್ಬೆ ವೃತ್ತದಿಂದ ಆರಂಭಗೊಂಡ ಈ ಜಾಗೃತಿ ಜಾಥಾ ಪುತ್ತೂರಿನ ಮುಖ್ಯ ರಸ್ತೆಯಲ್ಲಿ ಬೊಳುವಾರು ತನಕ ನಡೆಯಿತು. ತಾಲೂಕು ಆರೋಗ್ಯಾಧಿಕಾರಿ ಡಾ. ದೀಪಕ್ ರೈ, ತಾಲೂಕು ಸರ್ಕಾರಿ ಆಸ್ಪತ್ರೆಯ ಆಡಳಿತ ವೈದ್ಯಾಧಿಕಾರಿ ಡಾ. ಯದುರಾಜ್, ಡಾ. ಹೇಮಲತಾ, ಡಾ. ದೀಪಿಕಾ, ಡಾ. ರಾಧಿಕಾ, ಉಮಾನಾಥ ಶೆಟ್ಟಿ ಪೆರ್ನೆ, ಮಹಮ್ಮದ್ ಬಡಗನ್ನೂರು, ಜಯಪ್ರಕಾಶ್ ಬದಿನಾರು ಮತ್ತಿತರರಿದ್ದರು. ಪ್ಯಾರಾ ಮೆಡಿಕಲ್ ಕಾಲೇಜಿನ ವಿದ್ಯಾರ್ಥಿಗಳು ಜಾಥಾದಲ್ಲಿ ಪಾಲ್ಗೊಂಡರು.

ವಿವೇಕಾನಂದ ಪದವಿ ಪೂರ್ವ ಕಾಲೇಜಿನಲ್ಲಿ ರಾಜ್ಯಮಟ್ಟದ ವ್ಯಕ್ತಿತ್ವ ವಿಕಸನ ಶಿಬಿರ 'ಯುರೇಕಾ' ಉದ್ಘಾಟನಾ ಸಮಾರಂಭ

ಗುರಿ, ಶ್ರಮ, ಛಲ ಭವಿಷ್ಯ ನಿರ್ಮಾಣದ ಮೂರು ಆಧಾರಗಳು: ಭರತ್ ಪೈ

ಪುತ್ತೂರು: ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ ಹಂತವು ವಿದ್ಯಾರ್ಥಿ ಜೀವನದ ಅತ್ಯಂತ ಸಂಕೀರ್ಣ ಘಟ್ಟವಾಗಿದ್ದು, ಈ ಹಂತದಲ್ಲಿ ಸ್ಪಷ್ಟತೆ ಹಾಗೂ ನಿಖರತೆ ಅತ್ಯಗತ್ಯವಾಗಿರುತ್ತದೆ. ಆದಕ್ಕಾಗಿ ಸ್ಪಷ್ಟ ಗುರಿ, ಕಠಿಣ ಪರಿಶ್ರಮ ಹಾಗೂ ಸಾಧಿಸುವ ಛಲ ಈ ಮೂರು ಅಂಶಗಳನ್ನು ಸಮನ್ವಯವಾಗಿ ಬೆಳೆಸಿಕೊಂಡಾಗ ವಿದ್ಯಾರ್ಥಿ ತನ್ನ ಕನಸುಗಳನ್ನು ನಿಜವಾಗಿಸಿಕೊಳ್ಳಲು ಮತ್ತು ಆತ್ಮವಿಶ್ವಾಸದಿಂದ ಜೀವನದಲ್ಲಿ ಯಶಸ್ಸು ಗಳಿಸಲು ಸಾಧ್ಯ ಎಂದು ಪುತ್ತೂರು ನೆಹರೂ ನಗರದ ವಿವೇಕಾನಂದ ಕೇಂದ್ರೀಯ ವಿದ್ಯಾಲಯದ ಆಡಳಿತ ಮಂಡಳಿ ಸಂಚಾಲಕ ಭರತ್ ಪೈ ಹೇಳಿದರು.

ನಗರದ ವಿವೇಕಾನಂದ ಪದವಿ ಪೂರ್ವ ಕಾಲೇಜಿನಲ್ಲಿ ಏ.6ರಿಂದ ಏ.11ರವರೆಗೆ ನಡೆಯಲಿರುವ ರಾಜ್ಯ ಮಟ್ಟದ ವ್ಯಕ್ತಿತ್ವ ವಿಕಸನ ಶಿಬಿರ 'ಯುರೇಕಾ-2026'



ಕಾರ್ಯಕ್ರಮವನ್ನು ಅವರು ಉದ್ಘಾಟಿಸಿದರು.

ಕಲಿಕೆಯು ಪುಸ್ತಕಗಳ ಪಾಠಗಳಲ್ಲಿ ಮಾತ್ರ ಸೀಮಿತವಾಗದೆ, ವ್ಯಕ್ತಿತ್ವವನ್ನು ರೂಪಿಸುವ, ಮೌಲ್ಯಗಳನ್ನು ಬೆಳೆಸುವ ಮತ್ತು ಸೃಜನಾತ್ಮಕ ಚಿಂತನೆಗೆ ಪ್ರೇರೇಪಿಸುವ ಶಕ್ತಿಯಾಗಿದೆ. ನಿಜವಾದ ಶಿಕ್ಷಣವು ನಮ್ಮೊಳಗಿನ ಸಾಮರ್ಥ್ಯವನ್ನು ಹೊರತಂದು, ಸಮಾಜದೊಂದಿಗೆ ಸಮನ್ವಯವಾಗಿ ಬದುಕುವ ದಾರಿಗೆ ದೀಪವಾಗುತ್ತದೆ ಎಂದು ಅವರು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ವಿವೇಕಾನಂದ ಪದವಿ ಪೂರ್ವ ಕಾಲೇಜಿನ ಆಡಳಿತ ಮಂಡಳಿ ನಿರ್ದೇಶಕ ಡಾ. ಕೆ.ಎನ್. ಸುಬ್ರಹ್ಮಣ್ಯ, ವಿವೇಕಾನಂದ ಪದವಿ ಪೂರ್ವ ಕಾಲೇಜ್ ಒಬ್ಬ ವಿದ್ಯಾರ್ಥಿ ಪಡೆದುಕೊಳ್ಳಬೇಕಾದ ಪರಿಪೂರ್ಣ ಶಿಕ್ಷಣವನ್ನು ಕಳೆದ ಹಲವಾರು ವರ್ಷಗಳಿಂದ ನೀಡುತ್ತಾ ಬಂದಿದೆ.

ವ್ಯಕ್ತಿತ್ವ ವಿಕಸನ, ಜೀವನ ಕೌಶಲ್ಯ, ತಂತ್ರಜ್ಞಾನ, ಕಲೆ ಮುಂತಾದ ಕ್ಷೇತ್ರಗಳಲ್ಲಿ ಅತ್ಯುತ್ತಮ ಸಾಧನೆ ಮಾಡಿದ ಸಂಪನ್ಮೂಲ ವ್ಯಕ್ತಿಗಳು ಮುಂದಿನ ಆರು ದಿನಗಳಲ್ಲಿ ಹಲವು ಅವಧಿಗಳನ್ನು ನಡೆಸಿಕೊಡಲಿದ್ದಾರೆ. ವಿದ್ಯಾರ್ಥಿಗಳು ದೊಡ್ಡ ಸಂಖ್ಯೆಯಲ್ಲಿ ಇದರಲ್ಲಿ ಭಾಗಿಗಳಾಗಿ ಸಾಕಷ್ಟು ವಿಚಾರಗಳನ್ನು ತಿಳಿದುಕೊಂಡು, ಮುಂದಿನ ಜೀವನಕ್ಕೆ ಅಡಿಪಾಯ ಹಾಕಿಕೊಳ್ಳಬೇಕು.

● **ಡಾ. ಕೆ.ಎನ್. ಸುಬ್ರಹ್ಮಣ್ಯ**

ಸಂಸ್ಥೆ ಒದಗಿಸುತ್ತಿರುವ ಈ ಅವಕಾಶಗಳನ್ನು ವಿದ್ಯಾರ್ಥಿಗಳು ಪಡೆದುಕೊಂಡು ತಮ್ಮ ಭವಿಷ್ಯವನ್ನು ಭದ್ರಪಡಿಸಿಕೊಳ್ಳಬೇಕು ಎಂದರು.

ಮುಖ್ಯ ಅತಿಥಿಗಳಾಗಿದ್ದ ಬೆಂಗಳೂರಿನ ಶೈಕ್ಷಣಿಕ ಸಲಹೆಗಾರ ರಾಜೇಶ್ ಭಟ್ ಶುಭ ಕೋರಿದರು. ದ್ವಿತೀಯ ಪಿಯುಸಿ ವಿದ್ಯಾರ್ಥಿನಿ ಹಂಸಿನಿ ಪ್ರಾರ್ಥಿಸಿ ದರು. ವಿವೇಕಾನಂದ ಪಿಯು ಕಾಲೇಜಿನ ಪ್ರಾಂಶುಪಾಲ ದೇವಿಚರಣ್ ರೈ ಎಂ. ಸ್ವಾಗತಿಸಿ, ಭೌತಶಾಸ್ತ್ರ ವಿಭಾಗದ ಉಪನ್ಯಾಸಕಿ ಸಂಪ್ರೀತಾ ವಂದಿಸಿದರು. ರಸಾಯನಶಾಸ್ತ್ರ ವಿಭಾಗದ ಉಪನ್ಯಾಸಕಿ ದಯಾಮಣಿ ಟಿ.ಕೆ. ನಿರ್ವಹಿಸಿದರು.

ಈ ಶಿಬಿರದಲ್ಲಿ ವಿವಿಧ ಕ್ಷೇತ್ರಗಳ ನುರಿತ ಸಂಪನ್ಮೂಲ ವ್ಯಕ್ತಿಗಳು ವಿದ್ಯಾರ್ಥಿಗಳಿಗಾಗಿ ವ್ಯತ್ಯಸ್ತ ವಿಷಯಗಳ ಮೇಲೆ ಹಲವು ಅವಧಿಗಳನ್ನು ನಡೆಸಿ ಕೊಡಲಿದ್ದಾರೆ.

ಇಂದಿನ ಹವಾಮಾನ

ದಕ್ಷಿಣ ಕನ್ನಡ 33⁰ 23⁰ | ಉಡುಪಿ 31⁰ 24⁰

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ

ಸಂಗಮ

ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು



ಪುಟ 5

1146 ಮತಗಟ್ಟೆಗಳಲ್ಲೂ ಮೂಲಭೂತ ಸೌಲಭ್ಯ ಅಳವಡಿಕೆ



ಪುಟ 7

ಲೋಕಾರ್ಪಣೆಗೆ ಸಿದ್ಧಗೊಂಡಿದೆ ರಾಮೇರುಗುತ್ತು ಸೇತುವೆ

ಸುದ್ದಿ ಅಪ್ಡೇಟ್‌ಗಾಗಿ Google lensನಲ್ಲಿ ಈ QR ಕೋಡ್ ಸ್ಕ್ಯಾನ್ ಮಾಡಿ, whatsApp ಗ್ರೂಪ್ ಇಂದೇ ಸೇರಿ!

ಮಂಗಳವಾರ 07, ಏಪ್ರಿಲ್ 2026 | e-mail diganthamlr@gmail.com | Website www.hosadigantha.com | e-paper epaper.hosadigantha.com | MANGALURU

1,42,226 ಲಕ್ಷ ಕೃಷಿಕರಿಗೆ ಸಾಲ ವಿತರಣೆ | ಕೊಡಗು ಡಿಸಿಸಿ ಬ್ಯಾಂಕಿನ ಅಧ್ಯಕ್ಷ ಕೊಡಂದೇರ ಗಣಪತಿ ಮಾಹಿತಿ

ಕೊಡಗು ಸಹಕಾರ ಕೇಂದ್ರ ಬ್ಯಾಂಕ್‌ಗೆ 30 ಕೋ.ರೂ ಲಾಭ

ಮಡಿಕೇರಿ: ಕೊಡಗು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ 30.46 ಕೋಟಿ ರೂ. ಲಾಭಾಂಶ ಹೊಂದಿದ್ದು 23.14 ಕೋಟಿ ರೂ. ನಿವ್ವಳ ಲಾಭ ಹೊಂದಿದೆ ಎಂದು ಕೊಡಗು ಡಿಸಿಸಿ ಬ್ಯಾಂಕಿನ ಅಧ್ಯಕ್ಷ ಕೊಡಂದೇರ ಪಿ.ಗಣಪತಿ ಅವರು ತಿಳಿಸಿದ್ದಾರೆ.

ನಗರದ ಡಿಸಿಸಿ ಬ್ಯಾಂಕ್ ಸಭಾಂಗಣದಲ್ಲಿ ಬ್ಯಾಂಕಿನ 17 ವರ್ಷದ ಪ್ರಗತಿಯ ಅಂಕಿ ಅಂಶ ವಿವರಿಸಿ ಮಾತನಾಡಿದ ಅವರು, ಜಿಲ್ಲೆಯಲ್ಲಿ ಮಾರ್ಚ್ ಅಂತ್ಯಕ್ಕೆ 255 ಸದಸ್ಯರನ್ನು ಹೊಂದಿದ್ದು 5 ಲಕ್ಷ ರೂ. ವರೆಗೆ ಶೂನ್ಯ ಬಡ್ಡಿದರದಲ್ಲಿ ಕೃಷಿಕರಿಗೆ ಸಾಲ ಸೌಲಭ್ಯ ಕಲ್ಪಿಸುತ್ತಿದೆ ಎಂದು ಮಾಹಿತಿ ನೀಡಿದರು.

ಜಿಲ್ಲೆಯಲ್ಲಿ 37 ಕೋಟಿಯಷ್ಟು ಷೇರು ಬಂಡವಾಳ ಹೊಂದಿದ್ದು 13,293 ಲಕ್ಷ ರೂ. ನಿಧಿ ಹೊಂದಿದೆ. ಹಾಗೆಯೇ 15,608 ಲಕ್ಷ ಸ್ವಂತ ಬಂಡವಾಳ ಹೊಂದಿದ್ದು 2,04,311 ರೂ. ಠೇವಣಿ ಹೊಂದಿದೆ ಎಂದು ವಿವರಿಸಿದರು. ನಬಾರ್ಡ್‌ನಿಂದ 37,492 ಲಕ್ಷ ರೂ. ಸಾಲವನ್ನು ಪಡೆಯಲಾಗಿದೆ. 73,370 ಲಕ್ಷ ಬಂಡವಾಳ ಹೂಡಿಕೆ ಇದೆ ಎಂದು ಬಾಂಡ್ ಗಣಪತಿ ಅವರು ವಿವರಿಸಿದರು.



ಕೊಡಗು ಜಿಲ್ಲಾ ಸಹಕಾರ ಬ್ಯಾಂಕ್ 1,42,226 ಲಕ್ಷ ಕೃಷಿಕರಿಗೆ ಸಾಲ ನೀಡಿದೆ. ರೈತ ಸದಸ್ಯರಿಗೆ ಕೃಷಿ ಸಾಲ, ಕೃಷಿಯೇತರ ಸಾಲ ಹೀಗೆ ವಿವಿಧ ಕಾರ್ಯಕ್ರಮ ರೂಪಿಸಲಾಗಿದೆ ಎಂದರು.

ಶೇ. 99 ಸಾಲ ವಸೂಲಾತಿ

ಶೇಕಡಾವಾರು ಸಾಲ ವಸೂಲಾತಿ ಗಮನಿಸಿದಾಗ ಶೇ. 99 ಸಾಲ ವಸೂಲಾತಿ ಆಗುತ್ತಿರುವುದು ಶ್ಲಾಘನೀಯ ಕಾರ್ಯವಾಗಿದೆ ಎಂದು ಇದೇ ಸಂದರ್ಭದಲ್ಲಿ ಮಾಹಿತಿ ನೀಡಿದರು. ಸ್ವಸಹಾಯ ಗುಂಪುಗಳ ರಚನೆ, ಸ್ವಸಹಾಯ ಗುಂಪುಗಳ ಸಾಲ ಹೊರ ಬಾಕಿ, ಮತ್ತಿತರ ಕಾರ್ಯಗಳನ್ನು ಡಿಸಿಸಿ ಬ್ಯಾಂಕ್ ಮೂಲಕ ನಡೆಸಲಾಗಿದೆ. ಶಾಸನ ಬದ್ಧ ಆಡಿಟ್ ವರ್ಗೀಕರಣದಲ್ಲಿ ಡಿಸಿಸಿ ಬ್ಯಾಂಕ್ 'ಎ' ಗ್ರೇಡ್ ಹೊಂದಿದ್ದು 96 ರಷ್ಟು ಅಂಕ ಪಡೆದಿದೆ ಎಂದು ಬಾಂಡ್ ಗಣಪತಿ ಅವರು ಹೇಳಿದರು. ಕೊಡಗು ಡಿಸಿಸಿ ಬ್ಯಾಂಕ್ ಶತಮಾನೋತ್ಸವ ಆಚರಿಸಿದ್ದು ತನ್ನದೇ ಆದ ಇತಿಹಾಸವನ್ನು ಹೊಂದಿದೆ. ಕೊಡಗು ಡಿಸಿಸಿ ಬ್ಯಾಂಕ್ ಆಡಳಿತ ಮಂಡಳಿ ನಿರ್ದೇಶಕರು, ವೃತ್ತಿಪರ ನಿರ್ದೇಶಕರು ಸೇರಿದಂತೆ ಕಾಲ ಕಾಲಕ್ಕೆ ಸಮಿತಿ, ಉಪ ಸಮಿತಿಗಳ ಸಭೆಯನ್ನು ನಡೆಸಿ, ಸಲಹೆ, ಮಾರ್ಗದರ್ಶನ ಪಡೆದು ಕೃಷಿಕರಿಗಾಗಿ ಕೆಲಸ ಮಾಡುತ್ತಿದೆ ಎಂದರು.

> ಶತಮಾನೋತ್ಸವ ಪ್ರಯುಕ್ತ ಹಲವು ಅಭಿವೃದ್ಧಿ ಕಾರ್ಯ ಕೈಗೊಳ್ಳಲಾಗಿದ್ದು ಡಿಸಿಸಿ ಬ್ಯಾಂಕ್ ಕಟ್ಟಡ ನಿರ್ಮಿಸಲಾಗಿದೆ. ಹಾಗೆಯೇ ಸರ್ಕಾರದ ನಿಯಮಾನುಸಾರ ನೇಮಕಾತಿ ಸಹ ಮಾಡಿಕೊಳ್ಳಲಾಗಿದೆ. ಕೃಷಿಕರಿಗಾಗಿ ಸಾಲ ನೀಡುವುದು, ಠೇವಣಿ ಇಟ್ಟವರಿಗೆ ಸಾಲ ಬಿಡುಗಡೆ ಮಾಡುವುದು. ರೈತರ ಹಿತಾಸಕ್ತಿ ಕಾಪಾಡಲು ಎಲ್ಲಾ ರೀತಿಯ ಕ್ರಮ ಕೈಗೊಳ್ಳಲಾಗಿದೆ.
> ● ಕೊಡಂದೇರ ಪಿ.ಗಣಪತಿ

ಆರ್ಥಿಕ ವರ್ಷದಲ್ಲಿ ಆಂತರಿಕ ಲೆಕ್ಕಪರಿಶೋಧನೆ ಮಾಡಿಸಲಾಗಿದೆ. ಪ್ರತೀ ಮಾಸಿಕ ಸಭೆಯನ್ನು ಸಹ ನಡೆಸಲಾಗಿದೆ ಎಂದು ವಿವರಿಸಿದರು. ಸರ್ಕಾರದ ಮಾರ್ಗ ಸೂಚಿಯಂತೆ ಡಿಸಿಸಿ ಬ್ಯಾಂಕ್ ಕೆಲಸ ಮಾಡುತ್ತಿದ್ದು ಸಹಕಾರ ಇಲಾಖೆ ಯ ವ್ಯಾಪ್ತಿಯಲ್ಲಿ ಡಿಸಿಸಿ ಬ್ಯಾಂಕ್ ಕಾರ್ಯ ನಿರ್ವಹಿಸುತ್ತಿದೆ ಎಂದರು.

ನಿಯಮ ಹಾಗೂ ಕಾನೂನುಗಳನ್ನು ಮೀರಿ ಡಿಸಿಸಿ ಬ್ಯಾಂಕ್ ಕೆಲಸ ಮಾಡಲು ಸಾಧ್ಯವಿಲ್ಲ, ಆ ನಿಟ್ಟಿನಲ್ಲಿ ಆಡಳಿತ ಮಂಡಳಿ ನಿರ್ದೇಶಕರು ಸೇರಿದಂತೆ ಎಲ್ಲರ ಸಹಕಾರದಿಂದ ಯಾವುದೇ ಲೋಪವಿಲ್ಲದೆ ಡಿಸಿಸಿ ಬ್ಯಾಂಕ್ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ಹೇಳಿದರು.

ಒಟ್ಟು ಗ್ರಾಹಕರಿಗೆ ಕೃಷಿ ಸಂಬಂಧಿಸಿದ ಸಾಲದ ಜೊತೆಯಲ್ಲಿ ವಿವಿಧ ಚಟುವಟಿಕೆಗಳಿಗೆ ಒಟ್ಟು 60 ಲಕ್ಷ ರೂ.ವರೆಗೂ ಸಾಲ ವಿತರಿಸಲಾಗುತ್ತದೆ ಎಂದರು.

ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಹರೀಶ್ ಪೂವಯ್ಯ, ನಿರ್ದೇಶಕರಾದ ರಘು ನಾಣಯ್ಯ, ಸತೀಶ್ ಕುಮಾರ್, ಅರುಣ್ ಭೀಮಯ್ಯ, ನಾಪಂಡ ಎಂ.ಮುತ್ತಪ್ಪ, ಶರಣು ಕುಮಾರ್, ಜಲಜಾ ಶೇಖರ್, ಮುಂಡಂಡ ಸಿ.ನಾಣಯ್ಯ, ಬಿ.ಎಂ.ಬೋಪಯ್ಯ, ಕಿಲನ್ ಗಣಪತಿ, ನಿರ್ದೇಶಕ ಎಚ್.ಕೆ.ಮಾದಪ್ಪ ಕಾಂಗೀರ ಸತೀಶ್, ಎಚ್.ಎಂ.ರಮೇಶ್, ಡಿಸಿಸಿ ಬ್ಯಾಂಕಿನ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಎಂ.ಕೆ. ಬೆಳ್ಯಪ್ಪ, ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕ ಬೋಜಮ್ಮ ಇತರರು ಇದ್ದರು.

ಸುತ್ತ ಮುತ್ತ

ಚಿತ್ರಪಾಡಿ ಮಾರಿಯಮ್ಮ ದೇವಸ್ಥಾನ: ಬಾವಿ ನಿರ್ಮಾಣಕ್ಕೆ ಭೂಖನನ

ಕೋಟ: ಚಿತ್ರಪಾಡಿ ಶ್ರೀ ಮಾರಿಯಮ್ಮ ದೇವಸ್ಥಾನ ಚಿತ್ರಪಾಡಿಯಲ್ಲಿ ದೇವಸ್ಥಾನಕ್ಕೆ ಪವಿತ್ರ ಬಾವಿ ನಿರ್ಮಾಣದ ಭೂಖನನ ಮುಹೂರ್ತ ಇತ್ತೀಚೆಗೆ ನೆರವೇರಿತು. ಶ್ರೀ ಮಾರಿಯಮ್ಮನಿಗೆ ಪೂಜೆಯನ್ನು ಸಲ್ಲಿಸಿದ ದೇವಸ್ಥಾನದ ಅರ್ಚಕ ಸುಧೀರ್ ಐತಾಳ್ ನೇತೃತ್ವದಲ್ಲಿ ದೇವಸ್ಥಾನ ಅಧ್ಯಕ್ಷ ಆನಂದ ಗಾಣಿಗ ಮತ್ತು ಸಂಧ್ಯಾ ಆನಂದ ಗಾಣಿಗ ಭೂಖನನ ಮುಹೂರ್ತದಲ್ಲಿ ಭಾಗವಹಿಸಿ ಪೂಜೆ ನೆರವೇರಿಸಿಕೊಟ್ಟರು. ಈ ಸಂಧರ್ಭ ದೇಗುಲದ ಆಡಳಿತ ಮಂಡಳಿ ಸದಸ್ಯರಾದ ಲಕ್ಷ್ಮೀ ನಾರಾಯಣ ಕಾರಂತ್, ಕೃಷ್ಣಮೂರ್ತಿ ಭಟ್, ಶೀನ ನಾಯರಿ, ಸತೀಶ ಪೂಜಾರಿ ಜಯಕರ್ನಾಟಕ, ರಾಘವೇಂದ್ರ ಆಚಾರ್, ರಾಜು ಪೂಜಾರಿ, ಗಣೇಶ ಗಾಣಿಗ, ರಮೇಶ ಮರಕಾಲ, ಸತ್ಯನಾರಾಯಣ ಗಾಣಿಗ, ಸತೀಶ ಗಾಣಿಗ , ಸುರೇಶ ಗಾಣಿಗ, ಪದ್ಮನಾಭ ಆಚಾರ್, ಕೇಶವ ಮರಕಾಲ, ಕಾರ್ಯದರ್ಶಿ ನಾಗೇಂದ್ರ ಆಚಾರ್ ಉಪಸ್ಥಿತರಿದ್ದರು.

ಕುಂದಾಪುರದ ರೋಜರಿ ಮಾತಾ ಇಗರ್ಜಿಯಲ್ಲಿ ಪ್ರಾರ್ಥನೆ

ಕುಂದಾಪುರ: ಜಿಲ್ಲೆಯ ಅತೀ ಪುರಾತನ ಇಗರ್ಜಿಯಾದ ಕುಂದಾಪುರದ ರೋಜರಿ ಮಾತಾ ಇಗರ್ಜಿಯಲ್ಲಿ ಶುಭ ಶುಕ್ರವಾರದ ಸಂಜೆ ಇಗರ್ಜಿಯೊಳಗೆ ಸಂಪ್ರದಾಯದೊಂದಿಗೆ ಶಿಲುಬೆ ಮರಣದ ಪ್ರಾರ್ಥನ ವಿಧಿ ನಡೆಯಿತು.
ದೇವರ ವಾಕ್ಯದ ಪಠಣ, ಸಂಭ್ರಮದ ಪ್ರಾರ್ಥನ ವಿಧಿ, ಪವಿತ್ರ ಶಿಲುಭೆಗೆ ಗೌರವ ಪೂರ್ವಕ ನಮನ ಮತ್ತು ಪವಿತ್ರ ಕ್ರಿಸ್ತ ಪ್ರಸಾದ ಹೀಗೆ ನಾಲ್ಕು ಭಾಗಗಳಲ್ಲಿ ಯೇಸುವಿನ ಕಷ್ಟ ಮರಣದ ಧಾರ್ಮಿಕ ವಿಧಿಗಳನ್ನು ನಡೆಸಲಾಯಿತು. ಸಂಜೆಯ ಪ್ರಾರ್ಥನ ವಿಧಿಗಳನ್ನ ಮೂಲ್ಕಿ ಡಿವೈನ್ ಕಾಲ್ ಸೆಂಟರ್ ಪ್ರವಚಕ, ಧರ್ಮಗುರು ಅನಿಲ್ ಕಿರಣ್ ಫೆರ್ನಾಂಡಿಸ್ ನೇರವೇರಿಸಿ, ಶಿಲುಬೆಯ ಹೊರತು ಮುಕ್ತಿಯಿಲ್ಲ, ಯೇಸು ಕ್ರಿಸ್ತರು ಈ ಪ್ರಪಂಚದಲ್ಲಿ ಜೀವಿಸಲು ಬರಲಿಲ್ಲ ಸಾಯಲು ಬಂದಿದ್ದರು. ನಮಗಾಗಿ ಸಾಯಲು. ಅವರ ಶಿಲುಬೆಯ ಮರಣ ಆಕಾಲಿಕವಲ್ಲಾ, ಮೊದಲೇ ನಿರ್ಧಾರ ಆಗಿತ್ತು. ಯೇಸು ದೇವರ ಬಲಿ ಕುರಿಯಾಗಿದ್ದರು. ಶಿಲುಬೆ ದೇವರ ಶಕ್ತಿ. ಯೇಸುವಿನಿಂದ ದೂರ ಸರಿದಾಗ ನಮಗೆ ಕಷ್ಟಗಳು ಬರುತ್ತದೆ. ಪಾಪ ಕೃತ್ಯಗಳಿಂದ ಕಷ್ಟ ಗಳು ಬರುತ್ತದೆ. ಈ ಕಷ್ಟಗಳನ್ನು ಸಹಿಸಿಕೊಂಡು, ನೀತಿ ಮಾರ್ಗದಲ್ಲಿ ಜೀವಿಸಿದರೆ ನಮಗೆ ಮುಕ್ತಿ ಸಿಗುತ್ತದೆ ಎಂದರು. ಚರ್ಚಿನ ಧರ್ಮಗುರು ಪೌಲ್ ರೇಗೋ ಧಾರ್ಮಿಕ ವಿಧಿವಿಧಾನಗಳಲ್ಲಿ ಸಹಕರಿಸಿದರು.

ಸೀತಾರಾಮಚಂದ್ರ ಕಲ್ಯಾಣೋತ್ಸವ: ಪುರಮೆರವಣಿ

ಗಂಗೊಳ್ಳಿ: ಗುಜ್ಜಾಡಿ ನಾಯಕವಾಡಿಯ ಬಿಲ್ಲವರ ಸಮಾಜ ಸೇವಾ ಸಂಘದ ಶ್ರೀ ರಾಮ ಭಗವಾನ್ ಬ್ರಹ್ಮಶ್ರೀ ನಾರಾಯಣ ಗುರು ಮಂದಿರದ ಸುವರ್ಣ ಸಂಭ್ರಮದ ಅಂಗವಾಗಿ ಭಾನುವಾರ ಸಂಜೆ ಸೀತಾರಾಮಚಂದ್ರ ಕಲ್ಯಾಣೋತ್ಸವದ ಪೂರ್ವಭಾವಿಯಾಗಿ ಶ್ರೀ ರಾಮ ದೇವರು ಹಾಗೂ ಶ್ರೀ ಸೀತಾ ದೇವಿಯರ ವೈಭವದ ಪುರಮೆರವಣಿಗೆ ನಡೆಯಿತು. ಮರವಂತೆಯ ಶ್ರೀ ವರಾಹ ಮಹಾರಾಜ ಸ್ವಾಮಿ ದೇವಸ್ಥಾನದಿಂದ ಶ್ರೀ ರಾಮ ದೇವರ ಪುರಮೆರವಣಿಗೆ ಆರಂಭಗೊಂಡು, ತ್ರಾಸಿಯ ಮೂಲಕವಾಗಿ ಮಂದಿರಕ್ಕೆ ಆಗಮಿಸಿತು. ಗಂಗೊಳ್ಳಿಯ ಬಿಲ್ಲವರ ಸಮಾಜ ಸೇವಾ ಸಂಘದ ಕಚೇರಿ ಬಳಿಯಿಂದ ಶ್ರೀ ಸೀತಾದೇವಿಯ ಪುರಮೆರವಣಿಗೆ ಆರಂಭಗೊಂಡು, ನಾಯಕವಾಡಿಯ ಬಿಲ್ಲವರ ಸಮಾಜ ಸೇವಾ ಸಂಘದ ಶ್ರೀ ರಾಮ ಭಗವಾನ್ ಬ್ರಹ್ಮಶ್ರೀ ನಾರಾಯಣ ಗುರು ಮಂದಿರದವರೆಗೆ ನಡೆಯಿತು. ಇದೇ ವೇಳೆ ಕನ್ಯಾಡಿಯ ಶ್ರೀ ರಾಮ ಕ್ಷೇತ್ರ, ಗುರುದೇವ ಮಠದ ಶ್ರೀ ಬ್ರಹ್ಮಾನಂದ ಸರಸ್ವತಿ ಸ್ವಾಮೀಜಿಯವರನ್ನು ಸಹ ಅದ್ದೂರಿ ಮೆರವಣಿಗೆ ಮೂಲಕ ಬರಮಾಡಿಕೊಳ್ಳಲಾಯಿತು. ಬಿಲ್ಲವರ ಸಮಾಜ ಸೇವಾ ಸಂಘದ ಶ್ರೀ ರಾಮ ಭಗವಾನ್ ಬ್ರಹ್ಮಶ್ರೀ ನಾರಾಯಣ ಗುರು ಮಂದಿರದ ಸುವರ್ಣ ಮಹೋತ್ಸವ ಸಮಿತಿ ಅಧ್ಯಕ್ಷ ನಾರಾಯಣ ಟಿ. ಪೂಜಾರಿ, ಪ್ರಮುಖರಾದ ಗೋವಿಂದ ಬಾಬು ಪೂಜಾರಿ, ಅಶೋಕ ಪೂಜಾರಿ ಬೀಜಾಡಿ, ತಮ್ಮಯ್ಯ ದೇವಾಡಿಗ, ನಾರಾಯಣ ಟಿ. ಗುಜ್ಜಾಡಿ, ಶೇಖರ್ ಪೂಜಾರಿ, ಪ್ರಕಾಶ್ ಪೂಜಾರಿ ಮತ್ತಿತರರಿದ್ದರು.

ಪಾಲ್ತಾಡಿ ಪ್ರತ್ಯೇಕ ಗ್ರಾಮ ಪಂಚಾಯತ್‌ಗೆ ಆಗ್ರಹ

ಸವಣೂರು: ಪಾಲ್ತಾಡಿ ಪ್ರತ್ಯೇಕ ಗ್ರಾಮ ಪಂಚಾಯತ್ ಗೆ ಆಗ್ರಹಿಸಿ ಜನಾಗ್ರಹ ಸಭೆಯು ಕಡಬ ತಾಲೂಕಿನ ಸವಣೂರು ಗ್ರಾ.ಪಂ. ವ್ಯಾಪ್ತಿಯ ಪಾಲ್ತಾಡಿ ಗ್ರಾಮದ ಕೇಂದ್ರ ಭಾಗವಾದ ಅಂಕತಡ್ಕದಲ್ಲಿ ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ ಬೂತ್ ಸಮಿತಿಯಿಂದ ಜನಾಗ್ರಹ ಸಭೆ ನಡೆಯಿತು.

ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ ಸುಳ್ಯ ವಿಧಾನಸಭಾ ಕ್ಷೇತ್ರದ ಅಧ್ಯಕ್ಷ ಮೀರಝ್ ಸುಳ್ಯ ಮುಖ್ಯ ಅತಿಥಿಯಾಗಿ ಮಾತನಾಡಿ, ಪ್ರತ್ಯೇಕ ಗ್ರಾ.ಪಂ.ನ ಅಗತ್ಯತೆಯನ್ನು ತಿಳಿಸಿದರು. ಎಸ್‌ಡಿಪಿಐ ಬೆಳ್ಳಾರೆ ಬ್ಲಾಕ್ ಸಮಿತಿ ಅಧ್ಯಕ್ಷರು, ಮಾಜಿ ಗ್ರಾ.ಪಂ. ಸದಸ್ಯ ಎಂ.ಎ. ರಫೀಕ್, ಎಸ್‌ಡಿಪಿಐ ಮುಖಂಡ ಎ.ಎಸ್. ರಝಾಕ್ ಮಾತನಾಡಿದರು. ಜನಾಗ್ರಹ ಸಭೆಯ ಅಧ್ಯಕ್ಷತೆಯನ್ನು ಅಂಕತಡ್ಕ ಬೂತ್ ಸಮಿತಿ ಅಧ್ಯಕ್ಷ ಎ.ಆರ್. ರಝಾಕ್ ವಹಿಸಿದ್ದರು. ಸವಣೂರು ಗ್ರಾ.ಪಂ ಮಾಜಿ ಸದಸ್ಯರಾದ ಬಾಬು ಎನ್. ಸವಣೂರು, ಎ.ಎಸ್. ಶಬೀನಾ ಅಂಕತಡ್ಕ ಮತ್ತಿತರರು ಇದ್ದರು. ಮನವಿ ಸ್ವೀಕರಿಸಿ ಮಾತನಾಡಿದ ಪಾಲ್ತಾಡಿ ಗ್ರಾಮ ಆಡಳಿತ ಅಧಿಕಾರಿ ರವಿಚಂದ್ರ, ಗ್ರಾಮಸ್ಥರ ಬೇಡಿಕೆಯನ್ನು ಪರಿಗಣಿಸಿ, ಸರ್ಕಾರಕ್ಕೆ ಮನವಿಯನ್ನು ತಲುಪಿಸುವುದಾಗಿ ಭರವಸೆ ನೀಡಿದರು. ಎ.ಎಸ್ ರಿಯಾಝ್ ಸ್ವಾಗತಿಸಿದರು. ಸಯ್ಯದ್ ಆರೀಫ್ ಕಾರ್ಯಕ್ರಮ ನಿರ್ವಹಿಸಿದರು.

ಆತ್ಮಶಕ್ತಿ ಮಾಡೂರು ಶಾಖಾ ವಾರ್ಷಿಕೋತ್ಸವ | ಡಾ. ಇಮ್ರಾನ್ ಪಾಷಾ ಮೆಚ್ಚುಗೆ

ಸಮಾಜದ ಎಲ್ಲಾ ಜನರಿಗೂ ವೈದ್ಯಕೀಯ ಸೇವೆ

ಮಂಗಳೂರು: ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘ ಇದರ ಮಾಡೂರು ಶಾಖೆಯ 14ನೇ ವಾರ್ಷಿಕೋತ್ಸವದ ಪ್ರಯುಕ್ತ ಭಾನುವಾರ ಉಚಿತ ವೈದ್ಯಕೀಯ, ನೇತ್ರ ತಪಾಸಣಾ ಹಾಗೂ ದಂತ ಚಿಕಿತ್ಸಾ ಶಿಬಿರ ಹಮ್ಮಿಕೊಳ್ಳಲಾಯಿತು.

ಸಮುದಾಯ ದಂತ ಆರೋಗ್ಯ ವಿಭಾಗ, ಯೆನೆಪೋಯ ದಂತ ಕಾಲೇಜು ಮತ್ತು ಆಸ್ಪತ್ರೆ, ದೇರಳಕಟ್ಟೆ ಇಲ್ಲಿನ ವೈದ್ಯ ಡಾ. ಇಮ್ರಾನ್ ಪಾಷಾ ಶಿಬಿರ ಉದ್ಘಾಟಿಸಿ, ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘವು ಸತತ ನೂರಕ್ಕೂ ಮಿಕ್ಕಿ ಉಚಿತ ವೈದ್ಯಕೀಯ ಶಿಬಿರ ಆಯೋಜಿಸಿ, ಸಮಾಜದ ಎಲ್ಲಾ ಜನರಿಗೆ ಉಚಿತ ಸೇವೆಯನ್ನು ಒದಗಿಸುತ್ತ ಬಂದಿದೆ. ಒಂದೇ ದಿನದಲ್ಲಿ ಮಾಡೂರು ಮತ್ತು ಕಸಿಹಿತ್ಲು, ಜಪ್ಪಿನಮೊಗರುವಿನಲ್ಲಿ ಆಯೋಜಿಸಿದ್ದು ಸಂಘದ ವಿಶೇಷತೆ ಎಂದು ಶ್ಲಾಘಿಸಿದರು.

ಜನಸಾಮಾನ್ಯರು ತಮ್ಮ ಆರೋಗ್ಯದ ಕಾಳಜಿಯನ್ನು ನೋಡಿಕೊಳ್ಳಬೇಕು ಮತ್ತು ಶಿಬಿರದಲ್ಲಿ ಲಭ್ಯವಿರುವ ಸೇವೆಗಳ ಬಗ್ಗೆ ಮಾಹಿತಿ ನೀಡಿ, ಈ ಶಿಬಿರದಲ್ಲಿ ಹೆಚ್ಚಿನ ಚಿಕಿತ್ಸೆಗಾಗಿ ಆಸ್ಪತ್ರೆಯ ಹಸಿರು ಕಾರ್ಡ್ ಅನ್ನು ವಿತರಿಸಲಾಗುವುದು. ಶಿಬಿರಾರ್ಥಿಗಳು ಇದರ ಸದುಪಯೋಗವನ್ನು ಪಡೆದು ಕೊಳ್ಳಬೇಕೆಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘದ ಅಧ್ಯಕ್ಷ ಸಹಕಾರ ರತ್ನ ಚಿತ್ತರಂಜನ್ ಬೋಳಾರ್ ಮಾತನಾಡಿದರು. ಸಂಘದ ನಿರ್ದೇಶಕ ಆನಂದ ಎಸ್ ಕೊಂಡಾಣ, ರಮಾನಾಥ ಸನಿಲ್,



> ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘವು ಕಳೆದ 14 ವರ್ಷಗಳಿಂದ ವೈದ್ಯಕೀಯ ಶಿಬಿರ ನಿರಂತರ ಏರ್ಪಡಿಸುತ್ತಿದ್ದು, ಸಾರ್ವಜನಿಕರು ಇದರ ಸಂಪೂರ್ಣ ಪ್ರಯೋಜನ ಪಡೆಯುತ್ತಿದ್ದಾರೆ. ಸಂಘವು 2025-26 ನೇ ಸಾಲಿನಲ್ಲಿ ರೂ. 305 ಕೋಟಿಗೂ ಮಿಕ್ಕಿ ಠೇವಣಿ, ರೂ. 278 ಕೋಟಿಗೂ ಮಿಕ್ಕಿ ಸಾಲ, ಹಾಗೂ ರೂ. 3.5 ಕೋಟಿಗೂ ಮಿಕ್ಕಿ ಲಾಭ ಗಳಿಸಿರುವುದು ಸಂಘದ ಪ್ರಗತಿಗೆ ಕಾರಣವಾಗಿದೆ.
> ● ಚಿತ್ತರಂಜನ್ ಬೋಳಾರ್

ಗೋಪಾಲ್ ಎಂ., ಸಿಇಒ ಸೌಮ್ಯ ವಿಜಯ್ ಮತ್ತು ಶಾಸ್ತಾರ ಬಳಗ ಶ್ರೀ ಶಾಸ್ತಾರ ಮಹಿಳಾ ಮಂಡಳಿ ಮತ್ತು ಭಜಕ ವೃಂದ, ಮಡ್ಯಾರ್ ಇದರ ಅಧ್ಯಕ್ಷ ಸೂರಜ್ ಗಟ್ಟಿ ಕೊಂಡಾಣ, ಶ್ರೀ ಶಾಸ್ತಾರ ಕಟ್ಟೆ ಇದರ ಅರ್ಚಕ ಯೋಗೀಶ್ ಪೂಜಾರಿ, ಶ್ರೀ ವನದುರ್ಗಾ ಅಯ್ಯಪ್ಪ ಭಜನಾ ಮಂದಿರ ಮಾಡೂರು ಇಲ್ಲಿಯ ಗುರುಸ್ವಾಮಿ ಭಾಸ್ಕರ್, ಗ್ರಾಮೀಣ ಆರೋಗ್ಯ ರಕ್ಷಣೆ ಮತ್ತು ಅಭಿವೃದ್ಧಿ ಕೇಂದ್ರ, ಯೆನೆಪೋಯ ಪರಿಗಣಿಸಲ್ಪಟ್ಟ ವಿಶ್ವ ವಿದ್ಯಾಲಯ, ದೇರಳಕಟ್ಟೆ ಇಲ್ಲಿನ ವೈದ್ಯ ಡಾ. ಆಯಿಷಾ ಮತ್ತಿತರರು ಉಪಸ್ಥಿತರಿದ್ದರು. ಈ ಶಿಬಿರದಲ್ಲಿ 100ಕ್ಕೂ ಅಧಿಕ ಮಂದಿ ಭಾಗವಹಿಸಿ, ಪ್ರಯೋಜನ ಪಡೆದುಕೊಂಡರು. ಮಾಡೂರು ಶಾಖೆಯ ಪ್ರಭಾರ ಶಾಖಾಧಿಕಾರಿ ಭವ್ಯ ಸ್ವಾಗತಿಸಿ. ಸಂಘದ ಸಿಬ್ಬಂದಿ ರತಿಕ ವಂದಿಸಿದರು. ಸಂಘದ ಉಳ್ಳಾಲ ಶಾಖೆಯ ಹಿರಿಯ ಶಾಖಾಧಿಕಾರಿ ಸಚಿನ್ ನಿರೂಪಿಸಿದರು.

ಜಿನ ಬಸದಿ ಬಳಿ ಪೂರ್ಣಕುಂಭ ಸ್ವಾಗತ, ಮಂಗಳವಾದ್ಯಗಳ ಝೇಂಕಾರ

ಸವಣೂರಿಗೆ ಶ್ರೀರಾಮ ಹನುಮ ಜ್ಯೋತಿ ರಥ

ಸವಣೂರು: ಹನುಮಗಿರಿ ಶ್ರೀ ಕೋದಂಡ ರಾಮ ಪಂಚಮುಖಿ ಆಂಜನೇಯ ಕ್ಷೇತ್ರದ ಅಷ್ಟಬಂಧ ಬ್ರಹ್ಮಕಲಶೋತ್ಸವ ಅಂಗವಾಗಿ ಅಯೋಧ್ಯೆ ಹಾಗೂ ಅಂಜನಾದ್ರಿಯಿಂದ ಹೊರಟ ಶ್ರೀ ರಾಮ ಹನುಮ ಜ್ಯೋತಿ ರಥಯಾತ್ರೆ ಏ.6ರಂದು ಬೆಳಗ್ಗೆ ಸವಣೂರಿಗೆ ಪ್ರವೇಶ ಮಾಡಿತು.

ಜಿನ ಬಸದಿಯ ಪ್ರವೇಶ ದ್ವಾರದಲ್ಲಿ ರಥಯಾತ್ರೆಗೆ ಭವ್ಯ ಪುಷ್ಪಾರ್ಚನೆಯೊಂದಿಗೆ ಸ್ವಾಗತ ಕೋರಲಾಯಿತು. ಪೂರ್ಣಕುಂಭ ಸ್ವಾಗತ, ಭಜನೆ, ಮಂಗಳವಾದ್ಯ ಹಾಗೂ ಚೆಂಡೆಯ ಮೂಲಕ ಭವ್ಯ ರಥಯಾತ್ರೆಯು ಜಿನ ಬಸದಿಗೆ ಸಾಗಿ ಬಂದು ಜಿನ ಬಸದಿಯ ಅರ್ಚಕರಾದ ಶ್ರೇಯಾಂಸ್ ಕುಮಾರ್ ಇಂದ್ರ ರಥಕ್ಕೆ ಆರತಿ ಬೆಳಗಿಸಿದರು. ನಂತರ ಜಿನ ಬಸದಿಗೆ ಬಂದು ಪದ್ಮಾವತಿ ದೇವಿಗೆ ಪೂಜೆ ಸಲ್ಲಿಸಲಾಯಿತು.

ಈ ಸಂದರ್ಭ ಹನುಮಗಿರಿ ಬ್ರಹ್ಮಕಲಶೋತ್ಸವ ಸಮಿತಿಯ ಉಪಾಧ್ಯಕ್ಷ ಕೋಟಿ ಶ್ರೀ ರಾಮ ತಾರಕ ಜಪಯಜ್ಞದ ಸಂಚಾಲಕ ಸೀತಾರಾಮ ರೈ ಕೆದಂಬಾಡಿಗುತ್ತು ಬ್ರಹ್ಮಕಲಶದ ಕುರಿತು ಮಾಹಿತಿ ನೀಡಿದರು. ಹನುಮಗಿರಿ ಬ್ರಹ್ಮಕಲಶೋತ್ಸವ ಸಮಿತಿಯ ಉಪಾಧ್ಯಕ್ಷ ರಾಕೇಶ್ ರೈ ಕೆಡೆಂಜಿ, ಸವಣೂರು ಗ್ರಾಮ ಸಮಿತಿಯ ಅಧ್ಯಕ್ಷ ಮಹೇಶ್ ಕೆ. ಸವಣೂರು, ಪ್ರಧಾನ ಕಾರ್ಯದರ್ಶಿ ತಾರನಾಥ ಕಾಯರ್ಗ, ಜಪ ಯಜ್ಞ ಸಮಿತಿಯ ಸಂಚಾಲಕ ಗಿರಿಶಂಕರ ಸುಲಾಯ, ಸಹಸಂಚಾಲಕ ಭರತ್ ರೈ ಪಾಲ್ತಾಡಿ, ಲಿಂಗಪ್ಪ ರೈ ಚೆಂಬುತ್ತೋಡಿ, ರಥಯಾತ್ರಾ ಸಮಿತಿಯ ಸಂಚಾಲಕ ಚೇತನ್ ಕುಮಾರ್ ಕೋಡಿಬೈಲು, ಸಹಸಂಚಾಲಕ ಪ್ರಭಾಕರ ಶೆಟ್ಟಿನಡುಬೈಲು, ಸಾಮಾಜಿಕ ಜಾಲತಾಣದ ಸಂಚಾಲಕ ಸತೀಶ್ ಬಲ್ಯಾಯ, ಲಕ್ಷೋತ್ತರ ನಾರಿಕೇಳ ಗ್ರಾಮ ಸಂಚಾಲಕ ಗಂಗಾಧರ ಪೆರಿಯಡ್ಕ, ಸಹ ಸಂಚಾಲಕ ಪುಟ್ಟಣ್ಣ ಗೌಡ ಬದಿಯಡ್ಕ, ಸಹಸಂಚಾಲಕ ರಾಮಕೃಷ್ಣ ಪ್ರಭು, ಭಜನಾ ಸಮಿತಿಯ ಸಂಚಾಲಕ ರಾಜೇಶ್ ಇಡ್ಯಾಡಿ, ಸಹಸಂಚಾಲಕ ಶಿವರಾಮ ಗೌಡ ಮೆದು, ಮಹಿಳಾ ಸಮಿತಿಯ ಸಹಸಂಚಾಲಕಿ ಆಶಾ ರೈ ಕಲಾಯಿ, ಬ್ರಹ್ಮಕಲಶೋತ್ಸವ ಸಮಿತಿಯ ಉಪಾಧ್ಯಕ್ಷ ಸುರೇಶ್ ರೈ ಸೂಡಿಮುಳ್ಳು, ನಾಟಿ ವೈದ್ಯ ವಾಸುದೇವ ಇಡ್ಯಾಡಿ, ವೆಂಕಪ್ಪ ಶೆಟ್ಟಿ ಸವಣೂರುಗುತ್ತು, ತೀರ್ಥರಾಮ ಕೆಡೆಂಜಿ, ಹರಿಕಲಾ ರೈ ಕುಂಜಾಡಿ, ರಾಜೀವಿ ರೈ ಕೆಡೆಂಜಿ, ರಾಜೇಶ್ ರೈ ಮೊಗರು, ಬಾಳಪ್ಪ ಪೂಜಾರಿ ಬಂಬಿಲದೋಳ, ಸಂಜೀವ ಗೌಡ ಪಾಲ್ತಾಡಿ, ಜಯರಾಮ ರೈ ಸೋಂಪಾಡಿ, ಜಗದೀಶ್ ಇಡ್ಯಾಡಿ, ಡಾ. ಸುಬ್ರಹ್ಮಣ್ಯ ಭಟ್ ಬರೆಪ್ಪಾಡಿ, ನಾರಾಯಣ ಗೌಡ ಪೂವ, ವಿಠಲ ಶೆಟ್ಟಿ ಕೆಡೆಂಜಿ, ಸುಪ್ರೀತ್ ರೈ ಖಂಡಿಗ, ಕೀರ್ತನ್ ಕೋಡಿಬೈಲು, ಗಂಗಾಧರ ಸುಣ್ಣಾಜೆ, ಶ್ರೀಧರ ಸುಣ್ಣಾಜೆ, ಚಂದ್ರಶೇಖರ ಮೆದು, ಅನ್ನಪೂರ್ಣಪ್ರಸಾದ್ ಬೈಲಾಡಿ, ಸೂರಪ್ಪ ಗೌಡ ಬದಿಯಡ್ಕ, ಬಾಬು ಗೌಡ ಅಮ್ಚೆ, ಆನಂದ ಇಡ್ಯಾಡಿ, ಬಾಲಚಂದ್ರ ರೈ ಕೆರೆಕ್ಕೋಡಿ, ಬಾಲಚಂದ್ರ ಕನ್ನಡಕುಮೇರು, ಮೂಡಂಬೈಲು ಜಯರಾಮ ರೈ, ವಿಠಲ ಶೆಟ್ಟಿ ಬಂಬಿಲ, ಲೋಕಯ್ಯ ಗೌಡ ಅಂಗಡಿಮೂಲೆ, ದುರ್ಗಾಪ್ರಸಾದ್ ಕಲ್ಪತರು, ಪ್ರಕಾಶ್ ಮಾಲೆತ್ತಾರು, ದಯಾನಂದ ಮೆದು ಮತ್ತಿತರರು ಭಾಗವಹಿಸಿದರು.



ಬ್ರಾಹ್ಮಣ ಅಭಿವೃದ್ಧಿ ನಿಗಮದ ಸೌಲಭ್ಯಗಳ ಮಾಹಿತಿ ಸಿಗಲಿ: ಖಾದರ್



ಮಂಗಳೂರು: ಬ್ರಾಹ್ಮಣ ಅಭಿವೃದ್ಧಿ ನಿಗಮವು 2018ರಲ್ಲಿ ಪ್ರಾರಂಭವಾಗಿದ್ದು ಆದರೆ ಈ ನಿಗಮದಿಂದ ಜನತೆಗೆ ಸಿಗುವ ಸೌಲಭ್ಯಗಳ ಬಗ್ಗೆ ಸಮುದಾಯದ ಜನತೆಗೆ ತಿಳಿದಿಲ್ಲ, ಈ ಬಗ್ಗೆ ಅಲ್ಲಲ್ಲಿ ಮಾಹಿತಿ ಶಿಬಿರ ಹಮ್ಮಿಕೊಳ್ಳುವುದು ಪ್ರಶಂಸನೀಯ ಎಂದು ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಹೇಳಿದರು.

ಅವರು ಕರ್ನಾಟಕ ಸರಕಾರ ಬ್ರಾಹ್ಮಣ ಅಭಿವೃದ್ಧಿ ನಿಗಮದ ವತಿಯಿಂದ ಕೂಟ ಮಹಾಜಗತ್ತು ಮಂಗಳೂರು ಇವರ ಸಹಯೋಗದಲ್ಲಿ ಇತ್ತೀಚೆಗೆ ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾಭವನದಲ್ಲಿ ಹಮ್ಮಿಕೊಂಡ 'ಬ್ರಾಹ್ಮಣ ಸಮುದಾಯಕ್ಕೆ ಸರ್ಕಾರದ ಸವಲತ್ತು'ಗಳು ಎಂಬ ಕಾರ್ಯಕ್ರಮದಲ್ಲಿ ಭಾಗವಹಿಸಿ, ಮಾತನಾಡಿದರು.

ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿಯ ನಿರ್ದೇಶಕ ಪಿಎಂ ಮಾಲತೇಶ್ ಅಧ್ಯಕ್ಷತೆ ವಹಿಸಿದ್ದರು.

ಮನಪಾ ಉಪಮೇಯರಾದ ನಮಿತಾ ಡಿ. ರಾವ್, ಸರ್ಕಾರವು ಬ್ರಾಹ್ಮಣರ ಅಭಿವೃದ್ಧಿಗೆ ಹಲವು ಕಾರ್ಯಕ್ರಮ ಜಾರಿಗೊಳಿಸುತ್ತಿದ್ದು ಇದನ್ನು ಎಲ್ಲರೂ ಸಮರ್ಪಕವಾಗಿ ಬಳಸಿಕೊಳ್ಳಬೇಕೆಂದರು.

ಮುಖ್ಯ ಅತಿಥಿಗಳಾಗಿ ಸುಬ್ರಹ್ಮಣ್ಯ ಸಭಾಭವನದ ಅಧ್ಯಕ್ಷ ಕೃಷ್ಣ ಬೆಳ್ತಂಗಡಿ ತಾಲೂಕು ಬ್ರಾಹ್ಮಣ ಮಹಾಸಭಾ ಮುಖಂಡ ಜಿಕೆ ಶರ್ಮ, ಕೂಟ ಮಹಾಜಗತ್ತಿನ ಕಾರ್ಯದರ್ಶಿ ಜಿ.ಕೆ.ಮಯ್ಯ ಮೊದಲಾದವರು ಭಾಗವಹಿಸಿದ್ದರು. ಸಂಘಟಕ ಕೂಟ ಮಹಾಜಗತ್ತಿನ ಅಧ್ಯಕ್ಷ ಶ್ರೀಧರ ಹೊಳ್ಳ ಕಾರ್ಯಕ್ರಮ ಸಂಘಟಿಸಿದರು. ಇದೇ ಸಂದರ್ಭ ಅರ್ಹ ಫಲಾನುಭವಿಗಳಿಗೆ ಕಾರ್ಮಿಕ ಕಾರ್ಡ್ ವಿತರಿಸಲಾಯಿತು.

ಸಜೀಪಮುನ್ನೂರು 'ಕಸ ಮುಕ್ತ ಗ್ರಾಮ' ನಿರ್ಮಾಣಕ್ಕೆ ಆಡಳಿತ, ಒಕ್ಕೂಟ ಸಂಕಲ್ಪ



ಬಂಟ್ವಾಳ: ಸಜೀಪ ಮುನ್ನೂರು ಗ್ರಾಮ ಪಂಚಾಯತ್‌ನಲ್ಲಿ ಶೂನ್ಯ ಕಸ ನಿರ್ವಹಣೆ ಸ್ವಚ್ಛ ಮನೆ ಸ್ವಯಂ ಘೋಷಣೆ ಮೂಲಕ ಕಸ ಮುಕ್ತ ಗ್ರಾಮ ನಿರ್ಮಾಣಕ್ಕೆ ಗ್ರಾ.ಪಂ. ಅಧಿಕಾರಿಗಳು ಹಾಗೂ ಝೇಂಕಾರ ಸಂಜೀವಿನಿ ಒಕ್ಕೂಟ ಸಂಕಲ್ಪ ಮಾಡಿದೆ.

ಗ್ರಾ.ಪಂ. ಎನ್‌ಆರ್‌ಎಲ್‌ಎಂ ತರಬೇತಿ ಕೇಂದ್ರದಲ್ಲಿ ಜನ ಶಿಕ್ಷಣ ಟ್ರಸ್ಟ್ ಸಹಯೋಗದಲ್ಲಿ ನಡೆದ ಶೂನ್ಯ ಕಸ ನಿರ್ವಹಣೆ ಮತ್ತು ಸ್ವಚ್ಛತೆಯ ವಿಶೇಷ, ಮಾಹಿತಿ ಮತ್ತು ಪ್ರೇರಣಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಸ್ವಚ್ಛತಾ ರಾಯಭಾರಿ ಶೀನ ಶೆಟ್ಟಿ ಅವರು ಪ್ಲಾಸ್ಟಿಕ್ ಮತ್ತು ಸ್ಯಾನಿಟರಿ ಪ್ಯಾಡ್ ತ್ಯಾಜ್ಯಗಳಿಂದ ಸೃಷ್ಟಿಯಾಗಿರುವ ಬಯಲು ಕಸಾಲಯ, ಪ್ಲಾಸ್ಟಿಕ್ ಬೆಂಕಿ, ಪ್ಲಾಸ್ಟಿಕ್ ಮಾಲಿನ್ಯ ತಡೆದು ಸುಸ್ಥಿರ ಸ್ವಚ್ಛತೆ ಸಾಧಿಸಲು ಶೂನ್ಯ ಕಸ ನಿರ್ವಹಣೆ ಸ್ವಚ್ಛ ಮನೆ ಸ್ವಯಂ ಘೋಷಣೆ ಸುಸ್ಥಿರ ಪರಿಹಾರೋಪಾಯ ಆಗಿದೆ ಎಂದರು.

ಹಸಿ ಕಸಗಳಿಂದ ಬಯೋ ಗ್ಯಾಸ್ ಅಳವಡಿಸಿಕೊಳ್ಳುವ ಕುಟುಂಬಗಳಿಗೆ ಸರ್ವ ಸಹಕಾರ ನೀಡುವುದಾಗಿ ಪಿಡಿಒ ಗೋಕುಲ್ ದಾಸ್ ಭಕ್ತ ತಿಳಿಸಿದರು.

ಹಸಿ ಕಸಗಳಿಂದ ಬಯೋಗ್ಯಾಸ್ ಅಳವಡಿಸಿಕೊಳ್ಳುವ ಕುಟುಂಬಗಳಿಗೆ ಸಹಕಾರ ನೀಡುವುದಾಗಿ ಪಿಡಿಒ ಗೋಕುಲ್ ದಾಸ್ ಭಕ್ತ ತಿಳಿಸಿದರು. ಈಗಾಗಲೇ ಬಯೋ ಗ್ಯಾಸ್ ನಿರ್ಮಿಸಿ ಕೊಂಡು ಶೂನ್ಯ ಕಸ ನಿರ್ವಹಣೆ ಮೂಲಕ ಸ್ವಚ್ಚತೆ ಸಾಧಿಸಿರುವ ಸಂಜೀವಿನಿ ಒಕ್ಕೂಟ ಎಂ. ಬಿ.ಕೆ. ಸುನಿತಾರನ್ನು ಗೌರವಿಸಲಾಯಿತು. ಒಕ್ಕೂಟದ 15 ಮಂದಿ ಸದಸ್ಯರು ಸ್ವಚ ಮನೆ ಸ್ವಯಂ ಘೋಷಣೆ ಪತ್ರಗಳನ್ನು ಸಲ್ಲಿಸಿದರು. ಏ.16ರಂದು ಒಕ್ಕೂಟದ ಸಭೆ ಏರ್ಪಡಿಸಿ ಶೂನ್ಯ ಕಸ ನಿರ್ವಹಣೆ ಅರಿವು ಬಗ್ಗೆ ಹಾಗೂ ಮಿನಿ ಬಯೋ ಗ್ಯಾಸ್ ಘಟಕ ಅಳವಡಿಸುವ ಬಗ್ಗೆ ತೀರ್ಮಾನಿಸಲಾಯಿತು. ಒಕ್ಕೂಟದ ಅಧ್ಯಕ್ಷೆ ಆಸೀಫ ಬೇಗಂ, ಸ್ವಚ್ಛವಾಹಿನಿ ಚಾಲಕಿ ಬಬಿತಾ, ಎಲ್‌ಸಿಆರ್‌ಪಿ ಲಾವಣ್ಯ ಗ್ರಾ.ಪಂ. ಮಾಜಿ ಸದಸ್ಯ ಜಮಾಲ್ ಸಹಕರಿಸಿದರು.

ಶಿಕ್ಷಣದೊಂದಿಗೆ ವಿದ್ಯಾರ್ಥಿಗಳಿಗೆ ವ್ಯವಹಾರ ಜ್ಞಾನ ಅಗತ್ಯ: ಯಜ್ಞೇಶ್



ಸುಬ್ರಹ್ಮಣ್ಯ: ವಿದ್ಯಾರ್ಥಿಗಳಿಗೆ ಶಿಕ್ಷಣದ ಜೊತೆಗೆ ವ್ಯವಹಾರ ಜ್ಞಾನ ಅತ್ಯಗತ್ಯ. ಇದರೊಂದಿಗೆ ವಿವಿಧ ಕೌಶಲಗಳ ತರಬೇತಿ ನೀಡಿದರೆ ತಮ್ಮ ಜೀವನದಲ್ಲಿ ಬರುವ ಕಷ್ಟಗಳನ್ನು ಮತ್ತು ಉದ್ಯೋಗಗಳನ್ನು ಸರಿಯಾಗಿ ನಿಭಾಯಿಸಲು ಇದು ರಹದಾರಿಯಾಗುತ್ತದೆ. ಎಳವೆಯಲ್ಲಿ ವ್ಯಾವಹಾರಿಕ ಜ್ಞಾನ ನೀಡುವುದು ಅತ್ಯುತ್ತಮ ಕಾರ್ಯವಾಗಿದ್ದು ಜೀವನದ ಇದು ದಾರಿ ದೀಪವಾಗುತ್ತದೆ ಎಂದು ಶಾಲಾ ಆಡಳಿತ ಮಂಡಳಿ ಕೋಶಾಧಿಕಾರಿ ಕಲಾವಿದ ಕೆ. ಯಜ್ಞೇಶ್ ಆಚಾರ್ ಹೇಳಿದರು.

ಸುಬ್ರಹ್ಮಣ್ಯ ಮಠ ಎಜುಕೇಶನ್ ಸೊಸೈಟಿ ಸುಬ್ರಹ್ಮಣ್ಯ ಇದರ ಆಡಳಿತದ ಶ್ರೀ ವೇದವ್ಯಾಸ ವಿದ್ಯಾಲಯದಲ್ಲಿ ಶನಿವಾರ ನಡೆದ ಮೆಟ್ರಿಕ್ ಮೇಳ ಉದ್ಘಾಟಿಸಿ ಅವರು ಮಾತನಾಡಿದರು.

ಆಡಳಿತ ಮಂಡಳಿಯ ಕಾರ್ಯದರ್ಶಿ ಶ್ರೀಕೃಷ್ಣ ಶರ್ಮ ಅಧ್ಯಕ್ಷತೆ ವಹಿಸಿದ್ದರು. ಶ್ರೀ ಗೋಪಾಲಕೃಷ್ಣ ಪ್ರೌಢಶಾಲೆಯ ಹಿರಿಯ ಚಿತ್ರಕಲಾ ಅಧ್ಯಾಪಕ ದಿನೇಶ್ ಕುಂದರ್, ಊರಿನ ಹಿರಿಯರಾದ ಉಮಾಮಹೇಶ್ವರ ಏರ್ಕ, ಶ್ರೀ ವೇದವ್ಯಾಸ ವಿದ್ಯಾಲಯದ ಶಿಕ್ಷಕ ರಕ್ಷಕ ಸಂಘದ ಅಧ್ಯಕ್ಷ ಎ. ಕೇಶವ ಗೌಡ ಬಳಿನೆಲೆ, ವೇದವ್ಯಾಸ ವಿದ್ಯಾಲಯದ ಮುಖ್ಯೋ ಪಾಧ್ಯಾಯ ಪ್ರಶಾಂತ್ ಬಿ., ಶಿಕ್ಷಕ ವಿನೋದ್ ಕುಮಾರ್, ಶಿಕ್ಷಕ ಉಮೇಶ್ ವೇದಿಕೆಯಲ್ಲಿದ್ದರು.

> **ರೂ.90 ಸಾವಿರ ವ್ಯವಹಾರ**
> ವಿವಿಧ ಬಗೆಯ 11 ಅಂಗಡಿಗಳನ್ನು ವಿದ್ಯಾರ್ಥಿಗಳು ತೆರೆದಿದ್ದರು. ವಿದ್ಯಾರ್ಥಿಗಳು ರೂ.90 ಸಾವಿರ ಮೊತ್ತದ ವ್ಯವಹಾರ ನಡೆಸಿದ್ದರು.

ಕೆದ್ಲ ಅನುದಾನಿತ ಹಿರಿಯ ಪ್ರಾಥಮಿಕ ಶಾಲೆಯ ಶತಮಾನ ಸಂಭ್ರಮ | ವಿವಿಧ ಸ್ಪರ್ಧೆಗಳ ವಿಜೇತರಿಗೆ ಬಹುಮಾನ ವಿತರಣೆ

ವಿದ್ಯಾದೇಗುಲದ ಅಭಿವೃದ್ಧಿಗೆ ಊರಿನ ಜನರ ಸಹಕಾರ ಅಗತ್ಯ: ಶಾಸಕ ನ್ಯಾಕ್

ಬಂಟ್ವಾಳ: ಸಮಾಜದಲ್ಲಿ ಶಾಂತಿ ಸಹಬಾಳ್ವೆಯಿಂದ ಇರಬೇಕಾದರೆ ಊರಿನ ಸರ್ವಜನರ ಸಹಕಾರ ಅಗತ್ಯವಿದೆ ಎಂದು ಬಂಟ್ವಾಳ ಶಾಸಕ ರಾಜೇಶ್ ನ್ಯಾಕ್ ಉಳಿಪಾಡಿ ಹೇಳಿದರು.

ಭಾನುವಾರ ಬಂಟ್ವಾಳ ತಾಲೂಕಿನ ಅಮ್ಟಾರ್ ಗ್ರಾಮದ ಕೆದ್ಲ ಅನುದಾನಿತ ಹಿರಿಯ ಪ್ರಾಥಮಿಕ ಶಾಲೆಯ ಶತಮಾನ ಸಂಭ್ರಮೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದ ಅವರು, ವಿದ್ಯಾದೇಗುಲದ ಅಭಿವೃದ್ಧಿಗೆ ಊರಿನ ಎಲ್ಲ ಸಹಕಾರ ಅಗತ್ಯ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಅನ್ನಪೂರ್ಣೇಶ್ವರಿ ಎಜುಕೇಶನ್ ಟ್ರಸ್ಟ್ ಅಧ್ಯಕ್ಷ ಪರಮೇಶ್ವರ ರಾವ್ ವಹಿಸಿದ್ದರು. ಅತಿಥಿಯಾಗಿದ್ದ ಮಾಜಿ ಶಾಸಕ ಪದ್ಮನಾಭ ಕೊಟ್ಟಾರಿ ಮಾತನಾಡಿ,



ಮಕ್ಕಳ ಕೊರತೆಯಿಂದ ಬಹಳಷ್ಟು ಕನ್ನಡ ಶಾಲೆಗಳು ಮುಚ್ಚುವ ಹಂತದಲ್ಲಿದ್ದು, ಶತಮಾನ ಪೂರೈಸಿದ ಶಾಲೆಯನ್ನು ಉಳಿಸುವ ದೃಷ್ಟಿಯಿಂದ ಎಲ್ಲರೂ ಸಹಕರಿಸಬೇಕು ಎಂದರು.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ವಿಟ್ಲ ಯೋಜನಾಧಿಕಾರಿ ಸುರೇಶ್ ಗೌಡ ಮಾತನಾಡಿ ಮಕ್ಕಳಿಗೆ ಶಿಕ್ಷಣದ ಜೊತೆಗೆ ಸಂಸ್ಕಾರ ಕಲಿಸುವ ಹೆತ್ತವರಿಂದಾಗಬೇಕು ಎಂದರು.

ಈ ಸಂದರ್ಭ ಶಾಲಾ ರಸ್ತೆಯನ್ನು ವಿಶೇಷ ಮುತುವರ್ಜಿ ವಹಿಸಿ ಕಾಂಕ್ರೀಟೀಕರಣಗೊಳಿಸಿ ಅಭಿವೃದ್ಧಿಪಡಿಸಿದ ಶಾಸಕ ರಾಜೇಶ್ ನ್ಯಾಕ್ ಅವರನ್ನು ಅವರನ್ನು ಗೌರವಿಸಲಾಯಿತು.

ಶತಮಾನ ಸಂಭ್ರಮೋತ್ಸವದ ಪ್ರಯುಕ್ತ ಶಾಲಾ ವಿದ್ಯಾರ್ಥಿಗಳಿಗೆ, ಹಿರಿಯ ವಿದ್ಯಾರ್ಥಿಗಳಿಗೆ, ಶಾಲಾಭಿಮಾನಿಗಳಿಗೆ ನಡೆಸಿದ ವಿವಿಧ ಸ್ಪರ್ಧೆಗಳ ವಿಜೇತರಿಗೆ ಬಹುಮಾನ ವಿತರಿಸಲಾಯಿತು

ಶಾಲಾ ಹಿರಿಯ ವಿದ್ಯಾರ್ಥಿ ಶೋಭಾ ಪ್ರಭು ಅನಿಸಿಕೆ ವ್ಯಕ್ತಪಡಿಸಿದರು. ಶತಮಾನೋತ್ಸವ ಸಮಿತಿಯ ಗೌರವಾಧ್ಯಕ್ಷ ಎಂ. ಶ್ರೀನಿವಾಸ ರಾವ್, ಬಂಟ್ವಾಳ ತಾಲೂಕು ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ನೋಣಯ್ಯ ನಾಯ್ಕ್, ಐಆರ್‌ಟಿ ಸುರೇಖಾ, ಕಲ್ಲಡ್ಕ ಕ್ಲಸ್ಟರ್ ಸಿಆರ್‌ಪಿ ಜ್ಯೋತಿ, ಹಿರಿಯ ವಿದ್ಯಾರ್ಥಿ ಬಾಬು ಗೌಡ, ವಿಠಲ ರೈ, ಮೋನಪ್ಪ ರೈ, ಶಾರದಾ, ಶಾಲಾ ಸಂಚಾಲಕಿ ಕೆ. ಭಾರತಿ, ಶಾಲಾ ಪ್ರಭಾರ ಮುಖ್ಯ ಶಿಕ್ಷಕಿ ಸೌಮ್ಯಾವತಿ ಟಿ ಎಸ್, ಶತಮಾನೋತ್ಸವ ಸಮಿತಿಯ ಅಧ್ಯಕ್ಷ ಚಂದ್ರಹಾಸ ರೈ ಬಾಲಾಜಿಬೈಲು, ಜಯರಾಮ ರೈ ಬೋಳಂತೂರು, ಜಿ. ಚೆನ್ನಪ್ಪ ಪೂಜಾರಿ, ಎಂ. ಗೋಪಾಲಗೌಡ, ಲೂಯಿಸ್ ಡಿಸೋಜ, ಕೆ. ಸಲೀಂ, ಕೆ. ಕೃಷ್ಣಮೂರ್ತಿ, ರಾಮ ಜಿ. ಎನ್, ಚಿದಾನಂದ ಪ್ರಭು, ಜಿ. ಕೃಷ್ಣಪ್ಪ ಪೂಜಾರಿ, ಜಯಂತಿ ಬಿ, ಆನಂದ ನಾಯಕ ಪಿ , ವಿದ್ಯಾರ್ಥಿ ನಾಯಕ ಪ್ರಣೀತ್ ರಾವ್ ಕೆ. ಮೊದಲಾದವರು ಉಪಸ್ಥಿತರಿದ್ದರು. ಹಿರಿಯ ವಿದ್ಯಾರ್ಥಿ ಸಂಘದ ಅಧ್ಯಕ್ಷ ಜಿ. ಸುಲೈಮಾನ್ ಸ್ವಾಗತಿಸಿ, ಸಮಿತಿಯ ಗೌರವ ಸಲಹೆಗಾರರಾದ ಶಶಿಕಲಾ ಪ್ರಸ್ತಾವನೆಗೈದರು. ಕೋಶಾಧಿಕಾರಿ ಹರೀಶ್ ರಾವ್ ವಂದಿಸಿದರು. ಶ್ರೀಕಾಂತ್ ರಾವ್ ಹಾಗೂ ರಶ್ಮಿ ಕಾರಂತ್ ಕಾರ್ಯಕ್ರಮ ನಿರೂಪಿಸಿದರು. ಶಾಲಾ ಶಿಕ್ಷಕರು ಸಹಕರಿಸಿದರು.

ಜಿಲ್ಲಾಧಿಕಾರಿ ಅಧ್ಯಕ್ಷತೆಯಲ್ಲಿ ನೋಡಲ್ ಅಧಿಕಾರಿಗಳ ಸಭೆ | ಸಿದ್ಧತೆಗಳ ಪರಿಶೀಲನೆ


1146 ಮತಗಟ್ಟೆಗಳಲ್ಲೂ ಮೂಲಭೂತ ಸೌಲಭ್ಯ ಅಳವಡಿಕೆ

ಕಾಸರಗೋಡು: ವಿಧಾನಸಭಾ ಚುನಾವಣೆಗೆ ಸಂಬಂಧಿಸಿ ಕಾಸರಗೋಡು ಜಿಲ್ಲೆಯ ಎಲ್ಲಾ 1146 ಮತಗಟ್ಟೆಗಳಲ್ಲಿ ಮತದಾನಕ್ಕೆ ಎಲ್ಲಾ ಸಿದ್ಧತೆಗಳು ಪೂರ್ಣಗೊಂಡಿವೆ. ಜಿಲ್ಲಾಡಳಿತ ಮತ್ತು ಚುನಾವಣಾ ಆಯೋಗವು ಸುಗಮ ಮತದಾನವನ್ನು ಖಚಿತಪಡಿಸಿಕೊಳ್ಳಲು ಸಮರ್ಪಕ ವ್ಯವಸ್ಥೆಗಳನ್ನು ಕೈಗೊಂಡಿವೆ.

ಅಗತ್ಯ ಸೌಲಭ್ಯಗಳನ್ನು ಖಚಿತಪಡಿಸಿಕೊಳ್ಳಲು ಜಿಲ್ಲಾ ಚುನಾವಣಾ ಅಧಿಕಾರಿಯೂ ಆಗಿರುವ ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಅವರ ಅಧ್ಯಕ್ಷತೆಯಲ್ಲಿ ನೋಡಲ್ ಅಧಿಕಾರಿಗಳ ಸಭೆಯು ಸೋಮವಾರ ಜಿಲ್ಲಾಧಿಕಾರಿ ಕಚೇರಿಯಲ್ಲಿ ನಡೆಯಿತು. ಈ ಸಂದಭರದಲ್ಲಿ ಮತಗಟ್ಟೆಗಳಲ್ಲಿನ ಸಿದ್ಧತೆಗಳನ್ನು ಪರಿಶೀಲಿಸಲಾಯಿತು.

ವಿಶೇಷ ಸಹಾಯ ಕೇಂದ್ರ

ಪ್ರತಿ ಮತಗಟ್ಟೆಗೆ ಮತದಾನ ಸಾಮಗ್ರಿಗಳನ್ನು ಒದಗಿಸುವುದರ ಜೊತೆಗೆ ಮತದಾರರಿಗೆ ಸಹಾಯ ಮಾಡಲು ಬೂತ್ ಮಟ್ಟದ ಅಧಿಕಾರಿಗಳ (ಬಿಎಲ್‌ಒ) ವಿಶೇಷ ಸಹಾಯ ಕೇಂದ್ರಗಳನ್ನು ಸಹ ಸ್ಥಾಪಿಸಲಾಗುವುದು. ಎಲ್ಲಾ ಮತಗಟ್ಟೆಗಳಲ್ಲಿ



ರ‍್ಯಾಂಪ್ ಸೌಲಭ್ಯಗಳು, ನಿರಂತರ ವಿದ್ಯುತ್ ಸರಬರಾಜು, ಕುಡಿಯುವ ನೀರು, ತಾಯಂದಿರು ತಮ್ಮ ಶಿಶುಗಳಿಗೆ ಹಾಲುಣಿಸಲು ಆಹಾರ ಕೊಠಡಿಗಳಂತಹ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಖಾತರಿಪಡಿಸಲಾಗಿದೆ.

ಈ ಸಭೆಯಲ್ಲಿ ಶುಚಿತ್ವ ಮಿಷನ್ ಜಿಲ್ಲಾ ಸಂಯೋಜಕ ಪಿ.ಜಯನ್, ಕುಟುಂಬಶ್ರೀ ಜಿಲ್ಲಾ ಸಂಯೋಜಕ ರತೀಶ್ ಪಿಲಿಕೋಡ್, ಸಾಮಾಜಿಕ ನ್ಯಾಯ ವಿಭಾಗದ ಪ್ರಭಾರಿ ಅಧಿಕಾರಿ ಎಂ.ಅಬ್ದುಲ್ಲ, ತ್ಯಾಜ್ಯ ಮುಕ್ತ ನವ ಕೇರಳ ಸಹ ಸಂಯೋಜಕ ಎಚ್. ಕೃಷ್ಣ , ಚುನಾವಣಾ ಇಲಾಖೆ ಕಿರಿಯ ಅಧೀಕ್ಷಕ ಎ.ರಾಜೀವನ್ ಭಾಗವಹಿಸಿದ್ದರು.

ದಿವ್ಯಾಂಗರ ಬಗ್ಗೆ ವಿಶೇಷ ಪರಿಗಣನೆ

ಈ ಬಾರಿಯ ವಿಧಾನಸಭಾ ಚುನಾವಣೆಯ ಅಂಗವಾಗಿ ದಿವ್ಯಾಂಗ ವಿಭಾಗದ ಮತದಾರರಿಗೆ ಉತ್ತಮ ಸೌಲಭ್ಯಗಳನ್ನು ಒದಗಿಸಲಾಗುವುದು. ವೀಲ್‌ಚೇರ್ ಸೌಲಭ್ಯ ನೀಡಲು ನಿರ್ಧರಿಸಲಾಗಿದೆ. ಮತದಾನ ಪ್ರಕ್ರಿಯೆಯಲ್ಲಿ ಸಹಾಯ ಮಾಡಲು ಪ್ರತಿ ಮತಗಟ್ಟೆಯಲ್ಲಿ ವಿಶೇಷ ಸಿಬ್ಬಂದಿ ನಿಯೋಜಿಸಲಾಗಿದೆ. ಪ್ರಜಾಪ್ರಭುತ್ವ ಪ್ರಕ್ರಿಯೆ ಭಾಗವಾಗಲು ಬರುವ ಮೊದಲ ಬಾರಿಗೆ ಮತದಾರರನ್ನು ಸಿಹಿತಿಂಡಿಗಳೊಂದಿಗೆ ಸ್ವಾಗತಿಸಲು ತೀರ್ಮಾನಿಸಲಾಗಿದೆ.

ಹಸಿರು ಮತಗಟ್ಟೆ

ಜಿಲ್ಲೆಯಲ್ಲಿ ವಿಧಾನಸಭಾ ಚುನಾವಣೆಯು ಹಸಿರು ಶಿಷ್ಟಾಚಾರವನ್ನು ಸಂಪೂರ್ಣವಾಗಿ ಪಾಲಿಸುತ್ತಾ ನಡೆಯಲಿದ್ದು, ಪರಿಸರ ಸಂರಕ್ಷಣೆಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ. ಇದರ ಭಾಗವಾಗಿ ಪ್ರತಿ ಗ್ರಾಮ ಪಂಚಾಯತ್ ಮತ್ತು ನಗರಸಭೆಯಲ್ಲಿ ಒಂದು ಮಾದರಿ ಹಸಿರು ಮತಗಟ್ಟೆಯನ್ನು ಸ್ಥಾಪಿಸಲಾಗುವುದು. ತ್ಯಾಜ್ಯ ಮುಕ್ತ ಚುನಾವಣೆಗಳನ್ನು ಖಚಿತಪಡಿಸಿಕೊಳ್ಳಲು ಜಿಲ್ಲೆಯ 1146 ಮತಗಟ್ಟೆಗಳಲ್ಲಿ ಹಸಿರು ಕ್ರಿಯಾ ಸೇನೆಯ ಸುಮಾರು 1500 ಮಂದಿ ಸದಸ್ಯರನ್ನು ನಿಯೋಜಿಸಲಾಗಿದೆ.

ಇಂದು ಅಂತಿಮ ತರಬೇತಿ

ವಿಧಾನಸಭಾ ಚುನಾವಣೆ ಅಂಗವಾಗಿ ಮಾ.31, ಏ.1 ಮತ್ತು 4 ರಂದು ನಡೆದ 2ನೇ ಹಂತದ ತರಬೇತಿಯಲ್ಲಿ ಭಾಗವಹಿಸದವರಿಗೆ ಅಂತಿಮ ತರಬೇತಿ ಮತ್ತು ಏ.6 ರಂದು ನಡೆದ ಹೆಚ್ಚುವರಿ ತರಬೇತಿ ಯನ್ನು ಏ.7 ರಂದು ಬೆಳಗ್ಗೆ 9.30ಕ್ಕೆ ಕ್ಕೆ ಕಲೆಕ್ಟರೇಟ್‌ನ ಮುಖ್ಯ ಸಮ್ಮೇಳನ ಸಭಾಂಗಣದಲ್ಲಿ ಮುಂದು ವರಿಸಲಾಗುವುದು ಎಂದು ಚುನಾವಣಾ ತರಬೇತಿ ವಿಭಾಗದ ಉಸ್ತುವಾರಿ ನೋಡಲ್ ಅಧಿಕಾರಿ ಪ್ರಕಟಿಸಿದ್ದಾರೆ.

ಅಗತ್ಯ ಸೌಲಭ್ಯ

ಚುನಾವಣಾ ಪ್ರಕ್ರಿಯೆ ತ್ವರಿತಗೊಳಿಸಲು, ಅಧಿಕಾರಿಗಳಿಗೆ ಬೆಂಬಲ ನೀಡಲು ಮತಗಟ್ಟೆಗಳಲ್ಲಿ ಎನ್ನೆಸ್ಸೆಸ್, ಸ್ಟೂಡೆಂಟ್ ಪೊಲೀಸ್ ಕೆಡೆಟ್, ಎನ್‌ಸಿಸಿ ವಿದ್ಯಾರ್ಥಿಗಳ ಸೇವೆ ಸಹ ಒದಗಿಸಲಾಗುವುದು. ಕರ್ತವ್ಯದಲ್ಲಿರುವ ಚುನಾವಣಾ ಅಧಿಕಾರಿಗಳಿಗೆ ಅಗತ್ಯವಾದ ಆಹಾರ ಸೌಲಭ್ಯ ಕುಟುಂಬಶ್ರೀ ನೇತೃತ್ವದಲ್ಲಿ ಎಲ್ಲಾ ಮತಗಟ್ಟೆಗಳಲ್ಲಿ ವ್ಯವಸ್ಥೆ ಮಾಡಲಾಗಿದೆ.

ಸುತ್ತ ಮುತ್ತ

ವಿಧಾನಸಭಾ ಚುನಾವಣೆ: ಮತದಾನ, ಮತ ಎಣಿಕೆ ದಿನಗಳಲ್ಲಿ ಮದ್ಯ ನಿಷೇಧ

ಕಾಸರಗೋಡು: ವಿಧಾನಸಭಾ ಚುನಾವಣೆಗೆ ಸಂಬಂಧಿಸಿದಂತೆ ಕಾಸರಗೋಡು ಜಿಲ್ಲೆಯೂ ಸಹಿತ ಕೇರಳದಲ್ಲಿ ಮತದಾನದ ದಿನ ಮತ್ತು ಮತ ಎಣಿಕೆಯ ದಿನದಂದು ರಾಜ್ಯ ಸರ್ಕಾರವು ಶುಷ್ಕ ದಿನವನ್ನು ಘೋಷಿಸಿದೆ. ಅದರಂತೆ ಏಪ್ರಿಲ್ 9 ರಂದು ಮತದಾನ ಮತ್ತು ಮೇ 4ರಂದು ಮತ ಎಣಿಕೆ ದಿನಗಳಲ್ಲಿ ಸಂಪೂರ್ಣ ಮದ್ಯ ನಿಷೇಧ ಜಾರಿಯಲ್ಲಿರುತ್ತದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ. ಮತದಾನ ಮುಗಿಯುವ 48 ಗಂಟೆಗಳ ಮೊದಲು ಮದ್ಯ ಮಾರಾಟ ಮತ್ತು ವಿತರಣೆಯನ್ನು ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ. ಯಾವುದೇ ಕ್ಷೇತ್ರದಲ್ಲಿ ಮರು ಮತದಾನ ಅಗತ್ಯವಿದ್ದರೆ ಆ ದಿನಗಳಲ್ಲಿ ನಿರ್ಬಂಧಗಳು ಸಹ ಅನ್ವಯಿಸುತ್ತವೆ.

ಈ ಕ್ರಮ 1951ರ ಜನತಾ ಪ್ರಾತಿನಿಧ್ಯ ಕಾಯ್ದೆಯ ಸೆಕ್ಷನ್ 135ಸಿ ವ್ಯಾಪ್ತಿಯಲ್ಲಿದೆ. ಇದರ ಪ್ರಕಾರ ಈ ದಿನಗಳಲ್ಲಿ ಹೊಟೇಲ್‌ಗಳು, ರೆಸ್ಟೋರೆಂಟ್‌ಗಳು, ಕ್ಲಬ್‌ಗಳು, ಸ್ಟಾರ್ ಹೊಟೇಲ್‌ಗಳು ಸೇರಿದಂತೆ ಮದ್ಯ ಪೂರೈಸಲು ಪರವಾನಗಿ ಪಡೆದ ಯಾವುದೇ ಸಂಸ್ಥೆಯಲ್ಲಿ ಮದ್ಯ ಒದಗಿಸಬಾರದು , ಮಾರಾಟ ಮಾಡಬಾರದು. ಸಾರ್ವಜನಿಕ ಅಥವಾ ಖಾಸಗಿ ಸ್ಥಳಗಳಲ್ಲಿ ಮದ್ಯ ಒದಗಿಸುವುದು ಮತ್ತು ವಿತರಿಸುವುದು ಅಪರಾಧವಾಗಿದೆ. ಅಕ್ರಮವಾಗಿ ಮದ್ಯ ಸಂಗ್ರಹಿಸುವುದನ್ನು ತಡೆಯಲು ಮತ್ತು ನೆರೆಯ ರಾಜ್ಯಗಳಿಂದ ಮದ್ಯ ಪೂರೈಕೆಯನ್ನು ನಿಯಂತ್ರಿಸಲು ಅಬಕಾರಿ ಇಲಾಖೆ ಮತ್ತು ಪೊಲೀಸರಿಗೆ ಕಟ್ಟುನಿಟ್ಟಿನ ಸೂಚನೆಗಳನ್ನು ನೀಡಲಾಗಿದೆ. ಆದೇಶ ಉಲ್ಲಂಘಿಸುವವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳುವ ಕಾರ್ಯವನ್ನು ಅಬಕಾರಿ ಆಯುಕ್ತರಿಗೆ ವಹಿಸಲಾಗಿದೆ.

ಉದುಮ ಕ್ಷೇತ್ರದ ಅಭ್ಯರ್ಥಿ ಮನುಲಾಲ್ ವಿವಿಧೆಡೆ ಮತಯಾಚನೆ

ಕಾಸರಗೋಡು: ವಿಧಾನಸಭಾ ಚುನಾವಣೆಯ ಅಂಗವಾಗಿ ಉದುಮ ವಿಧಾನಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಮನುಲಾಲ್ ಮೇಲತ್ ಅವರು ಉದುಮ ಮಂಡಲದ ವಿವಿಧೆಡೆಗೆ ತೆರಳಿ ಮತಯಾಚಿಸಿದರು.

ಕೊಟ್ಟಪ್ಪುನ್ನು ಪ್ರದೇಶದಲ್ಲಿ ಮನೆಗಳಿಗೆ ತೆರಳಿ ಮತದಾರರನ್ನು ಭೇಟಿಯಾದರು. ಪೊಯಿನಾಚಿಯಲ್ಲಿ ಜರಗಿದ ಚುನಾವಣಾ ಪ್ರಚಾರ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು. ಪೆರಿಯ ನಿಡುವೊಟ್ಟು ಪಾರಾ ಶ್ರೀ ಶೈಲಂ ದೇವಸ್ಥಾನದ ದರುಶನ ಪಡೆದರು. ಪರವನಡ್ಕ ಮತ್ತು ಕೋಳಿಯಡ್ಕ ಪ್ರದೇಶಗಳಲ್ಲಿ ಮತಯಾಚಿಸಿದರು.

ಕುಂಡಡ್ಕದಲ್ಲಿ ನಡೆದ ಶ್ರೀ ವಿಷ್ಣುಮೂರ್ತಿ ದೈವದ ಉತ್ಸವದಲ್ಲಿ ಭಾಗಿಯಾದರು. ಕೊಪ್ಪಳ ತರವಾಡಿಗೆ ತೆರಳಿ ಮಾತುಕತೆ ನಡೆಸಿದರು.

ನಂತರ ಪರವನಡ್ಕ, ಪಾಲಕುನ್ನು, ಉದುಮ ಪಳ್ಳಂ ಪ್ರದೇಶಗಳಲ್ಲಿ ಜನರೊಂದಿಗೆ ಸಂವಹನ ನಡೆಸಿದರು. ಬಳಿಕ ಪುಲುವಿಂಚಿ ಮೂಲ ಕರಿಚಾಮುಂಡಿ ದೇವಸ್ಥಾನಕ್ಕೆ ಭೇಟಿ ನೀಡಿದರು.

ಕಡಪ್ಪುರ ಶ್ರೀ ಚೇರುಂಬಾ ಭಜನಾ ಮಂದಿರ ವಾರ್ಷಿಕ ಮಹೋತ್ಸವ

ಕಾಸರಗೋಡು: ಕಡಪ್ಪುರ ಎಸ್‌ಸಿಬಿಬಿಎಂ ರೋಡ್ ಬಳಿಯ ಶ್ರೀ ಚೇರುಂಬಾ ಭಗವತೀ ಭಜನಾ ಮಂದಿರದಲ್ಲಿ 56ನೇ ವಾರ್ಷಿಕ ಮಹೋತ್ಸವವು ಏ.25ರಿಂದ 27ರ ವರೆಗೆ ವಿವಿಧ ಕಾರ್ಯಕ್ರಮಗಳೊಂದಿಗೆ ವಿಜೃಂಭಣೆಯಿಂದ ಜರಗಲಿದೆ. ಏ.25ರಂದು ಬೆಳಿಗ್ಗೆ 5.30ಕ್ಕೆ ಗಣಪತಿ ಹೋಮ, 8.30ಕ್ಕೆ ಉಷಃಪೂಜೆ, 9ಕ್ಕೆ ಕಲಶಾಭಿಷೇಕ, 10ಗಂಟೆಗೆ ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜೆ, ಮಧ್ಯಾಹ್ನ 12ಕ್ಕೆ ಪೂಜೆ, ಸಂಜೆ 6ಕ್ಕೆ ದೀಪಾರಾಧನೆ, 6.30ಕ್ಕೆ ಭಜನೆ, ರಾತ್ರಿ 8ಕ್ಕೆ ಪೂಜೆ, 9 ಗಂಟೆಗೆ ಮಕ್ಕಳಿಂದ ವಿವಿಧ ಕಾರ್ಯಕ್ರಮಗಳು ನಡೆಯಲಿವೆ. ಏ.26ರಂದು ಬೆಳಿಗ್ಗೆ 8 ಗಂಟೆಗೆ ಉಷಃಪೂಜೆ, 9ಕ್ಕೆ ಪೊಂಗಾಲ, ಮಧ್ಯಾಹ್ನ 12 ಗಂಟೆಗೆ ಪೂಜೆ, ಸಂಜೆ 6ಕ್ಕೆ ದೀಪಾರಾಧನೆ, 6.30ಕ್ಕೆ ಭಜನೆ, ರಾತ್ರಿ 8ಕ್ಕೆ ಪೂಜೆ, 9ಗಂಟೆಗೆ ಕುಮಾರ್ ಫೋಕ್ ಬ್ಯಾಂಡ್ ಕೊಟ್ಟೋಡಿ ಪ್ರದರ್ಶನ, ಜಾನಪದ ಹಾಡುಗಳು ಜರಗಲಿವೆ. ಏ.27ರಂದು ಬೆಳಿಗ್ಗೆ 8ಗಂಟೆಗೆ ಉಷಃಪೂಜೆ, 9ಕ್ಕೆ ಪಂಚಾಮೃತಾಭಿಷೇಕ, ಮಧ್ಯಾಹ್ನ 12 ಗಂಟೆಗೆ ಪೂಜೆ, 1ರಿಂದ ಅನ್ನ ಸಂತರ್ಪಣೆ, ಸಂಜೆ 6ಕ್ಕೆ ದೀಪಾರಾಧನೆ, ಭಜನೆ, ರಾತ್ರಿ 10ಕ್ಕೆ ಶ್ರೀ ಚೇರುಂಬಾ ಭಗವತೀ ಮಹಿಳಾ ಸಂಘದಿಂದ ಹುಲ್ಪೆ ಸಂರ್ಪಣೆ, 11ಕ್ಕೆ ಮಹಾಪೂಜೆ, 12ಗಂಟೆಗೆ ಲಕ್ಕಿಡಿಪ್ ಡ್ರಾ ನಡೆಯಲಿದೆ. ಮೇ 27ರಂದು ಪ್ರತಿಷ್ಠಾ ದಿನ ಮಹೋತ್ಸವದ ಪ್ರಯುಕ್ತ ಬೆಳಿಗ್ಗೆ 8.27ರಿಂದ ವಿವಿಧ ವಿಶೇಷ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ದೇವಳದ ಪ್ರಕಟಣೆ ತಿಳಿಸಿದೆ.



ಅಂಬಿಲಡ್ಕ ಶ್ರೀ ಪೂಮಾಣಿ ಕಿನ್ನಿಮಾಣಿ ರಾಜನ್ ದೈವಸ್ಥಾನದಲ್ಲಿ ಜಾತ್ರಾ ಮಹೋತ್ಸವ ಆರಂಭಗೊಂಡಿದ್ದು, ಏ.8ರ ವರೆಗೆ ಜರಗಲಿದೆ. ಮಹೋತ್ಸವದ ಅಂಗವಾಗಿ ಭಾನುವಾರ ಕಿನ್ನಿಮಾಣಿ ದೈವದ ನೇಮ ಜರಗಿತು.

ಸೂಕ್ಷ್ಮ-ಅತಿ ಸೂಕ್ಷ್ಮ ಬೂತ್‌ಗಳಲ್ಲಿ ಹೆಚ್ಚಿನ ಕೇಂದ್ರ ಪಡೆಗಳ ನಿಯೋಜಿಸಲು ಸೂಚನೆ



ಕಾಸರಗೋಡು: ವಿಧಾನಸಭಾ ಚುನಾವಣೆಗೆ ಸಂಬಂಧಿಸಿ ಜಿಲ್ಲಾ ಚುನಾವಣಾಧಿಕಾರಿ, ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಅವರು ಮಂಜೇಶ್ವರ ಮತ್ತು ಕಾಸರಗೋಡು ವಿಧಾನಸಭಾ ಕ್ಷೇತ್ರಗಳ ಮತಗಟ್ಟೆಗಳು ಮತ್ತು ಸ್ವಾಗತ ಹಾಗೂ ವಿತರಣಾ ಕೇಂದ್ರಗಳಿಗೆ ಸೋಮವಾರ ಭೇಟಿ ನೀಡಿ ಸಿದ್ಧತೆಗಳನ್ನು ಸಮಗ್ರವಾಗಿ ಪರಿಶೀಲಿಸಿದರು.

ಕಾಸರಗೋಡು ಸರ್ಕಾರಿ ಕಾಲೇಜಿನಲ್ಲಿ ಇಲೆಕ್ಟ್ರಾನಿಕ್ ಮತಯಂತ್ರಗಳು ಮತ್ತು ವಿವಿಪ್ಯಾಟ್‌ಗಳನ್ನು ಇರಿಸಲಾಗಿರುವ ಸ್ಟ್ರಾಂಗ್ ರೂಮ್‌ಗಳಿಗೂ ಜಿಲ್ಲಾಧಿಕಾರಿ ಭೇಟಿ ನೀಡಿ ಮಾಹಿತಿಗಳನ್ನು ಕಲೆಹಾಕಿದರು. ಕೇರಳ ರಾಜ್ಯದ ಒಂದನೇ ಮತಗಟ್ಟೆಯಾದ ಕುಂಜತ್ತೂರು ಸರ್ಕಾರಿ ವೃತ್ತಿಪರ ಪ್ರೌಢಶಾಲೆಯನ್ನು ಸಂದರ್ಶಿಸಿದರು.

ಮಂಜೇಶ್ವರ ಕ್ಷೇತ್ರದ ಸಮಸ್ಯೆ ಪೀಡಿತ ಮತಗಟ್ಟೆಯಾದ ಕಣ್ವತೀರ್ಥ ಸರ್ಕಾರಿ ಎಲ್‌ಪಿ ಶಾಲೆಯ ಮತಗಟ್ಟೆಗೂ ಜಿಲ್ಲಾಧಿಕಾರಿ ಭೇಟಿ ನೀಡಿ, ಬಳಿಕ ಮಂಜೇಶ್ವರ ಠಾಣೆಯಲ್ಲಿ ಪೊಲೀಸ್ ಅಧಿಕಾರಿಗಳೊಂದಿಗೆ ಭದ್ರತಾ ವ್ಯವಸ್ಥೆಗಳ ಕುರಿತು ಮಾತನಾಡಿದರು. ಮಂಜೇಶ್ವರ ತಹಶೀಲ್ದಾರ್ ಪಿ.ಪ್ರೇಮರಾಜ್, ಅಧಿಕಾರಿ ಹ್ಯಾರಿಸ್ ಮತ್ತಿತರರು ಉಪಸ್ಥಿತರಿದ್ದರು.

ಕಾಸರಗೋಡು ಕ್ಷೇತ್ರದ ಸಮಸ್ಯೆ ಪೀಡಿತ ಬೂತ್‌ಗಳಾದ ಆಲಂಪಾಡಿ ಸರ್ಕಾರಿ ಹೈಯರ್ ಸೆಕೆಂಡರಿ ಶಾಲೆ, ಚೆರ್ಕಳ ಸೆಂಟ್ರಲ್ ಗವರ್ನಮೆಂಟ್ ಹೈಯರ್ ಸೆಕೆಂಡರಿ ಶಾಲೆಯ ಮತಗಟ್ಟೆಗಳಿಗೆ ಅರ್ಜುನ್ ಪಾಂಡ್ಯನ್ ಸಂದರ್ಶನ ನೀಡಿದರು.

ಸೂಕ್ಷ್ಮ ಹಾಗೂ ಅತಿ ಸೂಕ್ಷ್ಮ ಬೂತ್‌ಗಳಲ್ಲಿ ಹೆಚ್ಚಿನ ಕೇಂದ್ರ ಪಡೆಗಳನ್ನು ನಿಯೋಜಿಸಲು ಸೂಚನೆ ನೀಡಲಾಗಿದೆ ಎಂದು ಅವರು ತಿಳಿಸಿದರು. ಚುನಾವಣಾ ಸಾಮಗ್ರಿಗಳ ವಿತರಣಾ ಕೇಂದ್ರಗಳಿಗೆ ಭೇಟಿ ನೀಡಿದ ಸಂದರ್ಭ ಮಂಜೇಶ್ವರ ಚುನಾವಣಾ ಅಧಿಕಾರಿ, ಉಪ ಕಲೆಕ್ಟರ್ (ಎಲ್‌ಆರ್) ವಿ.ರಘುಮಣಿ, ಕಾಸರಗೋಡು ಚುನಾವಣಾ ಅಧಿಕಾರಿ, ಆರ್‌ಡಿಒ ಬಿನು ಜೋಸೆಫ್ ಮತ್ತು ಇತರ ಚುನಾವಣಾ ಅಧಿಕಾರಿಗಳು ಹಾಜರಿದ್ದರು.

> **ಕನ್ನಡದಲ್ಲೂ ಮಾಹಿತಿ ಲಭ್ಯ**
>
> **ಎಲ್ಲಾ ಮತಗಟ್ಟೆಗಳಲ್ಲಿ ಮೂಲಭೂತ ಸೌಲಭ್ಯಗಳನ್ನು ಸಿದ್ಧಪಡಿಸಲಾಗಿದೆ , ಭಾಷಾ ಅಲ್ಪಸಂಖ್ಯಾತ ಪ್ರದೇಶಗಳಲ್ಲಿ ಕನ್ನಡದ ಲ್ಲಿಯೂ ಮಾಹಿತಿ ಲಭ್ಯವಾಗುವಂತೆ ಮಾಡಲಾಗುವುದು.**
>
> ● ಅರ್ಜುನ್ ಪಾಂಡ್ಯನ್, ಡೀಸಿ

ಹೆಚ್ಚುತ್ತಿರುವ ಬಿಸಿಲಿನ ತಾಪಮಾನ: ಕುಂಬಳೆ ಪಂಚಾಯತ್ ಪರಿಸರದಲ್ಲಿ ಜಲಕ್ಷಾಮ ಭೀತಿ!

ಕುಂಬಳೆ: ಹೆಚ್ಚುತ್ತಿರುವ ಬಿಸಿಲಿನ ತಾಪಕ್ಕೆ ಕುಂಬಳೆ ಗ್ರಾಮ ಪಂಚಾಯತ್ ವ್ಯಾಪ್ತಿಯ ಹಲವೆಡೆ ನೀರಿನ ಕ್ಷಾಮ ತಲೆದೋರಿದೆ. ಕುಂಬಳೆ ಸೇರಿದಂತೆ ಪರಿಸರ ಪ್ರದೇಶದ ಹಲವೆಡೆ ಕುಡಿಯುವ ನೀರಿನ ಕ್ಷಾಮ ತಡೆಗಟ್ಟಲು ಹಲವಾರು ನೀರಾವರಿ ಯೋಜನೆಗಳು ಇದ್ದರೂ ನಿಷ್ಪ್ರಯೋಜಕವಾಗಿರುವುದೂ ನೀರಿನ ಕ್ಷಾಮಕ್ಕೆ ಕಾರಣ ವಾಗಿದೆ.

ಕೆಲವೊಂದು ಸ್ವಯಂ ಪ್ರೇರಿತ ಸಂಘಟನೆಗಳು ಕುಡಿಯುವ ನೀರನ್ನು ಮನೆ ಮನೆಗೆ ತಲುಪಿಸುವ ವ್ಯವಸ್ಥೆ ಮಾಡುತ್ತಿದ್ದರೂ ನನೆಗುದಿಯಲ್ಲಿರುವ ನೀರಾವರಿ ಯೋಜನೆ ಅಪೂರ್ಣವಾಗಿಯೇ ಉಳಿದಿವೆ.



ಕಳೆದ ಬಾರಿ ಬೇಸಿಗೆಯಲ್ಲಿ ಗ್ರಾಮ ಪಂಚಾಯತ್ ಮಧ್ಯಸ್ಥಿಕೆ ವಹಿಸಿ ಸಾರ್ವಜನಿಕ ಬಾವಿಗಳನ್ನು ಸ್ವಚ್ಛಗೊಳಿಸು ವುದು, ಕೊಳವೆ ಬಾವಿಗಳ ದುರಸ್ತಿ ಕಾರ್ಯಗಳನ್ನು ಕೈಗೊಂಡಿದ್ದ ಹಿನ್ನೆಲೆ ಅಲ್ಪಮಟ್ಟಿಗೆ ನೀರಿನ ಕ್ಷಾಮ ಪರಿಹರಿಸಲು ಸಾಧ್ಯವಾಗಿದೆ.

ನಿಷ್ಪ್ರಯೋಜಕವಾಗಿದೆ

ಮೊಗ್ರಾಲ್ ಗಾಂಧಿನಗರದಲ್ಲಿ ಸುಮಾರು ಇಪ್ಪತ್ತು ವರ್ಷಗಳ ಹಿಂದೆ ಬ್ಲಾಕ್ ಪಂಚಾಯತ್ ನಿಧಿಯನ್ನು ಉಪಯೋಗಿಸಿ ಸ್ಥಾಪಿಸಿದ್ದ ಸಂಗ್ರಹಣಾ ಟ್ಯಾಂಕ್ ಯಾವುದೇ ಪ್ರಯೋಜನಕ್ಕೆ ಬಾರದೇ ನಿಷ್ಪ್ರಯೋಜಕವಾಗಿದೆ. ಇದರ ಹೊರತಾಗಿ ಮೊಗ್ರಾಲ್ ಬುಡಕಟ್ಟು ಸಮುದಾಯ ಕಾಲನಿಯಲ್ಲಿ ನಿರ್ಮಿಸಿದ ಕುಡಿಯುವ ನೀರು ಸಂಗ್ರಹ ಟ್ಯಾಂಕ್, ಕೊಳವೆ ಉಪಯೋಗ ಶೂನ್ಯವಾಗಿದೆ. ಬಾವಿ ಕೂಡಾ ಜಿಲ್ಲಾಡಳಿತ ಸಂಸ್ಥೆಯ ಅನುಮತಿ ಪಡೆದು ಆತೀ ಶೀಘ್ರದಲ್ಲಿ ಕುಡಿಯುವ ನೀರಿನ ಬಿಕ್ಕಟ್ಟು ಬಗೆಹರಿಸಲು ಸ್ಥಳೀಯಾಡಳಿತ ಸಂಸ್ಥೆ ಕ್ರಮಕೈಗೊಳ್ಳಬೇಕು ಎಂದು ಸ್ಥಳೀಯರು ಒತ್ತಾಯಿಸಿದ್ದಾರೆ.

> **ನೀರಿನ ಪ್ರಮಾಣ ಇಳಿಮುಖ**
>
> **ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿರುವ ಹಿನ್ನೆಲೆ ಏ.9ರ ತನಕ ಸ್ಥಳೀಯಾಡಳಿತ ಸಂಸ್ಥೆಗಳಿಗೆ ಕುಡಿಯುವ ನೀರು ವಿತರಣೆ ನಡೆಸುವುದು ಅಸಾಧ್ಯವಾಗಿದೆ. ಇದ ರಿಂದ ಜನಸಾಮಾನ್ಯರು ಕುಡಿಯುವ ನೀರಿಗೆ ಅಲೆದಾಡುವ ಸ್ಥಿತಿ ಉಂಟಾಗಿದೆ. ತಾಪಮಾನ ಹೆಚ್ಚಾಗುತ್ತಿರುವುದರಿಂದ ಬಾವಿ ನೀರು ಬತ್ತಿರುವುದಲ್ಲದೇ, ಕೊಳವೆ ಬಾವಿಗಳಲ್ಲೂ ನೀರಿನ ಪ್ರಮಾಣ ಇಳಿಮುಖಗೊಂಡಿದೆ.**

ವಿಧಾನಸಭಾ ಚುನಾವಣಾ ಸಹಾಯಕ ಮಾರ್ಗದರ್ಶಿ: ಜಿಲ್ಲಾಧಿಕಾರಿ ಬಿಡುಗಡೆ



ಕಾಸರಗೋಡು: ಕಾಸರಗೋಡು ಜಿಲ್ಲಾ ಮಾಹಿತಿ ಕಚೇರಿಯ ನೇತೃತ್ವದಲ್ಲಿ ಪ್ರಕಟಿಸಲಾದ ವಿಧಾನಸಭಾ ಚುನಾವಣಾ ಸಹಾಯಕ ಮಾರ್ಗದರ್ಶಿಯನ್ನು ಜಿಲ್ಲಾ ಚುನಾವಣಾಧಿಕಾರಿ ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಸೋಮವಾರ ಬಿಡುಗಡೆಗೊಳಿಸಿ, ಜಿಲ್ಲೆಯಲ್ಲಿ ನ್ಯಾಯಸಮ್ಮತ, ಯಶಸ್ವಿ ಮತದಾನಕ್ಕಾಗಿ ಸಕಲ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ ಎಂದು ನುಡಿದರು.

ಚುನಾವಣಾ ಉಪ ಕಲೆಕ್ಟರ್ ಎ.ಎನ್. ಗೋಪಕುಮಾರ್, ಜಿಲ್ಲಾ ವಾರ್ತಾಧಿಕಾರಿ ಎಂ.ಮಧುಸೂದನನ್, ಸಹಾಯಕ ಸಂಪಾದಕಿ ಎ.ಪಿ.ದಿಲ್ನಾ, ಸಹಾಯಕ ಮಾಹಿತಿ ಅಧಿಕಾರಿ ಎಸ್. ಚಿಲಂಕಾ, ಚುನಾವಣಾ ವಿಭಾಗದ ಕಿರಿಯ ಅಧಿಕಾರಿ ರಾಜೀವನ್, ಬಿನುಕುಮಾರ್, ಕುಟುಂಬಶ್ರೀ ಜಿಲ್ಲಾ ಮಿಷನ್ ಸಂಯೋಜಕ ರತೀಶ್ ಪಿಲಿಕೋಡ್, ಶುಚಿತ್ವಾ ಮಿಷನ್ ಜಿಲ್ಲಾ ಸಂಯೋಜಕ ಪಿ.ಜಯನ್, ಜಿಲ್ಲಾ ಸಾಮಾಜಿಕ ನ್ಯಾಯ ವಿಭಾಗ ಪ್ರಭಾರ ಆಧಿಕಾರಿ ಅಬ್ದುಲ್ಲ, ತ್ಯಾಜ್ಯ ಮುಕ್ತ ಕೇರಳ ಸಂಯೋಜಕ ಎಚ್.ಕೃಷ್ಣ , ಮಾಧ್ಯಮ ಕೇಂದ್ರದ ಅಧಿಕಾರಿಗಳು, ನೌಕರರು ಈ ಸಂದರ್ಭ ಉಪಸ್ಥಿತರಿದ್ದರು.

ಪಾವೂರು ನಾಗಬ್ರಹ್ಮ ವನದುರ್ಗ ಶಾಸ್ತಾರ ಕ್ಷೇತ್ರದ ವಾರ್ಷಿಕೋತ್ಸವ



ಮಂಜೇಶ್ವರ: ಪಾವೂರು ನಾಗಬ್ರಹ್ಮ ವನದುರ್ಗ ಶಾಸ್ತಾರ ಕ್ಷೇತ್ರದ ವಾರ್ಷಿಕೋತ್ಸವದ ಅಂಗವಾಗಿ ಆಶ್ಲೇಷ ಪೂಜೆ ಮತ್ತು ನಾಗತಂಬಿಲ ನಡೆಯಿತು. ಬ್ರಹ್ಮಶ್ರೀ ರವೀಶ ತಂತ್ರಿ ಕುಂಟಾರು ಅವರ ಆಶೀರ್ವಾದದೊಂದಿಗೆ ತಲಪಾಡಿ ಶ್ರೀ ದುರ್ಗಾಪರಮೇಶ್ವರಿ ಕ್ಷೇತ್ರದ ಗಣೇಸ್ ಭಟ್ ಅವರ ನೇತೃತ್ವದಲ್ಲಿ ವೈದಿಕ ಕಾರ್ಯಕ್ರಮ ಜರಗಿತು.

ಕಾರ್ಯಕ್ರಮದಲ್ಲಿ ಕ್ಷೇತ್ರದ ಅಧ್ಯಕ್ಷ ಶ್ರೀಕೃಷ್ಣ ಶಿವಕೃಪಾ ಕುಂಜತ್ತೂರು, ಉಪಾಧ್ಯಕ್ಷ ಗಣೇಶ್ ಪಾವೂರು, ಕಾರ್ಯದರ್ಶಿ ಕಮಲಾಕ್ಷ, ಕೋಶಾಧಿಕಾರಿ ಕೋಟಿಯಪ್ಪ ಪೂಜಾರಿ, ದಯಾನಂದ ಪಾವೂರು, ಶರ್ಮಿಳಾ ಮಂಗಳೂರು, ಸದಾಶಿವ ಕುಂಜತ್ತೂರು, ಉಮೇಶ ಕೊಪ್ಪಳ, ನಾರಾಯಣ ಕೊಪ್ಪಳ, ಜಯಪ್ರಕಾಶ್ ಕೊಪ್ಪಳ ಹಾಗೂ ಭಕ್ತಾದಿಗಳು ಪಾಲ್ಗೊಂಡರು.

ಯುಡಿಎಫ್ ಅಭ್ಯರ್ಥಿ ಕಲ್ಲಟ್ರ ಮಾಹಿನ್‌ಗೆ ಬಹುಮತ ನೀಡಿ ಗೆಲ್ಲಿಸಿ: ಎಂ.ಕೆ.ಮುನೀರ್



ಕಾಸರಗೋಡು: ರಾಜ್ಯದಲ್ಲಿ ಯುಡಿಎಫ್ 100ಕ್ಕೂ ಹೆಚ್ಚು ಸ್ಥಾನಗಳನ್ನು ಗೆಲ್ಲಲಿದ್ದು ಅಧಿಕಾರಕ್ಕೆ ಬರಲಿದೆ. ಏ.9ರಂದು ನಡೆಯುವ ಚುನಾವಣೆ ಫ್ಯಾಸಿಸಂ ವಿರುದ್ಧವಾಗಿದೆ ಎಂದು ಮುಸ್ಲಿಂಲೀಗ್ ರಾಜ್ಯ ಕಾರ್ಯದರ್ಶಿ ಡಾ.ಎಂ.ಕೆ. ಮುನೀರ್ ಹೇಳಿದ್ದಾರೆ.

ಚೆಂಗಳ ಪಂ.ನ ಆಲಂಪಾಡಿಯಲ್ಲಿ ಸೋಮವಾರ ಜರಗಿದ ಚುನಾವಣಾ ಪ್ರವಾಸ ಸಭೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು. ಕಾಸರಗೋಡಿನಲ್ಲಿ ಯುಡಿಎಫ್ ಅಭ್ಯರ್ಥಿ ಕಲ್ಲಟ್ರ ಮಾಹಿನ್ ಅವರಿಗೆ ಐತಿಹಾಸಿಕ ಬಹುಮತ ನೀಡುವ ಮೂಲಕ ಕಾಸರಗೋಡಿನ ಜಾತ್ಯತೀತ ಹೆಮ್ಮೆಯನ್ನು ಉಳಿಸಿಕೊಳ್ಳುವಂತೆ ಅವರು ಮತದಾರರಲ್ಲಿ ಮನವಿ ಮಾಡಿದರು.

ಇದು ಉತ್ತಮ ಅವಕಾಶ

ಜನರ ವಿರುದ್ಧ ದುರಹಂಕಾರ ಮತ್ತು ದ್ವೇಷ ಸಾಧಿಸುವ ಮುಖ್ಯಮಂತ್ರಿ ಮತ್ತು ಸಚಿವರಿಗೆ ಸರಿಯಾದ ಉತ್ತರ ನೀಡಲು ಇದು ಒಂದು ಅವಕಾಶ ಎಂದು ಅವರು ನುಡಿದರು.

ಎಡರಂಗವನ್ನು ಕಿತ್ತೊಗೆಯಬೇಕು

ಪಿಣರಾಯಿ ವಿಜಯನ್ ಸರಕಾರದಿಂದ ಜನರು ಅಪಾರ ತೊಂದರೆ ಅನುಭವಿಸುವಂತಾಗಿದೆ. ಆದ್ದರಿಂದ ಎಡರಂಗ ಸರಕಾರ ವನ್ನು ಕಿತ್ತೊಗೆಯಬೇಕು ಎಂದು ಅವರು ಕರೆ ನೀಡಿದರು.

ಸಭೆಯ ಅಧ್ಯಕ್ಷತೆಯನ್ನು ಜಲೀಲ್ ಎರ್ದುಂಕಡವು ವಹಿಸಿದ್ದರು. ಸಂಚಾಲಕ ಅಬ್ದುಲ್ ರಝಾಕ್ ಸ್ವಾಗತಿಸಿ, ವಂದಿಸಿದರು. ಸಿ.ಟಿ.ಅಹಮ್ಮದಾಲಿ, ಎನ್.ಎ.ನೆಲ್ಲಿಕುನ್ನು, ಎ.ಗೋವಿಂದನ್ ನಾಯರ್, ಎನ್.ಎ.ಖಾಲಿದ್, ಕೆ.ಅಬ್ದುಲ್ಲ ಕುಂಞಿ, ಸಿ.ವಿ.ಜೇಮ್ಸ್ ಮೊದಲಾದವರು ಈ ಸಂದರ್ಭದಲ್ಲಿ ಮಾತನಾಡಿದರು.

ಏ.18-23ರವೆರೆಗೆ ನುಳ್ಳಿಪ್ಪಾಡಿ ಶ್ರೀ ಅಯ್ಯಪ್ಪ ಸ್ವಾಮಿ ಕ್ಷೇತ್ರದಲ್ಲಿ ಬ್ರಹ್ಮಕಲಶ: ಸಿದ್ಧತಾ ಸಭೆ

ಕಾಸರಗೋಡು: ನುಳ್ಳಿಪ್ಪಾಡಿ ಶ್ರೀ ಅಯ್ಯಪ್ಪ ಸ್ವಾಮಿ ಕ್ಷೇತ್ರದಲ್ಲಿ ಏ.18ರಿಂದ 23ರ ವರೆಗೆ ಜರಗಲಿರುವ ಅಷ್ಟಬಂಧ ಬ್ರಹ್ಮಕಲಶ ಜರಗಲಿದ್ದು, ಕಾರ್ಯಕ್ರಮವನ್ನು ಯಶಸ್ವಿಗೊಳಿಸುವ ನಿಟ್ಟಿನಲ್ಲಿ ಸಿದ್ಧತಾ ಸಭೆ ಭಾನುವಾರ ಸಂಜೆ ಶ್ರೀ ಕ್ಷೇತ್ರ ಪರಿಸರದಲ್ಲಿ ಜರಗಿತು. ಸಭೆಯನ್ನು ಬ್ರಹ್ಮಕಲಶೋತ್ಸವ ಸಮಿತಿ ಕಾರ್ಯದರ್ಶಿ ಬಾಲಕೃಷ್ಣನ್ ಚೆನ್ನಿಕೆರೆ ಉದ್ಘಾಟಿಸಿದರು. ಬ್ರಹ್ಮಕಲಶೋತ್ಸವ ಸಮಿತಿ ಪ್ರಧಾನ ಕಾರ್ಯದರ್ಶಿ ಕೃಷ್ಣಪ್ರಸಾದ್ ಕೋಟೆಕಣಿ ಅಧ್ಯಕ್ಷತೆ ವಹಿಸಿದ್ದರು.

ಮಾಹಿತಿ ನೀಡಿದರು

ಶ್ರೀ ಕ್ಷೇತ್ರ ಟ್ರಸ್ಟಿ ಅಧ್ಯಕ್ಷ ಗಣೇಶ್ ಅಮ್ಮೆ ಮಾತನಾಡಿ, ವೈದಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮದ ಚಟುವಟಿಕೆಗಳ ಕುರಿತು ಸಮಗ್ರ ಮಾಹಿತಿ ನೀಡಿದರು.

ಬ್ರಹ್ಮಕಲಶೋತ್ಸವ ಸಮಿತಿ ಕೋಶಾಧಿಕಾರಿ ದೇವದಾಸ್ ನುಳ್ಳಿಪ್ಪಾಡಿ ಮಾತನಾಡಿ, ವಿವಿಧ ಸಮಿತಿಗಳು ಕೈಗೊಳ್ಳಬೇಕಾದ ವ್ಯವಸ್ಥೆಗಳ ಕುರಿತು ಹಾಗೂ ಜವಾಬ್ದಾರಿಗಳ ಬಗ್ಗೆ ಮಾಹಿತಿ ನೀಡಿದರು.

ಸ್ವಾಗತ ಸಮಿತಿ ಅಧ್ಯಕ್ಷ ರಾಮನ್ ಚೆನ್ನಿಕೆರೆ, ಆಹಾರ ಸಮಿತಿಯ ರವೀಂದ್ರ ಕೋಟೆಕಣಿ, ಉಗ್ರಾಣ ಸಮಿತಿ ಅಧ್ಯಕ್ಷ ಗಣೇಶ ಕೆ.ಆರ್., ಭಜನಾ ಸಮಿತಿಯ ಕನ್ವೀನರ್ ಪ್ರವೀಣ್ ಎನ್., ಚಪ್ಪರ ಸಮಿತಿ ಅಧ್ಯಕ್ಷ ಸುನಿಲ್ ಚೆನ್ನಿಕೆರೆ, ಸಾಂಸ್ಕೃತಿಕ ಸಮಿತಿ ಅಧ್ಯಕ್ಷ ರಾಘವೇಂದ್ರ ಕೆ.ವಿ., ಆರ್ಥಿಕ ಸಮಿತಿ ಅಧ್ಯಕ್ಷ ವರಪ್ರಸಾದ್ ಕೋಟೆಕಣಿ, ವೈದಿಕ ಸಮಿತಿ ಅಧ್ಯಕ್ಷ ನಾರಾಯಣ ಗುರುಸ್ವಾಮಿ, ಪ್ರಚಾರ ಸಮಿತಿ ಅಧ್ಯಕ್ಷ ಗುರುಪ್ರಸಾದ್ ಕೋಟೆಕಣಿ, ಮಹಿಳಾ ಸಮಿತಿ ಅಧ್ಯಕ್ಷೆ ಶೋಭಾ ಅರವಿಂದ ನಾಯ್ಕ್ ಮಾತನಾಡಿದರು.

ಜಯರಾಮ ನುಳ್ಳಿಪ್ಪಾಡಿ, ಲೋಕೇಶ್ ಶೆಟ್ಟಿ, ಸಂತೋಷ್ ಭಂಡಾರಿ, ಮಹಾದೇವ, ಲೋಕೇಶ್ ಅಣಂಗೂರು, ದಿನೇಶ್ ಅಣಂಗೂರು, ಜಗದೀಶ ಅಣಂಗೂರು, ಕಿಶೋರ್ ನುಳ್ಳಿಪ್ಪಾಡಿ, ಶಶಿಕಾಂತ್ ಶೆಟ್ಟಿ ಉಪಸ್ಥಿತರಿದ್ದರು. ಹರೀಶ್ ಕೋಟೆಕಣಿ ಸ್ವಾಗತಿಸಿ, ಸಂಜಯ್ ಕೋಟೆಕಣಿ ವಂದಿಸಿದರು.



ಜಿಲ್ಲಾ ಕುಲಾಲ ಸಂಘದ ವಾರ್ಷಿಕ ಮಹಾಸಭೆಯು ಮೇ 31ರಂದು ಕುಲಾಲ ಸಮುದಾಯ ಭವನ ತೂಮಿನಾಡು ಕುಂಜತ್ತೂರಿನಲ್ಲಿ ಜರಗಲಿದೆ. ಬೆಳಗ್ಗೆ ಗಣಪತಿ ಹೋಮ, ಸತ್ಯನಾರಾಯಣ ಪೂಜೆ, ಸನ್ಮಾನ, ಅಭಿನಂದನೆ, ಪ್ರತಿಭಾ ಪುರಸ್ಕಾರ , ಉಚಿತ ಪುಸ್ತಕ ವಿತರಣೆ ಕಾರ್ಯಕ್ರಮ ನಡೆಯಲಿದೆ.ವಾರ್ಷಿಕ ಮಹಾಸಭೆಯ ಆಮಂತ್ರಣ ಪತ್ರಿಕೆ ಬಿಡುಗಡೆ ಭಾನುವಾರ ಜಿಲ್ಲಾ ಸಂಘದ ಪ್ರಧಾನ ಕಚೇರಿಯಲ್ಲಿ ಜರಗಿತು.

ಕಾಸರಗೋಡು ಲಲಿತಕಲಾ ಸದನದ ಸಭಾಂಗಣದಲ್ಲಿ 'ಅರಸಿನ ಕುಂಕುಮ' ಕಾರ್ಯಕ್ರಮ

'ಕುಂಕುಮ' ನಮ್ಮ ಸಂಸ್ಕೃತಿ-ನೆಲದ ಪ್ರತೀಕ: ಸಂಸದ ಕ್ಯಾ.ಬ್ರಿಜೇಶ್ ಚೌಟ

ಕಾಸರಗೋಡು: ಕಾಸರಗೋಡು ವಿಧಾನಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ, ಬಿಜೆಪಿ ಜಿಲ್ಲಾಧ್ಯಕ್ಷೆ ಎಂ.ಎಲ್.ಅಶ್ವಿನಿ ಅವರ ಚುನಾವಣಾ ಪ್ರಚಾರಾರ್ಥ ಸನಾತನ ಯುವ ಕಲಾ ವೇದಿಕೆಯ ಆಶ್ರಯದಲ್ಲಿ ಸೋಮವಾರ ಸಂಜೆ ಕಾಸರಗೋಡು ಲಲಿತಕಲಾ ಸದನದ ಸಭಾಂಗಣದಲ್ಲಿ ವೈಶಿಷ್ಟ್ಯಪೂರ್ಣ ರೀತಿಯಲ್ಲಿ ಅರಸಿನ ಕುಂಕುಮ ಕಾರ್ಯಕ್ರಮ ಜರಗಿತು. ಸಮಾರಂಭವನ್ನು ಉದ್ಘಾಟಿಸಿದ ದಕ್ಷಿಣ ಕನ್ನಡ ಸಂಸದ ಕ್ಯಾ. ಬ್ರಿಜೇಶ್ ಚೌಟ ಮಾತನಾಡಿ, ಕುಂಕುಮವು ನಮ್ಮ ಸಂಸ್ಕೃತಿಯ ಮತ್ತು ನಮ್ಮ ನೆಲದ ಪ್ರತೀಕವಾಗಿದೆ. ಯಾವುದೇ ಕಾರ್ಯಕ್ರಮದ ಯಶಸ್ವಿಗೆ ಮಹಿಳೆಯರ ಪ್ರೇರಣೆ ಆತ್ಯಗತ್ಯ ಎಂದರು. ಅರಸಿನ ಕುಂಕುಮ ಕಾರ್ಯಕ್ರಮ ಚುನಾವಣೆ ಸಂದರ್ಭ ಅತ್ಯಂತ ಮಹತ್ವಪೂರ್ಣವೆನಿಸಿದೆ ಎಂದು ಅವರು ನುಡಿದರು.



ಪ್ರೇರಣಾದಾಯಿ, ರಾಷ್ಟ್ರದ ಜಾಗೃತಿ ನೆನಪಿಸುವ ಕಾರ್ಯಕ್ರಮವಾಗಿದೆ. ಇದು ಇತಿಹಾಸ ಸೃಷ್ಟಿಸುವ ಚುನಾವಣೆಯಾಗಿದೆ. ಮಹಿಳೆಯರನ್ನು ಕೆಣಕಿದರೆ ಭಾರತವು ಯಾವ ರೀತಿಯಲ್ಲಿ ಪ್ರತಿಕ್ರಿಯಿ ಸುತ್ತದೆ ಎಂಬುದನ್ನು ಆಪರೇಷನ್ ಸಿಂಧೂರ ಮೂಲಕ ಪ್ರಧಾನಮಂತ್ರಿ ನರೇಂದ್ರ ಮೋದಿ ತೋರಿಸಿ ಕೊಟ್ಟಿದ್ದಾರೆ. ಈ ಬಾರಿಯ ಚುನಾವಣೆ ಅಳಿವು ಉಳಿವಿನ ಸಂಕೇತವಾಗಿದೆ. ನಾರಿಶಕ್ತಿ ಭಗವಂತ ಸ್ವರೂಪವಾಗಿದೆ. ಕಾಸರಗೋಡು ಕನ್ನಡ – ತುಳುವಿನ ನೆಲವಾಗಿದೆ ಎಂದರು.

ಉಡುಪಿ–ಚಿಕ್ಕಮಂಗಳೂರು ಸಂಸದ ಕೋಟ ಶ್ರೀನಿವಾಸ ಪೂಜಾರಿ ಮಾತನಾಡಿ, ಇಂದು ಇಡೀ ಜಗತ್ತು ಅತ್ಯಂತ ಆತಂಕದಲ್ಲಿದೆ. ಆದರೆ ಅತ್ಯಂತ ನೆಮ್ಮದಿಯಿಂದ ಇರುವ ದೇಶ ಭಾರತವಾಗಿದೆ. ಅನ್ಯಮತೀಯರು ನೆಮ್ಮದಿಯಿಂದ ಬದುಕುವುದಿದ್ದರೆ ಅದು ಭಾರತದಲ್ಲಿ ಮಾತ್ರವಾಗಿದೆ ಎಂದರು. ಎನ್‌ಡಿಎ ಅಭ್ಯರ್ಥಿ ಎಂ.ಎಲ್.ಅಶ್ವಿನಿಯವರ ಗೆಲುವಿಗೆ ಅವಿರತ ಶ್ರಮಿಸಬೇಕೆಂದು ಕರೆ ನೀಡಿದರು.

ಸವಿತಾ ಟೀಚರ್ ಅಧ್ಯಕ್ಷತೆ ವಹಿಸಿದ್ದರು. ಚಲನಚಿತ್ರ ಮತ್ತು ಸೀರಿಯಲ್ ನಟಿ ಲಕ್ಷ್ಮೀಪ್ರಿಯ, ಸಂಪನ್ಮೂಲ ವ್ಯಕ್ತಿ ಪುಂಡರೀಕಾಕ್ಷ ಬೆಳ್ಳೂರು, ಕಾಸರಗೋಡು ವಿಧಾನಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಎಂ.ಎಲ್.ಅಶ್ವಿನಿ, ಪನ್ವೇಲ್ ಶಾಸಕ ಪ್ರಶಾಂತ್ ಠಾಕೂರ್, ಪನ್ವೇಲ್ ಕಾರ್ಪೊರೇಶನ್‌ನ ಕಾರ್ಪೊರೇಟರ್‌ಗಳಾದ ಸಂತೋಷ್ ಶೆಟ್ಟಿ ಜಿ.ಸುಮಿತ್, ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಪಿ.ರಮೇಶ್, ಜಿಲ್ಲಾ ಕಾರ್ಯದರ್ಶಿ ಪ್ರಮೀಳಾ ಮಜಲ್, ಮಧೂರು ಗ್ರಾಮ ಪಂಚಾಯತ್ ಅಧ್ಯಕ್ಷೆ ಸುಜ್ಞಾನಿ ಎಸ್.ಶ್ಯಾನುಭೋಗ್, ಪ್ರಮುಖರಾದ ಅನಿತಾ ನಾಯ್ಕ್, ಜಯಂತಿ ನಾಯ್ಕ್, ವೀಣಾ ಅರುಣ್ ಶೆಟ್ಟಿ ಮುಂತಾದವರು ಭಾಗವಹಿಸಿದ್ದರು.

> **ಸಕ್ರಿಯರಾಗಬೇಕು**
>
> **ಚುನಾವಣೆಗೆ ಕೇವಲ ಎರಡು ದಿನಗಳ ಮಾತ್ರ ಬಾಕಿ ಉಳಿದಿದ್ದು, ಈ ಎರಡು ದಿನಗಳ ಕಾಲ ಮಹಿಳೆಯರು ಸಕ್ರಿಯರಾಗಿ ಕೆಲಸ ಮಾಡಬೇಕು.**
>
> ● ಕೋಟ ಶ್ರೀನಿವಾಸ ಪೂಜಾರಿ

ಸುತ್ತ ಮುತ್ತ

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಮಂಗಳೂರು: ಉರ್ವಮಾರ್ಕೆಟ್ ಜಿಐಎಸ್ ಉಪಕೇಂದ್ರದಿಂದ ಹೊರಡುವ ಡೊಮಿನಿಕ್ ಚರ್ಚ್ ಮತ್ತು ಹೊಯಿಗೆಬೈಲ್ ಫೀಡರ್ ಗಳಲ್ಲಿ ಲೈನ್ ನಿರ್ವಹಣೆ, ಟ್ರೀ ಕಟ್ಟಿಂಗ್ ಮತ್ತು ತುರ್ತು ನಿರ್ವಹಣಾ ಕಾಮಗಾರಿಗಳನ್ನು ಹಮ್ಮಿಕೊಂಡಿರುವುದರಿಂದ ಏ.7ರಂದು ಬೆಳಗ್ಗೆ 10ರಿಂದ ಸಂಜೆ 5ರ ವರೆಗೆ ಗೋಕುಲ್ ಹಾಲ್, ಅಶೋಕನಗರ, ಅಂತೋನಿ ಕಾಲೋನಿ, ಗೋಲ್ಡನ್ ಎಂಪಯರ್ ರೋಡ್, ಕುಳ್ಳಾಡಿ, ಬಾಬುಗುಡ್ಡೆ, ಸುಂಕದಕಟ್ಟೆ ರಘು ಬಿಲ್ಡಿಂಗ್, ಕೋಡಿಕಲ್ ಕಟ್ಟೆ, ಶಾಂತಿ ಲೇನ್, ಎಸ್.ಎ.ಡಿ.ಹಿ, ಕಂಚಿಗಾರ ಗುತ್ತು, ನಾಗಬ್ರಹ್ಮ ಸನ್ನಿಧಿ ರೋಡ್, ಅಲಗುಡ್ಡ, ಜೆ.ಬಿ ಲೋಬೋ ರೋಡ್, ಕೊಟ್ಟಾರ ಚೌಕಿ, ವಿವೇಕಾನಂದ ನಗರ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ನಿಲುಗಡೆ ಮಾಡಲಾಗುತ್ತದೆ.

ಉರ್ವಮಾರ್ಕೆಟ್ ಜಿಐಎಸ್ ಉಪಕೇಂದ್ರದಿಂದ ಹೊರಡುವ ತಿಲಕನಗರ ಫೀಡರ್‌ನಲ್ಲಿ ತುರ್ತು ನಿರ್ವಹಣಾ ಕಾಮಗಾರಿಗಳನ್ನು ಏ.7ರಂದು ಬೆಳಗ್ಗೆ 10ರಿಂದ ಸಂಜೆ 5.30ರ ವರೆಗೆ ಹಮ್ಮಿಕೊಂಡಿರುವುದರಿಂದ, ಬೋಳೂರು, ಮಠದಕಣಿ 4ನೇ ಕ್ರಾಸ್, ತಿಲಕನಗರ, ಹಿಂದೂಸ್ತಾನ್ ಲಿವರ್ ಹಿಂಬದಿ, ಅಮೃತಾನಂದ ಮಯಿ ಶಾಲೆ, ಎಸ್.ಬಿ ರೋಡ್, ಜಾರಂದಾಯ ದೇವಸ್ಥಾನ, ಪ್ರಭು ಬೇಕರಿ, ಮಠದಕಣಿ ರೋಡ್, 3, 4ನೇ ಕ್ರಾಸ್, ಬರ್ಕೆ ಪೊಲೀಸ್ ಸ್ಟೇಷನ್ ಹಿಂಬದಿ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ನಿಲುಗಡೆ ಮಾಡಲಾಗುತ್ತದೆ.

ನಿಡ್ಪಳ್ಳಿ: ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜಾ ಸಮಿತಿ ರಚನೆ

ನಿಡ್ಪಳ್ಳಿ: ನಿಡ್ಪಳ್ಳಿ ಶ್ರೀ ಶಾಂತದುರ್ಗಾ ದೇವಸ್ಥಾನದಲ್ಲಿ ವರ್ಷಂಪ್ರತಿ ಜರಗುವ ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜಾ ಸಮಿತಿಗೆ ನೂತನ ಸಮಿತಿಯನ್ನು ಏ.5ರಂದು ನಡೆದ ಒಕ್ಕೂಟ ಸಭೆಯಲ್ಲಿ ರಚಿಸಲಾಯಿತು. ಸಮಿತಿಯ ಗೌರವಾಧ್ಯಕ್ಷರಾಗಿ ದೇವಸ್ಥಾನದ ಆಡಳಿತ ಮಂಡಳಿ ಕಾರ್ಯದರ್ಶಿ ಮಂಜುನಾಥ ರೈ ಕೆ., ಅಧ್ಯಕ್ಷರಾಗಿ ಸುನೀತಾ ಪಿ. ರೈ ಪಟ್ಟೆ, ಉಪಾಧ್ಯಕ್ಷರಾಗಿ ಕುಶಾಲಪ್ಪ ಕೋಡಿ, ಕಾರ್ಯದರ್ಶಿಯಾಗಿ ಹರಿಪ್ರಸಾದ್ ಚೆಲ್ಕರಮೂಲೆ, ಜತೆ ಕಾರ್ಯದರ್ಶಿಯಾಗಿ ಸುರೇಶ ನುಳಿಯಾಲು, ಕೋಶಾಧಿಕಾರಿಯಾಗಿ ಸುಗುಣ, ಗೌರವ ಸಲಹೆಗಾರರಾಗಿ ಗಂಗಾಧರ ಸಿ.ಎಚ್. ಅವರನ್ನು ಆರಿಸಲಾಯಿತು. ಕಾರ್ಯಕಾರಿ ಸಮಿತಿ ಸದಸ್ಯರಾಗಿ ನವನೀತ ಡಿ., ಜಲಜಾಕ್ಷಿ ಕೆ., ಹೇಮಲತಾ, ಮಾಯಿಲ, ಯೋಗೀಶ, ಹರೀಶ್ ಬಿ., ಸವಿತಾ, ಐತ್ತಪ್ಪ ಬಾಲಚಂದ್ರ ಕೆ., ಮಂಜುನಾಥ ಕೆ., ಜಯಾನಂದ ಎಂ., ಸತೀಶ ಎಂ., ಸುಮಿತ್ರಾ, ಶಾರದಾ ಕೆ. ಅವರನ್ನು ಆರಿಸಲಾಯಿತು. ಒಕ್ಕೂಟದ ಅಧ್ಯಕ್ಷ ರಾಧಾಕೃಷ್ಣ ಪಾಟಾಳಿ, ಸೇವಾ ಪ್ರತಿನಿಧಿ ಶಾಲಿನಿ ಕೆ., ದೇವಸ್ಥಾನದ ಆಡಳಿತ ಮಂಡಳಿ ಕಾರ್ಯದರ್ಶಿ ಮಂಜುನಾಥ ರೈ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ವೇಯ್ಟ್ ಲಿಫ್ಟಿಂಗ್, ಅಥ್ಲೆಟಿಕ್ ಬೇಸಿಗೆ ತರಬೇತಿ ಶಿಬಿರ

ಮಂಗಳೂರು: ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ದಕ್ಷಿಣ ಕನ್ನಡ ಜಿಲ್ಲೆ ವತಿಯಿಂದ ಅಥ್ಲೆಟಿಕ್ಸ್ ಹಾಗೂ ವೇಯ್ಟ್‌ಲಿಫ್ಟಿಂಗ್ ಕ್ರೀಡೆಗಳಲ್ಲಿ ಆಸಕ್ತಿ ಹೊಂದಿರುವ ಕ್ರೀಡಾಪಟುಗಳಿಗೆ ಉಚಿತ ಬೇಸಿಗೆ ತರಬೇತಿ ಶಿಬಿರಗಳನ್ನು ಏರ್ಪಡಿಸಲಾಗಿದೆ.
ವೇಯ್ಟ್‌ಲಿಫ್ಟಿಂಗ್ ತರಬೇತಿ ಶಿಬಿರವು ಯು. ಎಸ್. ಮಲ್ಯ ಒಳಾಂಗಣ ಕ್ರೀಡಾಂಗಣದಲ್ಲಿ ಏ.5ರಿಂದ 27 ರವರೆಗೆ ಬೆಳಗ್ಗೆ 6.30 ರಿಂದ 8:30 ಗಂಟೆವರೆಗೆ ಹಾಗೂ ಸಂಜೆ 4.30 ರಿಂದ 7.30 ಗಂಟೆವರೆಗೆ (ಸರಸ್ವತಿ ಪುತ್ರನ್ –ವೇಯ್ಟ್‌ಲಿಫ್ಟಿಂಗ್ ತರಬೇತುದಾರರು ಮೊ.ಸಂ: 7019144302)
ಅಥ್ಲೆಟಿಕ್ಸ್ ತರಬೇತಿ ಶಿಬಿರ ಮಂಗಳಾ ಕ್ರೀಡಾಂಗಣದಲ್ಲಿ ಏ. 5ರಿಂದ ಏ. 27 ರವರೆಗೆ ಬೆಳಗ್ಗೆ 6.30ರಿಂದ 8:30 ಗಂಟೆವರೆಗೆ ಹಾಗೂ ಸಂಜೆ 4.30 ರಿಂದ 7 ಗಂಟೆವರೆಗೆ (ನವೀನ್ ಗೌಡ ಅಥ್ಲೆಟಿಕ್ಸ್ ತರಬೇತುದಾರರು– ಮೊ. ಸಂ: 8494830078) ನಡೆಯಲಿದೆ ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆಂತರಿಕ ದೂರು ಸಮಿತಿ ರಚಿಸಲು ಸೂಚನೆ

ಮಂಗಳೂರು: ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಬರುವ ವ್ಯಾಪಾರ ಪರವಾನಗಿ ಪಡೆದಂತಹ ಖಾಸಗಿ ಸಂಸ್ಥೆಗಳು ಮತ್ತು ವ್ಯಾಪಾರ ಮಳಿಗೆಗಳಲ್ಲಿ 10 ಅಥವಾ 10ಕ್ಕಿಂತ ಹೆಚ್ಚಿನ ಸಿಬ್ಬಂದಿಗಳು ಕಾರ್ಯ ನಿರ್ವಹಿಸುತ್ತಿದ್ದಲ್ಲಿ, ಕರ್ನಾಟಕ ಮಹಿಳಾ ಆಯೋಗದ ಸೂಚನೆಯಂತೆ ಅಂತಹ ಖಾಸಗಿ ಸಂಸ್ಥೆಗಳು ಮತ್ತು ವ್ಯಾಪಾರ ಮಳಿಗೆಗಳಲ್ಲಿ ಆಂತರಿಕ ದೂರು ಸಮಿತಿ ರಚನೆ ಮಾಡಿ http://hebox.wcd.gov.in ಮೂಲಕ ವಿವರವನ್ನು Shebox portalನಲ್ಲಿ ಎಲ್ಲಾ ಉದ್ದಿಮೆದಾರರು 10 ದಿನಗಳೊಳಗೆ ಅಪ್ಲೋಡ್ ಮಾಡಿ ವಿವರವಾದ ಮಾಹಿತಿಯನ್ನು ಪಾಲಿಕೆಗೆ ಸಲ್ಲಿಸುವಂತೆ ಈ ಮೂಲಕ ಸೂಚಿಸಿದೆ.

ಎಸೆಸೆಲ್ಸಿ ಪರೀಕ್ಷೆ ಮೌಲ್ಯಮಾಪನ: ನಿಷೇಧಾಜ್ಞೆ

ಮಂಗಳೂರು: ಏ.7ರಿಂದ ನಡೆಯಲಿರುವ 2026ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆ–1ರ ಉತ್ತರ ಪ್ರತಿಕೆಗಳ ಮೌಲ್ಯಮಾಪನ ಕಾರ್ಯವನ್ನು ಸುಸೂತ್ರ ವಾಗಿ ಹಾಗೂ ಪಾರದರ್ಶಕವಾಗಿ ನಡೆಸಲು ಮತ್ತು ಕಾನೂನು ಬಾಹಿರ ಚಟುವಟಿಕೆ, ಅಹಿತಕರ ಘಟನೆಗಳು ನಡೆಯದಂತೆ ಮಂಗಳೂರು ನಗರ ಪೊಲೀಸ್ ಕಮೀಷನರೇಟ್ ವ್ಯಾಪ್ತಿಯಲ್ಲಿ 7 ಮೌಲ್ಯಮಾಪನಾ ಕೇಂದ್ರಗಳ 200 ಮೀ.ಸುತ್ತಮುತ್ತಲಿನ ಪ್ರದೇಶವನ್ನು ನಿಷೇದಿತ ಪ್ರದೇಶವೆಂದು ಘೋಷಿಸಿ ಉಪ ಪೊಲೀಸ್ ಆಯುಕ್ತ ಮಿಥುನ್‌ಎಚ್.ಎನ್ ನಿಷೇಧಾಜ್ಞೆ ವಿಧಿಸಿ ಆದೇಶಿಸಿದ್ದಾರೆ.

ಗೃಹ ಉತ್ಪನ್ನ ಮಾರಾಟ ಮಾಡಿ ಆದಾಯ ಗಳಿಸಿದ 15ಕ್ಕೂ ಅಧಿಕ ಸ್ವಸಹಾಯ ಸಂಘಗಳ ಮಹಿಳೆಯರು

ಸ್ವಾವಲಂಬಿ ಮಹಿಳೆಯರಿಗೆ ಸ್ಫೂರ್ತಿ ತುಂಬಿದ ಸಂಜೀವಿನಿ ಸಂತೆ

ಸುಬ್ರಹ್ಮಣ್ಯ: ಕೌಶಲ್ಯಾಭಿವೃದ್ಧಿ ಉದ್ಯಮ ಶೀಲತೆ ಮತ್ತು ಜೀವನೋಪಾಯ ಇಲಾಖೆ, ಸಂಜೀವಿನಿ ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನ ಸಂಸ್ಥೆ ಅಮರ ಸಂಜೀವಿನಿ ಒಕ್ಕೂಟ ಗುತ್ತಿಗಾರು ಆಶ್ರಯದಲ್ಲಿ ಸಂಜೀವಿನಿ ಮಾಸಿಕ ಸಂತೆಯು ಗುತ್ತಿಗಾರು ಸಂತೆ ಮಾರುಕಟ್ಟೆಯಲ್ಲಿ ನಡೆಯಿತು.

ಮಹಿಳೆಯರು ತಾವು ಮನೆಯಲ್ಲಿ ತಯಾರಿಸಿದ ಹಿಡಿಸೂಡಿ, ತುಪ್ಪ, ಜೇನು, ಬಟ್ಟೆ ಗೆರಟೆ ಸೌಟು ವಿವಿಧ ಬಗೆಯ ಉಪ್ಪಿನಕಾಯಿ, ತರಕಾರಿಗಳು, ಗೆಡ್ಡೆ ಗೆಣಸು, ಅಲಂಕಾರಿಕ ವಸ್ತುಗಳು, ಮಲ್ಲಿಗೆ ಹೂವಿನ ಗಿಡಗಳು, ಹಣ್ಣಿನ ರಸ, ತಿಂಡಿ ತಿನಿಸು, ಹಣ್ಣುಗಳು, ಹೊಲಿದ ಬಟ್ಟೆ ಕಸೂತಿ ವಸ್ತುಗಳು ಇತ್ಯಾದಿಗಳನ್ನು ಮಾರಾಟ ಮಾಡಿ ಉತ್ತಮ ಆದಾಯ ಗಳಿಸಿದರು.

2 ಲಕ್ಷಕ್ಕೂ ಅಧಿಕ ವ್ಯವಹಾರ

15ಕ್ಕೂ ಹೆಚ್ಚಿನ ಸ್ವಸಹಾಯ ಸಂಘದ ಮಹಿಳೆಯರು ಭಾಗವಹಿಸಿ ರೂಪಾಯಿ 2 ಲಕ್ಷಕ್ಕೂ ಅಧಿಕ ವ್ಯಾಪಾರ ನಡೆಸಿದರು.



ಉತ್ಪನ್ನಗಳು ಗುಣಮಟ್ಟದಿಂದ ಕೂಡಿರುತ್ತವೆ

ಗ್ರಾಮೀಣ ಮಹಿಳೆಯರು ತಯಾರಿಸಿದ ಉತ್ಪನ್ನಗಳು ಗುಣಮಟ್ಟದಿಂದ ಕೂಡಿರುತ್ತವೆ. ಉತ್ಪನ್ನಗಳು ಶುದ್ಧ ಮತ್ತು ದೇಸೀಯವಾಗಿರುವುದರಿಂದ ಗ್ರಾಹಕರಿಂದ ಉತ್ತಮ ಸ್ಪಂದನ ಲಭಿಸುತ್ತಿದೆ. ಎಂದು ಗುತ್ತಿಗಾರು ಅರಿವು ಕೇಂದ್ರ, ಗ್ರಂಥಾಲಯ ಮೇಲ್ವಿಚಾರಕಿ ಅಭಿಲಾಷ ಮೋಟ್ನೂರು ಅವರು ತಿಳಿಸಿದ್ದಾರೆ.

ಹೊಸತನದೊಂದಿಗೆ ಒಂದು ಹೆಜ್ಜೆ ಇಟ್ಟಿದೆ

ಅಮರ ಸಂಜೀವಿನಿ ಒಕ್ಕೂಟ ಉತ್ತಮ ಕಾರ್ಯ ಚಟುವಟಿಕೆ ಮಾಡುತ್ತಿದೆ. ರಾಷ್ಟ್ರಮಟ್ಟದಲ್ಲೂ ಗುರುತಿಸಿಕೊಂಡಿದೆ. ಸ್ವಚ್ಛತಾ ಕಾರ್ಯದಲ್ಲೂ ಯಶಸ್ವಿಯಾಗಿದೆ. ಈಗ ಹೊಸತನದೊಂದಿಗೆ ಒಂದು ಹೆಜ್ಜೆ ಇಟ್ಟಿದೆ. ಮಹಿಳೆಯರಿಗೆ ಉಪಯುಕ್ತವಾಗಿದೆ.

● ಶಿವರಾಮ ಕರುವಜೆ, ಅಧ್ಯಕ್ಷರು, ವರ್ತಕರ ಸಂಘ ಗುತ್ತಿಗಾರು

ಒಕ್ಕೂಟದಿಂದ ಶ್ಲಾಘನೀಯ ಕಾರ್ಯ

ಊರಿನಲ್ಲಿ ಬೆಳೆದ ಆಹಾರ ಪದಾರ್ಥಗಳು, ತರಕಾರಿಗಳನ್ನು ಊರಿನಲ್ಲೇ ಮಾರಾಟ ಮಾಡುವ ಮೂಲಕ ಅಮರ ಸಂಜೀವಿನಿ ಒಕ್ಕೂಟದ ಮಹಿಳೆಯರು ಶ್ಲಾಘನೀಯ ಕಾರ್ಯ ಮಾಡಿದ್ದಾರೆ. ಅಭಿನಂದನೆಗಳು.

● - ದೇವರಾಜ್ ಮುತ್ಲಾಜೆ, ಆಡಳಿತಾಧಿಕಾರಿ, ಗ್ರಾಮ ಪಂಚಾಯತ್ ಗುತ್ತಿಗಾರು

ಚಾಲನೆ

ಅಮರ ಸಂಜೀವಿನಿ ಒಕ್ಕೂಟದ ಉಪಾಧ್ಯಕ್ಷೆ ಶಿಶಿಮ ಜಾಕೆ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ವರ್ತಕರ ಸಂಘದ ಅಧ್ಯಕ್ಷ ಶಿವರಾಮ ಕರುವಜೆ ದೀಪ ಬೆಳಗಿಸಿದರು. ಈ ಸಂದರ್ಭ ಪ್ರಮುಖರಾದ ಅಜಿತ್, ದೇವರಾಜ್ ಮುತ್ಲಾಜೆ, ಶ್ವೇತ ರಾಜೇಶ್, ಮೇರಿ, ಅವಿನಾಶ್, ಜಯಲಕ್ಷ್ಮಿ, ಹೃತಿಕ್, ರೂಪ ಉಪಸ್ಥಿತರಿದ್ದರು. ಗುತ್ತಿಗಾರು ಅರಿವು ಕೇಂದ್ರದ ಮೇಲ್ವಿಚಾರಕಿ ಗ್ರಂಥ ಪಾಲಕಿ ಅಭಿಲಾಷ ಕಾರ್ಯಕ್ರಮ ನಿರ್ವಹಿಸಿದರು.

ಕೈಗೆಟುಕುವ ವೆಚ್ಚದಲ್ಲಿ ಆಸ್ಪತ್ರೆ ರೋಗಿಗಳಿಗೆ ಆರೈಕೆ ಒದಗಿಸುವ ಗುರಿ

ಇಂಡಿಯಾನಾ ಆರೋಗ್ಯ ಕಾರ್ಡ್ ಬಿಡುಗಡೆ

ಮಂಗಳೂರು: ವಿಶ್ವ ಆರೋಗ್ಯ ದಿನಾಚರಣೆಯ ಅಂಗವಾಗಿ ಮಂಗಳೂರಿನ ಇಂಡಿಯಾನಾ ಆಸ್ಪತ್ರೆ ಮತ್ತು ಹೃದಯ ಸಂಸ್ಥೆ ರೋಗಿಗಳಿಗೆ ಕೈಗೆಟುಕುವ ವೆಚ್ಚದಲ್ಲಿ ಆರೈಕೆಯನ್ನು ಒದಗಿಸುವ ಗುರಿಯೊಂದಿಗೆ ಆರೋಗ್ಯ ಕಾರ್ಡ್ ಬಿಡುಗಡೆಗೊಳಿಸಿದೆ.

ಇಂಡಿಯಾನಾ ಆಸ್ಪತ್ರೆಯಲ್ಲಿ ಸೋಮವಾರ ಆರೋಗ್ಯ ಕಾರ್ಡ್ ಅನಾವರಣಗೊಳಿಸಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಇಂಡಿಯಾನಾ ಆಸ್ಪತ್ರೆ ಮತ್ತು ಹೃದಯ ಸಂಸ್ಥೆ ಅಧ್ಯಕ್ಷ ಡಾ. ಅಲಿ ಕುಂಬ್ಳೆ, ವಿಶ್ವ ಆರೋಗ್ಯ ದಿನಾಚರಣೆ ಭಾಗವಾಗಿ ಇಂಡಿಯಾನಾ ಆಸ್ಪತ್ರೆಯು ಏ. 8ರಿಂದ 14ರವರೆಗೆ 399 ರೂ. ಬೆಲೆಯ ಇಂಡಿಯಾನಾ ಆರೋಗ್ಯ ಕಾರ್ಡ್ (ಗೋಲ್ಡ್ ಕಾರ್ಡ್)ನ್ನು 99 ರೂ.ಗೆ ನೀಡುತ್ತಿದೆ. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವ ರೋಗಿಗಳಿಗೆ ಗರಿಷ್ಠ ಪ್ರಯೋಜನಗಳನ್ನು ನೀಡಲು ಈ ಆರೋಗ್ಯ ಕಾರ್ಡ್‌ನ್ನು ವಿನ್ಯಾಸಗೊಳಿಸಲಾಗಿದೆ. ಹೆಚ್ಚುವರಿಯಾಗಿ ಆಸ್ಪತ್ರೆಯು ಏ. 7ರಂದು ಎಲ್ಲಾ ಹೊರರೋಗಿಗಳು ಮತ್ತು ಒಳರೋಗಿಗಳಿಗೆ ಇಂಡಿಯಾನಾ ಪ್ರಿವಿಲೇಜ್ ಕಾರ್ಡ್ (ಸಿಲ್ವರ್ ಕಾರ್ಡ್)ನ್ನು ಉಚಿತವಾಗಿ ನೀಡಲಿದೆ ಎಂದರು.



■ ಏ. 8ರಿಂದ 14ರವರೆಗೆ 399 ರೂ. ಬೆಲೆಯ ಇಂಡಿಯಾನಾ ಆರೋಗ್ಯ ಕಾರ್ಡ್ (ಗೋಲ್ಡ್ ಕಾರ್ಡ್) 99 ರೂ.ಗೆ ಲಭ್ಯ

ರಿಯಾಯಿತಿ ಸೌಲಭ್ಯ

ಕಾರ್ಡ್ ಪ್ರಯೋಜನಗಳು ಹಲವಾರು ರಿಯಾಯಿತಿಗಳನ್ನು ಒಳಗೊಂಡಿವೆ. ರೋಗಿಗಳು ಇನ್–ಹೌಸ್ ವೈದ್ಯರ ಸಮಾಲೋಚನೆ ಶುಲ್ಕಗಳು ಮತ್ತು ಒಪಿ ಕಾರ್ಯವಿಧಾನಗಳಲ್ಲಿ ಶೇ. 20ರಷ್ಟು ರಿಯಾಯಿತಿ, ಇನ್–ಹೌಸ್ ಪ್ರಯೋಗಾಲಯ ಮತ್ತು ರೇಡಿಯಾಲಜಿ ಸೇವೆಗಳಲ್ಲಿ ಶೇ. 15ರಷ್ಟು ರಿಯಾಯಿತಿ, ವೈದ್ಯರ ಶುಲ್ಕಗಳು, ಔಷಧಗಳು ಮತ್ತು ಉಪಭೋಗ್ಯ ವಸ್ತುಗಳನ್ನು ಹೊರತುಪಡಿಸಿ ಐಪಿ ಸೇವೆಗಳಲ್ಲಿ ಶೇ. 10ರಷ್ಟು ರಿಯಾಯಿತಿ ಮತ್ತು ಒಪಿ ಔಷಧ ಶುಲ್ಕಗಳಲ್ಲಿ ಶೇ. 5 ರಷ್ಟು ರಿಯಾಯಿತಿಯನ್ನು ಪಡೆಯಬಹುದು ಎಂದು ಹೇಳಿದರು.

ಇಂಡಿಯಾನಾ ಆಸ್ಪತ್ರೆಯ ನಿರ್ದೇಶಕ ಡಾ. ನಿಹಾಲ್ ಅಲಿ ಕುಂಬ್ಳೆ ಇಂಡಿಯಾನಾ ಆಸ್ಪತ್ರೆ ಕೈಗೆಟುಕುವ ವೆಚ್ಚದಲ್ಲಿ ಸಹಾನುಭೂತಿಯ ಆರೈಕೆ ಮತ್ತು ಗುಣಮಟ್ಟದ ಚಿಕಿತ್ಸೆಯನ್ನು ಒದಗಿಸಲು ಬದ್ಧವಾಗಿದೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಆಸ್ಪತ್ರೆಯ ವೈದ್ಯಕೀಯ ನಿರ್ದೇಶಕ ಡಾ. ಅಪೂರ್ವ ಶ್ರೀಜಯದೇವ, ವೈದ್ಯಕೀಯ ಆಡಳಿತ ನಿರ್ದೇಶಕ ಡಾ. ಆದಿತ್ಯ ಭಾರಾದ್ವಾಜ್, ಗ್ರೂಪ್ ಎಕ್ಸಿಕ್ಯೂಟಿವ್ ಆಫೀಸರ್ ಇ. ವಿಜಯ್ ಚಂದ್ರ, ಡಾ, ಕಾರ್ತಿಕ್ ವೇಲ್ ಮುರುಗನ್, ಡಾ. ಶುಭಾ, ಲಿಡ್ವಿನ್ ಡಿಸೋಜ ಇದ್ದರು.

ಆಟೋ ಗ್ಯಾಸ್‌ಗೆ ರೂ.120 | ನಿಯಮ ಮೀರಿ ದರ ವಸೂಲು ಆರೋಪ

ಪುತ್ತೂರಲ್ಲಿ ಆಟೋ ಚಾಲಕರ ಪ್ರತಿಭಟನೆ

ಪುತ್ತೂರು: ಮಧ್ಯಪ್ರಾಚ್ಯ ರಾಷ್ಟ್ರಗಳಲ್ಲಿ ಯುದ್ಧದ ಕಾರಣದಿಂದ ಗ್ಯಾಸ್‌ಗೆ ಸಂಬಂಧಿಸಿದ ತತ್ವಾರ ಮುಂದುವರಿದಿದ್ದು, ಮುಖ್ಯವಾಗಿ ಗ್ಯಾಸ್ ಸಂಯೋಜಿತ ಆಟೋ ರಿಕ್ಷಾಗಳನ್ನು ಅವಲಂಬಿತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಇದನ್ನು ಬಳಸಿಕೊಂಡು ಗ್ಯಾಸ್ ಪಂಪ್‌ಗಳಲ್ಲೂ ನಿಯಮ ಮೀರಿ ದರ ವಸೂಲು ಮಾಡುತ್ತಿರುವುದರ ವಿರುದ್ಧ ಪುತ್ತೂರು ನಗರದಲ್ಲಿ ಸೋಮವಾರ ಆಟೋ ರಿಕ್ಷಾ ಚಾಲಕರು ಪ್ರತಿಭಟಿಸಿದ ಘಟನೆ ನಡೆಯಿತು.

ನಗರದ ಮುಖ್ಯರಸ್ತೆಯ ಮಹಿಳಾ ಪೊಲೀಸ್ ಠಾಣೆ ಬಳಿಯ ಗ್ಯಾಸ್ ಸ್ಟೇಷನ್‌ನಲ್ಲಿ ಸೋಮವಾರ ಗ್ಯಾಸ್‌ಗೆ ರೂ.120 ದರ ನಿಗದಿ ಮಾಡಲಾಗಿತ್ತು. ಸಮೀಪದ ಇತರ ಗ್ಯಾಸ್ ಬಂಕ್‌ಗಳಲ್ಲಿ ರೂ.92ಕ್ಕೆ ಗ್ಯಾಸ್ ಲಭಿಸುತ್ತಿದ್ದು ಇಲ್ಲಿ ಏಕಾಏಕಿ ದರ ಏರಿಸಿ ವಂಚಿಸಲಾಗುತ್ತಿದೆ. ಈ ಬಂಕ್‌ನಲ್ಲಿ 3ನೇ ಬಾರಿಗೆ ದರ ಏರಿಕೆ ಮಾಡಲಾಗುತ್ತಿದೆ ಎಂದು ಆಟೋ ರಿಕ್ಷಾ ಚಾಲಕರು ಬಂಕ್ ಎದುರು ಜಮಾಯಿಸಿ ಘೋಷಣೆಗಳನ್ನು ಕೂಗುತ್ತಾ ಪ್ರತಿಭಟನೆ ನಡೆಸಿದರು.

ದಿನದಿಂದ ದಿನಕ್ಕೆ ಆಟೋ ರಿಕ್ಷಾ ಅವಲಂಭಿತರು ಸಂಕಷ್ಟಕ್ಕೆ ಸಿಲುಕುತ್ತಿದ್ದಾರೆ. ಇದರಿಂದ ದಿನ ದೂಡುವುದೇ ಕಷ್ಟಕರವಾಗಿದೆ. ಈ ಮಧ್ಯೆ ಗ್ಯಾಸ್ ಪಂಪ್‌ಗಳಲ್ಲಿ ಹಗಲು ದರೋಡೆ ಮಾಡಲಾಗುತ್ತಿದೆ.



ಸ್ಥಳಕ್ಕೆ ಅಧಿಕಾರಿಗಳು ಬರಬೇಕು. ಒಂದು ವೇಳೆ ಗ್ಯಾಸ್‌ಗೆ ದರ ಈ ಮಟ್ಟದಲ್ಲಿ ಏರಿಕೆ ಮಾಡಲಾಗಿದ್ದರೆ ಸರಕಾರ ಹೊರಡಿಸಿರುವ ಸುತ್ತೋಲೆಯನ್ನು ತೋರಿಸಿ ಎಂದು ಪ್ರತಿಭಟನಾಕಾರರನ್ನು ಆಗ್ರಹಿಸಿದರು. ರಿಕ್ಷಾ ಚಾಲಕರು ಶಾಸಕರ ಕಚೇರಿಗೆ ತೆರಳಿ ಅಶೋಕ್ ಕುಮಾರ್ ರೈ ಅವರಿಗೆ ಮನವಿ ಸಲ್ಲಿಸಿದರು.

ಗ್ಯಾಸ್ ಬಂಕ್ ಬಂದ್

ರಸ್ತೆ ಬದಿ ಆಟೋ ಚಾಲಕರು ಜಮಾಯಿಸುತ್ತಿದ್ದಂತೆ ಸ್ಥಳಕ್ಕೆ ನಗರ ಠಾಣೆಯ ಸಬ್ ಇನ್‌ಸ್ಪೆಕ್ಟರ್ ಜನಾರ್ದನ್ ಹಾಗೂ ಸಿಬಂದಿ ಆಗಮಿಸಿದರು. ಈ ಸಂದರ್ಭದಲ್ಲಿ ಗ್ಯಾಸ್ ಪಂಪ್ ಮಾಲಕರಲ್ಲಿ ಮಾತುಕತೆ ನಡೆಸಿದರೂ ದರ ಕಡಿಮೆ ಮಾಡಲು ಅವರು ಒಪ್ಪದಿದ್ದಾಗ ಶಾಂತಿ ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ಗ್ಯಾಸ್ ಪಂಪ್‌ನ್ನು ತಕ್ಷಣ ಬಂದ್ ಮಾಡುವಂತೆ ಪೊಲೀಸರು ಸೂಚನೆ ನೀಡಿದರು. ಬಳಿಕ ಪಂಪ್ ಮುಂದೆ ಹಗ್ಗ ಕಟ್ಟಿ ವಾಹನಗಳು ತೆರಳದಂತೆ ಬಂದ್ ಮಾಡಲಾಯಿತು.

ನಿಯಮಗಳನ್ನು ಮೀರಿ ವಿಪರೀತ ದರ ವಸೂಲಿ ಮಾಡುತ್ತಿರುವ ಗ್ಯಾಸ್ ಬಂಕ್ ಲೈಸನ್ಸ್ ರದ್ದು ಮಾಡುವಂತೆ ದ.ಕ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯವರಿಗೆ ವರದಿ ಸಲ್ಲಿಸಲಾಗುವುದು. ಅವರು ಜಿಲ್ಲಾಧಿಕಾರಿಯವರ ಗಮನಕ್ಕೆ ತರಲಿದ್ದಾರೆ ಎಂದು ಪೊಲೀಸರು ತಿಳಿಸಿದರು.

ಈ ಸಂದರ್ಭ ತಾಲೂಕು ಆಟೋ ಚಾಲಕ ಮಾಲಕರ ಸಂಯುಕ್ತ ಹೋರಾಟ ಸಮಿತಿ ಅಧ್ಯಕ್ಷ ಜಯರಾಮ ಕುಲಾಲ್ ಸ್ನೇಹ ಸಂಗಮ ಆಟೋ ರಿಕ್ಷಾ ಚಾಲಕರ ಮಾಲಕರ ಸಂಘದ ಅಧ್ಯಕ್ಷ ತಾರನಾಥ ಬನ್ನೂರು, ಇಸ್ಮಾಯಿಲ್ ಬೊಳುವಾರು, ಕರ್ನಾಟಕ ರಿಕ್ಷಾ ಚಾಲಕ ಮಾಲಕರ ಸಂಘದ ಅಧ್ಯಕ್ಷ ಅರುಣ್ ಕುಮಾರ್ ಕೆ., ಎಸ್‌ಡಿಟಿಯು ರಿಕ್ಷಾ ಚಾಲಕ ಮಾಲಕರ ಸಂಘದ ಅಧ್ಯಕ್ಷ ಆಶೀಫ್ ಮುಕ್ವೆ ಇದ್ದರು.

ಬಪ್ಪನಾಡು ಸ್ವಾಗತ ಗೋಪುರ ರಚನೆ ಅವಕಾಶ: ಬಿಲ್ಲವರ ಮನವಿ



ಮುಲ್ಕಿ: ಸೀಮೆಯ ಒಂಬತ್ತು ಮಾಗಣೆಯ ಬಪ್ಪನಾಡು ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದ ಜೀರ್ಣೋದ್ಧಾರ ಕಾಮಗಾರಿ ಕಾರ್ಯದಲ್ಲಿ ಪೂರ್ವ ದಿಕ್ಕಿನ ರಾಷ್ಟ್ರೀಯ ಹೆದ್ದಾರಿ ಬದಿಯ ಸ್ವಾಗತ ಗೋಪುರ ಕೋಟಿಗಿಂತಲೂ ಅಧಿಕ ವೆಚ್ಚದ ನಿರ್ಮಾಣದ ಕಾರ್ಯವನ್ನು ನಡೆಸುವುದಾಗಿ ಸಮಸ್ತ ಬಿಲ್ಲವ ಸಮುದಾಯವು ನಿರ್ಧರಿಸಿದ್ದು ಈ ಬಗ್ಗೆ ಅವಕಾಶ ನೀಡಲು ಬೆಂಗಳೂರಿನ ಉದ್ಯಮಿ ಶರತ್ ಸಾಲ್ಯಾನ್ ನೇತೃತ್ವದಲ್ಲಿ ದೇವಸ್ಥಾನದ ಆಡಳಿತ ಮಂಡಳಿಗೆ ದೇವಸ್ಥಾನದ ಅನುವಂಶಿಕ ಮೊಕ್ತೇಸರ ದುಗ್ಗಣ್ಣ ಸಾವಂತ ಅರಸರು ಹಾಗೂ ಕಾರ್ಯನಿರ್ವಹಣಾಧಿಕಾರಿ ಶ್ವೇತಾ ಪಳ್ಳಿ ಮೂಲಕ ಮನವಿ ಸಲ್ಲಿಸಲಾಯಿತು

ಈ ಸಂದರ್ಭ ಅರ್ಚಕ ಗೋಪಾಲಕೃಷ್ಣ ಭಟ್

ರಾಷ್ಟ್ರೀಯ ಬಿಲ್ಲವರ ಮಹಾಮಂಡಲದ ಅಧ್ಯಕ್ಷ ಸೂರ್ಯಕಾಂತ ಜಯ ಸುವರ್ಣ,ನಾರಾಯಣ ಗುರು ವಿಚಾರ ವೇದಿಕೆಯ ರಾಜ್ಯಾಧ್ಯಕ್ಷ ಸತ್ಯಜಿತ್ ಸುರತ್ಕಲ್ ,ಮುಲ್ಕಿ ಬಿಲ್ಲವ ಸಮಾಜ ಸೇವಾ ಸಂಘದ ಅಧ್ಯಕ್ಷ ವಾಮನ್ ಕೋಟ್ಯಾನ್ ನಡಿಕುದ್ರು, ಬಿರುವೆರ್ ಕುಡ್ಲ ಸಂಘಟನೆಯ ಗೌರವಾಧ್ಯಕ್ಷ ಕಿಶೋರ್ ಸಾಲ್ಯಾನ್,, ಚಂದ್ರಶೇಖರ ಸುವರ್ಣ, ದೇವಸ್ಥಾನದ ಅಭಿವೃದ್ಧಿ ಸಮಿತಿಯ ಚಂದ್ರಶೇಖರ ಕಾಸಪ್ಪಯ್ಯನವರ ಮನೆ, ಸುನಿಲ್ ಆಳ್ವ ರಾಮಚಂದ್ರ ನಾಯಕ್ ಕೋಲ್ನಾಡು ಗುತ್ತು, ಭಾಸ್ಕರ್ ಸಾಲ್ಯಾನ್ ಹಳೆಯಂಗಡಿ, ಸಂಜೀವ ದೇವಾಡಿಗ,ಶರತ್ ಹೆಜ್ಮಾಡಿ, ಮುಲ್ಕಿ ನಾಲ್ಕು ಪಟ್ನ ಮೊಗವೀರ ಸಭಾಧ ಅಧ್ಯಕ್ಷ ಚಂದ್ರಕಾಂತ ಶ್ರೀಯಾನ್, ನಾಗೇಶ್ ಬಪ್ಪನಾಡು , ಅಕೌಂಟೆಂಟ್ ಶಿವಶಂಕರ್ ವರ್ಮ, ಕಾರ್ತಿಕ್ ಕೋಟ್ಯಾನ್ , ಗಿರೀಶ್ ಮೆಂಡನ್, ಮತ್ತಿತರರು ಉಪಸ್ಥಿತರಿದ್ದರು

ಬೆಸೆಂಟ್ ಪ್ರೀಮಿಯರ್ ಲೀಗ್: ಆರೆಂಜ್ ಆರ್ಮಿ ತಂಡ ಚಾಂಪಿಯನ್



ಮಂಗಳೂರು: ಬೆಸೆಂಟ್ ಸಂಧ್ಯಾ ಕಾಲೇಜಿನ ಹಳೆವಿದ್ಯಾರ್ಥಿ ಸಂಘದ ಆಶ್ರಯದಲ್ಲಿ 11ನೇ ವರ್ಷದ 'ಬೆಸೆಂಟ್ ಪ್ರೀಮಿಯರ್ ಲೀಗ್' ಕ್ರೀಡಾಕೂಟ ನಗರದ ಪದುವಾ ಮೈದಾನದಲ್ಲಿ ನಡೆಯಿತು.

ಶಾಸಕ ಡಿ. ವೇದವ್ಯಾಸ ಕಾಮತ್ ಮುಖ್ಯ ಅತಿಥಿಯಾಗಿದ್ದರು. ರಾಷ್ಟ್ರೀಯ ಮಹಿಳಾ ಶಿಕ್ಷಣ ಸಂಸ್ಥೆ ಅಧ್ಯಕ್ಷ ಮಣೇಲ್ ಅಣ್ಣಪ್ಪ ನಾಯಕ್, ಬೆಸೆಂಟ್ ನ್ಯಾಷನಲ್ ಪದವಿಪೂರ್ವ ಕಾಲೇಜಿನ ಸಂಚಾಲಕ ಸತೀಶ್ ಕುಮಾರ್ ಭಟ್ ಉದ್ಘಾಟಿಸಿದರು. ಸಮಾರೋಪ ಸಮಾರಂಭದಲ್ಲಿ ಬೆಸೆಂಟ್ ಸಂಧ್ಯಾ ಕಾಲೇಜಿನ ಸಂಚಾಲಕಿ ಲಲಿತಾ ಜಿ. ಮಲ್ಯ, ಪ್ರಾಂಶುಪಾಲ ಪರಶುರಾಮ್ ಜಿ. ಮಾಳಗೆ, ಹಳೆ ವಿದ್ಯಾರ್ಥಿ ಸಂಘದ ಸಲಹೆಗಾರ್ತಿ ಶ್ರೀವಿದ್ಯಾ, ಅಧ್ಯಕ್ಷ ಆದಿತ್ಯ ಶೆಟ್ಟಿ, ಕಾರ್ಯದರ್ಶಿ ರಿತೇಶ್ ಎಂ. ಶೆಟ್ಟಿ, ಕ್ರೀಡಾ ಕಾರ್ಯದರ್ಶಿ ಪ್ರಣವ್ ಗಣೇಶ್, ಖಜಾಂಚಿ ನರೇಶ್ ಕಾಮತ್, ಜೊತೆ ಕಾರ್ಯದರ್ಶಿ ನವ್ಯಾ, ಪ್ರದೀಪ್ ಕೆ., ಮೋಹಿತ್ ಶೆಟ್ಟಿ, ಶ್ರೇಯಸ್, ಅವಿನಾಶ್, ಶರಣ್ಯ ಇದ್ದರು. ಪ್ರಣತ ಆರ್. ನಿರೂಪಿಸಿದರು. ಈ ಲೀಗ್‌ನಲ್ಲಿ ಒಟ್ಟು 6 ತಂಡಗಳು ಭಾಗವಹಿಸಿತ್ತು. ಲೋಹಿತ್ ಬಜಾಲ್ ಅವರ 'ಆರೆಂಜ್ ಆರ್ಮಿ' ತಂಡ ಚಾಂಪಿಯನ್ ಪಟ್ಟವನ್ನು ಪಡೆದು ಟ್ರೋಫಿ ಹಾಗೂ ನಗದು ಬಹುಮಾನವನ್ನು ಮುಡಿಗೇರಿಸಿಕೊಂಡಿತು. ಜಿತೇಶ್ ದೇವಾಡಿಗ ಅವರ 'ಬ್ಲೂ ಸ್ಟ್ರೈಕ್ಸ್' ತಂಡ ರನ್ನರ್–ಅಪ್ ಸ್ಥಾನ ತಮ್ಮದಾಗಿಸಿಕೊಂಡಿತು. ವೈಯಕ್ತಿಕ ಪ್ರಶಸ್ತಿಗಳ ವಿಭಾಗದಲ್ಲಿ ಫೈನಲ್ ಪಂದ್ಯದಲ್ಲಿ ಪುಷ್ಪರಾಜ್ 'ಮ್ಯಾನ್ ಆಫ್ ದಿ ಮ್ಯಾಚ್' ಪ್ರಶಸ್ತಿಯನ್ನು ಪಡೆದರು. ಸೀಸನ್‌ನ ಉದಯೋನ್ಮುಖ ಆಟಗಾರ ಪ್ರಶಸ್ತಿಯನ್ನು ಬ್ಲೂ ಸ್ಟ್ರೈಕ್ಸ್ ತಂಡದ ರವಿಚಂದ್ರ ಅವರಿಗೆ ನೀಡಲಾಯಿತು. ಉತ್ತಮ ಬ್ಯಾಟ್ಸ್‌ಮನ್ ಪ್ರಶಸ್ತಿಯನ್ನು ವಿಕ್ಟರಿ ತಂಡದ ಮಧು ಪಡೆದರೆ, ಉತ್ತಮ ಬೌಲರ್ ಪ್ರಶಸ್ತಿಯನ್ನು ಆರೆಂಜ್ ಆರ್ಮಿ ತಂಡದ ನಚಿಕೇತಾ ಪಡೆದರು. ಸೀಸನ್‌ನ 'ಮ್ಯಾನ್ ಆಫ್ ದಿ ಸೀರೀಸ್' ಪ್ರಶಸ್ತಿಯನ್ನು ಆರೆಂಜ್ ಆರ್ಮಿ ತಂಡದ ಪುನೀತ್ ತಮ್ಮದಾಗಿಸಿಕೊಂಡರು.

ಆತೂರು-ಶ್ರೀರಾಮ ಹನುಮಜ್ಯೋತಿ ರಥಯಾತ್ರೆಗೆ ದೇವಸ್ಥಾನದಲ್ಲಿ ಸ್ವಾಗತ



ಕಡಬ: ಹನುಮಗಿರಿ ಶ್ರೀ ಕೋದಂಡರಾಮ ಪಂಚಮುಖಿ ಆಂಜನೇಯ ಕ್ಷೇತ್ರದಲ್ಲಿ ಏ.9ರಿಂದ 12ರ ತನಕ ನಡೆಯುವ ಅಷ್ಟಬಂಧ ಬ್ರಹ್ಮಕಲಶೋತ್ಸವದ ಅಂಗವಾಗಿ ಆಯೋಧ್ಯೆಯಿಂದ ಆಗಮಿಸಿದ ಶ್ರೀರಾಮ ಜ್ಯೋತಿ, ಮೂಲ ಮೃತ್ತಿಕೆ, ಪ್ರಯಾಗರಾಜ್‌ನ ತ್ರಿವೇಣಿ ಸಂಗಮದಿಂದ ಗಂಗಾಜಲು, ಅಂಜನಾದ್ರಿಯಿಂದ ಹನುಮ ಜ್ಯೋತಿ, ಮೃತ್ತಿಕೆ ಹಾಗೂ ಪಂಪ ಸರೋವರದ ಪವಿತ್ರ ಜಲ ಸಂಗ್ರಹಿಸಿಕೊಂಡು ಸಂಚರಿಸುತ್ತಿರುವ ಶ್ರೀರಾಮ ಹನುಮ ಜ್ಯೋತಿ ರಥಯಾತ್ರೆ ಭಾನುವಾರ ಕ್ಯೊಲ ಗ್ರಾಮದ ಆತೂರು ಶ್ರೀ ಸದಾಶಿವ ದೇವಸ್ಥಾನಕ್ಕೆ ಆಗಮಿಸಿದಾಗ ಭವ್ಯ ಸ್ವಾಗತವನ್ನು ಕೋರಲಾಯಿತು.

ಭಜನಾ ತಂಡದೊಂದಿಗೆ ಶ್ರೀರಾಮ ಹನುಮ ಜ್ಯೋತಿಯನ್ನು ದೇವಸ್ಥಾನಕ್ಕೆ ಬರಮಾಡಿಕೊಳ್ಳಲಾಯಿತು. ಪ್ರಧಾನ ಅರ್ಚಕ ವಿಷ್ಣುಮೂರ್ತಿ ಬಡೆಕ್ಕಿಲ್ಲಾಯ ರಥಕ್ಕೆ ಪೂಜೆ ಸಲ್ಲಿಸಿದರು. ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ನೀರಜ್ ಕುಮಾರ್ ರೈ ಮಾಲಾರ್ಪಣೆ ಮಾಡಿ ರಥವನ್ನು ಬರಮಾಡಿಕೊಂಡರು. ವ್ಯವಸ್ಥಾಪನಾ ಸಮಿತಿ ಮಾಜಿ ಅಧ್ಯಕ್ಷ ಯದುಶ್ರೀ ಆನೆಗುಂಡಿ, ಉತ್ಸವ ಸಮಿತಿ ಅಧ್ಯಕ್ಷ ಧರ್ಣಪ್ಪ ಗೌಡ ಕೋರಿಕ್ಕಾರು, ಮಾಜಿ ಅಧ್ಯಕ್ಷ ಚಂದ್ರಹಾಸ ರೈ ಬುಡಲ್ಲೂರು, ವ್ಯವಸ್ಥಾಪನಾ ಸಮಿತಿ ಸದಸ್ಯರು, ಉತ್ಸವ ಸಮಿತಿ ಪದಾಧಿಕಾರಿಗಳು, ಸದಸ್ಯರು, ಗ್ರಾಮಸ್ಥರು ರಥಕ್ಕೆ ಪುಷ್ಪಾರ್ಚನೆ ಮಾಡಿದರು. ಬ್ರಹ್ಮಕಲಶೋತ್ಸವ ಸಮಿತಿ ಉಪಾಧ್ಯಕ್ಷ, ಕೋಟಿ ಶ್ರೀರಾಮ ತಾರಕ ಜಪ ಯಜ್ಞದ ಸಂಚಾಲಕ ಸೀತಾರಾಮ ರೈ ಕೆದಂಬಾಡಿಗುತ್ತು ರಥಯಾತ್ರೆ ಹಾಗೂ ಬ್ರಹ್ಮಕಲಶೋತ್ಸವದ ಕುರಿತು ಮಾಹಿತಿ ನೀಡಿದರು. ಶೀನಪ್ಪ ಗೌಡ ವಳಕಡಮ ಸ್ವಾಗತಿಸಿದರು. ಬಳಿಕ ರಥ ರಾಮಕುಂಜ, ಶರವೂರು, ಶಾಂತಿಮೊಗರಿಗೆ ತೆರಳಿತು.

ದ.ಕ. ಬಿಜೆಪಿ ಜಿಲ್ಲಾ ಕಚೇರಿಯಲ್ಲಿ ಸ್ಥಾಪನಾ ದಿನಾಚರಣೆ | ದೇಶದ ಹಿತಕ್ಕಾಗಿ ಪಕ್ಷ ಸ್ಥಾಪನೆಯಾಗಿದೆ: ಮೋನಪ್ಪ ಭಂಡಾರಿ ಬಣ್ಣನೆ

ಹಳ್ಳಿಯಿಂದ ದಿಲ್ಲಿಯವರೆಗೆ ಬಿಜೆಪಿ ಅಧಿಕಾರ, ಕಾರ್ಯಕರ್ತರಿಗೆ ಪಕ್ಷದ ಹೊಣೆ ಇದೆ

ಮಂಗಳೂರು: ಬಿಜೆಪಿ ದಕ್ಷಿಣ ಕನ್ನಡ ಜಿಲ್ಲಾ ಕಚೇರಿಯಲ್ಲಿ ಪಕ್ಷದ ಸ್ಥಾಪನಾ ದಿನಾಚರಣೆ ಕಾರ್ಯಕ್ರಮ ಸೋಮವಾರ ನಡೆಯಿತು. ಬಿಜೆಪಿ ದ.ಕ. ಜಿಲ್ಲಾಧ್ಯಕ್ಷ ಸತೀಶ್ ಕುಂಪಲ ಅವರು ಪಕ್ಷದ ಧ್ವಜವನ್ನು ಹಾರಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಸಭೆಯ ಅಧ್ಯಕ್ಷತೆ ವಹಿಸಿದರು.

ಮುಖ್ಯ ಅತಿಥಿಯಾಗಿದ್ದ ವಿಧಾನಪರಿಷತ್‌ನ ಮಾಜಿ ಸದಸ್ಯ ಕೆ. ಮೋನಪ್ಪ ಭಂಡಾರಿ ಮಾತನಾಡಿ, ಭಾರತೀಯ ಜನತಾ ಪಾರ್ಟಿಯು 1980 ಏಪ್ರಿಲ್ 6ರಂದು ಅಟಲ್ ಬಿಹಾರಿ ವಾಜಪೇಯಿ ಅವರ ನೇತೃತ್ವದಲ್ಲಿ ಉದಯವಾಯಿತು. ಪಕ್ಷವನ್ನು ಕೇವಲ ಅಧಿಕಾರದ ಆಸೆಗಾಗಿ ಸ್ಥಾಪನೆ ಮಾಡಿರಲಿಲ್ಲ, ಆ ಸಂದರ್ಭದಲ್ಲಿ ಬಿಜೆಪಿ ದೇಶಕ್ಕೆ ಅನಿವಾರ್ಯವಾಗಿತ್ತು. ಇಂದಿರಾಗಾಂಧಿ ನೇತೃತ್ವದ ಕಾಂಗ್ರೆಸ್ ಸರಕಾರದ ಸರ್ವಾಧಿಕಾರದ ಧೋರಣೆ ಹಾಗೂ ಹಿಂದು ವಿರೋಧಿ ವ್ಯವಸ್ಥೆಯ ಕಾಲಘಟ್ಟದಲ್ಲಿ ಈ ದೇಶದ ಹಿತಕ್ಕಾಗಿ ಪಕ್ಷದ ಸ್ಥಾಪನೆಯಾಯಿತು. ಅಂದಿನ ಕಠಿಣ ಸಂದರ್ಭದಲ್ಲಿ ಪಕ್ಷದ ಸಂಘಟನೆ, ಅನೇಕ ನಾಯಕರ ಬಲಿದಾನ ಹಾಗೂ ಇಂದಿರಾಗಾಂಧಿ ಅವರ ತುರ್ತು ಪರಿಸ್ಥಿತಿ ಆಡಳಿತದಲ್ಲಿ ಪಕ್ಷದ ಪ್ರಮುಖರನ್ನು ಜೈಲಿಗೆ ಕಳುಹಿಸಿರುವುದನ್ನು ನೆನಪಿಸಿದರು.



■ ಪಕ್ಷವನ್ನು ಕೇವಲ ಅಧಿಕಾರದ ಆಸೆಗಾಗಿ ಸ್ಥಾಪನೆ ಮಾಡಿರಲಿಲ್ಲ

■ ಇಂದಿರಾಗಾಂಧಿ ನೇತೃತ್ವದ ಕಾಂಗ್ರೆಸ್ ಸರಕಾರದ ಸರ್ವಾಧಿಕಾರದ ಧೋರಣೆ ಹಾಗೂ ಹಿಂದೂ ವಿರೋಧಿ ವ್ಯವಸ್ಥೆಯ ಕಾಲಘಟ್ಟದಲ್ಲಿ ಈ ದೇಶದ ಹಿತಕ್ಕಾಗಿ ಪಕ್ಷದ ಸ್ಥಾಪನೆ

ವ್ಯಕ್ತಿಗಿಂತ ಪಕ್ಷ ದೊಡ್ಡದು, ಪಕ್ಷಕ್ಕಿಂತ ದೇಶ ದೊಡ್ಡದು ಎಂಬ ತತ್ವ ಸಿದ್ಧಾಂತ ಭಾಜಪದ್ದು. ಸಾಮಾನ್ಯ ಕಾರ್ಯಕರ್ತ ಕೂಡ ಈ ದೇಶದ ಪ್ರಧಾನಿಯಾಗಬಹುದು, ಭಾಜಪದ ರಾಷ್ಟ್ರೀಯ ಅಧ್ಯಕ್ಷರಾಗಬಹುದು ಎಂದರೆ ಅದು ಭಾರತೀಯ ಜನತಾ ಪಾರ್ಟಿಯಿಂದ ಮಾತ್ರ ಸಾಧ್ಯ. ದೇಶದೆಲ್ಲಡೆ ಬಿಜೆಪಿ ಆಡಳಿತ, ಕೇಂದ್ರದಲ್ಲಿ ನರೇಂದ್ರ ಮೋದಿ ಅವರ ಆಡಳಿತ ಜಗತ್ತಿಗೆ ಮೋದಿಯೇ ಅನಿವಾರ್ಯ ಎಂಬ ಪರಿಸ್ಥಿತಿ ಈಗ ಇದೆ. ಹಳ್ಳಿಯಿಂದ ದಿಲ್ಲಿಯವರೆಗೆ ಬಿಜೆಪಿ ಅಧಿಕಾರ, ಕಾರ್ಯಕರ್ತರಿಗೆ ಪಕ್ಷದ ಜವಾಬ್ದಾರಿ ಇದೆ. ಇದನ್ನೆಲ್ಲಾ ನೋಡಿದಾಗ ಭಾಜಪದ ಕಾರ್ಯಕರ್ತರಾದ ನಾವೆಲ್ಲರೂ ಪುಣ್ಯವಂತರೆಂದು ಅನಿಸುತ್ತದೆ ಎಂದು ಹೇಳಿದರು.

ವಿಧಾನ ಪರಿಷತ್ ಸದಸ್ಯ ಕಿಶೋರ್ ಕುಮಾರ್ ಪುತ್ತೂರು, ವಿಭಾಗ ಸಹಪ್ರಭಾರಿ ಜಯಂತ್ ಕೋಟ್ಯಾನ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪ್ರೇಮಾನಂದ ಶೆಟ್ಟಿ ಉಪಸ್ಥಿತರಿದ್ದರು. ಜಿಲ್ಲಾ ಸಂಚಾಲಕ ದೇವಪ್ಪ ಪೂಜಾರಿ ನಿರೂಪಿಸಿದರು. ಸಹ ಸಂಚಾಲಕಿ ಪೂರ್ಣಿಮಾ ವಂದಿಸಿದರು.

ಸುತ್ತಮುತ್ತ

ಸಮುದ್ರ ತೀರಗಳ ಜೀವರಕ್ಷಕ ಸಿಬ್ಬಂದಿ ಹುದ್ದೆ: ಅರ್ಜಿ ಆಹ್ವಾನ

ಉಡುಪಿ: ಜಿಲ್ಲೆಯ ಮಲ್ಪೆ ಬೀಚ್ ಹಾಗೂ ತ್ರಾಸಿ ಮರವಂತೆ ಬೀಚ್‌ಗಳಲ್ಲಿ ಜೀವರಕ್ಷಕ ಸಿಬ್ಬಂದಿಗಳನ್ನು ಪ್ರವಾಸೋದ್ಯಮ ಇಲಾಖೆ ವತಿಯಿಂದ ನಿಯೋಜಿಸಲು ಉದ್ದೇಶಿಸಿದ್ದು, ಜಿಲ್ಲೆಯಲ್ಲಿ ಜೀವರಕ್ಷಕ ತರಬೇತಿ ಹೊಂದಿರುವ ಸಿಬ್ಬಂದಿಗಳಿಂದ ಸದರಿ ಹುದ್ದೆಗೆ ಅರ್ಜಿ ಆಹ್ವಾನಿಸಲಾಗಿದೆ.
ಆಯ್ಕೆಯಾದ ಅಭ್ಯರ್ಥಿಗಳಿಗೆ ಮಾಸಿಕ ರೂ. 14,958 ವೇತನದೊಂದಿಗೆ ಪಿ.ಎಫ್ ಹಾಗೂ ಇ.ಎಸ್.ಐ ಸೌಲಭ್ಯ ಕಲ್ಪಿಸಲಾಗುವುದು. ಬೀಚ್ ಜೀವರಕ್ಷಕ ತರಬೇತಿ ಪಡೆದ ಪ್ರಮಾಣ ಪತ್ರ ಹೊಂದಿರುವ ಕನಿಷ್ಠ 18 ರಿಂದ 40 ವರ್ಷದೊಳಗಿನ ಆಸಕ್ತ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಏಪ್ರಿಲ್ 15 ಕೊನೆಯ ದಿನ. ಅರ್ಜಿ ನಮೂನೆ ಹಾಗೂ ಹೆಚ್ಚಿನ ಮಾಹಿತಿಗಾಗಿ ಸಹಾಯಕ ನಿರ್ದೇಶಕರು ಕಚೇರಿ, ಪ್ರವಾಸೋದ್ಯಮ ಇಲಾಖೆ, ಉಡುಪಿ ಜಿಲ್ಲಾಧಿಕಾರಿಗಳ ಕಛೇರಿ ಸಂಕೀರ್ಣ, ಎ ಬ್ಲಾಕ್, ಎರಡನೇ ಮಹಡಿ, ಕೊಠಡಿ ಸಂಖ್ಯೆ: 303, ಮಣಿಪಾಲ ದೂರವಾಣಿ ಸಂಖ್ಯೆ: 0820-2574868 ಅನ್ನು ಸಂಪರ್ಕಿಸಬಹುದಾಗಿದೆ ಎಂದು ಪ್ರವಾಸೋದ್ಯಮ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿ ಪ್ರಕಟಣೆ ತಿಳಿಸಿದೆ.

ಪ್ರತಿಷ್ಠಿತ ಶಾಲೆಗಳಲ್ಲಿ ಪ್ರವೇಶಾತಿ: ಅರ್ಜಿ ಆಹ್ವಾನ

ಉಡುಪಿ: ಪ್ರಸಕ್ತ ಸಾಲಿನಲ್ಲಿ ಪರಿಶಿಷ್ಟ ವರ್ಗದ ಕಲ್ಯಾಣ ನಿರ್ದೇಶನಾಲಯದ ವತಿಯಿಂದ ಜಿಲ್ಲೆಯ ಪ್ರತಿಷ್ಠಿತ ಶಾಲೆಗಳಲ್ಲಿ ಅಧ್ಯಯನ ಮಾಡಲು ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ ಒದಗಿಸಲು, ಕಳೆದ ಸಾಲಿನ 5ನೇ ತರಗತಿಯಲ್ಲಿ ಉತ್ತೀರ್ಣರಾದ ಪ್ರತಿಭಾವಂತ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಂದ 6 ನೇ ತರಗತಿ ಪ್ರವೇಶಾತಿಗೆ ಅರ್ಜಿ ಆಹ್ವಾನಿಸಲಾಗಿದೆ. 5 ನೇ ತರಗತಿಯಲ್ಲಿ ಶೇ. 60ರಷ್ಟು ಅಂಕ ಪಡೆದು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿರುವ ಹಾಗೂ ಪೋಷಕರ ವರಮಾನ ವಾರ್ಷಿಕ 2 ಲಕ್ಷ ರೂ. ಮೀರಿರದ ಅರ್ಹ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಲು ಮೇ 4 ಕೊನೆಯ ದಿನ. ಅರ್ಜಿ ನಮೂನೆ ಹಾಗೂ ಹೆಚ್ಚಿನ ಮಾಹಿತಿಗಾಗಿ ಯೋಜನಾ ಸಮನ್ವಯಾಧಿಕಾರಿಗಳ ಕಛೇರಿ, ಸಮಗ್ರ ಬುಡಕಟ್ಟು ಅಭಿವೃದ್ಧಿ ಯೋಜನೆ, ಜಿಲ್ಲಾಧಿಕಾರಿ ಕಚೇರಿ ಸಂಕೀರ್ಣ, ರಜತಾದ್ರಿ, ಮಣಿಪಾಲ ಉಡುಪಿ ದೂ.ಸಂಖ್ಯೆ: 0820-2574814 ಅನ್ನು ಸಂಪರ್ಕಿಸಬಹುದಾಗಿದೆ ಎಂದು ಸಮಗ್ರ ಬುಡಕಟ್ಟು ಅಭಿವೃದ್ಧಿ ಯೋಜನೆಯ ಯೋಜನಾ ಸಮನ್ವಯಾಧಿಕಾರಿಗಳ ಕಚೇರಿ ಪ್ರಕಟಣೆ ತಿಳಿಸಿದೆ.

ಎಂಜಿಎಂನಲ್ಲಿ ವಿಚಾರಗೋಷ್ಠಿ, ಪುಸ್ತಕ ಬಿಡುಗಡೆ ನಾಳೆ

ಉಡುಪಿ: ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಡಾ. ಶಿವರಾಮ ಕಾರಂತ ಟ್ರಸ್ಟ್ ಉಡುಪಿ ಜಿಲ್ಲೆ ವತಿಯಿಂದ ಯಕ್ಷಗಾನ ಕೇಂದ್ರ ಹಾಗೂ ಎಂಜಿಎಂ ಸಂಧ್ಯಾ ಕಾಲೇಜು ಮಣಿಪಾಲ ಇವರ ಸಹಯೋಗದಲ್ಲಿ ಏ.8 ರಂದು ಬೆಳಗ್ಗೆ 10 ಗಂಟೆಗೆ ಕಾಲೇಜಿನ ಸಭಾಂಗಣದಲ್ಲಿ ಯಕ್ಷಗಾನ ಮತ್ತು ಕಾರಂತರು ವಿಚಾರ ಗೋಷ್ಠಿ ಹಾಗೂ ಅಳಿವು ಅಂಚಿನ ಭಾಷೆ ಪುಸ್ತಕ ಬಿಡುಗಡೆ ಕಾರ್ಯಕ್ರಮವು ನಡೆಯಲಿದೆ. ಕಾರ್ಯಕ್ರಮವನ್ನು ಕರ್ನಾಟಕ ಯಕ್ಷಗಾನ ಅಕಾಡೆಮಿಯ ಮಾಜಿ ಅಧ್ಯಕ್ಷ ಪ್ರೊ.ಎಂ.ಎಲ್. ಸಾಮಗ ಉದ್ಘಾಟಿಸಲಿದ್ದು, ಡಾ.ಶಿವರಾಮ ಕಾರಂತ ಟ್ರಸ್ಟ್‌ನ ಅಧ್ಯಕ್ಷ ಗಣನಾಥ ಎಕ್ಕಾರು ಅಧ್ಯಕ್ಷತೆ ವಹಿಸಲಿದ್ದಾರೆ. ಉದ್ಯಮ ಶಿಕ್ಷಣ ತಜ್ಞ ಹರಿಪ್ರಸಾದ್ ರೈ ಪುಸ್ತಕವನ್ನು ಬಿಡುಗಡೆಗೊಳಿಸಲಿದ್ದಾರೆ. ತುಮಕೂರು ವಿಶ್ವವಿದ್ಯಾನಿಲಯದ ಕನ್ನಡ ವಿಭಾಗದ ಮುಖ್ಯಸ್ಥ ಪ್ರೊ. ನಿತ್ಯಾನಂದ ಬಿ ಶೆಟ್ಟಿ ಯಕ್ಷಗಾನ ಕಲಾಮೀಮಾಂಸೆ ಮತ್ತು ಅಧ್ಯಯನ : ಕಾರಂತರ ದೃಷ್ಟಿಕೋನ ಎಂಬ ವಿಷಯದ ಕುರಿತು ಉಪನ್ಯಾಸ ನೀಡಲಿದ್ದಾರೆ. ಮಂಗಳೂರು ವಿಶ್ವ ವಿದ್ಯಾನಿಲಯ ನಿವೃತ್ತ ಪ್ರಾಧ್ಯಾಪಕ ಪ್ರೊ. ರಾಜಾರಾಮ ತೋಳ್ಪಾಡಿ, ಮಣಿಪಾಲ ಮಾಹೆಯ ನಿವೃತ್ತ ಪ್ರಾಧ್ಯಾಪಕ ಮತ್ತು ಚಿಂತಕ ಪ್ರೊ.ಕೆ. ಫಣಿರಾಜ್ ಹಾಗೂ ಮಂಗಳೂರಿನ ಬಲ್ಮಠ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಧ್ಯಾಪಕ ಪ್ರೊ.ರಾಮದಾಸ ಪ್ರಭು ಪುಸ್ತಕ ಜೊತೆ ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ ಎಂದು ಡಾ.ಶಿವರಾಮ ಕಾರಂತ ಟ್ರಸ್ಟ್‌ನ ಸದಸ್ಯ ಕಾರ್ಯದರ್ಶಿಗಳ ಪ್ರಕಟಣೆ ತಿಳಿಸಿದೆ.

ಕುಂದಾಪುರದ ರೋಜರಿ ಮಾತಾ ಇಗರ್ಜಿಯಲ್ಲಿ ಪ್ರಾರ್ಥನೆ

ಕುಂದಾಪುರ: ಜಿಲ್ಲೆಯ ಅತೀ ಪುರಾತನ ಇಗರ್ಜಿಯಾದ ಕುಂದಾಪುರದ ರೋಜರಿ ಮಾತಾ ಇಗರ್ಜಿಯಲ್ಲಿ ಶುಭ ಶುಕ್ರವಾರದ ಸಂಜೆ ಇಗರ್ಜಿಯೊಳಗೆ ಸಂಪ್ರದಾಯದೊಂದಿಗೆ ಶಿಲುಬೆ ಮರಣದ ಪ್ರಾರ್ಥನ ವಿಧಿ ನಡೆಯಿತು.
ದೇವರ ವಾಕ್ಯದ ಪಠಣ, ಸಂಭ್ರಮದ ಪ್ರಾರ್ಥನ ವಿಧಿ, ಪವಿತ್ರ ಶಿಲುಬೆಗೆ ಗೌರವ ಪೂರ್ವಕ ನಮನ ಮತ್ತು ಪವಿತ್ರ ಕ್ರಿಸ್ತ ಪ್ರಸಾದ ಹೀಗೆ ನಾಲ್ಕು ಭಾಗಗಳಲ್ಲಿ ಯೇಸುವಿನ ಕಷ್ಟ ಮರಣದ ಧಾರ್ಮಿಕ ವಿಧಿಗಳನ್ನು ನಡೆಸಲಾಯಿತು. ಸಂಜೆಯ ಪ್ರಾರ್ಥನ ವಿಧಿಗಳನ್ನು ಮೂಡ್ಲಕಟ್ಟೆ ಡಿವೈನ್ ಕಾಲ್ ಸೆಂಟರ್ ಪ್ರವಚಕ, ಧರ್ಮಗುರು ಅನಿಲ್ ಕಿರಣ್ ಫೆರ್ನಾಂಡಿಸ್ ನೆರವೇರಿಸಿ, ಶಿಲುಬೆಯ ಹೊರತು ಮುಕ್ತಿಯಿಲ್ಲ, ಯೇಸು ಕ್ರಿಸ್ತರು ಈ ಪ್ರಪಂಚದಲ್ಲಿ ಜೀವಿಸಲು ಬರಲಿಲ್ಲ ಸಾಯಲು ಬಂದಿದ್ದರು. ನಮಗಾಗಿ ಸಾಯಲು. ಅವರ ಶಿಲುಬೆಯ ಮರಣ ಆಕಸ್ಮಿಕವಲ್ಲ, ಮೊದಲೇ ನಿರ್ಧಾರ ಆಗಿತ್ತು. ಯೇಸು ದೇವರ ಬಲಿ ಕುರಿಯಾಗಿದ್ದರು. ಶಿಲುಬೆ ದೇವರ ಶಕ್ತಿ. ಯೇಸುವಿ ನಿಂದ ದೂರ ಸರಿದಾಗ ನಮಗೆ ಕಷ್ಟಗಳು ಬರುತ್ತವೆ. ಈ ಕಷ್ಟಗಳನ್ನು ಸಹಿಸಿಕೊಂಡು, ನೀತಿ ಮಾರ್ಗದಲ್ಲಿ ಜೀವಿಸಿದರೆ ನಮಗೆ ಮುಕ್ತಿ ಸಿಗುತ್ತದೆ ಎಂದರು. ಚರ್ಚಿನ ಧರ್ಮಗುರು ಪೌಲ್ ರೇಗೋ ಧಾರ್ಮಿಕ ವಿಧಿವಿಧಾನಗಳಲ್ಲಿ ಸಹಕರಿಸಿದರು.

ಕಲ್ಯಾಣಪುರ-ಮುಡಾರು ರಾಜ್ಯ ಹೆದ್ದಾರಿ-249ರಲ್ಲಿದೆ ಈ ಸೇತುವೆ | ರೂ. 1 ಕೋಟಿ ವೆಚ್ಚದ ಕಾಮಗಾರಿ

ಲೋಕಾರ್ಪಣೆಗೆ ಸಿದ್ಧಗೊಂಡಿದೆ ರಾಮೇರುಗುತ್ತು ಸೇತುವೆ

■ ಗಣೇಶ್ ನಾಯಕ್, ಸಾಣೂರು



ಸಂಗಮ ವಿಶೇಷ

ಕಾರ್ಕಳ: ಉಡುಪಿ ಜಿಲ್ಲೆ ಕಾರ್ಕಳ ತಾಲೂಕಿನ ಕಲ್ಯಾಣಪುರ-ಮುಡಾರು ರಾಜ್ಯ ಹೆದ್ದಾರಿ-249ರ ಮುಡಾರು ಗ್ರಾಮದ ರಾಮೇರುಗುತ್ತು ಎಂಬಲ್ಲಿ ಸುಸಜ್ಜಿತ ಸೇತುವೆ ನಿರ್ಮಾಣಗೊಂಡು ಲೋಕಾರ್ಪಣೆಗೆ ಸಿದ್ಧಗೊಂಡಿದೆ.
ಹಳೆಯ ಸೇತುವೆ ಸುಮಾರು 1950ರ ಆಸುಪಾಸಿನಲ್ಲಿ ನಿರ್ಮಾಣವಾಗಿತ್ತು. ಕಿರಿಯದಾದ ಸೇತುವೆ ಎಂಬ ಕಾರಣದಿಂದ ವಾಹನ ಸಂಚಾರ ಸೇರಿದಂತೆ ಎಲ್ಲಾ ವ್ಯವಸ್ಥೆಗಳಿಗೂ ತೊಂದರೆಯಾಗುವ ಕಾರಣಕ್ಕಾಗಿ ಇಲ್ಲಿ ಹೊಸ ಸೇತುವೆ ನಿರ್ಮಾಣವನ್ನು ಮಾಡಲಾಗಿದೆ. ಹೊಸ ಸೇತುವೆ ನಿರ್ಮಾಣವಾದ ಬಳಿಕ 70ವರ್ಷದ ಈ ಸೇತುವೆಯು ಇತಿಹಾಸದ ಪುಟ ಸೇರಿದೆ. ನಿತ್ಯ ನೂರಾರು ವಾಹನಗಳು ಸಂಚರಿಸುವ ಈ ರಸ್ತೆಯಲ್ಲಿ ಹೊಸ ಸೇತುವೆ ನಿರ್ಮಾಣಕ್ಕೆ ಸ್ಥಳೀಯರು ಶಾಸಕ ವಿ. ಸುನೀಲ್ ಕುಮಾರ್ ಅವರಲ್ಲಿ ಬೇಡಿಕೆ ಇಟ್ಟಿದ್ದರು. ಈಗ 1 ಕೋಟಿ ರೂಪಾಯಿ ವೆಚ್ಚದ ಹೊಸ ಸೇತುವೆಯ ಕನಸು ಕೊನೆಗೂ ನನಸಾಗಿ ಲೋಕಾರ್ಪಣೆಗೆ ಸಿದ್ಧಗೊಂಡಿದೆ.
ಈ ಕಿರು ಸೇತುವೆ ಕಾಮಗಾರಿಯು ಹಲವು ತಿಂಗಳಿಂದ ಸಮರ್ಪಕವಾಗಿ ಮತ್ತು ಸಮಯಕ್ಕೆ ಸರಿಯಾಗಿ ಪೂರ್ಣಗೊಳ್ಳದ ಕಾರಣ ಈ ಭಾಗದ ಜನರು ತೀವ್ರ ಸಮಸ್ಯೆಗಳನ್ನು ಎದುರಿಸುವಂತಾಗಿತ್ತು. ಅಲ್ಲದೆ, ಮಳೆಗಾಲದಲ್ಲಿ ಕಲ್ಪಿಸಲಾಗಿದ್ದ ಪರ್ಯಾಯ ರಸ್ತೆಯು-ಕೊಚ್ಚಿಹೋದ ಪರಿಣಾಮ ಸುತ್ತಮುತ್ತಲಿನ ಗ್ರಾಮಸ್ಥರು ನಿತ್ಯ ಸಂಕಷ್ಟಪಡುತ್ತಿದ್ದರು. ಇದರಿಂದ ಎರಡು ಗ್ರಾಮಗಳ ನಡುವಿನ ಸಾರಿಗೆ ಸಂಪರ್ಕವೇ ಕಡಿತಗೊಂಡಿತ್ತು. ಮುಡಾರು ಗ್ರಾಮವನ್ನು ಸಂಪರ್ಕಿಸಬೇಕಾದರೆ ಹಡ್ಯಾಲು-ಮುದ್ರಾಲು ಮೂಲಕ ಸುಮಾರು 3 ಕಿ.ಮೀ. ಸುತ್ತುಬಳಸಿ ಹೋಗಬೇಕು. ಮಿಯ್ಯಾರು-ಕುಂಟಿಬೈಲು ಮೂಲಕ ಸಂಪರ್ಕಿಸಿದರೆ 6 ಕಿ.ಮೀ.ಸುತ್ತುವರಿಯಬೇಕು.

ಸಮಸ್ಯೆಗೆ ಪರಿಹಾರ ಸಿಕ್ಕಿದೆ

7 ದಶಕದ ಈ ಸೇತುವೆ ಮಳೆಗಾಲ ಸಮಯದಲ್ಲಿ ತುಂಬಾ ಸಮಸ್ಯೆಯನ್ನು ಎದುರಿಸುತ್ತಿದ್ದೇವು. ಬಹಳ ಕಷ್ಟವಾಗುತ್ತಿತ್ತು. ಇದೀಗ ಸುಸಜ್ಜಿತ ಸೇತುವೆಯನ್ನು ಗ್ರಾಮದ ಜನತೆಗೆ ಒದಗಿಸಿಕೊಟ್ಟ ಮಾನ್ಯ ಶಾಸಕರಾದ ವಿ ಸುನಿಲ್ ಕುಮಾರ್ ಅವರಿಗೆ ಧನ್ಯವಾದಗಳು.
● ರಾಮಚಂದ್ರ ಪ್ರಭು, ಸ್ಥಳೀಯ ನಿವಾಸಿ, ರಾಮೇರಗುತ್ತು

ಈ ಭಾಗದ ಜನತೆಯ ಕನಸು ನನಸು

ಹಳೆಕಾಲದ ಕಿರಿದಾದ ಸೇತುವೆಯು ಆತಂಕವನ್ನು ಒಡ್ಡುತ್ತಿದ್ದ ಸಂದರ್ಭದಲ್ಲಿ ಇಲ್ಲಿನ ಸಮಸ್ಯೆಯನ್ನು ಮನಗೊಂಡು ಲೋಕೋಪಯೋಗಿ ಇಲಾಖೆಯು ಸುಸಜ್ಜಿತ ಸೇತುವೆ ನಿರ್ಮಿಸುವ ಮೂಲಕ ಆ ಭಾಗದ ಜನತೆಯ ಕನಸನ್ನು ನನಸು ಮಾಡಿದೆ. ನೂತನ ಸೇತೆಯುವ ಬಹುಕಾಲದ ಬೇಡಿಕೆಯಾಗಿದ್ದು, ಸುತ್ತ ಮುತ್ತಲಿನ ರಸ್ತೆಗಳಿಗೆ ಸಂಪರ್ಕಕೊಂಡಿಯಾಗಿ ಈ ಸೇತುವೆಯು ಕಾರ್ಯ ನಿರ್ವಹಿಸಲಿದೆ.
● ಹರಿಹರ ಗೋಖಲೆ, ಸಮಾಜಸೇವಕರು, ಬಜಗೋಳಿ

ಇದರಿಂದಾಗಿ ಈ ಭಾಗದ ಜನರಿಗೆ ಸುತ್ತುಬಳಸಿ ಕೊಪ್ಪಲ-ಪೆರಂಗಾಡಿ ಮೂಲಕ ಮುಡಾರು ಕಡೆ ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿತ್ತು.

ಕಟಪಾಡಿಯಲ್ಲಿ ಅದ್ದೂರಿ ಕಾರ್ಯಕ್ರಮ: ಸತ್ಯೇಂದ್ರ ಪೈ ಮಾಹಿತಿ

ಏ.11ರಂದು ಶ್ರೀ ಶ್ರೀನಿವಾಸ ಕಲ್ಯಾಣೋತ್ಸವ



ಶಿರ್ವ: ತಿರುಪತಿ ತಿರುಮಲ ದೇವಸ್ಥಾನದ ನೇತೃತ್ವದಲ್ಲಿ ಕೆ. ಕೃಷ್ಣಮೋಹನ್ ಪೈ, ಯುಎಸ್‌ಎ ಸಂಕಲ್ಪದಂತೆ ಕಟಪಾಡಿ ವಿಜಯಾ ಪೈ ಮತ್ತು ಪುರುಷೋತ್ತಮ ಪೈ ಹಾಗೂ ಕುಟುಂಬಸ್ಥರ ವತಿಯಿಂದ ಕಟಪಾಡಿ ಎಸ್‌ವಿಎಸ್ ವಿದ್ಯಾವರ್ಧಕ ಸಂಘ ಹಾಗೂ ಕಟಪಾಡಿ ಮತ್ತು ಆಸುಪಾಸಿನ ನಾಗರಿಕರು, ಗಣ್ಯರು, ಸಂಘ ಸಂಸ್ಥೆಗಳು, ದೈವಸ್ಥಾನ, ಭಜನಾ ಮಂದಿರಗಳು, ಶಾಲಾ ಕಾಲೇಜು ವಿದ್ಯಾರ್ಥಿಗಳು ಸಿಬಂದಿ ಸಹಕಾರ ದೊಂದಿಗೆ ಎಸ್‌ವಿಎಸ್ ಪದವಿ ಪೂರ್ವ ಕಾಲೇಜಿನ ಕ್ರೀಡಾಂಗಣದಲ್ಲಿ ಏ.11ರಂದು ಶ್ರೀನಿವಾಸ ಕಲ್ಯಾಣೋತ್ಸವ ನಡೆಯಲಿದೆ.
ಈ ಬಗ್ಗೆ ಕೆ. ಸತ್ಯೇಂದ್ರ ಪೈ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿ, ತಿರುಪತಿಯಿಂದಲೇ ದೇವರು ತಂದು ತಿರುಪತಿ ತಿರುಮಲ ದೇವಸ್ಥಾನ ಸಮಿತಿಯವರ ಪ್ರಧಾನ ಅರ್ಚಕರಿಂದಲೇ ಕಲ್ಯಾಣೋತ್ಸವದ ಧಾರ್ಮಿಕ ಅನುಷ್ಠಾನಗಳು ಜರಗಲಿದೆ. ಮಧ್ಯಾಹ್ನ 3.30ಕ್ಕೆ ಕಟಪಾಡಿ ಪೇಟೆಯಲ್ಲಿ ಶ್ರೀನಿವಾಸ ದೇವರನ್ನು ಸ್ವಾಗತಿಸಿ, ಕಟಪಾಡಿ ಪೇಟೆಯಿಂದ ಕಲ್ಯಾಣ ಮಂಟಪದ ವೇದಿಕೆಗೆ ಭವ್ಯಮೆರವಣಿಗೆಯೊಂದಿಗೆ ಕರೆತರಲಾಗುವುದು ಎಂದು ಹೇಳಿದರು.
ಸಂಜೆ 5ರಿಂದ ಶ್ರೀದೇವರ ವಿವಾಹ ಮಂಟಪ ಪ್ರವೇಶ, ವಿವಾಹ ಮಂಟಪಕ್ಕೆ ಶ್ರೀ ಪದ್ಮಾವತೀ ದೇವಿಯ ಆಗಮನ, ಸ್ವರ್ಣಮಣಿ ಬಂಧನ, ಮುಹೂರ್ತ ನಿರೀಕ್ಷಣೆ, ಮಾಲಾ ಧಾರಣೆ ನಡೆದು 6.25ರ ಗೋಧೂಳಿ ಲಗ್ನ ಸುಮುಹೂರ್ತದಲ್ಲಿ ಶ್ರೀನಿವಾಸ ದೇವರಿಗೆ ಪದ್ಮಾವತೀ ದೇವಿಯ ಕನ್ಯಾದಾನ, ಶ್ರೀನಿವಾಸ ಕಲ್ಯಾಣೋತ್ಸವ ಕಂಕಣ, ಮಂಗಳಸೂತ್ರ ಸಮರ್ಪಣೆ, ವಿವಾಹ ಹೋಮ, ಮಂಗಳಾಚರಣೆ ಮಹಾಪ್ರಸನ್ನ ಪೂಜೆ ಅಷ್ಟಾವಧಾನ ಸೇವೆ, ತೀರ್ಥ ಪ್ರಸಾದ ವಿನಿಯೋಗ ಜರಗಲಿದೆ. ರಾತ್ರಿ 8ರಿಂದ ಸಾರ್ವಜನಿಕ ಮಹಾ ಅನ್ನಸಂತರ್ಪಣೆ ನಡೆಯಲಿದೆ ಎಂದರು.
ಅಪರೂಪದ ಅವಕಾಶವಾಗಿದ್ದು ತಿರುಪತಿಗೆ ಹೋಗಲು ಸಾಧ್ಯವಾಗದವರಿಗೆ ಇಲ್ಲಿಯೇ ತಿರುಪತಿ ದೇವರ ದರ್ಶನ ಪಡೆಯಬಹುದಾಗಿದೆ. ತಿರುಪತಿ ದೇವಸ್ಥಾನದ ಹುಂಡಿ ಹಣ ನೀಡಲು ಅವಕಾಶ ಕಲ್ಪಿಸಲಾಗಿದೆ. ಅಲ್ಲದೆ ವಿಶೇಷಚೇತನ, ಅಶಕ್ತ ನಾಗರಿಕರಿಗೆ ವಿಶೇಷ ಆಸನ ವ್ಯವಸ್ಥೆ ಕಲ್ಪಿಸಲಾಗುವುದು. ಭಾಗವಹಿಸುವ ಭಕ್ತರಿಗೆ ತಿರುಪತಿಯಿಂದಲೇ ತರಿಸಿಕೊಳ್ಳಲಾದ ವಿಶೇಷ ಲಡ್ಡುಪ್ರಸಾದ ಸಹಿತ ಪ್ರಸಾದ ವಿತರಣೆ ನಡೆಯಲಿದೆ ಎಂದರು.
ಭಕ್ತಾದಿಗಳ ವಾಹನ ನಿಲುಗಡೆಗೆ, ಸ್ಥಳಾವಕಾಶ ಕಲ್ಪಿಸಿದ್ದು, ವಾಹನ ನಿಲುಗಡೆಯ ಸ್ಥಳದಿಂದ ಕಲ್ಯಾಣ ಮಂಟಪಕ್ಕೆ ಆಗಮಿಸಲು ಉಚಿತವಾಗಿ ಬದಲಿ ವಾಹನ ವ್ಯವಸ್ಥೆ ಮಾಡಲಾಗಿದೆ. ಈ ಬಗ್ಗೆ ಕಲ್ಯಾಣೋತ್ಸವ ಸಮಿತಿ ವೆಬ್ ಸೈಟ್ https://www.katapadykalyanotsava.com/ನಲ್ಲಿ ವಿವರಗಳು ಲಭ್ಯವಿದೆ. ಶ್ರೀ ವೆಂಕಟರಮಣ ದೇವರಿಗೆ ಹೂ, ಹಣ್ಣು ಹಾಗೂ ತುಳಸಿ ದಳ ಅರ್ಪಿಸಲು ಬಯಸುವ ಭಕ್ತರು ಅಪರಾಹ್ನ 3ರ ಒಳಗಾಗಿ ಕಲ್ಯಾಣ ಮಂಟಪದಲ್ಲಿ ನೀಡಬಹುದು ಎಂದರು.
ಸುದ್ದಿಗೋಷ್ಠಿಯಲ್ಲಿ ಕೃಷ್ಣಮೋಹನ್ ಪೈ, ಭಾಸ್ಕರ ಕಾಮತ್, ಕೆ. ನಾಗೇಶ್ ಕಾಮತ್, ಸುಧಾಕರ್ ಬ್ರಹ್ಮಾವರ ಉಪಸ್ಥಿತರಿದ್ದರು

ರಾಜ್ಯಮಟ್ಟದ ಅಂತರ ಕಾಲೇಜು ಉತ್ಸವ 'ಪ್ರಜ್ಞಾ' ಕಾರ್ತಿಕ್ ಸಾಮಗ ಸಲಹೆ

ಒಬ್ಬರ ಸಾಧನೆ ಧನಾತ್ಮಕ ಪ್ರೇರಣೆಯಾಗಲಿ



ಉಡುಪಿ: ಪ್ರತಿಯೊಬ್ಬರಲ್ಲೂ ಪ್ರತಿಭೆ ಇದೆ, ಪ್ರತಿಯೊಬ್ಬ ವಿದ್ಯಾರ್ಥಿಯು ಯಶಸ್ಸನ್ನು ಪಡೆಯಲು ಯೋಗ್ಯನಾಗಿರುತ್ತಾನೆ. ನಿಜವಾದ ಗುರಿಗಳನ್ನು ಸಾಧಿಸುವಲ್ಲಿ ಪ್ರಯತ್ನಿಸಿದರೆ ಜೀವನವೇ ಸ್ವತಹ ನಮ್ಮನ್ನು ಪುರಸ್ಕರಿಸುತ್ತದೆ, ಆರೋಗ್ಯ ರಹಿತ ಹೋಲಿಕೆಗಳು ಅವಕಾಶ ಗಳನ್ನು ಕಳೆದುಕೊಳ್ಳಲು ಪ್ರಮುಖ ಕಾರಣವಾಗುತ್ತದೆ ಎಂದು ಕಿರುತೆರೆ ಹಾಗೂ ಚಲನಚಿತ್ರ ನಟ ಕಾರ್ತಿಕ್ ಸಾಮಗ ಇವರು ವಿದ್ಯಾರ್ಥಿಗಳಿಗೆ ಹಿತನುಡಿದರು.
ಪೂರ್ಣಪ್ರಜ್ಞ ಆಯೋಜಿಸಿದ ರಾಜ್ಯ ಮಟ್ಟದ ಅಂತರ ಕಾಲೇಜು ಉತ್ಸವ 'ಪ್ರಜ್ಞಾ – 2026'ನ್ನು ಉದ್ಘಾಟಿಸಿ ಅವರು ಮಾತನಾಡಿದರು.
ವಿದ್ಯಾರ್ಥಿಗಳು ದೊರೆತ ಅವಕಾಶಗಳನ್ನು ಬಳಸಿಕೊಳ್ಳಬೇಕು. ಇತರರನ್ನು ಪ್ರಶಂಸಿಸುವ ಗುಣ, ಸಹಪಾಠಿಗಳಿಂದ ಪ್ರೇರಣೆ ಪಡೆದುಕೊಳ್ಳುವುದು ಮುಂತಾದ ಧನಾತ್ಮಕ ಅಂಶಗಳನ್ನು ನಿತ್ಯ ಜೀವನದಲ್ಲಿ ಅಳವಡಿಸಿಕೊಂಡರೆ ಗುರಿ ಮುಟ್ಟುವುದು ಸುಲಭವಾಗುತ್ತದೆ ಎಂದರು.
ಅತಿಥಿಗಳಾಗಿದ್ದ ಉಡುಪಿ ಶ್ರೀ ಅದಮಾರು ಮಠ ಆಡಳಿತ ಮಂಡಳಿ, ಬೆಂಗಳೂರು ಇಲ್ಲಿಯ ಗೌರವ ಕಾರ್ಯದರ್ಶಿ ಡಾ. ಎ.ಪಿ.ಭಟ್ ಮಾತನಾಡಿ, ಕಾರ್ಯಕ್ರಮ ಅದ್ಭುತವಾದ 'ಚಿಂತನೆ-ಸೃಜನಶೀಲತೆ – ಸಂಭ್ರಮ' ಎನ್ನುವ ತಾತ್ವಿಕತೆಯನ್ನು ಹೊಂದಿದ್ದು ಪ್ರತಿಯೊಬ್ಬರೂ ತಮ್ಮ ಅಭಿವೃದ್ಧಿಗೋಸ್ಕರ ಸ್ವ-ಚಿಂತನೆಯಿಂದ ಹೆಜ್ಜೆ ಇಡಬೇಕು ಎಂದು ಅಭಿಪ್ರಾಯಪಟ್ಟರು.
ಪೂರ್ಣಪ್ರಜ್ಞ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್ ನ ನಿರ್ದೇಶಕ ಡಾ. ಪಿ. ಎಸ್. ಐತಾಳ್ ಬಹುಮಾನಕ್ಕಿಂತ ಕಾರ್ಯಕ್ರಮದಲ್ಲಿ ಭಾಗವಹಿಸುವುದು ಬಹುಮುಖ್ಯ ಎಂದು ವಿದ್ಯಾರ್ಥಿಗಳನ್ನು ಹುರಿದುಂಬಿಸಿದರು.
ವಿದ್ಯಾರ್ಥಿ ಕ್ಷೇಮ ಪಾಲನ ಅಧಿಕಾರಿ ಡಾ. ಮಂಜುನಾಥ ಕರಬ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಶೈಕ್ಷಣಿಕ ಸ್ಪರ್ಧೆಗಳ ಸಂಯೋಜಕ ಡಾ. ಸಂದೀಪ್ ಸತ್ಯಮೂರ್ತಿ ಸ್ವಾಗತಿಸಿ, ಸುಮಲತಾ ವಂದಿಸಿ, ಹರಿಣಾಕ್ಷಿ ಶೆಟ್ಟಿ ನಿರೂಪಿಸಿದರು.
ಕಾಲೇಜು ಆಂತರಿಕ ಗುಣಮಟ್ಟ ಖಾತರಿ ಘಟಕದ ಉಪ ಸಂಯೋಜಕ ಡಾ.ಬಿ. ಲಕ್ಷ್ಮೀಶ ರಾವ್, ಕಾರ್ಯಕ್ರಮ ಸಂಯೋಜಕರಾದ ಡಾ. ಸೌಮ್ಯಾ ಶೆಟ್ಟಿ ಧನ್ಯಶ್ರೀ, ಪ್ರತಿಭಾ ಸಿ. ಆಚಾರ್ಯ , ಡಾ. ಶಿವಕುಮಾರ್ ಅಳಗೋಡು, ವಿದ್ಯಾರ್ಥಿ ಸಂಯೋಜಕರಾದ ಕೆ.ಪಿ. ನೇಹಾ ಹಾಗೂ ಭಾರ್ಗವ ಭಟ್ ಇದ್ದರು.

29 ಕಾಲೇಜುಗಳಿಂದ 400 ವಿದ್ಯಾರ್ಥಿಗಳು

ಸುಮಾರು 33 ಶೈಕ್ಷಣಿಕ ಸ್ಪರ್ಧೆಗಳು, 6 ಸಾಂಸ್ಕೃತಿಕ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ ಎಂದು ಅಧ್ಯಕ್ಷತೆ ವಹಿಸಿದ್ದ ಕಾಲೇಜು ಪ್ರಾಂಶುಪಾಲ ಡಾ. ರಾಮು ಎಲ್. ತಿಳಿಸಿದರು. 29 ಕಾಲೇಜುಗಳಿಂದ 400ಕ್ಕೂ ಹೆಚ್ಚಿನ ವಿದ್ಯಾರ್ಥಿಗಳು ಸ್ಪರ್ಧೆಗಳಲ್ಲಿ ಭಾಗವಹಿಸುತ್ತಿದ್ದಾರೆ ಎಂದು ಮಾಹಿತಿ ನೀಡಿದರು.

ಅಭಿವೃದ್ಧಿ ಪಥಕ್ಕೆ ನಾಂದಿ ಹಾಡಿದ ಪಕ್ಷದ ಹಿರಿಯರ ಸ್ಮರಣೆ ಅಗತ್ಯ: ಸುರೇಶ್ ಶೆಟ್ಟಿ



ಕುಂದಾಪುರ: ಭಾರತೀಯ ಜನತಾ ಪಕ್ಷದ ಸಂಸ್ಥಾಪನಾ ದಿನವನ್ನು ಕುಂದಾಪುರದ ಪಕ್ಷದ ಕಚೇರಿಯಲ್ಲಿ ಸೋಮವಾರ ಆಚರಿಸಲಾಯಿತು.
ಪಕ್ಷದ ಸಂಸ್ಥಾಪಕ ಶ್ಯಾಮಪ್ರಸಾದ್ ಮುಖರ್ಜಿ, ದೀನದಯಾಳ ಉಪಾಧ್ಯಾಯ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಮಾತನಾಡಿದ ಕುಂದಾಪುರ ಮಂಡಲ ಅಧ್ಯಕ್ಷ ಸುರೇಶ್ ಶೆಟ್ಟಿ ಗೋಪಾಡಿ, ರಾಷ್ಟ್ರೀಯ ಚಿಂತನೆಗಳ ಮೂಲಕ ಅಭಿವೃದ್ಧಿಯ ಪಥಕ್ಕೆ ನಾಂದಿ ಹಾಡಿದ ಪಕ್ಷದ ಹಿರಿಯರನ್ನು ಈ ಸಂದರ್ಭದಲ್ಲಿ ಸ್ಮರಿಸಿಕೊಳ್ಳಬೇಕಿದೆ. ತಳಮಟ್ಟದಿಂದ ಪಕ್ಷವನ್ನು ಬಲಪಡಿಸುತ್ತಿರುವ ಕಾರ್ಯಕರ್ತರ ಶ್ರಮವನ್ನು ಗೌರವಿಸಬೇಕು ಎಂದರು.
ಮಂಡಲ ಉಪಾಧ್ಯಕ್ಷ ರೂಪಾ ಬಾಬು ಪೈ, ಮಂಡಲ ಕಾರ್ಯದರ್ಶಿ ನೇತ್ರಾವತಿ ಮಡಿವಾಳ, ರಾಜೇಶ್ ಶೆಟ್ಟಿ ಶಿರೂರು, ಯುವ ಮೋರ್ಚಾ ಅಧ್ಯಕ್ಷ ಕಿರಣ್ ಪೂಜಾರಿ ತೆಕ್ಕಟ್ಟೆ, ಓಬಿಸಿ ಮರ್ಚಾ ಅಧ್ಯಕ್ಷ ಸುರೇಂದ್ರ ಕಾಂಚನ್ ಸಂಗಮ್, ಮಹಿಳಾ ಮೋರ್ಚಾ ಅಧ್ಯಕ್ಷೆ ಸೌರಭಿ ಪೈ, ಎಸ್.ಸಿ. ಮೋರ್ಚದ ಅಧ್ಯಕ್ಷ ಮಂಜುನಾಥ್ ಬಳ್ಕೂರು, ಮಹಿಳಾ ಮೋರ್ಚಾ ಪ್ರಧಾನ ಕಾರ್ಯದರ್ಶಿ ಶ್ವೇತಾ ಶ್ರೀನಿಧಿ ಉಪಾಧ್ಯಾಯ, ಉಪಾಧ್ಯಕ್ಷೆ ರೋಹಿಣಿ ಪೈ, ಒಬಿಸಿ ಕಾರ್ಯದರ್ಶಿ ನವೀನ್ ಕುಂದಾಪುರ, ದೀಕ್ಷಿತ್ ಶೆಟ್ಟಿ ಪುರಸಭಾ ಮಾಜಿ ಸದಸ್ಯರಾದ ಸಂತೋಷ ಶೆಟ್ಟಿ ದಿವಾಕರ ಕಡ್ಗಿ ರತ್ನಾಕರ ಶೇರಿಗಾರ್, ಪ್ರಮುಖರಾದ ಕಿಶನ್ ಹೆಗ್ಡೆ ಬಸ್ರೂರು, ನಾಗರಾಜ್ ಸಂಪೆಕಟ್ಟೆ, ಗುಣರತ್ನ, ಚೇತನ ಕುಂದಾಪುರ ಇನ್ನಿತರರು ಉಪಸ್ಥಿತರಿದ್ದರು.
ಮಂಡಲ ಪ್ರಧಾನ ಕಾರ್ಯದರ್ಶಿ ಸತೀಶ್ ಪೂಜಾರಿ ವಕ್ವಾಡಿ ಪ್ರಾಸ್ತಾವಿಕ ಮಾತುಗಳನ್ನಾಡಿ ಸ್ವಾಗತಿಸಿದರು. ಸುಧೀರ್ ಕೆ. ಎಸ್. ವಂದಿಸಿದರು.

ಗುಜ್ಜಾಡಿಯಲ್ಲಿ ನೆರವೇರಿತು ಅದ್ದೂರಿ ಸೀತಾರಾಮಚಂದ್ರ ಕಲ್ಯಾಣೋತ್ಸವ



ಕುಂದಾಪುರ: ಗುಜ್ಜಾಡಿ ಗ್ರಾಮದ ನಾಯಕವಾಡಿಯ ಬಿಲ್ಲವರ ಸಮಾಜ ಸೇವಾ ಸಂಘ ಶ್ರೀ ರಾಮ ಭಗವಾನ್ ಬ್ರಹ್ಮಶ್ರೀ ನಾರಾಯಣಗುರು ಮಂದಿರ ಇದರ 50ರ ಸಂಭ್ರಮಾಚರಣೆ 'ಸುವರ್ಣ ಸಂಭ್ರಮ' ದ ಪ್ರಯುಕ್ತ ಲೋಕ ಕಲ್ಯಾಣಾರ್ಥ ಗುಜ್ಜಾಡಿ ನಾಯಕವಾಡಿಯ ಶ್ರೀ ರಾಮ ಭಗವಾನ್ ಬ್ರಹ್ಮಶ್ರೀ ನಾರಾಯಣಗುರು ಮಂದಿರದ ಎದುರು ನಿರ್ಮಿಸಲಾದ ಅದ್ದೂರಿ ಮಂಟಪದಲ್ಲಿ ಸೀತಾರಾಮಚಂದ್ರ ಕಲ್ಯಾಣೋತ್ಸವ ವಿಜೃಂಭಣೆಯಿಂದ ನೆರವೇರಿತು.
ಕನ್ಯಾಡಿ ಶ್ರೀ ರಾಮ ಕ್ಷೇತ್ರದ ಶ್ರೀ ಬ್ರಹ್ಮಾನಂದ ಸರಸ್ವತಿ ಸ್ವಾಮೀಜಿ, ಶ್ರೀ ಗುರುದೇವ ಮಠ ಉಪಸ್ಥಿತಿಯಲ್ಲಿ ಶ್ರೀ ರಾಮಕ್ಷೇತ್ರದ ಆಸ್ಥಾನ ಪುರೋಹಿತ ಲಕ್ಷ್ಮೀಪತಿ ಗೋಪಾಲಾಚಾರ್ಯ ನೇತೃತ್ವದಲ್ಲಿ ಧಾರ್ಮಿಕ ವಿಧಿವಿಧಾನಗಳು ಸಂಪನ್ನಗೊಂಡಿತು. ಸಂಜೆ ಶ್ರೀ ದೇವರ ವಿವಾಹ ಮಂಟಪ ಪ್ರವೇಶ, ಅನಂತರ ಶ್ರೀ ಸೀತಾ ದೇವಿಯ ಆಗಮನ, ಸ್ವರ್ಣ ಮಣಿ ಬಂಧನ, ಮುಹೂರ್ತ ನಿರೀಕ್ಷಣೆ, ಮಾಲಾಧಾರಣೆ ನೆರವೇರಿತು. ಸಂಜೆ ಮೇಷ ಲಗ್ನ ಗೋಧೂಳಿ ಸುಮುಹೂರ್ತದಲ್ಲಿ ಶ್ರೀ ರಾಮಚಂದ್ರ ದೇವರಿಗೆ ಸೀತಾ ದೇವಿಯ ಕನ್ಯಾದಾನ, ಶ್ರೀ ಸೀತಾರಾಮಚಂದ್ರ ಕಲ್ಯಾಣೋತ್ಸವ, ಕಂಕಣ, ಮಂಗಳಸೂತ್ರ ಸಮರ್ಪಣೆ, ವಿವಾಹ ಹೋಮ, ಮಂಗಳಾಚರಣೆ, ಮಹಾಪ್ರಸನ್ನ ಪೂಜೆ ನಡೆಯಿತು. ಶಾಸಕ ಗುರುರಾಜ್ ಶೆಟ್ಟಿ ಗಂಟಿಹೊಳೆ, ಶ್ರೀ ರಾಮ ಭಗವಾನ್ ಬ್ರಹ್ಮಶ್ರೀ ನಾರಾಯಣಗುರು ಮಂದಿರದ ಅಧ್ಯಕ್ಷ ನಾರಾಯಣ ಟಿ.ಪೂಜಾರಿ, ಸುವರ್ಣ ಮಹೋತ್ಸವ ಸಮಿತಿ ಕಾರ್ಯದರ್ಶಿ ಶಂಕರ ಪೂಜಾರಿ, ಖಜಾಂಚಿ ಪ್ರಕಾಶ್ ಪೂಜಾರಿ, ತಮ್ಮಯ್ಯ ದೇವಾಡಿಗ, ಬಿ. ಎನ್. ಶಂಕರ್ ಪೂಜಾರಿ, ಹರೀಶ್ ಮೇಸ್ತ, ರಾಜು ಎನ್ ಪೂಜಾರಿ, ಮಂದಿರ, ಸುವರ್ಣ ಮಹೋತ್ಸವ ಸಮಿತಿ ಪದಾಧಿಕಾರಿಗಳು, ಮಹಿಳಾ ಮಂಡಳಿ ಸದಸ್ಯರು, ಬಿಲ್ಲವ ಸಮಾಜ ಸೇವಾ ಸಂಘದ ಸದಸ್ಯರು ಇದ್ದರು.

ಕಾಪು ಪುರಸಭೆಯ ನೂತನ ಅಧ್ಯಕ್ಷರಾಗಿ ಮೋಹಿನಿ ಶೆಟ್ಟಿ ಆಯ್ಕೆ



ಕಾಪು: ಕಾಪು ಪುರಸಭೆಯ ನೂತನ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದ ಮೋಹಿನಿ ಶೆಟ್ಟಿ ಇವರನ್ನು ಶಾಸಕರಾದ ಗುರ್ಮೆ ಸುರೇಶ್ ಶೆಟ್ಟಿ ಅವರು ಹೂಗುಚ್ಛ ನೀಡಿ ಅಭಿನಂದಿಸಿದರು.
ಈ ಸಂದರ್ಭದಲ್ಲಿ ಉಡುಪಿ ಚಿಕ್ಕಮಗಳೂರು ಲೋಕಸಭಾ ಕ್ಷೇತ್ರದ ಸಂಸದ ಕೋಟ ಶ್ರೀನಿವಾಸ ಪೂಜಾರಿ, ಕಾಪು ಪುರಸಭೆಯ ಉಪಾಧ್ಯಕ್ಷ ಸರಿತಾ ಶಿವಾನಂದ, ಸ್ಥಾಯಿ ಸಮಿತಿ ಅಧ್ಯಕ್ಷರಾದ ಕಿರಣ್ ಆಳ್ವ ಮಾಜಿ ಶಾಸಕರಾದ ಲಾಲಾಜಿ ಆರ್ ಮೆಂಡನ್, ನಿಕಟ ಪೂರ್ವ ಅಧ್ಯಕ್ಷರಾದ ಹರೀಣಾಕ್ಷಿ ದೇವಾಡಿಗ, ಕಾಪು ಮಂಡಲ ಬಿಜೆಪಿ ಅಧ್ಯಕ್ಷರಾದ ಜಿತೇಂದ್ರ ಶೆಟ್ಟಿ, ರಾಜ್ಯ ಬಿಜೆಪಿ ಮಹಿಳಾ ಮೋರ್ಚಾ ಪ್ರಧಾನ ಕಾರ್ಯದರ್ಶಿಗಳಾದ ಶಿಲ್ಪಾ ಜಿ ಸುವರ್ಣ, ಕಾಪು ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷರಾದ ಸುಧಾಮ ಶೆಟ್ಟಿ ಹಾಗೂ ಕಾಪು ಪುರಸಭೆಯ ಸದಸ್ಯರು ಉಪಸ್ಥಿತರಿದ್ದರು.

ಶ್ರೀ ಮಿತ್ರ ಯಕ್ಷಗಾನ ಮಂಡಳಿ ಪ್ರಶಸ್ತಿ: ಅರ್ಜಿ ಆಹ್ವಾನ

ಉಡುಪಿ: ಮಣಿಪಾಲದ ಯಕ್ಷರಂಗ ಕಲಾಸಂಸ್ಥೆಯ ಅಂಗಸಂಸ್ಥೆ ಶ್ರೀ ಮಿತ್ರ ಯಕ್ಷಗಾನ ಮಂಡಳಿ, ಸರಳೇಬೆಟ್ಟು 43ನೇ ವರ್ಷದ ಸಂಭ್ರಮಾಚರಣೆಯ ಅಂಗವಾಗಿ ವಿವಿಧ ಕ್ಷೇತ್ರಗಳ ಸಾಧಕರಿಗೆ ನೀಡಲಾಗುವ ಸ್ಮಾರಕ ಪ್ರಶಸ್ತಿಗಳಿಗಾಗಿ ಅರ್ಹರಿಂದ ಅರ್ಜಿ, ವಿವರಗಳನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗೆ ದೂ.ಸಂ. 9844204319ನ್ನು ಸಂಪರ್ಕಿಸಬಹುದು ಎಂದು ಮಂಡಳಿಯ ಅಧ್ಯಕ್ಷ ಎಚ್. ಪ್ರಕಾಶ ಶಾನುಭಾಗ್ ತಿಳಿಸಿದ್ದಾರೆ.

ಉಡುಪಿಯಲ್ಲಿ ಜಿಲ್ಲಾ ಬಿಜೆಪಿಯಿಂದ ಸ್ಥಾಪನಾ ದಿನಾಚರಣೆ | ಪಕ್ಷದ ಜಿಲ್ಲಾಧ್ಯಕ್ಷ ಕುತ್ಯಾರು ನವೀನ್ ಶೆಟ್ಟಿ ಬಣ್ಣನೆ

ಕಾರ್ಯಕರ್ತರ ಶ್ರಮದಿಂದಾಗಿಯೇ ಇಂದು ದೇಶಾದ್ಯಂತ ಬಿಜೆಪಿ ಅಲೆ ಇದೆ

ಉಡುಪಿ: ಜಿಲ್ಲಾ ಬಿಜೆಪಿ ವತಿಯಿಂದ ಬಿಜೆಪಿ ಸ್ಥಾಪನಾ ದಿನಾಚರಣೆ ಬಿಜೆಪಿ ಉಡುಪಿ ಜಿಲ್ಲಾಧ್ಯಕ್ಷ ಕುತ್ಯಾರು ನವೀನ್ ಶೆಟ್ಟಿ ಅಧ್ಯಕ್ಷತೆಯಲ್ಲಿ ಸೋಮವಾರ ಬಿಜೆಪಿ ಜಿಲ್ಲಾ ಕಚೇರಿಯಲ್ಲಿ ನಡೆಯಿತು.
ಈ ವೇಳೆ ಪಕ್ಷದ ಹಿರಿಯ ಕಾರ್ಯಕರ್ತರನ್ನು ಸನ್ಮಾನಿಸಲಾಯಿತು. ಬಿಜೆಪಿ ಜಿಲ್ಲಾಧ್ಯಕ್ಷ ಕುತ್ಯಾರು ನವೀನ್ ಶೆಟ್ಟಿ ಸನ್ಮಾನಿತರನ್ನು ಅಭಿನಂದಿಸಿ ಮಾತನಾಡಿ, ಅಟಲ್ ಬಿಹಾರಿ ವಾಜಪೇಯಿ ಅವರ ನೇತೃತ್ವದಲ್ಲಿ ಸ್ಥಾಪನೆಯಾದ ಭಾರತೀಯ ಜನತಾ ಪಾರ್ಟಿ ಇಂದು ವಿಶ್ವದ ಅತಿದೊಡ್ಡ ರಾಜಕೀಯ ಪಕ್ಷವಾಗಿ ಬೆಳೆದಿದೆ. ರಾಷ್ಟ್ರ ಸೇವೆಯೇ ನಮ್ಮ ಪರಮ ಧರ್ಮವಾಗಿದ್ದು ಪ್ರಧಾನಿ ಮೋದಿಯವರ ನೇತೃತ್ವದಲ್ಲಿ ಭಾರತವನ್ನು ಪರಮವೈಭವದತ್ತ ಕೊಂಡೊಯ್ಯಲು ನಾವೆಲ್ಲರೂ ಶ್ರಮಿಸಬೇಕಿದೆ ಎಂದು ಕರೆ ನೀಡಿದರು.



ಅಟಲ್ ಬಿಹಾರಿ ವಾಜಪೇಯಿ ಮತ್ತು ಎಲ್.ಕೆ. ಅಡ್ವಾಣಿಯವರು ಅಂದು ಹಾಕಿಕೊಟ್ಟ ತಳಹದಿಯ ಮೇಲೆ ಇಂದು ಬಿಜೆಪಿ ಬಲಿಷ್ಠವಾಗಿ ನಿಂತಿದೆ. ಕಾರ್ಯಕರ್ತರ ಶ್ರಮದಿಂದಾಗಿ ಇಂದು ದೇಶಾದ್ಯಂತ ಬಿಜೆಪಿ ಅಲೆ ಎದ್ದಿದ್ದು ಮುಂಬರುವ ದಿನಗಳಲ್ಲಿ ಇನ್ನಷ್ಟು ಸಶಕ್ತವಾಗಿ ಪಕ್ಷವನ್ನು ಸಂಘಟಿಸಬೇಕಿದೆ ಎಂದು ಅವರು ತಿಳಿಸಿದರು.
ಉಡುಪಿ ಶಾಸಕ ಯಶಪಾಲ್ ಸುವರ್ಣ ಬಿಜೆಪಿ ಸ್ಥಾಪನಾ ದಿನದ ಶುಭಾಶಯ ತಿಳಿಸಿದರು.
ಸನ್ಮಾನಿತರ ಪರವಾಗಿ ನಿವೃತ್ತ ಪ್ರಾಂಶುಪಾಲ ದಯಾನಂದ ನಾಯಕ್ ಮಣಿಪಾಲ ಅನಿಸಿಕೆ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷ ಕುಯಿಲಾಡಿ ಸುರೇಶ್ ನಾಯಕ್, ರಾಜ್ಯ ಎಸ್.ಸಿ. ಮೋರ್ಚಾ ಉಪಾಧ್ಯಕ್ಷ ದಿನಕರ ಬಾಬು, ಬಿಜೆಪಿ ಜಿಲ್ಲಾ ಕಾರ್ಯಾಲಯ ಕಾರ್ಯದರ್ಶಿ ಸತ್ಯಾನಂದ ನಾಯಕ್ ಮೊದಲಾದವರಿದ್ದರು.
ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹಾಗೂ ಕಾರ್ಯಕ್ರಮದ ಜಿಲ್ಲಾ ಸಂಚಾಲಕ ದಿನಕರ ಶೆಟ್ಟಿ ಹೆರ್ಗ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶ್ರೀಕಾಂತ್ ನಾಯಕ್ ವಂದೇ ಮಾತರಂ ಹಾಡಿದರು. ಜಿಲ್ಲಾ ಕಾರ್ಯದರ್ಶಿಗಳಾದ ಶ್ರೀನಿಧಿ ಹೆಗ್ಡೆ ಸ್ವಾಗತಿಸಿ, ಶಿವಕುಮಾರ್ ಅಂಬಲಪಾಡಿ ನಿರೂಪಿಸಿದರು. ಗಿರೀಶ್ ಎಂ. ಅಂಚನ್ ವಂದಿಸಿದರು.

ಪಕ್ಷದ ಹಿರಿಯ ಕಾರ್ಯಕರ್ತರಿಗೆ ಸನ್ಮಾನ

ಪಕ್ಷದ ಹಿರಿಯ ಕಾರ್ಯಕರ್ತರಾದ ಕೆ.ಟಿ. ಪೂಜಾರಿ ಕೊಡವೂರು, ಕಾಳು ಶೇರಿಗಾರ್ ಕೊಡವೂರು, ದಯಾನಂದ ನಾಯಕ್ ಮಣಿಪಾಲ, ಬಿ.ರಮಾನಾಥ ಹೆಗ್ಡೆ ಹೆರ್ಗ, ಹೆರಿಯ ಅಮ್ಮುಂಜೆ ಅವರನ್ನು ಸನ್ಮಾನಿಸಲಾಯಿತು.









ಮಂಜೇಶ್ವರ ಕ್ಷೇತ್ರದ ಅಭಿವೃದ್ಧಿಗೆ ಬೇಕು ಸಮರ್ಥ ಜನಪ್ರತಿನಿಧಿ

ಭಾರತವನ್ನು ಸಂಪೂರ್ಣ ಅಭಿವೃದ್ಧಿ ಹೊಂದಿದ ರಾಷ್ಟ್ರವನ್ನಾಗಿಸುವ ನಿಟ್ಟಿನಲ್ಲಿ ಪ್ರಧಾನಿ ಶ್ರೀ ನರೇಂದ್ರ ಮೋದಿ ನೇತೃತ್ವದ ಸರಕಾರವು ದೇಶವನ್ನು ಸಮರ್ಥವಾಗಿ ಮುನ್ನಡೆಸುತ್ತಿದೆ. ಭ್ರಷ್ಟಾಚಾರ ರಹಿತ, ಪಾರದರ್ಶಕ ಮತ್ತು ಅಭಿವೃದ್ಧಿಪರ ಆಡಳಿತದ ಫಲವಾಗಿ ಇಂದು ವಿಶ್ವದ ದೇಶಗಳು ಭಾರತದ ಮೇಲೆ ಅಪಾರ ನಂಬಿಕೆ ಮತ್ತು ಸಹಕಾರ ತೋರುತ್ತಿವೆ.

ಈ ಹಿನ್ನೆಲೆಯಲ್ಲಿ ಕೇರಳದಲ್ಲಿ ಅದರಲ್ಲೂ ವಿಶೇಷವಾಗಿ ಮಂಜೇಶ್ವರ ವಿಧಾನಸಭಾ ಕ್ಷೇತ್ರದಲ್ಲಿ ಕೇಂದ್ರ ಸರಕಾರದ ಯೋಜನೆಗಳನ್ನು ಪರಿಮಾಮಕಾರಿಯಾಗಿ ಬಳಸಿಕೊಂಡು ಅಭಿವೃದ್ಧಿ ಮಾಡಬಲ್ಲ ಸಮರ್ಥ ಜನಪ್ರತಿನಿಧಿಯ ಅಗತ್ಯವಿದೆ. ದುರದೃಷ್ಟವಶಾತ್ ಈ ವರೆಗೆ ಇಲ್ಲಿ ಆಯ್ಕೆಯಾದ ಕೆಲವರು ಈ ಕಾರ್ಯದಲ್ಲಿ ವಿಫಲರಾಗಿದ್ದು, ಮಂಜೇಶ್ವರವನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಲು ನಾವು ಒಂದಾಗಬೇಕಿದೆ.

ಇಲ್ಲಿನ ಸಾಮಾನ್ಯ ಜನರು ಆರೋಗ್ಯ ಮೂಲಸೌಕರ್ಯದ ದೊಡ್ಡ ಕೊರತೆಗಳನ್ನು ಎದುರಿಸುತ್ತಿದ್ದಾರೆ. ಪ್ಲಸ್ ಟು ಮುಗಿಸಿದ ವಿದ್ಯಾರ್ಥಿಗಳು ಉನ್ನತ ಶಿಕ್ಷಣಕ್ಕಾಗಿ ಮಂಗಳೂರು,ಬೆಂಗಳೂರಿನಂತಹ ನೆರೆಯ ರಾಜ್ಯದ ನಗರಗಳಿಗೆ ಹೋಗಬೇಕಾದ ಅನಿವಾರ್ಯತೆ ಇದೆ. ಕುಡಿಯುವ ನೀರಿನ ಸಮಸ್ಯೆಗೂ ಸಮರ್ಪಕ ಪರಿಹಾರ ಲಭಿಸಿಲ್ಲ. ಮಂಜೇಶ್ವರದ ತಾಲೂಕು ಆಡಳಿತ ಕಚೇರಿಗೆ ಹಿರಿಯರು, ದಿವ್ಯಾಂಗರು ಹೋಗಬೇಕಾದರೆ ಪಡಬಾರದ ಕಷ್ಟ ಪಡಬೇಕು. ಇಂತಹ ಮೂಲಸೌಕರ್ಯಗಳನ್ನು ಒದಗಿಸಲೂ ಇಲ್ಲಿನ ಜನಪ್ರತಿನಿಧಿಗಳಿಗೆ ಸಾಧ್ಯವಾಗಿಲ್ಲ ಎಂಬುದು ವಿಪರ್ಯಾಸ.ಇಲ್ಲಿನ ಯುವಜನತೆಯ ಭವಿಷ್ಯ ಬಗ್ಗೆ ನಿರ್ಲಕ್ಷ್ಯ ತಾಳಿದ್ದರಿಂದ ಅವರು ಉದ್ಯೋಗಕ್ಕಾಗಿ ಗಲ್ಫ್ ದೇಶಗಳಿಗೆ ವಲಸೆ ಹೋಗಬೇಕಾದಂತಹ ಪರಿಸ್ಥಿತಿ. ಇಂದು ಅಲ್ಲಿನ ಸನ್ನಿವೇಶ ಹೇಗಿದೆ ಎಂಬುದನ್ನು ನಾವೆಲ್ಲರೂ ಬಲ್ಲೆವು.ಇಲ್ಲಿನ ಸಮಗ್ರ ಅಭಿವೃದ್ಧಿ ಆಗಬೇಕಾದರೆ ಈ ಬಾರಿ ಪರಿವರ್ತನೆಯೊಂದರ ಅಗತ್ಯವಿದೆ ಎಂಬ ಮಾತು ಜನರಿಂದ ವ್ಯಕ್ತವಾಗುತ್ತಿದೆ.





ಬಿಜೆಪಿ ನಾಯಕ ಕೆ. ಸುರೇಂದ್ರನ್ ಪ್ರಖರ ವಾಗ್ಮಿ, ಹೋರಾಟಗಾರ



ಮಂಜೇಶ್ವರ ವಿಧಾನಸಭಾ ಕ್ಷೇತ್ರದ ಎನ್ ಡಿಎ ಅಭ್ಯರ್ಥಿ ಕೆ.ಸುರೇಂದ್ರನ್ ಅವರು ಪ್ರಖರ ವಾಗ್ಮಿಯಾಗಿ, ಜನಪರ ಹೋರಾಟಗಾರರಾಗಿ ಕೇರಳದ ಜನಮನವನ್ನು ಸೆಳೆದ ನಾಯಕರಾಗಿದ್ದಾರೆ. ಕೇರಳ ರಾಜ್ಯ ಬಿಜೆಪಿಯ ಮಾಜಿ ಅಧ್ಯಕ್ಷರಾಗಿ, ಹಿಂದುಗಳ ಪವಿತ್ರ ಕ್ಷೇತ್ರವಾದ ಶಬರಿಮಲೆ ಶ್ರೀ ಅಯ್ಯಪ್ಪ ಸ್ವಾಮಿ ದೇವಾಲಯದ ಪಾವಿತ್ರ್ಯವನ್ನು ರಕ್ಷಿಸುವಲ್ಲಿ ನಡೆಸಿದ ಹೋರಾಟ ,ಮಹಿಳೆಯರ ಪರ ಮತ್ತು ಯುವಜನತೆಯ ಹಿತರಕ್ಷಣೆಗಾಗಿ ನಡೆಸಿದ ಹೋರಾಟ ಅವರನ್ನು ರಾಜ್ಯದ ಪ್ರಮುಖ ನಾಯಕರನ್ನಾಗಿಸಿದೆ. ಟಿವಿ ಚರ್ಚೆಗಳಲ್ಲೂ ಅವರ ತರ್ಕಬದ್ಧ ವಿಚಾರಗಳು ವಿರೋಧಿಗಳನ್ನು ನಿರುತ್ತರರನ್ನಾಗಿಸುವ ಮೂಲಕವೂ ಅವರು ಜನಪ್ರಿಯರಾಗಿದ್ದಾರೆ.

1970ರ ಮಾ.10ರಂದು ಕೇರಳದ ಕೋಯಿಕ್ಕೋಡಿನ ಉಳ್ಳಿಯೇರಿಯಲ್ಲಿ ಜನನ. ಕಲ್ಲಿಕೋಟೆ ವಿಶ್ವವಿದ್ಯಾಲಯದ ಜಾಮೋರಿನ್ ಗುರುವಾಯೂರಪ್ಪನ್ ಕಾಲೇಜಿನಿಂದ ವಿಜ್ಞಾನ ಪದವಿ(ಬಿಎಸ್‌ಸಿ–ಕೆಮೆಸ್ಟ್ರಿ). ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತಿನ ಮೂಲಕ ವಿದ್ಯಾರ್ಥಿ ದೆಸೆಯಿಂದಲೇ ನಾಯಕತ್ವ ಗುಣ.

ಅನಂತರ ಬಿಜೆಪಿ ಯುವಮೋರ್ಚಾ ಮೂಲಕ ರಾಜಕೀಯ ಪ್ರವೇಶ.ನಿರುದ್ಯೋಗ ವಿರುದ್ಧ ಪ್ರಬಲ ಚಳವಳಿ ಸಂಘಟಿಸಿ ಗಮನ ಸೆಳೆದ ಅವರು, ಅನಂತರ ಬಿಜೆಪಿ ಅಧ್ಯಕ್ಷರಾಗಿಯೂ ವಿವಿಧ ಜನಪರ ಹೋರಾಟಗಳಿಂದ ಹೆಸರು ಮಾಡಿದವರು.ಶಬರಿಮಲೆ ಪಾವಿತ್ರ್ಯ ರಕ್ಷಣೆಗಾಗಿ ನಡೆದ ಬೃಹತ್ ಹೋರಾಟದ ನೇತೃತ್ವ ವಹಿಸಿ ಇಡಿ ದೇಶದ ಗಮನ ಸೆಳೆದವರು.

ಪಟ್ಟನಂತಿಟ್ಟ, ವಯನಾಡ್, ಮಂಜೇಶ್ವರದಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ಚುನಾವಣಾ ಸ್ಪರ್ಧೆ ನಡೆಸಿದ್ದು, ಮಂಜೇಶ್ವರದಲ್ಲಿ ಕಳೆದ ಬಾರಿಯ ಚುನಾವಣೆಯಲ್ಲಿ ಕೆಲವೇ ಮತಗಳ ಅಂತರದಿಂದ ಸೋಲುಣ್ಣಬೇಕಾಗಿ ಬಂದಿತ್ತು.

ಮಲೆಯಾಳ, ಇಂಗ್ಲಿಷ್, ತುಳು, ಕನ್ನಡ ಭಾಷೆಗಳನ್ನೂ ಬಲ್ಲ ಅವರು ಜನಹಿತ ಹೋರಾಟಗಳಲ್ಲಿ ಮುನ್ನುಗ್ಗುವ ಗುಣಗಳಿಂದ ಜನಪ್ರೀತಿ ಗಳಿಸಿದ್ದಾರೆ.

ಎನ್‌ಡಿಎಗೆ ಮತ ನೀಡಿ

1 ಕನ್ನಡದಲ್ಲಿ ಪಿಎಸ್‌ಸಿ ಪರೀಕ್ಷೆ ಬರೆಯಲು, ಅರ್ಜಿ ಸಲ್ಲಿಸಲು, ಕೊನೆಗೆ ಮತದಾರ ಪಟ್ಟಿ ಒದಗಿಸುವಲ್ಲೂ ತಾರತಮ್ಯತೋರಿದರೆ ಅದನ್ನು ಹೇಗೆ ಒಪ್ಪಲು ಸಾಧ್ಯ. ಇದನ್ನು ಸರಿಪಡಿಸಿ ಇಲ್ಲಿನ ಕನ್ನಡಿಗರಿಗೆ ಅವರ ಹಿತರಕ್ಷಿಸಲು ಮತ್ತು ಅವರಿಗೆ ನ್ಯಾಯ ನೀಡಲು ನನ್ನ ಹೋರಾಟ- ಪ್ರಯತ್ನಗಳು ನಡೆಯಲಿವೆ. ಇದರಲ್ಲಿ ಎರಡು ಮಾತೇ ಇಲ್ಲ. ಇಲ್ಲಿನ ಕನ್ನಡಿಗರಿಗೆ ನ್ಯಾಯ ನೀಡಲು ಕೇವಲ ಬಿಜೆಪಿಯಿಂದ ಮಾತ್ರವೇ ಸಾಧ್ಯ.

ಕೇರಳಕ್ಕೆ ಇಂದು ಬಂಡವಾಳ ಕೂಡ ಸಾಕಷ್ಟು ಪ್ರಮಾಣದಲ್ಲಿ ಹರಿದುಬರುತ್ತಿಲ್ಲ. ಇಲ್ಲಿನ ಯುವಜನತೆಯ ಕೈಗೆ ಉದ್ಯೋಗ ಒದಗಿಸಬೇಕಾದರೆ ಸೂಕ್ತ ಬಂಡವಾಳ ಹರಿದುಬರುವ ಅಗತ್ಯವಿದೆ. ಶಿಕ್ಷಣ, ಉದ್ಯೋಗಕ್ಕಾಗಿ ಇಲ್ಲಿನ ಯುವಜನತೆ ವಲಸೆ ಹೋಗುತ್ತಿರುವ ಕಾರಣ ಕೇರಳ ಹಿರಿಯ ನಾಗರಿಕರ ರಾಜ್ಯವಾಗಿದೆ ಎಂಬ ಅಳಲು ಎಲ್ಲೆಡೆ ವ್ಯಕ್ತವಾಗುತ್ತಿರುವುದು ಗಂಭೀರ ಚಿಂತೆಯ ವಿಷಯವಲ್ಲವೇ? ಇದಕ್ಕೆ ಸೂಕ್ತ ಪರಿಹಾರ ಕಲ್ಪಿಸಲು ಬಿಜೆಪಿಯಿಂದ ಮಾತ್ರವೇ ಸಾಧ್ಯವಿದೆ. ಯಾಕೆಂದರೆ ಬಿಜೆಪಿ ಆಡಳಿತದ ರಾಜ್ಯಗಳು ಇದನ್ನು ಸಾಧಿಸಿ ತೋರಿಸಿರುವ ಉದಾಹರಣೆ ನಮ್ಮ ಮುಂದಿದೆ. ಆದ್ದರಿಂದ ಸಾಕ್ಷರ ಕೇರಳವನ್ನು ಔದ್ಯೋಗಿಕ ಮತ್ತು ಕೈಗಾರಿಕೆಯಲ್ಲಿ ಮುಂದುವರಿದ ಕೇರಳವನ್ನಾಗಿಸುವ ಅಗತ್ಯವಿದ್ದು ಈ ನಿಟ್ಟಿನಲ್ಲಿ ಬಿಜೆಪಿ ಕೈ ಬಲಪಡಿಸಬೇಕಾದ ಅಗತ್ಯವಿದೆ ಎಂಬುದು ಈಗ ಕೇರಳಿಗರ ಮನಸ್ಸಿನಲ್ಲೂ ಸ್ಪಷ್ಟವಾಗಲಾರಂಭಿಸಿದೆ.

ಮಂಜೇಶ್ವರ ಕ್ಷೇತ್ರದ ಜನತೆಗೆ ನೀವು ಏನು ಹೇಳಲು ಬಯಸುವಿರಿ?

ಮಂಜೇಶ್ವರದಿಂದ ಈ ಬಾರಿ ನಾನು ಸ್ಪರ್ಧಿಸುತ್ತಿದ್ದು,ನನ್ನನ್ನು ಆಯ್ಕೆ ಮಾಡಿದ್ದೇ ಆದರೆ ರಾಜ್ಯದಲ್ಲೇ ಅತ್ಯಂತ ಹಿಂದುಳಿದ ಕ್ಷೇತ್ರವಾದ ಮಂಜೇಶ್ವರವನ್ನು 5ವರ್ಷಗಳಲ್ಲಿ ರಾಜ್ಯದಲ್ಲೇ ನಂ.1ಕ್ಷೇತ್ರವನ್ನಾಗಿ ಅಭಿವೃದ್ಧಿಪಡಿಸಲು ನಾನು ಪ್ರಯತ್ನ ನಡೆಸಲಿದ್ದು, ಜನತೆ ಈ ಬಾರಿ ನನ್ನನ್ನು ಆಶೀರ್ವದಿಸಬೇಕೆಂದು ಕೋರುವೆ. ನಿಮ್ಮ ವಿಶ್ವಾಸಕ್ಕೆ ನ್ಯಾಯ ನೀಡುವಲ್ಲಿ ಪ್ರಾಮಾಣಿಕವಾಗಿ ಕೆಲಸ ಮಾಡುವೆ ಎಂದು ಮಂಜೇಶ್ವರದ ಮತದಾರರಿಗೆ ನಾನು ಹೇಳಲು ಬಯಸುವೆ.

ಕೇರಳದಲ್ಲಿನ ಒಟ್ಟಾರೆ ಚುನಾವಣಾ ಕಣವನ್ನು ನೋಡಿದಾಗ ಈ ಬಾರಿ ನಿಮಗೇನನ್ನುತ್ತೆ?

ಎಲ್‌ಡಿಎಫ್ ವಿರುದ್ಧ ಆಡಳಿತ ವಿರೋಧಿ ಅಲೆ ತೀವ್ರವಾಗಿದೆ. ಎಲ್‌ಡಿಎಫ್‌ನ ದುರಾಡಳಿತದಿಂದ ಜನ ರೋಸಿಹೋಗಿದ್ದಾರೆ. ಕಾಂಗ್ರೆಸ್ ನೇತೃತ್ವದ ಯುಡಿಎಫ್ ಎಸ್‌ಡಿಪಿಐ, ಜಮಾತೆ ಇಸ್ಲಾಮಿಯಂತಹ ತೀವ್ರವಾದಿ ಗುಂಪುಗಳ ಜೊತೆ ನಂಟು ಬೆಸೆದು ಹೇಗಾದರೂ ಮಾಡಿ ಅಧಿಕಾರಕ್ಕೆ ಬರಬೇಕೆಂದು ಯತ್ನಿಸುತ್ತಿರುವುದನ್ನು ಜನತೆ ಗಮನಿಸುತ್ತಿದೆ. ಈ ಕೋಮುಶಕ್ತಿಗಳಿಂದ ಕೇರಳಕ್ಕೆ ಯಾವುದೇ ರೀತಿಯಲ್ಲೂ ಒಳಿತುಂಟಾಗದು ಎಂಬುದನ್ನು ಈಗ ಎಲ್ಲರೂ ಅರಿಯಲಾರಂಭಿಸಿದ್ದಾರೆ. ಬದಲಿಗೆ ಮೋದಿ ಸರಕಾರ ಅಭಿವೃದ್ಧಿ ಚಿಂತನೆ ಇರುವ ಸರಕಾರವಾಗಿದ್ದು, ಮೋದಿ ಸರಕಾರದ ವಿರುದ್ಧ ವಿಪಕ್ಷಗಳು ಎಷ್ಟೇ ಅಪಪ್ರಚಾರ ನಡೆಸಿದರೂ ಜನತೆಗೆ ಸತ್ಯದ ಅರಿವಾಗಿದೆ.



ಎಲ್‌ಡಿಎಫ್ ಬಿಜೆಪಿಯ ಬಿ ಟೀಮ್ ಎಂಬ ಯುಡಿಎಫ್ ಆರೋಪದ ಬಗ್ಗೆ?

ಎಲ್‌ಡಿಎಫ್ ಮತ್ತು ಯುಡಿಎಫ್‌ಗಳು ರಹಸ್ಯ ನಂಟು ಹೊಂದಿ ಜನತೆಯನ್ನು ವಂಚಿಸುತ್ತಿರುವುದು ಈಗ ಎಲ್ಲರಿಗೂ ತಿಳಿದಿರುವಂಥದ್ದಾಗಿದೆ. ಯುಡಿಎಫ್ ಎಸ್‌ಡಿಪಿಐಯಂತಹ ತೀವ್ರವಾದಿ ಗುಂಪುಗಳ ಜೊತೆ ಹೇಗೆ ನಂಟು ಹೊಂದಿದೆ ಎಂಬುದು ಈಗ ಎಲ್ಲರಿಗೂ ಗೊತ್ತಾಗಿರುವಂತಹ ಸತ್ಯ.ಬಿಜೆಪಿ ವಿರುದ್ಧ ಎಲ್‌ಡಿಎಫ್ ಮತ್ತು ಯುಡಿಎಫ್‌ಗಳು ಒಂದೇ ಧ್ವನಿಯಲ್ಲಿ ಮಾತನಾಡುತ್ತಿರುವುದನ್ನು ನೋಡಿದಾಗ ಸತ್ಯವೇನೆಂಬುದು ಸ್ಪಷ್ಟವಾಗುತ್ತಿಲ್ಲವೇ? ಇದಕ್ಕೆ ಮಂಜೇಶ್ವರ ಕ್ಷೇತ್ರವೇ ತಾಜಾ ಸಾಕ್ಷಿ. ಇಲ್ಲಿ ಬಿಜೆಪಿಯನ್ನು ಸೋಲಿಸಬೇಕೆಂದು ಹಿಂದಿನಿಂದಲೂ ಉಭಯ ರಂಗಗಳು ಹುನ್ನಾರ ನಡೆಸುತ್ತಿರುವುದನ್ನು ಜನತೆ ನೋಡಿದೆ.ಹೀಗಿರುವಾಗ ಇಂತಹ ಅಪಪ್ರಚಾರವನ್ನು ಇನ್ನೂ ನಂಬಿಕೊಂಡಿರಲು ಜನತೆ ಮೂರ್ಖರೇ ? ಬಿಜೆಪಿಯ ಬಗ್ಗೆ ಈ ಎರಡೂ ರಂಗಗಳು ಇಷ್ಟು ಆತಂಕ ಪಡುತ್ತಿರುವುದೇ , ಒಮ್ಮೆ ಬಿಜೆಪಿ ಜನರ ವಿಶ್ವಾಸ ಗಳಿಸಿದರೆ ಬಳಿಕ ಜನತೆ ತಮ್ಮನ್ನೆಂದೂ ಬೆಂಬಲಿಸಲಾರರು ಎಂಬುದು ಈ ರಂಗಗಳಿಗೆ ಸ್ಪಷ್ಟವಿದೆ.

ಶಬರಿಮಲೆ ಚಿನ್ನ ಲೂಟಿ ಪ್ರಕರಣದಲ್ಲೇ ಎಲ್‌ಡಿಎಫ್ ಮತ್ತು ಯುಡಿಎಫ್‌ಗಳು ಹೇಗೆ ಜನರನ್ನು ವಂಚಿಸುತ್ತಿವೆ ಎಂಬುದು ಈಗ ಜನತೆಗೆ ಚೆನ್ನಾಗಿ ಮನದಟ್ಟಾಗಿದೆ.ಆದ್ದರಿಂದ ಜನತೆ ಇನ್ನು ಇಂತಹ ಮೋಸಕ್ಕೆ ಬಲಿಯಾಗದೆ ಈ ಬಾರಿ ಬಿಜೆಪಿ–ಎನ್‌ಡಿಎಯನ್ನು ಬೆಂಬಲಿಸಲು ದೃಢ ನಿರ್ಧಾರ ಮಾಡಿರುವುದು ಎಲ್ಲೆಡೆ ಪ್ರಚಾರದ ವೇಳೆ ಅನುಭವಕ್ಕೆ ಬಂದಿದೆ.

ಕಳೆದ ಲೋಕಸಭಾ ಚುನಾವಣೆಯಲ್ಲಿ ಎಲ್‌ಡಿಎಫ್ ಮತ್ತು ಯುಡಿಎಫ್‌ಗಳ ಎದುರು ಬಿಜೆಪಿಗೆ ಜನತೆ ಶೇ.20ರಷ್ಟು ಮತ ನೀಡಿ ಬೆಂಬಲಿಸಿದ್ದರೆ, ಕಳೆದ ಸ್ಥಳೀಯ ಚುನಾವಣೆಯಲ್ಲಿ ಇನ್ನಷ್ಟು ಹೆಚ್ಚು ಬೆಂಬಲ ನೀಡಿರುವುದಲ್ಲದೆ, ರಾಜಧಾನಿ ತಿರುವನಂತಪುರಂನಲ್ಲಿ ಬಿಜೆಪಿಯನ್ನು ಅಧಿಕಾರಕ್ಕೆ ತರುವ ಮೂಲಕ ಬಲವಾದ ಸಂದೇಶ ನೀಡಿದ್ದಾರೆ. ಇದು ಜನತೆ ಬಿಜೆಪಿ ನೇತೃತ್ವದ ಎನ್‌ಡಿಎಯಲ್ಲಿ ವಿಶ್ವಾಸ ಇಟ್ಟಿರುವುದನ್ನು ತೋರಿಸುತ್ತಿಲ್ಲವೇ?

ಕೇಂದ್ರದ ಮೋದಿ ಸರಕಾರ ಗ್ರಾಮ ಸಡಕ್ ಯೋಜನೆಯ ಮೂಲಕ ದೇಶಾದ್ಯಂತ ಗ್ರಾಮೀಣ ಪ್ರದೇಶದ ಜನರಿಗೂ ಉತ್ತಮ ರಸ್ತೆಗಳನ್ನು ಒದಗಿಸಲು ಮುಂದಾಗಿದೆ ಆದರೆ ಮಂಜೇಶ್ವರ ಕ್ಷೇತ್ರದಲ್ಲಿ ಇಲ್ಲಿನ ಮುಸ್ಲಿಂಲೀಗ್ ಶಾಸಕರು ಗ್ರಾಮಸಡಕ್ ಯೋಜನೆಯಡಿ ಇಲ್ಲಿ ರಸ್ತೆಗಳನ್ನು ಅಭಿವೃದ್ಧಿಪಡಿಸಲು ಮುಂದಾಗಲೇ ಇಲ್ಲ. ಇಂತಹ ಯೋಜನೆಗಳು ಬಂದದ್ದೇ ಆದರೆ ಜನರು ಬಿಜೆಪಿಯನ್ನು ಬೆಂಬಲಿಸಬಹುದು ಎಂಬ ಆತಂಕವೇ ಇದಕ್ಕೆ ಕಾರಣ. ಇಂತಹ ರಾಜಕೀಯಕ್ಕೆ ಜನತೆ ಯಾಕೆ ಬಲಿಪಶುಗಳಾಗಬೇಕು? ಜನರು ಈಗ ಇಂತಹವರನ್ನು ಆಯ್ಕೆ ಮಾಡಿದ್ದಕ್ಕೆ ಜನರಿಗೆ ಪಶ್ಚಾತ್ತಾಪವಾಗಿದೆ.ಆದ್ದರಿಂದ ಈ ಬಾರಿ ಜನತೆ ಬಲವಾದ ನಿರ್ಧಾರ ತಳೆದು ಬಿಜೆಪಿಯನ್ನು ಗೆಲ್ಲಿಸಬೇಕೆಂದು ಸಂಕಲ್ಪ ತೊಟ್ಟಿದ್ದಾರೆ.



'ವಿಕಸಿತ ಕೇರಳಂ' ಸಂಕಲ್ಪಕ್ಕೆ ನಿಮ್ಮ ಬೆಂಬಲವಿರಲಿ: ಜನತೆಗೆ ಬಿಜೆಪಿ ಮನವಿ

"ವಿಕಸಿತ ಭಾರತ"ದ ಮಾದರಿಯಲ್ಲೇ "ವಿಕಸಿತ ಕೇರಳಂ"ಬಿಜೆಪಿಯ ಸಂಕಲ್ಪವಾಗಿದ್ದು, ಈ ಬಾರಿಯ ಕೇರಳ ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಕೇರಳದ ಸಮಗ್ರ ಅಭಿವೃದ್ಧಿಗಾಗಿ ರೂಪುರೇಷೆಯೊಂದನ್ನು ಸಿದ್ಧಪಡಿಸಿದೆ. ಇದರಂತೆ, ಎಡರಂಗ (ಎಲ್‌ಡಿಎಫ್) ಮತ್ತು ಸಂಯುಕ್ತ ಪ್ರಜಾಸತ್ತಾತ್ಮಕ ರಂಗ (ಯುಡಿಎಫ್)ಗಳ ದುರಾಡಳಿತಕ್ಕೆ ಸಿಲುಕಿ ನಲುಗಿರುವ ಕೇರಳವನ್ನು ಒಂದು ಕೈಗಾರಿಕೀಕರಣಗೊಂಡ, ಅತ್ಯಾಧುನಿಕ ತಂತ್ರಜ್ಞಾನ ಆಧಾರಿತಮತ್ತು ಕಲ್ಯಾಣ ಹೊಂದಿದ ರಾಜ್ಯವನ್ನಾಗಿ ಪರಿವರ್ತಿಸುವುದು ಬಿಜೆಪಿಯ ಗುರಿಯಾಗಿದೆ. ಈ ಗುರಿಯನ್ನು ಕೇಂದ್ರೀಕರಿಸಿ ಈ ಬಾರಿ ಬಿಜೆಪಿ ಎಲ್‌ಡಿಎಫ್ ಮತ್ತು ಯುಡಿಎಫ್‌ಗಳಿಗಿಂತಲೂ ಮೊದಲೇ ತನ್ನ ಪ್ರಣಾಳಿಕೆಯನ್ನು ಕೇರಳದ ಜನತೆಯ ಮುಂದಿಟ್ಟಿದೆ. ಈ ಪ್ರಣಾಳಿಕೆಯು ಮೂಲಭೂತ ಸೌಕರ್ಯಗಳ ಅಭಿವೃದ್ಧಿ, ಆರ್ಥಿಕ ಪ್ರಗತಿ, ಸಮಗ್ರ ಸಾಮಾಜಿಕ ಬೆಂಬಲದ ಸಂಪನ್ನ ಕೇರಳವನ್ನು ನಿರ್ಮಿಸುವ ಆಶಯ ಹೊಂದಿದೆ.

ವಿಕಸಿತ ಕೇರಳಂನ ಮುಖ್ಯಾಂಶ

ಮೂಲಸೌಕರ್ಯ ಮತ್ತು ಸಂಚಾರ ಸೌಲಭ್ಯ

ವೇಗದ ರೈಲು: ಕೇರಳದ ರಾಜಧಾನಿ ತಿರುವನಂತಪುರಂ ಮತ್ತು ಕಣ್ಣೂರು ನಡುವೆ ವೇಗದ ರೈಲ್ವೆ ಕಾರಿಡಾರೊಂದನ್ನು ನಿರ್ಮಿಸುವ ಮೂಲಕ ಸಂಪರ್ಕ ವ್ಯವಸ್ಥೆಯನ್ನು ಸುಧಾರಿಸುವ ಮತ್ತು ಆರ್ಥಿಕ ಚಟುವಟಿಕೆಗಳಿಗೆ ವೇಗ ನೀಡಲು ಬಿಜೆಪಿ ಉದ್ದೇಶಿಸಿದೆ.

ಕೊಚ್ಚಿ ಮೆಟ್ರೋ–ನಗರ ಸಾರಿಗೆ:

ಕೊಚ್ಚಿ ಮೆಟ್ರೋದ ಎಲ್ಲ ಹಂತಗಳನ್ನು ತ್ವರಿತವಾಗಿ ಪೂರ್ಣಗೊಳಿಸುವ ಮತ್ತು ತಿರುವನಂತಪುರಂ ಹಾಗೂ ಕೋಯಿಕ್ಕೋಡಿಗೂ ಹೊಸ ಮೆಟ್ರೋ ಸೇವೆಗಳನ್ನು ಒದಗಿಸುವುದು ಬಿಜೆಪಿಯ ಯೋಜನೆಯಾಗಿದೆ. ಹಾಗೆಯೇ , ಹೆಚ್ಚಿನ ದಟ್ಟಣೆ ಉಳ್ಳ ಪ್ರದೇಶಗಳಲ್ಲಿ ಬಲಿಷ್ಠ, ಉನ್ನತ ಸಾಮರ್ಥ್ಯದ ರಸ್ತೆಗಳ ನಿರ್ಮಾಣಕ್ಕೂ ಪಕ್ಷ ಯೋಜನೆ ರೂಪಿಸಿದೆ.

ಆರೋಗ್ಯ–ಶಿಕ್ಷಣ

ಕೇರಳದಲ್ಲಿ ಅಖಿಲ ಭಾರತೀಯ ವೈದ್ಯ ವಿಜ್ಞಾನಗಳ ಸಂಸ್ಥೆ (ಎಐಐಎಂಎಸ್)ಯನ್ನು ಸ್ಥಾಪಿಸುವ ಮೂಲಕ ರಾಜ್ಯಕ್ಕೆ ಅತ್ಯಾಧುನಿಕ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸಲು ಪಕ್ಷ ಸಂಕಲ್ಪ ತೊಟ್ಟಿದೆ.

ಇದೇ ರೀತಿ, ಶಾಲೆಗಳಲ್ಲಿ ಸ್ವಯಂಪ್ರೇರಿತ ಆಂಗ್ಲ ಮಾಧ್ಯಮ ಅನುಷ್ಠಾನ, ಕೇರಳದಲ್ಲಿ ಉತ್ತಮ ಶಿಕ್ಷಣ ಸಂಸ್ಥೆಗಳನ್ನು ಅಭಿವೃದ್ಧಿಪಡಿಸುವುದು ಬಿಜೆಪಿಯ ಯೋಜನೆಯಾಗಿದೆ.

ಸಮಗ್ರ ಆರೋಗ್ಯ ಯೋಜನೆ:ಆಯುಷ್ಮಾನ್ ಭಾರತ್ ಯೋಜನೆಯನ್ನು ಕೇರಳದ ಎಲ್ಲ ಜನರಿಗೂ ಲಭಿಸುವಂತೆ ಮಾಡಲು ಸಮಗ್ರ ಯೋಜನೆಯೊಂದನ್ನು ಬಿಜೆಪಿ ರೂಪಿಸಿದೆ.

ಉದ್ಯೋಗ ಸೃಷ್ಟಿ

ರಾಜಧಾನಿ ತಿರುವನಂತಪುರಂನ್ನು ಕೇರಳದ ತಂತ್ರಜ್ಞಾನ /ಆವಿಷ್ಕಾರಗಳ ಹಬ್ ಆಗಿ ಪರಿವರ್ತಿಸುವುದು, ಕೊಚ್ಚಿಯನ್ನು ನೌಕೆಗಳ ನಿರ್ಮಾಣದ ಕೇಂದ್ರವನ್ನಾಗಿಸುವುದು, ಕೋಜಿಕ್ಕೋಡನ್ನು ವೈದ್ಯಕೀಯ ಆವಿಷ್ಕಾರಗಳ ಹಬ್ ಆಗಿ ಅಭಿವೃದ್ಧಿಪಡಿಸುವುದು ಪಕ್ಷದ ನಿಲುವಾಗಿದೆ.ಈ ಮೂಲಕ ಕೇರಳದ ಯುವಜನತೆಗೆ ಹೆಚ್ಚಿನ ಪ್ರಮಾಣದಲ್ಲಿ ರಾಜ್ಯದಲ್ಲೇ ಉದ್ಯೋಗ ಒದಗುವಂತೆ ಮಾಡುವುದು ಬಿಜೆಪಿಯ ಧ್ಯೇಯವಾಗಿದೆ.

ಪ್ರವಾಸೋದ್ಯಮ: ಕೇರಳ ಪ್ರವಾಸೋದ್ಯಮ ಅಭಿವೃದ್ಧಿಗೆ ವಿಪುಲ ಅವಕಾಶಗಳನ್ನು ಹೊಂದಿರುವ ರಾಜ್ಯವಾಗಿದ್ದು, ಕೇರಳವನ್ನು ಜಗತ್ತಿನ ಪ್ರಮುಖ ಪ್ರವಾ ಸೋದ್ಯಮ ತಾಣವನ್ನಾಗಿ ಬೆಳೆಸಲು ಅಗತ್ಯವಿರುವ ಚಿಂತನೆ, ಯೋಜನೆಗಳನ್ನು ಬಿಜೆಪಿ ಹೊಂದಿದೆ.

ಬ್ಲೂ ಎಕಾನಮಿ:ಕೇರಳದಲ್ಲಿ ಅಂತಾರಾಷ್ಟ್ರೀಯ ಮಟ್ಟದ ಸ್ಪರ್ಧಾತಕತೆ ಹೊಂದಿರುವ ಬ್ಲೂ ಎಕಾನಮಿ ಕ್ಲಸ್ಟರ್ ಆಗಿ ಬೆಳೆಸುವ ಯೋಜನೆಯನ್ನು ಬಿಜೆಪಿ ಹೊಂದಿದೆ.



ಸಮಾಜ ಕಲ್ಯಾಣ–ಸಾಮಾಜಿಕ ಭದ್ರತೆ

ಕೇರಳದಲ್ಲಿ ಸಮಾಜ ಕಲ್ಯಾಣಕ್ಕೆ ಬಿಜೆಪಿ ಹಲವು ಯೋಜನೆಗಳನ್ನು ಹೊಂದಿದ್ದು, ಇದೇ ವೇಳೆ ಸಾಮಾಜಿಕ ಭದ್ರತೆ ಒದಗಿಸುವ ನಿಟ್ಟಿನಲ್ಲಿ ಕುಟುಂಬದ ಮುಖ್ಯಸ್ಥೆಯಾಗಿರುವ ಮಹಿಳೆಯರಿಗೆ, ವಿಧವೆಯರಿಗೆ, ಹಿರಿಯ ನಾಗರಿಕರಿಗೆ ತಿಂಗಳಿಗೆ 3000ರೂ.ಗಳನ್ನು ನೀಡಲಾಗುವುದು.

ಭಕ್ಷ್ಯ ಆರೋಗ್ಯ ಸುರಕ್ಷಾ ಕಾರ್ಡ್:

ಬಡಕುಟುಂಬಗಳಿಗಾಗಿ ತಿಂಗಳಿಗೆ 2,500ರೂ. ಮೌಲ್ಯದ ರಿಚಾರ್ಜ್ ಮಾಡುವಂತಹ ಭಕ್ಷ್ಯ ಆರೋಗ್ಯ ಸುರಕ್ಷಾ ಕಾರ್ಡನ್ನು ಒದಗಿಸುವ ಮೂಲಕ ಈ ಬಡ ಕುಟುಂಬಗಳಿಗೆ ತಿಂಗಳಿಗೆ ಅಗತ್ಯವಾಗಿರುವ ದಿನಸಿ ಮತ್ತು ಔಷಧಿಗಳನ್ನು ಖರೀದಿಸಲು ನೆರವಾಗುವುದಾಗಿ ಪಕ್ಷ ಭರವಸೆ ನೀಡಿದೆ.ಇದೇ ರೀತಿ ಬಡ ಕುಟುಂಬಗಳಿಗೆ ಓಣಂ ಮತ್ತು ಕ್ರಿಸ್‌ಮಸ್ ಸಮಯದಲ್ಲಿ ಪ್ರತಿವರ್ಷ 2 ಉಚಿತ ಎಲ್‌ಪಿಜಿ ಸಿಲಿಂಡರ್‌ಗಳನ್ನು ಒದಗಿಸಲೂ ಬಿಜೆಪಿ ಉದ್ದೇಶಿಸಿದೆ.ಕುಟುಂಬಕ್ಕೆ ಪ್ರತಿ ತಿಂಗಳಿಗೆ 20ಸಾವಿರ ಲೀಟರ್ ಉಚಿತ ನೀರನ್ನು ಪೂರೈಸಲಾಗುವುದು.

ಆಡಳಿತ ಮತ್ತು ನಂಬಿಕೆಯ ರಕ್ಷಣೆ

ಶಬರಿಮಲೆ ಅಭಿವೃದ್ಧಿ ಮಿಷನ್ ಒಂದನ್ನು ಸ್ಥಾಪಿಸಿ ಅಲ್ಲಿ ಯಾತ್ರಾರ್ಥಿಗಳಿಗಾಗಿ ಅಗತ್ಯ ಮೂಲಸೌಕರ್ಯಗಳನ್ನು ಒದಗಿಸಲಾಗುವುದು.

ಹಾಗೆಯೇ, ಶಬರಿಮಲೆ, ಗುರುವಾಯೂರು ಸೇರಿದಂತೆ ಕೇರಳದ ಪ್ರಮುಖ ದೇವಾಲಯಗಳ ಆಡಳಿತ ನಿರ್ವಹಣೆಯಲ್ಲಿ ಭಕ್ತರಿಗೆ ಹೆಚ್ಚಿನ ಪಾತ್ರವನ್ನು ಕಲ್ಪಿಸಲಾಗುವುದು. ಇದಕ್ಕಾಗಿ ದೇವಸ್ವಂ ಮಂಡಳಿಗಳನ್ನು ಪುನರ್‌ರಚಿಸಲಾಗುವುದು ಎಂದು ಬಿಜೆಪಿ ಭರವಸೆ ನೀಡಿದೆ. ಶಬರಿಮಲೆ ಚಿನ್ನ ಲೂಟಿ ಪ್ರಕರಣದ ತನಿಖೆಯನ್ನು ಸಿಬಿಐ ತನಿಖೆಗೊಪ್ಪಿಸಿ ಕಾಲಮಿತಿಯೊಳಗೆ ತನಿಖೆ ನಡೆಸುವಂತೆ ಮಾಡಲಾಗುವುದು ಎಂದದು ಹೇಳಿದೆ. ದಕ್ಷ ಆಡಳಿತದ ಮೂಲಕ ಪ್ರಧಾನಿ ನರೇಂದ್ರ ಮೋದಿಯವರ ನಾಯಕತ್ವದಡಿ ವಿಕಸಿತ ಕೇರಳಂನ ಸಂಕಲ್ಪ ತಳೆಯಲಾಗಿದ್ದು, ಎಲ್‌ಡಿಎಫ್ ಮತ್ತು ಯುಡಿಎಫ್‌ನ ಕಳಪೆ ನಿರ್ವಹಣೆಗೆ ಪರ್ಯಾಯವಾಗಿ ಉದ್ಯೋಗ ಸೃಷ್ಟಿ, ಮೂಲಸೌಕರ್ಯಗಳ ಕೊರತೆ ನೀಗುವ ಮೂಲಕ ರಾಜ್ಯದಿಂದ ಯುವಜನರ ವಲಸೆಯನ್ನು ತಡೆಗಟ್ಟುವುದು ಬಿಜೆಪಿಯ ಗುರಿಯಾಗಿದೆ ಎಂದು ಈ 'ವಿಕಸಿತ ಕೇರಳಂ'ಸಂಕಲ್ಪದಲ್ಲಿ ತಿಳಿಸಲಾಗಿದೆ.











